ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಬುಧವಾರ, ೧೪ನೇ ಮಾರ್ಚಿ ೧೯೮೪ ಫಾಲ್ಗುಣ ೨೪. ಶಕ, ೧೯೦೫

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೯ ಗಂಟೆಗೆ ಸಮಾವೇಶಗೊಂಡಿತು

ಉಪಾಧ್ಯಕ್ಷರು (ಶ್ರೀ ಕೆ. ವೀರಣ್ಣ)ರವರು ಪೀಠವನ್ನು ಅಲಂಕರಿಸಿದರು.

ವಿತ್ತೀಯ ಕಾರ್ಯಕಲಾಪಗಳು

೧೯೮೪–೮೫ರ ಅನುದಾನ ಬೇಡಿಕೆಗಳ ಮೇಲಿನ ಚರ್ಚೆ ಮತ್ತು ಮತಕ್ಕೆ ಹಾಕುವುದು.

ಡಿಮ್ಯಾಂಡ್ ನಂ. 30. ನಗರಾಭಿವೃದ್ಧಿ ಇಲಾಖೆ

ಡಿಮ್ಯಾಂಡ್ ನಂ. ೩೧. ನಿಗಮ ಮತ್ತು ನಗರ ಪಾಲಿಕೆಗಳಿಗೆ ಸಂಬಂಧ ಪಟ್ಟ ಗ್ರ್ಯಾಂಟ್ಸ್ ಬಗ್ಗೆ

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಯವರು),—ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೫ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನಗರಾಭಿವೃದ್ಧಿ ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೧,೪೦.೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೭,೪೮,೭೭.೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಡಿ. ಸಂ. ೩೧–ನಿಗಮ ಮತ್ತು ನಗರ ಪಾಲಿಕೆಗಳಿಗೆ ಸಂಬಂಧಪಟ್ಟ ಗ್ರಾಂಟ್ಸ್ ಬಗ್ಗೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೫ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನಿಗಮ ಮತ್ತು ನಗರ ಪಾಲಿಕೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರ ರಾಜಸ್ವ ಖಾತೆಯಲ್ಲಿ ೩,೬೨,೦೦–೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

D. No. 8–Sericulture

SMT. CHANDRAPRABHA URS (Social Welfare and Sericulture).—Sir, on the recommendation of the Governor, I beg to move.—

> "That a sum not exceeding Rs 23,92,21,000 on Revenue Account and Rs.5,16,[illegible],000 on Capital Account be granted to the Government to defray the charges

which will come in course of payment during the financial year ending 31st day of March 1985 in respect of Sericulture."

D. No. 60–Welfare of SC/ST and Backward classes (Excluding Social Welfare)

Sir, on the recommendation of the Governor, I beg to move.—

"That a sum not exceeding Rs. 38,56,35,000 on Revenue Account and Rs. 94,58,000 on Capital Account granted to the Government to defray the charges which will come in course of payment during the financial year ending 31st day of March 1985 in respect of Social Security and Welfare (Excluding Women and Children's Welfare)".

D. No. 61–Tribal Sub-Plan

Sir, on the recommendation of the Governor, I beg to move.—

"That a sum not exceeding Rs. 4,06,80,000 on Revenue Account and Rs 1,20,58,000 on Capital Account be granted to the Government to defray the charges which willcome in course of payment during the financial year ending 31st day of March 1985 in respect of Tribal Sub-Plan".

D. No. 62–Social Welfare

Sir, on the recommendation of the Governor, I beg to move.

"That a sum not exceeding Rs. 56,11,80,000 on Revenue Account be granted to the Government to defray the charges which come in course of payment during the finacial year ending 31st day of March 1985 in respect of Social Welfare".

The question was proposed.

MR. DY. SPEAKER.—All the demands are before the House for discussion.

ಶ್ರೀ ವೈ. ರಾಮಕೃಷ್ಣ (ಆನೇಕಲ್).—ಸನ್ಮಾನ್ಯ ಅಧ್ಯಕ್ಷರೇ, ಈ ದಿನ ಸಭೆಯ ಮುಂದೆ ಮಂಡಿಸಿರತಕ್ಕ ಎಲ್ಲಾ ಬೇಡಿಕೆಗಳ ಮೇಲೂ ಭಾಗವಹಿಸಿ, ಕೆಲವಾರು ಸಲಹೆಗಳನ್ನು ಕೊಡುವುದಕ್ಕೆ ನಾನು ಇಚ್ಛೆಪಡುತ್ತೇನೆ. ಮೊದಲಿಗೆ ನಗರಾಭಿವೃದ್ಧಿ ಬಗ್ಗೆ ಎಷ್ಟು ಹೇಳಿದರೂ ತೀರದು. ಕಾರಣ ಏನು ಎಂದರೆ ಸ್ವಯಂ ಆಡಳಿತಕ್ಕೆ ಸಂಬಂಧಪಟ್ಟಂತೆ ಸಂಸ್ಥೆ ಜವಾಬ್ದಾರಿಯನ್ನು ಹೊತ್ತಿರತಕ್ಕಂಥ ಮುನಿಸಿಪಾಲಿಟಿಗಳಾಗಲಿ. ಕಾರ್ಪೊರೇಷನ್‌ಗಳಾಗಲೀ, ಸುಯುರೇಜ್ ಬೋರ್ಡ್ ಇರಬಹುದು, ಇವುಗಳಿಗೆ ಚುನಾವಣೆಗಳನ್ನು ನಡೆಸುವುದರಲ್ಲಿ ತಮಗೆ ಎಷ್ಟು ಆಸಕ್ತಿ ಇತ್ತೋ ಎಷ್ಟು ಅರ್ಬಟಗಳನ್ನು ತೋರಿಸಿದಿರೋ ? ಅಷ್ಟೇ ಅರ್ಬಟವನ್ನು ಅವುಗಳನ್ನು ನಡೆಸುವುದರಲ್ಲಿಯೂ ತೋರಿಸಬೇಕಾಗಿತ್ತು.

ನಾನು ಈ ವಿಷಯವನ್ನು ರಾಜಕೀಯವಾಗಿ ಹೇಳುತ್ತಿಲ್ಲ. ಇವೊತ್ತು ಸ್ಥಳೀಯ ಸಂಸ್ಥೆಗಳ ಕಾರ್ಯ ನಿರ್ವಹಣೆಗೆ ಎಷ್ಟೆಷ್ಟು ಹಣ ಕೊಟ್ಟಿದ್ದೀರಿ ? ಯಾವ ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ ? ಇದರ ಬಗ್ಗೆ ಏನೂ ನಮಗೆ ಕಾಣುತ್ತಿಲ್ಲ. ತಾವು ಇತ್ತ ಕಡೆ ತೀವ್ರವಾದ ಗಮನವನ್ನು ಕೊಡಬೇಕಾಗಿತ್ತು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ೧೯೮೩-೮೪ರ ಬಡ್ಜೆಟ್ಟಿನಲ್ಲಿ ೪ ರೆವಿನ್ಯೂ ಡಿವಿಜನ್ನುಗಳಲ್ಲಿರತಕ್ಕ ಮುನಿಸಿಪಾಲಿಟಿಗಳಿಗೆ ಅನುದಾನದ ಹಣವನ್ನು ಸರ್ಕಾರ ಕೊಟ್ಟಿದೆಯೆ ? ಅವರು ಕಳುಹಿಸತಕ್ಕ ಯೋಜನೆಗಳಲ್ಲಿ, ಎಷ್ಟು ಯೋಜನೆಗಳನ್ನು ವಹಿಸಿಕೊಂಡಿದೆ ಎನ್ನುವುದು ನಮಗೆ ಕಾಣುತ್ತಿಲ್ಲ. ಇವೊತ್ತು ಸ್ಥಳೀಯ ಸಂಸ್ಥೆಗಳು ತಮ್ಮ ಕಾಲಮೇಲೆ ತಾವು ನಿಂತುಕೊಂಡು ಪೌರ ಸೌಕರ್ಯಗಳನ್ನು ಒದಗಿಸಿಕೊಡುವುದರಲ್ಲಿ ಸರ್ಕಾರ ನೆರವಾಗಿಲ್ಲವೆಂದು ಹೇಳುತ್ತೇನೆ. ನನ್ನ ವೈಯಕ್ತಿಕ ಅಭಿಪ್ರಾಯ ಪುರಸಭೆ ಚುನಾವಣೆಯಾಗಲಿ, ಕಾರ್ಪೋರೇಷನ್ ಚುನಾವಣೆಯಾಗಲಿ ಗ್ರಾಮ ಪಂಚಾಯ್ತಿ ಅಥವಾ ತಾಲ್ಲೂಕು ಬೋರ್ಡು ಚುನಾವಣೆಯಾಗಲಿ ಈ ಚುನಾವಣೆಗಳಿಗೆ ಪಕ್ಷದ ಅಭ್ಯರ್ಥಿಗಳನ್ನು ನಿಲ್ಲಿಸುವುದು ಸರಿಯಲ್ಲ. ಇವತ್ತು ಪಕ್ಷದ ಅಭ್ಯರ್ಥಿಗಳನ್ನು ಹಾಕುವುದರಿಂದ ತಪ್ಪಾಗುತ್ತದೆ ಎನ್ನುವ ಶಂಕೆ ನನ್ನಲ್ಲಿದೆ. ಕಾರಣ ಇಷ್ಟೆ, ಶಾಸನ ಸಭೆ ಮತ್ತು ಲೋಕಸಭೆಗಳು ಶಾಸನ ಮಾಡತಕ್ಕ ಸಭೆಗಳು ಪಕ್ಷದ ಧ್ಯೇಯ ಧೋರಣೆಗಳು, ಮತ್ತು ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಬೇಕಾಗುತ್ತದೆ, ಇಲ್ಲಿ ಪಕ್ಷಗಳ ನಿರ್ವಹಣೆ ಅನಿವಾರ್ಯ. ಆದರೆ, ಮುನಿಸಿಪಾಲಿಟಿಗಳಲ್ಲಿ. ನಗರಸಭೆಗಳಲ್ಲಿ, ಪಂಚಾಯ್ತಿಗಳ ಪೌರ ಸೌಲಭ್ಯವನ್ನು ಒದಗಿಸಿಕೊಡತಕ್ಕ ಸಂಸ್ಥೆಗಳಲ್ಲಿ ರಾಜಕೀಯ ಏತಕ್ಕೆ ? ಅಧಿಕಾರಕ್ಕೆ ಯಾವುದೇ ಪಕ್ಷ ಬರಬಹುದು. ಜನಗಳಲ್ಲಿ ಒಂದು ವೈಮನಸ್ಯ ಬರುವುದಕ್ಕೆ ಅವಕಾಶವಾಗುವುದರಿಂದ ಪಕ್ಷದ ಅಭ್ಯರ್ಥಿಗಳನ್ನು ಅಲ್ಲಿಗೆ ನಿಲ್ಲಿಸುವುದು ಸರಿಯಲ್ಲವೆಂದು ಹೇಳುತ್ತೇನೆ. ನಮ್ಮ ಸಮಾಜದ ಹಿನ್ನೆಲೆ ನೋಡಿದಾಗ ಸರಾಸರಿ ವಿದ್ಯಾಭ್ಯಾಸದ ಮಟ್ಟ, ಜಾತೀಯತೆ ಹಾಗೂ ಆರ್ಥಿಕ ಅಸಮಾನತೆ ಇವುಗಳ ಮಧ್ಯ ರಾಜಕೀಯ ಗೊಂದಲಗಳು ಬಂದಾಗ ಯಾವ ಸ್ಥಳೀಯ ಸಂಸ್ಥೆಗಳು ಹೊಣೆಗಾರಿಕೆಯಿಂದ ಕೆಲಸ ಮಾಡುವುದಕ್ಕಾಗುವುದಿಲ್ಲ. ಆದಕ್ಕೋಸ್ಕರ ಈ ಒಂದು ಸಂಪ್ರದಾಯವನ್ನು ನೀವು ಬೆಳೆಸಿದರೆ ಒಳ್ಳೆಯದೇನೋ ಎಂದು ನಾನು ಸಲಹೆ ಕೊಡುತ್ತಾ ಇದ್ದೇನೆ. ಇದು ತಮಗೆ ಸೇರಿದ್ದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಇಬ್ಬರಿಗೂ ಸೇರಿದ್ದು.

ಶ್ರೀ ವೈ. ರಾಮಕೃಷ್ಣ.—ಇದು ಪ್ಯೂರ್ಲಿ ಪರ್ಸನಲ್ ಒಪಿನಿಯನ್. ಹಿಂದಿನಿಂದ ನಾವು ಸಂಪ್ರದಾಯವನ್ನು ನಡೆಸಿಕೊಂಡು ಬರುತ್ತಾ ಇದ್ದೆವು, ಆಗ ರಾಜಕೀಯ ಇರಲಿಲ್ಲ, ಈಗ ರಾಜಕೀಯ ಬಂದಿದೆ. ಉದಾಹರಣೆಗೆ ಹೇಳುವುದಾದರೆ, ಡಿಸ್ಟ್ರಿಕ್ಟ್ ಬೋರ್ಡ್ ಆಕ್ಟನ್ನು ಆಂಧ್ರಪ್ರದೇಶದಲ್ಲಿ ಜಾರಿಗೆ ತಂದರು. ಈ ಒಂದು ಕಾನೂನು ಜಾರಿಗೆ ಬಂದ ಒಂದು ವರ್ಷದ ತನಕ ಅಧ್ಯಕ್ಷರ ಮೇಲೆ ಅವಿಶ್ವಾಸ ತರಬಾರದು ಎಂದು ತಂದಿದ್ದಾರೆ. ಈಗ ರಾಜಕೀಯ ಪಕ್ಷದ ತಳಹದಿಯ ಮೇಲೆ ಇವು ಬೆಳೆದುಬಿಟ್ಟರೆ ಜನರಿಗೆ ಒದಗಬೇಕಾದಂಥ ಸೌಲಭ್ಯಗಳನ್ನು ಅವರಿಗೆ ಒದಗಿಸುವುದು ಕಷ್ಟವಾಗುತ್ತದೆ. ಆದುದರಿಂದ ಅದರ ಬಗ್ಗೆ ಆಲೋಚನೆ ಮಾಡಬೇಕು ಎಂದು ನಾನು ಹೇಳುತ್ತೇನೆ. ಇನ್ನು ಬೆಂಗಳೂರಿನ ವಿಚಾರ ಹೇಳುವುದಾದರೆ, ಬೆಂಗಳೂರಿನ ವಿಚಾರ ಸನ್ಮಾನ್ಯ ಚಂದ್ರಶೇಖರ್‌ರವರಿಗೆ ಗೊತ್ತು. ಮೊನ್ನೆ ತಾನೇ ಪೇಪರಿನಲ್ಲಿ ಕೂಡ ಬಂದಿದೆ. Bangalore is the costliest city in the country ಎಂದು ಬಂದಿದೆ. ಬೆಂಗಳೂರಿನಲ್ಲಿ ಕನ್‌ಸ್ಯೂಮರ್ ಪ್ರೈಸ್ ಇಂಡೆಕ್ಸ್ ೬೨೫ ಪಾಯಿಂಟ್ಸ್‌ಗೆ ಹೋಗಿದೆ ನೆಕ್ಸ್ಟ್ ಬಾಂಬೆ ಬರುತ್ತದೆ, ಬಾಂಬೆಯದು ೫೯೯ ಪಾಯಿಂಟ್ಸ್. ಆಮೇಲೆ ಮದ್ರಾಸ್ ೫೬೨, ಡೆಲ್ಲಿ ೫೬೧, ಹೈದರಾಬಾದ್ ೫೫೮, ಅಹಮದಾಬಾದ್ ೫೫೭, ಖಾನಪ್ಪುರ್ ೫೩೬, ಕಲ್ಕತ್ತ ೫೨೫ ಇಡೀ ಇಂಡಿಯಾ ದೇಶದಲ್ಲಿ ಅತೀ ಹೆಚ್ಚಿನ ಜನಸಂಖ್ಯೆ ಇರತಕ್ಕಂಥಾದ್ದು ಕಲ್ಕತ್ತಾದಲ್ಲಿ, ಅಲ್ಲಿ ಕನ್‌ಸ್ಯೂಮರ್ಸ್ ಪ್ರೈಸ್ ಇಂಡೆಕ್ಸ್ ಎಷ್ಟಿದೆಯೆಂದರೆ ೫೨೫ ಪಾಯಿಂಟ್ಸ್. ಬೆಂಗಳೂರಿನಲ್ಲಿ ೬೨೫ ಇದೆ, ಎಂದರೆ ೧೦೦ ಪಾಯಿಂಟ್ಸ್ ಹೆಚ್ಚಾಗಿದೆ. ಇದಕ್ಕೆ ಕಾರಣವೇನು? ಕಾರಣವೇನೆಂದರೆ, ಬೆಂಗಳೂರಿನ ಬೆಳವಣಿಗೆ. ಬೆಂಗಳೂರು ಅತೀ ಶೀಘ್ರವಾಗಿ ಬೆಳೆಯುತ್ತಾ ಇದೆ. ಇವತ್ತು ರೈಲಿನ ಓಟವಲ್ಲಿ ಬೆಂಗಳೂರು ಬೆಳೆಯುತ್ತಿದೆ. ಇದಕ್ಕೆ ಯಾರು ಕಾರಣಕರ್ತರು, ನಾವು ಕಾರಣ ಕರ್ತರು ಎಂದು ಹೇಳುವುದಿಲ್ಲ, ನೀವು ಕಾರಣಕರ್ತರು ಎಂದು ಹೇಳುವುದಿಲ್ಲ. ಇವೊತ್ತು ೧೦೦೦ ಮನೆಗಳನ್ನು ಕಟ್ಟುತ್ತಿದ್ದರೆ ಅದರಲ್ಲಿ ೭೫೦ ಮನೆಗಳಿಗೆ ಲೈಸನ್ಸ್ ಇರುವುದಿಲ್ಲ, ಅವೆಲ್ಲಾ ಅನ್ ಆಥರೈಸ್ಡ್ ಕನ್‌ಸ್ಟ್ರಕ್ಷನ್ಸ್ ರೆವಿನ್ಯೂ ಸೈಟಿನಲ್ಲಿ ಕಟ್ಟುತ್ತಾ ಇರುತ್ತಾರೆ. ರೈಲಿನಲ್ಲಿ ಹೋಗುವಾಗ ನೋಡಿದರೆ ಅಲ್ಲಲ್ಲಿ ಖಾಲಿ ಜಾಗ ಇರುತ್ತದೆ ಒಂದೆರಡು ತಿಂಗಳ ನಂತರ ಮತ್ತೆ ನೋಡಿದರೆ ಮನೆಗಳನ್ನು ಕಟ್ಟಿಬಿಟ್ಟಿರುತ್ತಾರೆ. ನಂತರ ನೀರು

ಕೊಡಂ, ದೀಪ ಕೊಡು, ರೋಡು ಕೊಡು, ಕಾರ್ಪೊರೇಷನ್‌ಗೆ ಸೇರಿಸಿಕೊ ಎಂದು ಹೇಳುತ್ತಾರೆ. ಇದು ಒಂದು ಖಾಯಿಲೆ. ಇದನ್ನು ತಡೆಗಟ್ಟುವುದಕ್ಕೆ ಏನು ಮಾಡಿದ್ದೀರಿ? ಇದಕ್ಕೆ ಒಂದು ಡಿಪಾರ್ಟ್‌ಮೆಂಟ್ ತೆಗೆದು ಇಟ್ಟಿದ್ದೀರಿ. ಇದು ಸರಿಯಾಗಿ ಕೆಲಸ ಮಾಡುವುದಾದರೆ ಅನ್ ಆಥರೈಸ್ಡ್ ಕನ್‌ಸ್ಟ್ರಕ್ಷನ್ ಏಕೆ ಬರುತ್ತದೆ? ಹಾಗಾದರೆ ಅದು ಸರಿಯಾಗಿ ಕೆಲಸ ಮಾಡುತ್ತಾ ಇಲ್ಲವೇ? ಬೇರೆ ವಿಧದಲ್ಲಿ ಕೆಲಸ ಮಾಡುತ್ತಿದೆಯೇ? ನಾನು ಹೇಳುವುದನ್ನು ತಾವು ತಿಳಿದುಕೊಳ್ಳುತ್ತೀರಿ ಎಂದು ನಾನು ಅಂದಂ ಕೊಂಡಿದ್ದೇನೆ. ಅನ್‌ಆಥರೈಸ್ಡ್ ಕನ್‌ಸ್ಟ್ರಕ್ಷನ್‌ನನ್ನು ತಡೆಗಟ್ಟುವುದಕ್ಕೆ ತಾವು ಏನು ಕ್ರಮ ಕೈಗೊಂಡಿದ್ದೀರಿ ಇದರ ಬಗ್ಗೆ ಕ್ರಮ ಕೈಗೊಳ್ಳದೇ ಹೋದರೆ ಅಂತಹ ಅಧಿಕಾರಿಗಳನ್ನು ನಿರ್ದಾಕ್ಷಿಣ್ಯವಾಗಿ ಮನೆಗೆ ಕಳುಹಿಸಿ ಅವರು ಡೆಪ್ಯುಟಿ ಕಮೀಷನರ್ ಇರಬಹುದು, ಅಸಿಸ್ಟೆಂಟ್ ಕಮೀಷನರ್ ಇರಬಹುದು ತಹಶೀಲ್ದಾರ್ ಇರಬಹುದು. ಪ್ರಿವೆನ್‌ಷನ್ ಆಫ್ ಅನ್‌ಆಥರೈಸ್ಡ್ ಕನ್‌ಸ್ಟ್ರಕ್ಷನ್ ಅಧಿಕಾರಿಗಳಿಗೆ ಜೀವ ಕೊಟ್ಟು, ಪೆಟ್ರೋಲ್ ಕೊಟ್ಟು, ಸಂಬಳ ಕೊಟ್ಟು ಇಷ್ಟೆಲ್ಲಾ ಮಾಡಿದರೂ ಕೂಡ ಮನೆಗಳನ್ನು ಕಟ್ಟಿಕೊಂಡು ಹೋಗುತ್ತಿದ್ದರೆ Are we to patronise their wishes? Send them home. Take good name. ಇವೊತ್ತಿನ ದಿವಸ ಕನ್‌ಸ್ಯೂಮರ್ಸ್ ಪ್ರೈಸ್ ಇಂಡೆಕ್ಸ್ ೬೨೫ ಇದೆ, ಪ್ರಪಂಚಲ್ಲೇ ತುಂಬಾ ಫಾಸ್ಟಾಗಿ ಬೆಳೆಯುತ್ತಿದೆ ಬೆಂಗಳೂರು, ಲಂಡನ್, ಟೋಕಿಯೋ ಎಲ್ಲವನ್ನೂ ಇದು ಮೀರಿಸುತ್ತಿದೆ. ಇದಕ್ಕೆ ಎಲ್ಲರೂ ಕಾರಣಕರ್ತರು ಎಂದು ಹೇಳಬೇಕಾಗುತ್ತದೆ. ೩೦ ಲಕ್ಷ ಮೀರಿದಂಥ ಜನಸಂಖ್ಯೆಗೆ ಎಲ್ಲಿ ತರಕಾರಿ ಬೆಳೆಯುತ್ತೀರಿ, ೩೦ ಲಕ್ಷ ಜನಸಂಖ್ಯೆಗೆ ಮೊಟ್ಟೆ ಮಾಂಸ ಮುಂತಾದ ಉಪಯುಕ್ತ ವಸ್ತುಗಳನ್ನು ಎಲ್ಲಿಂದ ಸರಬರಾಜು ಮಾಡುತ್ತೀರಿ? ಬೆಲೆಗಳು ಬೇರೆ ಜಾಸ್ತಿಯಾಗುತ್ತಿವೆ. ಅದಕ್ಕೋಸ್ಕರ You fix a number. ಮತ್ತೆ ಕೆಂಪೇಗೌಡರು ೪ ಕಡೆ ಗೋಪುರಗಳನ್ನು ಹಾಕಿದ್ದರು. ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಇನ್ನು ಮುಂದೆ ಇಂಪ್ರೂವ್‌ಮೆಂಟ್ ಮಾಡಬೇಕು. ಹಿಂದೆ ಈ ಒಂದು ಕಾನೂನು ಬಂದಾಗ ನಮ್ಮ ಅನುಭವ ಈ ಎಲ್ಲಾ ವಿಚಾರಗಳು ಬಂದಿವೆ. ಪರ್ಮನೆಂಟಾಗಿ ನಗರವನ್ನು ಬೆಳೆಸಿ, ಬೆಳೆಯುವುದಕ್ಕೆ ಅವಕಾಶವಿದ್ದರೆ ಬೆಳೆಸಿ. Days are not far off for Bangalore to grow near Tumkur. ಈಗ ಎಲೆಕ್ಟ್ರಿಸಿಟಿಗೆ ತೊಂದರೆಯಾಗಿದೆ, ಕುಡಿಯುವ ನೀರಿಗೆ ಭಂಗ ಇದೆ. ನಿಮ್ಮ ಮನೆಗೆ ಶುದ್ಧವಾದ ನೀರು ಬರುತ್ತದೋ ಕಾಣೆ. ಎಲ್ಲಿ ನೋಡಿದರೂ ಕೆಂಪು ನೀರು, ಅದನ್ನು ಕುಡಿಯುವುದು. ಗಂಟಲು ನೋವಾಗಿ ಜ್ವರ ಂದು ಆಸ್ಪತ್ರೆಗೆ ಹೋಗುವುದು. ನೀರಿನಿಂದ ಖಾಯಿಲೆ ಬಂತು ಎಂದು ಹೇಳುವುದು ಪ್ರತಿನಿತ್ಯ ರಸ್ತೆಗಳನ್ನು ಹೊಡೆಯುತ್ತಾ ಇದ್ದಾರೆ. ಆ ಮಟ್ಟಕ್ಕೆ ಹೊರಟು ಹೋಗಿದೆ. ಅದಕ್ಕೋಸ್ಕರ ಟಾರ್ಗೆಟ್ ಇಟ್ಟುಕೊಳ್ಳಿ. ನೀವು ೨೫ ಮೈಲಿ ಎಂದು ಫಿಕ್ಸ್‌ಮಾಡಿ ಟಾರ್ಗೆಟ್ ಇಟ್ಟುಕೊಳ್ಳಿ. ೪೬.೫ ಚದರ ಕಿಲೋಮೀಟರ್ ಇದೆ. ೫೦ ಮೈಲಿ ಇಟ್ಟುಕೊಂಡು ಅದಕ್ಕೆ ಒಂದು ಯೋಜನೆಯನ್ನು ಸಿದ್ಧಪಡಿಸಿ ಟ್ರಾನ್ಸ್‌ಪೋರ್ಟ್ ಕಡೆ ಯಾರೂ ಯೋಚನೆ ಮಾಡುತ್ತಾ ಇಲ್ಲ. ನಗರಗಳಲ್ಲಿರತಕ್ಕ ಜನ, ಕಾರ್ಪೊರೇಷನ್ ಏರಿಯಾದಲ್ಲಿರತಕ್ಕ ಜನ ಎಷ್ಟು ಕಷ್ಟಪಡುತ್ತಿದ್ದಾರೆ ಎನ್ನುವುದನ್ನು ತಾವು ಯೋಚನೆ ಮಾಡಿ. ಬೆಂಗಳೂರಿನಿಂದ ಮೈಸೂರಿಗೆ ರೈಲಿನಲ್ಲಿ ಹೋಗಬೇಕಾದರೆ ಎಷ್ಟು ಫೇರ್ ಕೊಡುತ್ತೇವೆ ಅಷ್ಟು ಫೇರನ್ನು ವಿಧಾನಸೌಧದಿಂದ ಬಸವನಗುಡಿಗೆ ಹೋಗಬೇಕಾದರೆ ಕೊಡಬೇಕಾಗುತ್ತದೆ ಇದರ ಕಡೆ ತಾವು ಆಲೋಚನೆ ಮಾಡಿದ್ದೀರಾ? ೩೦ ಲಕ್ಷ ಜನಸಂಖ್ಯೆಗೆ ಏನೇನು ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದೀರಿ ಅದರ ಕಡೆ ಆಲೋಚನೆ ಮಾಡಿ. ಟ್ರಾನ್ಸ್‌ಪೋರ್ಟ್ ಸರ್ವೀಸ್ ಏನಿದೆ? ಅದರಲ್ಲಿ ಪ್ರೈವೇಟ್‌ನವರಿಗೆ ಅವಕಾಶ ಕೊಡುತ್ತೀರೋ ನೋಡಿ. ಏಕೆಂದರೆ, What we require is the conveyance to the people. ಅದರಲ್ಲಿ ಪ್ರತಿಷ್ಠೆ ಏನಿಲ್ಲ. ಮನಾಪಲಿ ರೂಟ್ಸ್ ಆಫ್ ದಿ ಗವರ್ನಮೆಂಟ್ ಏನಿದೆ ಅದರಲ್ಲಿ ಖಾಸಗಿಯವರಿಗೆ ಹೋಗಬಾರದು, ಒಂದು ವೇಳೆ ಮನಾಪಲಿ ರೂಟ್ಸ್ ಬೇಕಾದರೆ ಕೆಲವುಕಡೆ ಇಟ್ಟುಕೊಳ್ಳಿ. ಇದು ಸಕ್ಸಸ್ ಆದರೆ ಎಕ್ಸ್‌ಟೆಂಡ್ ಮಾಡಿ. ಇಲ್ಲದೇ ಹೋದರೆ ಬಿಸಾಕಿ. ಬೆಂಗಳೂರು ಸಿಟಿ ಇರಬಹುದು, ಮೈಸೂರು ಸಿಟಿ ಇರಬಹುದು. They have become unmanageable ಇದಕ್ಕೆಲ್ಲಾ ಒಂದು ಕೊನೆ ಇರಬೇಕು ಆ ಕೊನೆ ಯಾವುದು ಎಂದು ಸೂಚಿಸಿದರೆ ಒಳ್ಳೆಯದು ಎಂದು ನಾನು ಭಾವಿಸುತ್ತೇನೆ. ಇತ್ತೀಚೆಗೆ ಸರ್ಕಾರದವರು ಗ್ರೀನ್‌ಬೆಲ್ಟ್ ಏರಿಯ ಎಂದು ಒಂದು ಆಜ್ಞೆ ಹೊರಡಿಸಿದರು. ಇದರ ಬಗ್ಗೆ ನಾನು ಹೆಚ್ಚಿಗೆ ಚರ್ಚೆ ಮಾಡಬೇಕಾದ್ದಿಲ್ಲ. ಇದನ್ನು ಯಾರು ಇಷ್ಟೂ ಮಾಡಿದರೋ ನನಗೆ ಗೊತ್ತಿಲ್ಲ. ಈ ಆರ್ಡರನ್ನು ಡಿಪಾರ್ಟ್‌ಮೆಂಟ್ ನೋಡಿದೆಯೋ ಅಥವಾ ತಾವು ಕನ್ನಡಕ ಹಾಕಿದ್ದೀರಿ. ಕಣ್ಣಿದ್ದರೂ ಕಣ್ಣುಮುಚ್ಚಿಕೊಂಡು ರುಜು ಮಾತ್ರ ಹಾಕಿದ್ದೀರೋ, ಏಕೆ ರೇಜು

ಹಾಕಿದಿರಿ ? ಬೆಂಗಳೂರಿನಲ್ಲಿ ದೊಡ್ಡ ದೊಡ್ಡ ತಾಲ್ಲೂಕುಗಳಿವೆ. ತಾವು ನೋಡದೇ ಇರುವ ಹಳ್ಳಿ ಇಲ್ಲ ಈ ಆಜ್ಞೆಯಿಂದಾಗಿ ಯಾರೂ ಕೂಡ ಮನೆಗಳನ್ನು ಕಟ್ಟುವುದಕ್ಕೆ ಲೈಸನ್ಸ್ ಕೊಡಕೂಡದು. ಕನಕಪುರ ದೊಡ್ಡಬಳ್ಳಾಪುರ ನಾರ್ತ್ ತಾಲ್ಲೂಕು, ಸೌತ್ ತಾಲ್ಲೂಕು, ಮಾಗಡಿ ಮುಂತಾದ ಕಡೆಗಳಲ್ಲಿ ಯಾರೂ ಲೈಸನ್ಸ್ ಕೊಡುವ ಹಾಗಿಲ್ಲ. ನಗರಗಳಲ್ಲಿ ವಾಸಮಾಡತಕ್ಕವರ ಉಪಯೋಗಕ್ಕೋಸ್ಕರ ಗ್ರೀನ್‌ಬೆಲ್ಟ್ ಏರಿಯ ಮಾಡುತ್ತೇವೆ, ಮರ ಬೆಳೆಸುವುದಕ್ಕೆ ಯೋಚನೆ ಮಾಡಿದ್ದೇವೆ ಎಂದರೆ ಇಲ್ಲಿಂದ ೧೦೦ ಕಿಲೋ ಮೀಟರ್ ದೂರದಲ್ಲಿ ವಿಲೇಜ್ ಪಂಚಾಯಿತಿಯವರು ಯಾರೂ ಕೂಡ ಲೈಸನ್ಸ್ ಕೊಡಕೂಡದು ಎನ್ನತಕ್ಕಂಥಾದ್ದು ಏಕೆ ? ಇಂತಹ ಆರ್ಡರ್ ಮಹಮ್ಮದ್‌ಬಿನ್ ತೊಘಲಕ್ ಆರ್ಡರನ್ನೂ ಇದು ಮೀರಿಸಿದೆ. ಇದು obnoxious order. ಇದರ ಮುಂದೆ ಮಹಮದ್‌ಬಿನ್ ತೊಘಲಕ್ ಆರ್ಡರ್ ಯಾವುದೂ ಇಲ್ಲ. ಇದಕ್ಕೆ ಕಾರಣಕರ್ತರು ಯಾರು ? How can they encroach upon the powers granted under the Village Panchayats and Taluk Boards Act ? ಅವರು ಲೈಸನ್ಸ್ ಕೊಡಬೇಕಾದರೆ ಸಿ.ಐ.ಟಿ.ಬಿ. ಛೇರ್ಮನ್ ಹತ್ತಿರ ಬಂದು ಪರ್ಮಿಷನ್ ತೆಗೆದು ಕೊಳ್ಳಬೇಕು. ಬೆಂಗಳೂರಿನಲ್ಲಿ ಯಾರಿಗೆ ಮನೆ ಕಟ್ಟಿಸಿಕೊಡುತ್ತಾರೆ, ಗ್ರಾಮಾಂತರ ಪ್ರದೇಶದಲ್ಲಿ ಮನೆ ಕಟ್ಟಿಕೊಳ್ಳುವುದಕ್ಕೆ ಇವರ ಪರ್ಮಿಷನ್ ತೆಗೆದುಕೊಳ್ಳಬೇಕು. ಗ್ರೀನ್‌ಬೆಲ್ಟ್ ಮಾಡಬೇಕಾದರೆ ಅದಕ್ಕೆ ಒಂದು ಮೀಟಿಂಗ್ ಇರಬೇಕು. ಇದರ ಬಗ್ಗೆ ಉತ್ತರ ಕೊಡುವಾಗ ತಾವು ಹೇಳಿ ? ಎಷ್ಟು ಮೈಲಿ ಅಕ್ವೈರ್ ಮಾಡಿಕೊಳ್ಳುತ್ತೀರಿ, ಗ್ರೀನ್‌ಬೆಲ್ಟ್ ಎಷ್ಟರಮಟ್ಟಿಗೆ ತೆಗೆದುಕೊಂಡು ಬರುತ್ತೀರಿ ಎನ್ನುವುದನ್ನೆಲ್ಲಾ ಹೇಳಬೇಕು. ವಿಲೇಜ್ ಪಂಚಾಯಿತಿಯವರ ಹಕ್ಕನ್ನು ಏಕೆ ತಡೆಗಟ್ಟುತ್ತೀರಿ, ಅವರ ಕಾರ್ಯ ನಿರ್ವಹಣೆಯಲ್ಲಿ ಏಕೆ ಇಂಟರ್ ಫಿಯರ್ ಮಾಡಿದಿರಿ ಎಂದು ನಾನು ಕೇಳಬೇಕಾಗುತ್ತದೆ. ಗ್ರೀನ್‌ಬೆಲ್ಟ್ ಏರಿಯಾ ಕೆಲವು ಹೊರರಾಷ್ಟ್ರಗಳಲ್ಲಿರಬಹುದು, ಬೆಂಗಳೂರು ನಗರದಲ್ಲಿ ಅವರ ಅವಶ್ಯಕತೆ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಬಡ ರಾಷ್ಟ್ರಗಳಿಗೆ ಇದು ಬೇಕಾಗಿಲ್ಲ. ಮಾಸ್ಕೋದಲ್ಲಿರಬಹುದು, ಲಂಡನ್‌ನಲ್ಲಿರಬಹುದು, ಬೆಂಗಳೂರನ್ನು ಕೂಡ ಲಂಡನ್ ಮಾಡುತ್ತೀರೇನೋ ಗೊತ್ತಿಲ್ಲ ಇನ್ನು ಸಿ.ಐ.ಟಿ.ಬಿ. ಬಗ್ಗೆ ಹೇಳುವುದಾದರೆ ಬೆಂಗಳೂರಿನಲ್ಲಿರತಕ್ಕ ಗೋಡೆಗಳು ಹೇಳುತ್ತವೆ. ಗೋಡೆಗಳ ಮೇಲಿನ ಬರವಣಿಗೆಗಳು ಹೇಳುತ್ತವೆ. ತಾವು ಅಧಿಕಾರಕ್ಕೆ ಬಂದಮೇಲೆ ಎಷ್ಟು ಮನೆಗಳನ್ನು ಕಟ್ಟಿಸಿಕೊಟ್ಟಿದ್ದೀರಿ ಎಷ್ಟು ಸೈಟುಗಳನ್ನು ಕೊಟ್ಟಿದ್ದೀರಿ ? ಎಂದು ಯಾವ ಯಾವ ವರ್ಗದವರಿಗೆ ಕೊಟ್ಟಿದ್ದೀರಿ ? ಒಂದು ವೇಳೆ ಕೊಡದೇ ಇದ್ದರೆ ಅದಕ್ಕೆ ಕಾರಣವೇನು ? ಈ ವಿಚಾರದಲ್ಲಿ ಸರ್ಕಾರದ ಗುರಿಯೇನು ? ಜನಗಳಿಂದ ಕೋಟ್ಯಾಂತರ ರೂಪಾಯಿಗಳ ಡಿಪಾಸಿಟ್ ತೆಗೆದುಕೊಂಡಿದ್ದೀರಿ, ಜನತೆಗೆ ಮನೆಗಳನ್ನು ಕಟ್ಟಿಸಿಕೊಡುತ್ತೇವೆಂದು ಭರವಸೆ ಕೊಟ್ಟಿದ್ದೀರಿ. ಇದು ಯಾರ ದುಡ್ಡು ? ಸಾರ್ವಜನಿಕರ ದುಡ್ಡು ತೆಗೆದುಕೊಂಡು ಬ್ಯಾಂಕಿನಲ್ಲಿಟ್ಟುಕೊಂಡು ಅದಕ್ಕೆ ಬಡ್ಡಿ ಕೂಡ ಕೊಡದೆ ಮನೆ ಕೂಡ ಕಟ್ಟಿಸಿಕೊಟ್ಟಿಲ್ಲ. ಎಷ್ಟೋ ಜನ ಸರ್ಕಾರಿ ನೌಕರರು ಹಣ ಕೊಟ್ಟಿದ್ದಾರೆ, ಕೆಲವರು ಈಗಾಗಲೇ ನಿವೃತ್ತಿ ಹೊಂದಿದ್ದಾರೆ. ಈ ವಿಚಾರದ ಬಗ್ಗೆ ಸರ್ಕಾರದವರು ಗಂಭೀರವಾಗಿ ಯೋಚನೆ ಮಾಡಬೇಕೆಂದು ಹೇಳುತ್ತೇನೆ. ಸೈಟುಗಳ ಹಂಚಿಕೆಗೆ ಸಂಬಂಧಪಟ್ಟಂತೆ ಸಿ.ಓ.ಡಿ. ತನಿಖೆ ನಡೆಸಿದರೂ ತಪ್ಪಿಲ್ಲ. ಇವತ್ತು ಸೈಟುಗಳನ್ನು ಯಾರಿಗೆ ಕೊಡುತ್ತಿದ್ದಾರೆ ? ಅವಶ್ಯಕತೆ ಇರತಕ್ಕವರಿಗೆ ಕೊಡುತ್ತಿಲ್ಲ. ಸೈಟು ಇರತಕ್ಕವರೇ, ಅವರ ಹೆಂಡತಿ ಹೆಸರಿನಲ್ಲಿ ಮಕ್ಕಳ ಹೆಸರಲ್ಲಿ ಸೈಟುಗಳನ್ನು ಪಡೆದಿದ್ದಾರೆ. ಇದರ ಬಗ್ಗೆ ಲೆಕ್ಕ ಏನಾದರೂ ಇಟ್ಟಿದ್ದೀರಾ? ಇಂಥವರ ಮೇಲೆ ಪ್ರಾಸಿಕ್ಯೂಷನ್ ಆರ್ಡರ್ ಮಾಡಿದ್ದೀರಾ ? ಫಾಲ್ಸ್ ಅಫಿಡವಿಟ್ ಕೊಟ್ಟು ಸೈಟುಗಳನ್ನು ಪಡೆದಿದ್ದಾರೆ. ಇದರ ಬಗ್ಗೆ ಇನ್‌ವೆಸ್ಟಿಗೇಷನ್ ನಡೆದು ಕೆಲವರು ಕೋರ್ಟಿಗೆ ಹೋಗಿದ್ದಾರೆ. People with influence got site in someboday's name or in fictitious names. ಮನೆ ಕಟ್ಟಿ ಬಾಡಿಗೆ ಕೊಟ್ಟಿರುವವರ ಮೇಲೆ ಸೂಕ್ತ ಕ್ರಮ ಏತಕ್ಕೆ ತೆಗೆದುಕೊಂಡಿಲ್ಲವೆಂದು ಕೇಳುತ್ತೇನೆ. ನಮ್ಮ ಸರ್ಕಾರದಲ್ಲಿ ಇಂಥಾದ್ದು ಇರಲಿಲ್ಲವೆಂದು ಹೇಳುವುದಿಲ್ಲ, ಎಲ್ಲಾ ಕಾಲದಲ್ಲೂ ಇದು ಇದೆ. ಇಂಥ ವಿಚಾರಗಳಲ್ಲಿ ಬಿಗಿಯಾದ ಕ್ರಮ ತೆಗೆದುಕೊಳ್ಳದೇ ಇದ್ದರೆ ಸಮಾಜವನ್ನೇ ಇವರು ನುಂಗಿ ಬಿಡುತ್ತಾರೆ. ಚಿಕ್ಕಮಾರನಹಳ್ಳಿ ಗಲಾಟೆ ತಮಗೆ ಗೊತ್ತಿದೆ. ಅಕ್ರಮವಾಗಿ ಯಾರೇ ಮನೆ ಕಟ್ಟಲಿ ಅವುಗಳನ್ನು ಸರ್ಕಾರ ಸ್ವಾಧೀನಕ್ಕೆ ತೆಗೆದುಕೊಳ್ಳುವಂಥ ಧೈರ್ಯ ಮಾಡಬೇಕು. I know the of sympathy of the Government is there. ಸಣ್ಣ ಸಣ್ಣ ಸೈಟುಗಳನ್ನು ಮಾಡಿ, ಅವಶ್ಯಕತೆ ಇರುವವರಿಗೆ ಬೇರೆ ಕಡೆ ಕೊಟ್ಟು ನಂತರ ಬುಲ್ಡೋಜರ್ ತೆಗೆದುಕೊಂಡು ಬಂದಿದ್ದರೆ ಯಾರು ನಿಮ್ಮನ್ನು ಕೇಳುತ್ತಿರಲಿಲ್ಲ, ನೀವು ಅದನ್ನು ಮಾಡದೇ ಒಂದೇ ಸಾರಿ ಬುಲ್ಡೋಜರ್ ತೆಗೆದು ಕೊಂಡು ಬಂದು ಮನೆಗಳನ್ನು ನೆಲಸಮ ಮಾಡಿದ್ದರಿಂದ ಜನರ ಕೋಪಕ್ಕೆ ತುತ್ತಾಗಬೇಕಾಯಿತು.

ಇನ್ನು ಮುನಿಸಿಪಾಲಿಟಿಗಳು, ಕಾರ್ಪೋರೇಷನ್‌ಗಳು, ಎಜುಕೇಷನ್ ಸೆಸ್ ಮತ್ತು ಹೆಲ್ತ್ ಸೆಸ್ ವಸೂಲು ಮಾಡುತ್ತಿದ್ದವು, ಈಗ ತಮ್ಮ ಅವರು ಜವಾಬ್ದಾರಿಯಿಂದ ತಪ್ಪಿಸಿ ಕೊಳ್ಳುತ್ತಿದ್ದಾರೆ. ಇತ್ತೀಚೆಗೆ ಬೆಂಗಳೂರು ನಗರಸಭೆಯು ರು ಆಯುವ್ಯಯವನ್ನು ಮಂಡಿಸಿದ್ದಾರೆ. ಅದರಲ್ಲಿ ಬೋಗಸ್ ಫಿಗರ್ಸ್ ಬಂದಿದೆ ಎಂದು ಟೀಕೆಗಳು ಬಂದಿವೆ.

MR. SPEAKER.—It is not right on our part to discuss that budget on the floor of this House.

ಶ್ರೀ ವೈ. ರಾಮಕೃಷ್ಣ.—ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಇವರು ಕೊಡಬೇಕಾದ ನಾಗರಿಕ ಸೌಲಭ್ಯಗಳನ್ನು ಕೊಡದೇ ಸೆಸ್ಸುಗಳನ್ನು ಏತಕ್ಕೆ ವಸೂಲು ಮಾಡಬೇಕು ? ಬೆಂಗಳೂರು ನಗರದಲ್ಲಿ ವಾರ್ಡುಗಳು, ಆಸ್ಪತ್ರೆಗಳು, ಶಾಲಾಕಟ್ಟಡಗಳ ಕೆಲಸ ಪ್ರಾರಂಭ ಮಾಡಿಲ್ಲ. ಇದಕ್ಕೆ ಕಾರಣವೇನು ? Give them responsibility. If they fail to fulfil their responsibility superede them. ಗ್ರಾಮಾಂತರ ಪ್ರದೇಶಗಳಲ್ಲಿ ಎನ್.ಆರ್.ಇ.ಪಿ. ಯೋಜನೆಯ ಮೂಲಕ ಶಾಲಾಕಟ್ಟಡಗಳನ್ನು ಕಟ್ಟಿಸಿಕೊಡುತ್ತಾರೆ ನಗರಗಳಲ್ಲಿ ಯಾವ ಯೋಜನೆಯೂ ಇಲ್ಲ. ನಗರಸಭೆಯಿಂದ ವಂತಿಗೆ ತೆಗೆದುಕೊಂಡು ಪ್ರತಿಯೊಂದು ವಾರ್ಡಿನಲ್ಲಿಯೂ ಶಾಲಾ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಇವತ್ತು ನಗರಸಭೆಯಲ್ಲಿ ಬರೀ ಜಗಳ ಕೂಗಾಟ ಕಿರುಚಾಟ ಮಾಡುತ್ತಿದ್ದಾರೆ ಕಾರ್ಪೋರೇಷನ್‌ನವರು 100 ಬೆಡ್ ಆಸ್ಪತ್ರೆ ಜಯನಗರದಲ್ಲಿ ಕಟ್ಟುವುದಕ್ಕೆ ಪ್ರಾರಂಭ ಮಾಡಲಾಯಿತು. ಪ್ರತಿಯೊಂದು ವಾರ್ಡಿನಲ್ಲಿಯೂ ಮೆಟರ್ನಿಟಿ ವಾರ್ಡುಗಳನ್ನು ಕಟ್ಟಿಸಲಾಯಿತು. ನಗರಸಭೆಯವರು ಕಡ್ಡಾಯವಾಗಿ ವಿದ್ಯಾಭ್ಯಾಸ, ಆರೋಗ್ಯ, ಶುಚಿತ್ವ ಹಾಗೂ ಮರಗಳನ್ನು ಬೆಳೆಸತಕ್ಕ ಕೆಲಸವನ್ನು ಮಾಡಲೇಬೇಕು. ಇದನ್ನು ಮಾಡದೇ ಇರತಕ್ಕ ನಗರಸಭೆಗಳ ಬಗ್ಗೆ ಉಗ್ರವಾದ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಸರ್ಕಾರದವರು ಮ್ಯಾಚಿಂಗ್ ಗ್ರ್ಯಾಂಟ್ ಕೊಟ್ಟು ; ಪೌರ ಸೌಲಭ್ಯಗಳನ್ನು ಹೆಚ್ಚಿಸಬೇಕೇ ಹೊರತು, ಇದರಲ್ಲಿ ರಾಜಕೀಯ ಮಾಡಬಾರದೆಂದು ಹೇಳುತ್ತೇನೆ. ಸ್ವಾಮಿ, ತಾವು ಆನೇಕಲ್‌ಗೆ ಬಂದಿದ್ದೀರಿ. ಯಾರು ಗೆದ್ದಿದ್ದರು ಎನ್ನುವುದು ಮುಖ್ಯ ಪ್ರಶ್ನೆಯಲ್ಲ.

ನೀವು ಮುನಿಸಿಪಾಲಿಟಿಗಳಿಗೆ ಚುನಾವಣೆ ನಡೆಸಿದಿರಿ. ಆಗ ಒಂದು ಕಡೆ ನಮ್ಮ ಪಕ್ಷದವರು ಇಬ್ಬರು ಮಾತ್ರ ಗೆದ್ದರು. ಹಾಗೆ ಗೆದ್ದವರನ್ನು ನಮ್ಮ ಪಕ್ಷಕ್ಕೆ ಸೇರಿಕೊಳ್ಳಿ, ನಿಮ್ಮ ಮುನಿಸಿಪಾಲಿಟಿಯನ್ನು ನಾವು ನೋಡಿಕೊಳ್ಳುತ್ತೇವೆಂದು ಹೇಳಿದಿರಿ. ಮುನಿಸಿಪಾಲಿಟಿಗೆ ನಿಮ್ಮಿಂದ ಹಣ ಬರುತ್ತದೆಂದು ಗೊತ್ತಾದಮೇಲೆ ಅವರು ನಿಮ್ಮ ಪಕ್ಷಕ್ಕೆ ಸೇರಿಕೊಂಡರು. ಪಕ್ಕಪಕ್ಕದಲ್ಲಿ ಕುಳಿತಿರತಕ್ಕ ಚಂದ್ರಶೇಖರ್ ಮತ್ತು ಜಾಲಪ್ಪನವರು ಇಬ್ಬರೂ ಬನ್ನಿ, ಅವರು ಏನು ಹೇಳುತ್ತಾರೆಂಬುದನ್ನು ಹೇಳಿಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಏನದು ಜಾಲಪ್ಪನವರ ವಿಚಾರ ?

ಶ್ರೀ ವೈ. ರಾಮಕೃಷ್ಣ.—ನಿಮ್ಮ ಸಹಾಯ ಇರುತ್ತದೆ ಅಷ್ಟೆ

ಶ್ರೀ ಆರ್. ಎಲ್. ಜಾಲಪ್ಪ.—ನಮ್ಮದೇನೂ ಇಲ್ಲ.

ಶ್ರೀ ವೈ. ರಾಮಕೃಷ್ಣ.—ಇಲ್ಲದಿದ್ದರೆ ಬಿಡಿ. ಹೋಗಲಿ. ಇವರು ನಗರದಲ್ಲಿ ಹುಟ್ಟಿದರೂ ಹಳ್ಳಿಗಳ ಕಡೆ ತುಂಬಾ ಕೈವಾಡ ಮಾಡಿದ್ದಾರೆ. ಕೈವಾಡ ಅಂದರೆ ಚಿಕ್ಕ ವಯಸ್ಸಿನಿಂದ ಹಳ್ಳಿಗಳಲ್ಲಿ ದುಡಿದಿದ್ದಾರೆ. ಅವರು ಯಾರು ಎಂಬುದು ನಿಮಗೆ ಚೆನ್ನಾಗಿ ಗೊತ್ತಿದೆ. ಅಧಿಕಾರಕ್ಕೆ ಬಂದಮೇಲೆ ಎಕ್ಸ್‌ಪ್ಲಾಯಿಟ್ ಮಾಡತಕ್ಕ ಗೋಜಿಗೆ ಹೋಗಬಾರದೆಂದು ಹೇಳುತ್ತೇನೆ. ಅವರು ಅವರಿಗೆ ಬೇಕಾದ ನಾಯಕರನ್ನು ಆರಿಸಿಕೊಳ್ಳಲಿ. ಆಗ ಹೇಗೆ ಆಡಳಿತ ನಡೆಯುತ್ತದೆಂಬುದನ್ನು ನೋಡಿ. ಮಾನ್ಯ ಚಂದ್ರಶೇಖರ್‌ರವರು ಕರೆದರೆ ಬರುತ್ತಾರೆ. ಆಗ ಅವರು ಏನೇನು ಹೇಳಿದರು ಎಂಬುದನ್ನು ಕೇಳಿ, ಅವರನ್ನು ನನ್ನ ಜೊತೆಯಲ್ಲಿ ಕರೆದುಕೊಂಡು ಹೋಗಿ ಅವರಿಂದ ಟ್ರ್ಯಾಕ್ಸಿಂಗ್ ಮಾಡಿಸಿ ಮುನಿಸಿಪಾಲಿಟಿಯನ್ನು ಬಿಲ್ಡ್ ಅಪ್ ಮಾಡಿದರೆ ಆ ಮುನಿಸಿಪಾಲಿಟಿಗೆ ಸರ್ಕಾರ ಅನುದಾನ ಕೊಡುವುದಿಲ್ಲ. ಮೀಟಿಂಗ್‌ನಲ್ಲಿ ಕೂಡ ಈ ಮಾತನ್ನು ಹೇಳುತ್ತಿದ್ದರು.

ಶ್ರೀ ಎಂ. ಚಂದ್ರಶೇಖರ್.—ನಾನು ಯಾವತ್ತೂ ಸ್ಥಳೀಯ ರಾಜಕೀಯಕ್ಕೆ ಪ್ರವೇಶ ಮಾಡಿದವನು ಅಲ್ಲ. ಆನೇಕಲ್‌ನಲ್ಲಿ ನಮ್ಮ ಸ್ನೇಹಿತರು ಅವರ ಸ್ನೇಹಿತರು ಸೇರಿ ಅನುಕೂಲ ಮಾಡಿಕೊಂಡಿದ್ದಾರೆ. ಸ್ಥಳೀಯರು ಮಾಡಿಕೊಂಡಿದ್ದಾರೆಯೇ ಹೊರತು ನನ್ನದೇನೂ ಇಲ್ಲ.

ಶ್ರೀ ವೈ. ರಾಮಕೃಷ್ಣ.—ನಾನು ಒಬ್ಬ ಶಾಸಕರನ್ನು ನಿಮ್ಮ ಪಕ್ಷಕ್ಕೆ ಹೋಗಿ ಎಂದು ಕಳುಹಿಸಿಕೊಟ್ಟೆ ; ಆದರೆ ಅವರು ಹೋಗಲಿಲ್ಲ. ಆದಕ್ಕೋಸ್ಕರ ನಾನು ಮೊದಲೇ ಹೇಳಿದೆ, ಈ ಕೆಲಸವನ್ನು ಮಾಡುವುದು ಬೇಡ ಎಂದು. ಸ್ಥಳೀಯ ಸಂಸ್ಥೆಗಳನ್ನು ರಾಜಕೀಯದಿಂದ ದೂರ ಇಡುವುದಕ್ಕೆ ಮೂಲಭೂತವಾಗಿ ನಿಯಮಗಳನ್ನು ಹಾಕಿಕೊಳ್ಳಬೇಕೆಂದು ಹೇಳಿದೆ. ಇದೇ ರೀತಿ ಎಷ್ಟು ಮುನಿಸಿಪಾಲಿಟಿಗಳಿಗೆ ಮಾಡಿದರೋ ಗೊತ್ತಿಲ್ಲ. ಎಲ್ಲೆಲ್ಲಿ ಮಾಡಿದ್ದಾರೋ ಗೊತ್ತಿಲ್ಲ. ಇದು ಮುಂದಿನ ಚುನಾವಣೆಯಲ್ಲಿ ಗೊತ್ತಾಗುತ್ತದೆ. ಎಲ್ಲೆಲ್ಲಿ ಒಳಗೆ ಸೇರಿಸುವುದಿಲ್ಲ ಆಗ ಹೊರಗಡೆ ಬರುತ್ತದೆ. ಅಲ್ಲಿಯವರೆಗೆ ಬರುವುದಿಲ್ಲ. ಆದಕ್ಕೋಸ್ಕರವಾಗಿ ದಯವಿಟ್ಟು ಇನ್ನು ಮೇಲಾದರೂ ಇಂಥದ್ದಕ್ಕೆ ಅವಕಾಶ ಕೊಡಬೇಡಿ ಎಂದು ಹೇಳುತ್ತೇನೆ.

ಈ ವರದಿಯ ಪುಟ ೩೫ರಲ್ಲಿ ಸ್ಲಂ ಡ್ವೆಲರ್ಸ್ ಬಗ್ಗೆ ಇದೆ. ಈ ದಿಸೆಯಲ್ಲಿ ಏನು ಕೆಲಸ ನಡೆದಿದೆ ಇದು ನನಗೆ ಸಂಪೂರ್ಣ ಅಸಮಾಧಾನವನ್ನುಂಟು ಮಾಡಿದೆ. ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಕೆಲವು ಸ್ಲಂಗಳನ್ನು ತೆಗೆದುಕೊಂಡು ಹೋಗಿ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿಗೆ ಕೊಟ್ಟಿದ್ದಾರೆ, ಕೆಲವನ್ನು ಮುನಿಸಿಪಾಲಿಟಿಗೆ, ಕಾರ್ಪೊರೇಷನ್ನಿಗೆ ಕೊಟ್ಟಿದ್ದಾರೆ, ಕೆಲವನ್ನು ಸರ್ಕಾರವೇ ನೇರವಾಗಿ ಮೇಂಟೇನ್ ಮಾಡುತ್ತದೆಂದು ಹೇಳಿದ್ದಾರೆ. ಇದರ ಬಗ್ಗೆ ನಾನು ಒಂದು ಪ್ರಶ್ನೆ ಕೇಳುತ್ತೇನೆ. ನೀವು ಈ ಬಗ್ಗೆ ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದ್ದೀರಾ ? ಮಾಡಿದ್ದರೆ ಏತಕ್ಕೆ ಈ ಒಂದು ವರ್ಷದಿಂದ ಪ್ರೋಗ್ರೆಸ್ ಕಾಣಿಸಲಿಲ್ಲ ? ಹಿಂದೆ ಏನು ನಡೆಯುತ್ತಿತ್ತು ಅದನ್ನೇ ಮುಂದುವರಿಸಿಕೊಂಡು ಬಂದಿದ್ದೀರಿ. ನಾನು ಹೊಸದಾಗಿ ಯಾವ ಪ್ರಗತಿಯನ್ನೂ ಇದರಲ್ಲಿ ಕಾಣಲಿಲ್ಲ. ಈ ಸಂದರ್ಭದಲ್ಲಿ ನಿಮಗೆ ನಾನು ಒಂದು ಎಚ್ಚರಿಕೆಯನ್ನು ಕೊಡಬಯಸುತ್ತೇನೆ. ಈಗಾಗಲೇ ಕಲ್ಕತ್ತದಲ್ಲಿ ೬೦ ಲಕ್ಷ ಸ್ಲಂ ಡ್ವೆಲರ್ಸ್ ಇದ್ದಾರೆ, ಬಾಂಬೆಯಲ್ಲಿ ೪೬ ಲಕ್ಷ ಇದ್ದಾರೆ, ನೀವು ಏನಾದರೂ ಲೆಕ್ಕ ಇಟ್ಟಿದ್ದೀರಾ ? ನಿಮ್ಮ ಅಂಕಿ ಎಲ್ಲಿಗೆ ಬರುತ್ತದೆಂಬುದನ್ನು ನೀವೇ ಹೇಳಿ ! ಇದರಿಂದ ನಾಳೆ ನಗರಗಳ ಪರಿಸ್ಥಿತಿ ಏನಾಗುತ್ತದೆಂದರೆ, ಬರೀ ಕ್ಯಾಪಿಟಲಿಸ್ಟ್ ಮತ್ತು ಸ್ಲಂ ಡ್ವೆಲರ್ಸ್ ಇರುತ್ತಾರೆ. ಬೇರೆಯವರು ವಾಸ ಮಾಡುವುದಕ್ಕಾಗುವುದಿಲ್ಲ, ಕಲ್ಕತ್ತ, ಬಾಂಬೆ, ಮದ್ರಾಸ್, ಬೆಂಗಳೂರು ಯಾವುದನ್ನು ಬೇಕಾದರೂ ತೆಗೆದುಕೊಳ್ಳಿ, ಎಲ್ಲಾ ಕಡೆಯೂ ಸ್ಲಂ ಡ್ವೆಲರ್ಸ್ ತುಂಬಿರುತ್ತಾರೆ. ನಾಳೆ ದಿವಸದ ಜೀವನ ಬಹಳ ದುಬಾರಿ ಆಗುತ್ತದೆ. ಎ.ಇ.ಹೆಚ್ ಮನೆಗಳಿಗೆ ೮೭ ಕೋಟಿ ರೂಪಾಯಿಗಳ ತೆರಿಗೆ ಹಾಕಿದ್ದೀರಿ. ಬೇರೆ ವಿದ್ಯುತ್ ದರವನ್ನು ಬಿಟ್ಟು ಹೇಳುತ್ತಿದ್ದೇನೆ. ಅದಕ್ಕೆ ಸಂಬಂಧಪಟ್ಟ ೨೦ ಕೋಟಿ ರೂಪಾಯಿಗಳ ತೆರಿಗೆಯನ್ನು ಸೇರಿಸಿದರೆ ೧೦೭ ಕೋಟಿ ರೂಪಾಯಿಗಳು ಆಗುತ್ತದೆ. ಇದನ್ನೆಲ್ಲಾ ಯಾರ ಮೇಲೆ ಹಾಕಿದ್ದೀರಿ ? ಪಟ್ಟಣ ಪ್ರದೇಶಗಳ ಜನರ ಮೇಲೆ ಎಷ್ಟು ಭಾರ ಬೀಳುತ್ತದೆಂಬುದರ ಕಡೆಗೆ ನಿಗಾ ಹರಿಸಿ ನೋಡಿ. ಈಗ ೬೨೫ ಇರತಕ್ಕ ಪ್ರೈಸ್ ಇಂಡೆಕ್ಸ್ ಪಾಯಿಂಟ್ ಮುಂದಿನ ವರ್ಷ ಇನ್ನೂ ಜಾಸ್ತಿ ಆಗುತ್ತದೆ. ಈ ರೀತಿ ಮಾಡುತ್ತಾ ಹೋಗುವುದು ನಿಮ್ಮ ಸರ್ಕಾರದ ನೀತಿಯೇ ? ಇದಕ್ಕೆ ನೀವು ಉತ್ತರಿಸಬೇಕಾಗುತ್ತದೆ. ಈಗ ಇರತಕ್ಕ ಸ್ಲಂಗಳು ಏನು ರಿಜಿಸ್ಟರ್ ಆಗಿವೆ ಅವುಗಳ ಕಡೆಗೆ ಗಮನ ಹರಿಸಿ ಜಾಗ್ರತೆ ಅವರಿಗೆ ಎಲ್ಲಿ ಅನುಕೂಲ ಕಲ್ಪಿಸಿಕೊಡಬೇಕೋ ಅಲ್ಲಿ ಕೊಡಿ. ಮತ್ತು ಮುಂದೆ ಬರತಕ್ಕ ಸ್ಲಂಗಳನ್ನು ನಿಯಂತ್ರಣ ಮಾಡಿ. ಊರಿಗೆ ಬಂದವರೆಲ್ಲ ಗುಡಿಸಲುಗಳನ್ನು ಹಾಕುವುದೇ ಅವರ ಕಸಬಾಗಿದೆ. ನಾನು ಮೊದಲೇ ಹೇಳಿದಂತೆ ಶೇಕಡ ೭೫ರಷ್ಟು ಗುಡಿಸಲುಗಳು ಲೈಸೆನ್ಸ್ ಇಲ್ಲದೆ ಬರುತ್ತವೆ ಇದಕ್ಕೆ ಅಧಿಕಾರಿಗಳ ಶಾಮೀಲು ಇದೆ. ಆದುದರಿಂದ ಇವುಗಳ ಕಡೆಗೆ ಸರ್ಕಾರ ಹೆಚ್ಚಿನ ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ, ಈ ಸಂದರ್ಭದಲ್ಲಿ ನಾನು ಒಂದು ಸಲಹೆ ಕೊಡಬಯಸುವುದೇನೆಂದರೆ, ಇವೊತ್ತಿನ ದಿವಸ ಮುನಿಸಿಪಾಲಿಟಿಗಳಿಗೆ ತನ್ನ ಕಾಲಮೇಲೆ ನಿಂತು ಕೆಲಸ ಮಾಡುವುದಕ್ಕೆ ಹಣ ಸಾಲದು. ಸರ್ಕಾರ ಅನುದಾನ ಕೊಡುವುದಕ್ಕೆ ಸರ್ಕಾರದ ಹತ್ತಿರವೂ ಹಣ ಇಲ್ಲ. ಆದುದರಿಂದ ಈ ಬಾಬಿಗೆ ಹೆಚ್ಚಿಗೆ ಹಣ ದೊರೆಯುವಂತೆ ಮಾಡಬೇಕೆಂದು ಹೇಳುತ್ತೇನೆ. ಈ ಸಂಬಂಧವಾಗಿ ದೇವರಾಜ ಅರಸುರವರು ಮಾನ್ಯ ಖರ್ಗೆಯವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿದರು. ಆಮೇಲೆ ಅದನ್ನು ಅಬಾಲಿಷ್ ಮಾಡಬೇಕೆಂದು ಮಾಡಿದರು. ಅದು ಅಬಾಲಿಷ್ ಆದಮೇಲೆ ಹಣ ಕೊಡುತ್ತಿದ್ದಾರೆ. ಆದರೂ ಆಕ್ಟ್ರಾಯಿನಲ್ಲಿ ಎಷ್ಟು ಬರುತ್ತಿತ್ತೋ ಅಷ್ಟನ್ನು ಕೊಡುತ್ತಿದ್ದಾರೆಯೇ ಎಂದರೆ ಇಲ್ಲ. ದಯವಿಟ್ಟು ಇದನ್ನು ಪುನರ್‌ಪರಿಶೀಲನೆ

ಮಾಡಬೇಕೆಂದು ಹೇಳುತ್ತೇನೆ. ನಿಮಗೆ ಮುನಿಸಿಪಾಲಿಟಿಗಳಿಗೆ ಹಣ ಕೊಡುವುದಕ್ಕಾಗುವುದಿಲ್ಲವೆಂದರೆ ಆಕ್ಟ್ರಾಯಿ ತೆಗೆದುಕೊಂಡು ಬರುವುದರಲ್ಲಿ ಏನು ಅಭ್ಯಂತರವಿಲ್ಲವೆಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಅವುಗಳನ್ನು ಬೆಳಸಬೇಕು ; ಇಲ್ಲದಿದ್ದರೆ ಅವು ಹಾಳಾಗುತ್ತವೆ. ಮನರಂಜನಾ ತೆರಿಗೆಯನ್ನು ಜಾಸ್ತಿ ಮಾಡಿ ಆದಾಯ ಕೊಡಿ. ಹೋಟಲ್ಸ್ ಮತ್ತು ಬಾರ್ಸ್ ಜೂರಿಸ್‌ಡಿಷನ್ ಏನಿದೆ ಅಲ್ಲಿಂದ ಹೆಚ್ಚಿನ ಆದಾಯ ಬರುವ ರೀತಿಯಲ್ಲಿ ಸೂಚನೆ ಕೊಡಿ. ಸೀಮೆಯಿಂದ ಬರತಕ್ಕ ತೆರಿಗೆಯ ಹಣ ಅವರಿಗೆ ಹೋಗ ತಕ್ಕ ನಿಯಮಕ್ಕೆ ತಾವು ತಿದ್ದುಪಡಿ ತನ್ನಿ. ಇದರಿಂದ ಮುನಿಸಿಪಾಲಿಟಿಗಳ ಆದಾಯ ಹೆಚ್ಚಾಗುತ್ತದೆ. ಸ್ಟ್ಯಾಂಪ್ ಡ್ಯೂಟಿ ಮೇಲೆ ಸರ್‌ಚಾರ್ಜ್ ಏನಿದೆ ಅದರ ಬಗ್ಗೆ ಆಲೋಚನೆ ಮಾಡಿ. ದೊಡ್ಡದೊಡ್ಡ ನಗರಗಳಲ್ಲಿ ಮುನಿಸಿಪಾಲಿಟಿಗಳಿಗೆ ಅಥವಾ ಕಾರ್ಪೊರೇಷನ್‌ಗಳಿಗೆ ಹೋಗುವುದಾದರೆ ಕೊಡಿ, ಅಥವಾ ಸರ್ಕಾರಕ್ಕೆ ಬರುವುದಾದರೆ ನಿಮಗೆ ಬಿಟ್ಟದ್ದು.

ಕಡೆಯದಾಗಿ, ಪಬ್ಲಿಕ್ ಅಮೆನಿಟೀಸ್ ಅಂತೂ ಬಹಳ ಅವಶ್ಯಕ ಈ ವಿಚಾರ ಮಾನ್ಯ ಚಂದ್ರ ಶೇಖರ್‌ರವರಿಗೆ ಚೆನ್ನಾಗಿ ಗೊತ್ತಿದೆ. ಇದರಿಂದ ಮಾರ್ಕೆಟ್ ಕಡೆ ಅವರಿಗೆ ಓಟು ಬರಲಿಲ್ಲ. ಕಬ್ಬಿಣದ ಅಂಗಡಿ ಬೀದಿಗಳು, ಜೆ.ಸಿ. ರಸ್ತೆ, ರೈಲ್ವೆ ನಿಲ್ದಾಣ, ಬಸ್ ನಿಲ್ದಾಣದ ಪ್ರದೇಶಗಳು ಸರ್ಕಾರ ಅಥವಾ ನಗರಸಭೆಯ ಕಣ್ಣಿಗೆ ಕಾಣುವುದಿಲ್ಲವೆ ? ಅಲ್ಲಲ್ಲಿ ಮೂತ್ರಾಲಯಗಳನ್ನು ಕಟ್ಟುವುದಕ್ಕೇನು ಕೋಟಿ ಗಟ್ಟಲೆ ಹಣ ಬೇಕಾಗುತ್ತದೆಯೆ ? ಏತಕ್ಕೆ ಕಟ್ಟುವುದಕ್ಕಾಗುವುದಿಲ್ಲ ? ಆದಕ್ಕೆ ೪ನೇ ದರ್ಜೆಯ ನೌಕರರನ್ನು ನೇಮಿಸಿ ಒಂದು ನೂರು ಮೂತ್ರಾಲಯಗಳನ್ನು ಬೆಂಗಳೂರುನಗರದಲ್ಲಿ ಕಟ್ಟಿಸಿ. ಅದಕ್ಕೋಸ್ಕರ ಒಂದು ಯೋಜನೆಯನ್ನು ಹಾಕಿ. ಎಲ್ಲೆಲ್ಲಿ ಮೂತ್ರಾಲಯದ ಅವಶ್ಯಕತೆ ಇದೆ ಅಲ್ಲಿ ಮಾಡಿ. ಇಲ್ಲದಿದ್ದರೆ ನಗರ ಬಹಳ ದುರ್ವಾಸನೆಯಿಂದ ಕೂಡಿರಬೇಕಾಗುತ್ತದೆ. ಗ್ರೀನ್ ಬೆಲ್ಟ್ ಮಾಡುವುದಕ್ಕೆ ಮುಂಚೆ ಮೂತ್ರಿಗಳನ್ನು, ಆಸ್ಪತ್ರೆಗಳನ್ನು, ಶಾಲೆಗಳನ್ನು ಕಟ್ಟಿಸುವ ಕಡೆ ಹೆಚ್ಚಿನ ಆದ್ಯತೆ ಕೊಟ್ಟು ಕೆಲಸ ಮಾಡಿ. ಆಮೇಲೆ ಗ್ರೀನ್ ಬೆಲ್ಟ್ ಯೋಜನೆ ಮಾಡಿ. ಅದು ಕೋಟ್ಯಾಂತರ ರೂಪಾಯಿಗಳ ಯೋಜನೆ. ಮೊದಲು ಅವುಗಳ ಕಡೆಗೆ ಆದ್ಯತೆ ಕೊಡಬೇಕೆಂದು ಹೇಳುತ್ತೇನೆ. ಈಗ ಕಾಲ ಹೆಚ್ಚಿಗೆ ಇಲ್ಲದಿರುವುದರಿಂದ ಮತ್ತೊಂದು ವಿಷಯಕ್ಕೆ ಹೋಗುತ್ತೇನೆ. ಅದು ರೇಷ್ಮೆ ಇಲಾಖೆಗೆ ಸಂಬಂಧಪಟ್ಟದ್ದು.

ಇದು ಅತಿ ಮುಖ್ಯವಾದ ಉದ್ದಿಮೆ. ಆದರೂ ಇದು ನಿರೀಕ್ಷಿತ ರೀತಿಯಲ್ಲಿ ಬೆಳೆದಿಲ್ಲ, ನಾವು ಕರ್ನಾಟಕ ರಾಜ್ಯದಲ್ಲಿ ಈ ಒಂದು ಉದ್ದಿಮೆಯ ಬಗ್ಗೆ ಎಂತಹ ಒಂದು ಭವ್ಯ ಭವಿಷ್ಯವನ್ನು ಕಾಣುತ್ತೇವೆಂದು ಭಾವಿಸಿದ್ದೆವೋ ಅಂಥ ಒಂದು ಭವ್ಯತೆಯನ್ನು ಈಗ ಕಾಣುತ್ತಿಲ್ಲ. ಇದಕ್ಕೆ ಅನೇಕ ಕುಂದುಕೊರತೆಗಳು ಬಂದಿವೆ. ನಾನು ಸರ್ಕಾರವನ್ನು ಹೊಣೆಗಾರಿಕೆಯಾಗಿ ಮಾಡುತ್ತಿಲ್ಲ. ಸರ್ಕಾರ ಎಲ್ಲಿ ಹೊಣೆಗಾರಿಕೆಯನ್ನು ಹೊರಬೇಕಾಗಿತ್ತೋ ಅಲ್ಲಿ ಹೊರುತ್ತಿಲ್ಲ. ಇವೊತ್ತಿನ ದಿವಸ, ಈ ಒಂದು ಕ್ಷೇತ್ರದಲ್ಲಿ ಕೆಲಸ ಮಾಡತಕ್ಕ ಹಂಗಾಮಿ ನೌಕರರು ಮುಷ್ಕರ ಹೂಡಿ ಕುಳಿತಿದ್ದಾರೆ. ಯಾರೊಬ್ಬರೂ ಅವರ ಸುದ್ದಿ ಎತ್ತುತ್ತಿಲ್ಲ. ಸಾವಿರಾರು ಜನರನ್ನು ೧೫–೨೦ ವರ್ಷಗಳಿಂದ ಹಂಗಾಮಿಯಾಗಿ ಇಟ್ಟು ಕೊಂಡಿದ್ದಾರೆ. ಅದರಲ್ಲಿ ಮಹಿಳೆಯರು ಮತ್ತು ನಿವೃತ್ತರಾಗುವವರು ಇದ್ದಾರೆ. ಮಂತ್ರಿಗಳಿಗೆ ಕೂಡ ಈ ವಿಷಯ ಗೊತ್ತಿದೆ. ಅವರು, ಅವರ ಮನೆ ಹತ್ತಿರ ಎಲ್ಲಾ ಹೋಗಿದ್ದಾರೆ. ಅವರನ್ನು ಖಾಯಂ ಮಾಡಲು ಕಾನೂನು ಅಡ್ಡಬರುತ್ತದೆಂದು ಹೇಳಬಹುದು. ನಾನೂ ಕಾನೂನು ಮಂತ್ರಿಯಾಗಿದ್ದೆ. ಅದಕ್ಕೆ ನನ್ನ ಸಲಹೆ ಏನೆಂದರೆ, ಕಾನೂನು ಅಡ್ಡ ಬಂದರೆ ಅವರನ್ನು ಕಂಟ್ರ್ಯಾಕ್ಟ್ ವರ್ಕರ್ಸ್ ಎಂದು ಟ್ರೀಟ್ ಮಾಡಿ ಅವರಿಗೆ ಗ್ರಾಚ್ಯುಯಿಟಿ, ಪೆನಷ್‌ನ್ ಕೊಡುವುದರಲ್ಲಿ ತಪ್ಪೇನಿಲ್ಲ. ಆದರಲ್ಲಿ ಎಸ್.ಎಸ್.ಎಲ್.ಸಿ. ಆದವರ, ವಿದ್ಯಾವಂತರು, ಹೆಣ್ಣುಮಕ್ಕಳು ಇದ್ದಾರೆ. ಅವರನ್ನೆಲ್ಲಾ ಕೆಲಸಕ್ಕೆ ತೆಗೆದುಕೊಂಡು ಹತ್ತಿಪ್ಪತ್ತು ವರ್ಷಗಳ ಕಾಲ ಕೆಲಸ ಮಾಡಿಕೊಂಡು ಟರ್ಮಿನೇಷನ್ ಮಾಡುವುದೆಂದರೆ ಇದಕ್ಕಿಂತ ಅನ್ಯಾಯ ಮತ್ತೊಂದು ಇಲ್ಲ. ಇದನ್ನು ಪುನರ್‌ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ನಾನು ಇದರ ಬಗ್ಗೆ ಗಮನ ಸೆಳೆಯುವ ಸೂಚನೆ ಮೂಲಕ ಪ್ರಸ್ತಾಪಿಸಿದಾಗ ವಿಚಾರಿಸುತ್ತೇವೆಂದು ಹೇಳಿದಿರಿ. ಇನ್ನೂ ಅಧಿಕಾರಿಗಳನ್ನು ಕೇಳುತ್ತಿದ್ದೀರಾ ಹೇಗೆ ?

ಶ್ರೀಮತಿ ಚಂದ್ರಪ್ರಭ ಅರಸ್.—ಅವರನ್ನು ಟರ್ಮಿನೇಟ್ ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇಲ್ಲ. ತಾವೂ ಆ ಖಾತೆಯನ್ನು ನಿರ್ವಹಿಸಿದ್ದವರು.

ಶ್ರೀ ವೈ. ರಾಮಕೃಷ್ಣ.—ನಾನು ಆ ಖಾತೆಯನ್ನು ನಿರ್ವಹಿಸುತ್ತಿಲ್ಲ ; ಫೈಲ್ ಬಂದಾಗ ಉತ್ತರಿಸುತ್ತಿದ್ದೆ ಅಷ್ಟೆ.

ಶ್ರೀಮತಿ ಚಂದ್ರಪ್ರಭ ಅರಸ್.—ಆ ವಿಚಾರವನ್ನೂ ತೀವ್ರವಾಗಿ ಪರಿಶೀಲಿಸುತ್ತಿದ್ದೇವೆ ; ಆದಷ್ಟು ಜಾಗ್ರತೆ ಅವರ ಖಾಯಂ ಮಾಡುತ್ತೇವೆ.

ಶ್ರೀ ವೈ. ರಾಮಕೃಷ್ಣ.—ಪರಿಶೀಲನೆ, ತೀವ್ರ ಪರಿಶೀಲನೆ, ಆದಷ್ಟು ಜಾಗ್ರತೆ ಎಂಬ ಪದಗಳು ಅನೇಕ ವರ್ಷಗಳಿಂದ ಬಂದಿವೆ. ಅದಕ್ಕೋಸ್ಕರ ನಿಮ್ಮ ಕಾಲದಲ್ಲಿ ಇದು ತೀರ್ಮಾನವಾಗಲೇಬೇಕೆಂದು ಹೇಳುತ್ತೇನೆ.

ಅಧಿಕಾರಿಗಳು ಏನು ಹೇಳುತ್ತಾರೆ ಎಂಬುದನ್ನು ನಾನೇ ಹೇಳಿದ್ದೇನೆ. ನನಗೆ ಅಧಿಕಾರಿಗಳು ಏನು ಹೇಳಿದರೋ ಅದನ್ನೇ ಅವರಿಗೂ ಹೇಳುತ್ತಾರೆ. ಆದ್ದರಿಂದ ಹೇಳುತ್ತಿದ್ದೇನೆ, ಅವರನ್ನು ಕಾಂಟ್ರಾಕ್ಟ್ ಲೇಬರ್ಸ್ ಆಗಿ ನೇಮಕ ಮಾಡಿಕೊಳ್ಳಿ.

ಶ್ರೀ ತಿಪ್ಪಯ್ಯ.—ಯಾರೂ ಮಾಡದಿರುವುದನ್ನು ನೀವು ಮಾಡಿ ಎಂದು ಸಲಹೆ ಕೊಟ್ಟಿರುವುದು ತುಂಬಾ ಸಂತೋಷ.

ಶ್ರೀ ವೈ. ರಾಮಕೃಷ್ಣ.—ನಾನು ರೆಮಿಡಿ ಹೇಳುತ್ತಿದ್ದೇನೆ. ನಾನು ಕಾನೂನು ಮಂತ್ರಿಯಾಗಿದ್ದಾಗ ನನ್ನ ಎದುರು ಫೈಲ್ ಬಂದಿತ್ತು. ನಾನು ಅದನ್ನು ನೋಡಿದ್ದೇನೆ. ಆದ್ದರಿಂದ ಹೇಳುತ್ತಿದ್ದೇನೆ, ಅವರನ್ನು ಕಾಂಟ್ರಾಕ್ಟ್ ಬೇಸಿಸ್ ಮೇಲೆ ಅಪಾಯಿಂಟ್ ಮಾಡಿಕೊಂಡು ಪೂರ್ಣಾವಧಿ ಸೇವೆಯನ್ನು ಸದುಪಯೋಗಪಡಿಸಿಕೊಂಡು ಅವರಿಗೆ ಕೊಡಬೇಕಾದ ಪೆನ್‌ಷನ್, ಗ್ರಾಚುಯಿಟಿ ಇದನ್ನೆಲ್ಲಾ ಕೊಡುವುದಕ್ಕೆ ಏನೂ ತೊಂದರೆ ಯಾಗುವುದಿಲ್ಲ. ಬೇಕಾದರೆ ಇದಕ್ಕೆ ಒಂದು ಲೆಜಿಸ್ಲೇಷನ್ ತನ್ನಿ. ನಾವು ಅದನ್ನು ಪಾಸ್ ಮಾಡಿ ಕೊಡುವುದಕ್ಕೆ ತಯಾರಿದ್ದೇವೆ. ಈಗ ಆ ಹುಗಾಮಿ ನೌಕರರ ಮನಸ್ಸಿನಲ್ಲಿ ನೋವಿದೆ. ಹೀಗಿರುವಾಗ ಆ ಇಲಾಖೆ ಹೇಗೆ ಬೆಳೆಯುತ್ತದೆ ?

ಶ್ರೀಮತಿ ಚಂದ್ರಪ್ರಭ ಅರಸ್.—ಲೋಕೋಪಯೋಗಿ ಇಲಾಖೆಯಲ್ಲೂ ಇಂತಹವರು ಇದ್ದಾರೆ.

ಶ್ರೀ ವೈ. ರಾಮಕೃಷ್ಣ.—ಲೋಕೋಪಯೋಗಿ ಇಲಾಖೆಯಲ್ಲಿ ದೇವೇಗೌಡರು ಮಾಡಿದ ಹಾಗೆ ನೀವು ಮಾಡಿದ್ದರೆ ಆಗುತ್ತಿತ್ತು. ತಾವು ಸ್ವಲ್ಪ ಮನಸ್ಸು ಮಾಡಬೇಕು.

ಶ್ರೀಮತಿ ಚಂದ್ರಪ್ರಭ ಅರಸು.—ಕ್ಯಾಬಿನೆಟ್ ಸಬ್-ಕಮಿಟಿ ಮಾಡುತ್ತಿದ್ದೇವೆ.

ಶ್ರೀ ವೈ. ರಾಮಕೃಷ್ಣ.—ಇದಕ್ಕೆ ಸಬ್-ಕಮಿಟಿ ಬೇಕಾಗಿಲ್ಲ. ಮನಸ್ಸು ಮಾಡಿದರೆ ಇವೊತ್ತು ಮಧ್ಯಾಹ್ನವೇ ನೀವು ಉತ್ತರ ಕೊಡಬಹುದು. ನನಗೆ ಈ ಸಂದರ್ಭದಲ್ಲಿ ಒಂದು ಜ್ಞಾಪಕಕ್ಕೆ ಬರುತ್ತಿದೆ. ವೆಟರ್ನರಿ ಡಾಕ್ಟರುಗಳ ಸಂಬಳವನ್ನು ಬೇರೆ ಡಾಕ್ಟರುಗಳ ಸಂಬಳಕ್ಕೆ ಸಮನಾಗಿ ಏರಿಸಬೇಕೆಂಬ ಪ್ರಶ್ನೆ ನಾನು ಮಂತ್ರಿಯಾಗಿದ್ದಾಗ ಬಂದಿತು. ಆ ದಿನ ಮಾನ್ಯ ಸದಸ್ಯರು ಕೇಳಿದಾಗ ಇವೊತ್ತು ನನ್ನ ಬೇಡಿಕೆ ಇದೆ, ನಾನು ಸಚಿವ ಸಂಪುಟದಲ್ಲಿ ಚರ್ಚೆಗಿಟ್ಟು ಅನೌನ್ಸ್ ಮಾಡುತ್ತೇನೆ ಎಂದು ಹೇಳಿದೆ. ಆಗ ಬೊಮ್ಮಾಯಿಯವರು ದೇವೇಗೌಡರು, ಈಗಲೇ ಹೌಸ್‌ನಲ್ಲಿ ಅನೌನ್ಸ್ ಮಾಡಿ, ಇಲ್ಲದಿದ್ದರೆ ಹೌಸ್ ನಡೆಯುವುದಕ್ಕೆ ನಾವು ಬಿಡುವುದಿಲ್ಲ ಎಂದು ಹೇಳಿದರು. ನಾನು ಆಗ ಅಸೆಂಬ್ಲಿ ಬಿಟ್ಟು ಹೋಗಿ ಮಧ್ಯಾಹ್ನವೇ ತುರ್ತಾಗಿ ಸಭೆ ಕರೆದು ಸಾಯಂಕಾಲವೇ ವೆಟರ್ನರಿ ಡಾಕ್ಟರುಗಳ ಸಂಬಳವನ್ನು ಹೆಚ್ಚಿಸುವ ಬಗ್ಗೆ ಅನೌನ್ಸ್ ಮಾಡಿದೆ. ಆದಾದಮೇಲೆ ಆಗ್ರಿಕಲ್ಚರ್ ಇಂಜಿನಿಯರ್‌ಗಳದು ಪ್ರಾರಂಭವಾಯಿತು. ಯಾವುದಕ್ಕೂ ಪರಿಶೀಲನೆಯಲ್ಲಿದೆ, ತೀವ್ರ ಪರಿಶೀಲನೆಯಲ್ಲಿದೆ ಎಂದು ಹೇಳುವುದು, ಪುನಃ ಅವರು ಸ್ಟ್ರೈಕ್ ಮಾಡುವುದು. ಈ ಪ್ರೊಸಿಜರ್ ಬೇಡ. ಮಾಡತಕ್ಕ ಕೆಲಸವನ್ನು ಬೇಗ ಮಾಡಿ ಬಿಸಾಕಿ. ಈ ರೇಷ್ಮೆ ಉದ್ಯಮ ಬೆಳೆಯಬೇಕಾದರೆ ತಾವೇನು ಇಂಪೋರ್ಟ್ ಮಾಡಿಕೊಳ್ಳುತ್ತಿದ್ದೀರಿ ಅದನ್ನು ನಿಲ್ಲಿಸಿ. ಸಿಲ್ಕ್ ಗುಣವನ್ನು ಕಂಡಮೇಲೆ, ದರ ನೋಡಿದ ಮೇಲೆ ಅದು ಚೀಫ್ ಆಗಿರುವಾಗ ನಾವು ಏತಕ್ಕೆ ಈ ಉದ್ದಿಮೆಯನ್ನು ಅವಲಂಬಿಸಬೇಕು ಎಂಬ ಮನೋಭಾವ ಜನರಲ್ಲಿ ಬೆಳೆಯುತ್ತದೆ. ಇದರಿಂದ ಸಿಲ್ಕ್ ಇಂಡಸ್ಟ್ರೀಸ್‌ಗೆ ದೊಡ್ಡ ಕಂಟಕವಾಗುತ್ತದೆ. ಸಿಲ್ಕ್ ಇಂಪೋರ್ಟ್ ಮಾಡುವುದಕ್ಕೆ ತಾವು ಒಪ್ಪಿಗೆ ಕೊಟ್ಟಿಲ್ಲ ಎಂದು ನನಗೆ ಗೊತ್ತು. ಹಿಂದೆ ಕೆಲವರ ಒತ್ತಾಯದ ಮೇಲೆ ತರಿಸಿದ್ದಾರೆ. ಆದರೆ ಆಗಿನ ಪರಿಸ್ಥಿತಿ ಆ ರೀತಿ ಇತ್ತು. ಉಜಿ ನೊಣದ ಕಾಟ ಇತ್ತು,

ವೀವರ್ಸ್‌ಗೆ ತೊಂದರೆ ಇತ್ತು. ಮಾನ್ಯ ಕಾನೂನು ಮಂತ್ರಿಗಳು ವಿವರ್ಸ್ ಕಾನ್‌ಸ್ಟಿಟುಯೆನ್ಸಿಯಿಂದ ಬಂದಿರುವವರು. ಅವರು ಒತ್ತಾಯ ತಂದರು. ಅದನ್ನು ಗಮನದಲ್ಲಿಟ್ಟುಕೊಂಡು ಇಂಪೋರ್ಟಿಗೆ ಅವಕಾಶ ಕೊಟ್ಟಿದ್ದೆವು. ಆದರೆ ಅದು ಜಾಸ್ತಿಯಾದರೆ ಕಷ್ಟವಾಗುತ್ತದೆ.

ಶ್ರೀಮತಿ ಚಂದ್ರಪ್ರಭ ಅರಸ್.—ನಾವು ಅದನ್ನು ದೂರ ಇಟ್ಟಿದ್ದೇವೆ. ನೀವು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳಿ.

ಶ್ರೀ ವೈ. ರಾಮಕೃಷ್ಣ.—ತಾವು ಸರ್ಕಾರದಲ್ಲಿದ್ದೀರಿ. ತಾವು ಬರೆಯಿರಿ. ಯಾವ ಸರ್ಕಾರ ಆದರೇನು, ಬರೆಯಿರಿ. ಹುಳ ಸಾಕುವವರು, ನೂಲು ಬಿಚ್ಚುವವರು ಮತ್ತು ನೇಯುವವರು ಇವರ ಸಮಸ್ಯೆಗಳ ಬಗ್ಗೆ ಸಮಾಲೋಚನೆಗಳು, ಸೆಮಿನಾರ್‌ಗಳು ನಡೆಸತಕ್ಕದ್ದು ಅತಿ ಜರೂರಾಗಿ ಆಗಬೇಕಾದ ಕೆಲಸ. ಏತಕ್ಕೆಂದರೆ ಹೊಸಹೊಸ ಸಮಸ್ಯೆಗಳು ಉದ್ಭವವಾಗುತ್ತಿರುತ್ತವೆ. ಊಜಿ ನೊಣದ ಸಮಸ್ಯೆ ಇರಬಹುದು, ಮತ್ತೊಂದು ಕಾಯಿಲೆ ಇರಬಹುದು, ಹುಳು ಸಾಯುತಕ್ಕ ವಿಚಾರಗಳಿರಬಹುದು, ಇದನ್ನೆಲ್ಲಾ ಬಗೆ ಹರಿಸಬೇಕಾದರೆ ಎಕ್ಸ್‌ಪರ್ಟ್ಸ್, ಟೆಕ್ನಿಷಿಯನ್ಸ್ ಬೇಕಾಗುತ್ತದೆ. ಅವರು ಕುರ್ಚಿಮೇಲೆ ಕುಳಿತು ಪೆನ್ನಲ್ಲಿ ಕಾಗದದ ಮೇಲೆ ಬರೆದರೆ ಪ್ರಯೋಜನವಾಗುವುದಿಲ್ಲ. ಫೀಲ್ಡ್‌ಗೆ ಹೋಗಿ ರೈತರ ಮನೆಯಲ್ಲಿ ಹುಳುಗಳನ್ನು ನೋಡಿ, ಚಂದ್ರಿಕೆಗಳನ್ನು ಪರಿಶೀಲನೆ ಮಾಡಿ ಟೆಕ್ನಿಕಲ್ ಅಡ್ವೈಸ್ ಕೊಡುವುದು ಬಹಳ ಮುಖ್ಯವಾದುದು. ಈಗ ಈ ಇಲಾಖೆಯಲ್ಲಿ ಲೆಕ್ಕವಿಲ್ಲದಷ್ಟು ಜೀಪುಗಳಿವೆ. ವಿಶ್ವ ಬ್ಯಾಂಕಿನ ಕಾರ್ಯಕ್ರಮದಲ್ಲಿ ಜೀಪುಗಳು ಬಂದಿವೆ. ಆ ಜೀಪುಗಳನ್ನು ಇಟ್ಟುಕೊಂಡು ಸುಮ್ಮನೆ ಓಡಾಡಿಕೊಂಡಿದ್ದಾರೆ. ಇಂಥಿಂಥ ತಾಲ್ಲೂಕಿಗೆ ಇಂಥಿಂಥ ಅಧಿಕಾರಿಗಳು ಎಂದು ಜವಾಬ್ದಾರಿ ಕೊಟ್ಟು ಕೆಲಸ ಮಾಡಿಸಿ. ಇಷ್ಟು ಉತ್ಪತ್ತಿ ತೆಗೆಯಬೇಕು ಎಂದು ಜವಾಬ್ದಾರಿ ಕೊಡಿ. ಅವರಿಗೆ ಸರಿಯಾದ ವರ್ಕ್‌ಲೋಡ್ ಕೊಟ್ಟು ಜವಾಬ್ದಾರಿ ಕೊಟ್ಟು ಕೆಲಸ ತೆಗೆದುಕೊಳ್ಳಬೇಕು. ಈ ಉದ್ದಿಮೆಯನ್ನು ಆಕರ್ಷಣೀಯವಾಗಿ ಬೆಳೆಸಬೇಕಾದರೆ ಬೈವೋಲ್ಟೈನ್‌ಗೆ ಏನು ೧೦ ರೂಪಾಯಿಗಳ ಸಬ್ಸಿಡಿ ಕೊಡುತ್ತಿದ್ದೀರಿ ಅದನ್ನು ೨೦ ರೂಪಾಯಿಗಳಿಗೆ ಏರಿಸಿ, ಅದು ಮೊದಲ ನೋಟಕ್ಕೆ ಲಾಸ್ಸಿನಾದಂತೆ ಕಾಣಬಹುದು. ಆದರೆ ಕನ್‌ವೆನ್‌ಷನಲ್ ಸೀರಿಕಲ್ಚರಿಸ್ಟ್ ಎನ್–೫ ಬಿಟ್ಟು ಮೈಸೂರು ಕಡ್ಡಿ ಹಾಕುವುದಕ್ಕೆ ಆಸೆ ಪಡುತ್ತಾರೆ. ಬರೀ ಬೈವೋಲ್ಟಿನ್ ಬೆಳೆಯಬೇಕು, ಬೇರೆ ಬೆಳೆದರೆ ಶಿಕ್ಷಾರ್ಹರು ಎಂದು ಕಾನೂನು ಮಾಡುವುದರಿಂದ ಈ ಉದ್ದಿಮೆಯನ್ನು ಬೆಳೆಸುವುದಕ್ಕಾಗುವುದಿಲ್ಲ. ಕಾನೂನು ಕೆಳಗೆ ಅವರನ್ನು ತಂದು ದಂಡಿಸುವ ಬದಲು ಅವರಿಗೆ ೧೦ ರೂಪಾಯಿಗಳ ಸಬ್ಸಿಡಿ ಕೊಡುವುದನ್ನು ೨೦ ರೂಪಾಯಿಗಳಿಗೆ ಏರಿಸಿದರೆ ಎಲ್ಲಾ ಕಡೆ ಬೈವೋಲ್ಟೀನ್ ಬೆಳೆಯುವುದಕ್ಕೆ ಪ್ರಾರಂಭ ಮಾಡುತ್ತಾರೆ. ಆದ್ದರಿಂದ ಅದರ ಬಗ್ಗೆ ಆಲೋಚನೆ ಮಾಡಿ. ಆಮೇಲೆ ಈ ಉದ್ದಿಮೆಗೆ ಇನ್‌ಷೂರೆನ್ಸ್ ಸ್ಕೀಮ್ ತರದೇಹೋದರೆ ಬಹಳ ಜನ ರೈತರು ಹಾಳಾಗುತ್ತಾರೆ. ಖಾಯಿಲೆಯಿಂದ ಹುಳು ಸತ್ತರೆ, ಅಥವಾ ಬೇರೆ ಯಾವುದಾದರೂ ಕಾರಣದಿಂದ ಉದ್ದಿಮೆ ನಷ್ಟವಾದರೆ ಬಹಳ ಕಷ್ಟವಾಗುತ್ತದೆ. ೧೦ ಸಾವಿರ ರೂಪಾಯಿಗಳ ಆದಾಯ ನಿರೀಕ್ಷೆ ಮಾಡಿದ್ದರೆ ಒಂದು ಸಾವಿರ ರೂಪಾಯಿಗಳು ಕೂಡ ಸಿಗದಂಥ ಪರಿಸ್ಥಿತಿ ಇರುತ್ತದೆ. ರೈತ ತೊಂದರೆಗೆ ಸಿಕ್ಕಿಹಾಕಿಕೊಂಡು ನಿಟ್ಟುಸಿರು ಬಿಡುತ್ತಾನೆ. ಲೈಫ್ ಇನ್‌ಷೂರೆನ್ಸ್ ತರಹ ತಂದರೆ ಪ್ರಯೋಜನ ವಾಗುವುದಿಲ್ಲ. ಬೇರೆ ಯಾವುದಾದರೂ ರೀತಿಯಲ್ಲಿ ಇನ್‌ಷೂರೆನ್ಸ್ ಸ್ಕೀಮ್ಸ್ ತಂದು ರೈತರಿಗೆ ಅನುಕೂಲ ಮಾಡಿಕೊಡಿ. ಇನ್‌ಷೂರೆನ್ಸ್ ಡಿಪಾರ್ಟ್‌ಮೆಂಟ್ ಜೊತೆಯಲ್ಲಿ ಮಾತುಕತೆ ನಡೆಸಿ ಕೂಡಲೇ ಇನ್‌ಷೂರೆನ್ಸ್ ಸ್ಕೀಮ್ ಜಾರಿಗೆ ತನ್ನಿ. ಇನ್ನು ಹೌಸಿಂಗ್ ಸ್ಕೀಮ್ ಬಗ್ಗೆ ಹೇಳುತ್ತೇನೆ. ಈ ಉದ್ದಿಮೆಗೆ ವಿಶ್ವ ಬ್ಯಾಂಕಿನ ನೆರವು ಸಿಗುವುದರಿಂದ ಮತ್ತು ಯೋಜನೆಗೆ ಹಣ ಸಿಗುವುದರಿಂದ ಗ್ರಾಮಾಂತರ ಪ್ರದೇಶದಲ್ಲಿ ಯಾರು ಯಾರು ಈ ಕಸುಬನ್ನು ಮಾಡುತ್ತಿದ್ದಾರೆ ಅಂಥವರಿಗೆ ಮನೆ ಕಟ್ಟಿಸಿಕೊಡಿ. ಅವರಿಗೆ ಚಾಕಿ ಸೆಂಟರ್‌ಗಳು, ರೆಸಿಡೆನ್‌ಷಿಯಲ್ ಕ್ವಾರ್ಟರ್ಸ್ ಕಟ್ಟಿಸಿಕೊಡಿ. ಅದು ಆಗದಿದ್ದರೆ ಸಬ್ಸಿಡಿ ಕೊಡಿ. ಸಬ್ಸಿಡಿ ಹೋದವರ್ಷದವರೆಗೆ ಇತ್ತು. ಈಗ ನೀವು ನಿಲ್ಲಿಸಿದ್ದೀರಿ ಎಂದು ಹೇಳುತ್ತಿಲ್ಲ. ಕೆಲವಾರು ವಿಚಾರಗಳು ಸರ್ಕಾರದ ಗಮನಕ್ಕೆ ಬಂದು ೧೫ ಸಾವಿರ ಅಥವಾ ೨೦ ಸಾವಿರದಿಂದ ಕೆಳಗೆ ಆದಾಯವಿರುವವರೆಗೆ ಮಾತ್ರ ಸಬ್ಸಿಡಿ ಕೊಡಬೇಕು ಅದಕ್ಕಿಂತ ಮೇಲ್ಪಟ್ಟು ಆದಾಯದವರಿಗೆ ಕೊಡ ಬಾರದು ಎಂದು ನಿಲ್ಲಿಸಿದ್ದಾರೆಂದು ಹೇಳಿದರು. ಈ ಆದಾಯದ ಮಿತಿ ಏನಿದೆ ಇದನ್ನು ತೆಗೆಯಿರಿ. ನೀವೇ ಪ್ಲಾನ್ ಮಾಡಿಕೊಡಿ. ಚಾಕಿ ಸೆಂಟರ್‌ಗೆ ಇಷ್ಟಿರಬೇಕು. ರೇಷ್ಮೆ ಬಿಚ್ಚುವುದಕ್ಕೆ ಇಟ್ಟಿರಬೇಕು, ಈ ರೀತಿ ಮಾಡಿದರೆ ಇಷ್ಟು ರೂಪಾಯಿಗಳ ಸಬ್ಸಿಡಿ ಕೊಡುತ್ತೇವೆ ಎಂದು ಹೇಳಿ. ಮನೆ ಸಿಗುತ್ತದೆ ಎಂಬ ಆಸೆಯಿಂದ ರೇಷ್ಮೆ ಉದ್ಯಮವನ್ನು ತೆಗೆದುಕೊಳ್ಳಲು ಜನ ಮುಂದೆ ಬರುತ್ತಾರೆ. ಇದರಿಂದ ಹೌಸಿಂಗ್ ಸಮಸ್ಯೆಯೂ

ಕಡಿಮೆಯಾಗುತ್ತದೆ, ಉದ್ದಿಮೆಯೂ ಬೆಳೆಯುತ್ತದೆ, ಮತ್ತು ಬಡತನವೂ ಹೋಗುತ್ತದೆ. ಇದಕ್ಕೆ ಬಜೆಟ್‌ನಲ್ಲಿ ಹೆಚ್ಚಿನ ಹಣ ತೆಗೆದಿಡುವುದಕ್ಕೆ ಪ್ರಯತ್ನ ಮಾಡಿ ಸಿಲ್ಕ್ ಎಕ್ಸ್‌ಚೇಂಜ್ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಹೇಳಿದ್ದಾರೆ. ಸಿಲ್ಕ್ ಎಕ್ಸ್‌ಚೇಂಜ್ ಬಗ್ಗೆ ಈ ಸಭೆಯಲ್ಲಿ ದೊಡ್ಡ ವ್ಯಾಖ್ಯಾನವೇ ನಡೆದಿದೆ. ದಿವಂಗತ ದೇವರಾಜ ಅರಸ್ ಅವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಯಾರು ರೇಷ್ಮೆ ಉತ್ಪಾದನೆ ಮಾಡುತ್ತಾರೋ ಅಂಥವರಿಗೆ ಲಾಭವಾಗಲಿ ಎಂಬ ಉದ್ದೇಶದಿಂದ ಸಿಲ್ಕ್ ಎಕ್ಸ್‌ಚೇಂಜ್ ಮಾಡಿದರು. ಇವೊತ್ತು ಏನಾಗಿದೆ? ಸಿಲ್ಕ್ ಎಕ್ಸ್‌ಚೇಂಜ್ ಒಂದು ಇಲಾಖೆ ಎಂದು ನಿಮ್ಮ ಇಲಾಖೆಯವರು ಭಾವಿಸಿದ್ದಾರೆ. ಅದೊಂದು ಲಾಭ ಗಳಿಸತಕ್ಕ ಇಲಾಖೆ ಎಂದು ತಿಳಿದುಕೊಂಡಿದ್ದಾರೆ ಸಿಲ್ಕ್ ಎಕ್ಸ್‌ಚೇಂಜಿನಲ್ಲಿ ಎಷ್ಟು ಕೋಟಿ ರೂಪಾಯಿಗಳ ಲಾಭ ಬಂದಿದೆ ಎಂಬುದನ್ನು ಹೇಳಿ ಸಿಲ್ಕ್ ಪ್ರೊಡ್ಯೂಸರ್‌ಗೆ ಉಪಯೋಗವಾಗಲಿ, ಮಧ್ಯಸ್ಥಿಕೆದಾರರು ಅವರನ್ನು ಶೋಷಣೆ ಮಾಡುತ್ತಿದ್ದಾರೆ, ನೇರವಾಗಿ ಅವರಿಗೆ ಹಣ ಹೋಗಲಿ ಎಂಬ ಉದ್ದೇಶದಿಂದ ಸಿಲ್ಕ್ ಎಕ್ಸ್‌ಚೇಂಜ್ ಮಾಡಿದ್ದಾರೆ ಅದನ್ನು ನಿಮ್ಮ ಇಲಾಖೆಯವರು ಒಂದು ವರಮಾನ ತೋರಿಸತಕ್ಕ ಇಲಾಖೆ ಎಂದು ಭಾವಿಸಿರುವುದು ತಪ್ಪು. ಈ ಭಾವನೆ ಹೋಗಬೇಕು. ಧೈರ್ಯವಾಗಿ ಈ ಭಾವನೆಗೆ ಕಲ್ಲು ಹಾಕಿ. ಮಾರ್ಕೆಟ್ ಫೀ ಇದೆ. ಈ ವಿಷಯ ಸುಪ್ರೀಂ ಕೋರ್ಟ್ ವರೆಗೆ ಹೋಗಿತ್ತು. ಸುಪ್ರೀಂ ಕೋರ್ಟಿನಲ್ಲಿ ಮಾರ್ಕೆಟ್ ಫೀಸ್ ಎಂದರೆ ಅದು ತೆರಿಗೆಯಲ್ಲ ಎಂದು ತೀರ್ಮಾನ ಕೊಟ್ಟಿದ್ದಾರೆ. ಆ ಹಣ ಏನು ಮಾಡುತ್ತಿದ್ದೀರಿ? ಬಡ್ಡಿ ಬೆಳಸಿಕೊಂಡು ಡಿಪಾರ್ಟ್‌ಮೆಂಟ್ ಉದ್ಧಾರ ಮಾಡಿಕೊಳ್ಳುತ್ತಿದ್ದೀರಾ ? ಅದರಲ್ಲಿ ಎಷ್ಟು ಬಡ್ಡಿ ಬಂದಿದೆ ಎಂಬುದನ್ನು ಹೇಳಿ ? ಆ ಬಡ್ಡಿಯನ್ನು ಕೊಟ್ಟರೆ ಹಂಗಾಮಿ ಕೆಲಸದವರನ್ನು ಪರ್ಮನೆಂಟ್ ಮಾಡಬಹುದು.

ಇದನ್ನು ಬ್ಯೂರೋಕ್ರಸಿ ಅಧಿಕಾರಿಗಳು ಕೊಲೆ ಮಾಡುವುದಕ್ಕೆ ಮಾಡಿದ್ದಾರೆ. ಈ ಕಾಟೇಜ್ ಇಂಡಸ್ಟ್ರೀಗಳಿಗೆ ಪ್ರಯೋಜನ ನೇರವಾಗಿ ಮುಟ್ಟಬೇಕಾಗುತ್ತದೆ, ಇವರು ಉತ್ಪಾದನೆ ಮಾಡತಕ್ಕದ್ದರ ಒಗ್ಗೆ ನೇರ ಬೆಲೆ ಇವರಿಗೆ ತಲುಪಬೇಕು. ಎಲ್ಲದಕ್ಕೂ ಥ್ರೂ ಮೈ ಡಿಪಾರ್ಟ್‌ಮೆಂಟ್ ಆಗಬೇಕು ಥ್ರೂ ಮೈ ಆಫೀಸರ್ಸ್, ಥ್ರೂ ಮೈ ಎಕ್ಸ್‌ಚೇಂಜ್ ಎಂದು ಹೇಳಿ ಮಾಡುತ್ತಾ ಹೋದರೆ ಇವೊತ್ತು ರೇಷ್ಮೆ ಕೈಗಾರಿಕೆ ಮುಂದೆ ಬರುವುದಿಲ್ಲವೆಂದು ನನ್ನ ಭಾವನೆ. ಕಾಲಾವಕಾಶ ಕಡಿಮೆ ಇರುವುದರಿಂದ ನಾನು ಈಗ ಇನ್ನೊಂದು ಇಲಾಖೆ ಬಗ್ಗೆ ಮಾತನಾಡುತ್ತೇನೆ. ನಾನು ಈಗ ಸಮಾಜ ಕಲ್ಯಾಣ ಇಲಾಖೆ ಬಗ್ಗೆ ಮಾತನಾಡುತ್ತೇನೆ.

ಹಿಂದುಳಿದವರ್ಗ ಹಾಗೂ ಹರಿಜನರ ವಿಚಾರದಲ್ಲಿ ಹೇಳಬೇಕೆಂದರೆ ಬರೀ ಕೇವಲ ೬ ಜಾತಿಗಳು ಮಾತ್ರ ಹರಿಜನವರ್ಗಕ್ಕೆ ಸೇರಿದ್ದರು. ಆ ನಂತರ ಮಾನ್ಯ ದೇವರಾಜಅರಸ್ ಅವರ ಕಾಲದಲ್ಲಿ ಈ ವರ್ಗಕ್ಕೆ ೧೦೧ ಜಾತಿಗಳನ್ನು ಸೇರಿಸಲಾಯಿತು. ಈ ಬಗ್ಗೆ ನಮ್ಮ ಅಭ್ಯಂತರ ಇಲ್ಲ. ಇನ್ನೂ ೩೦೦ ಜಾತಿಗಳನ್ನು ಸೇರಿಸಿದರೂ ನಾವು ಬೇಡ ಎಂದು ಹೇಳುವುದಿಲ್ಲ. ಆದರೆ ಆ ೧೦೧ ಜಾತಿಗಳನ್ನು ಏನು ತಂದಿದ್ದಾರೆ ಅವರ ಒಂದು ಪಾಪ್ಯುಲೇಷನ್‌ನ್ನು ಬಿಟ್ಟು ಬಂದಿದ್ದಾರೆ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಿಗೆ ಕೇಳುವುದು ಏನೆಂದರೆ ಇವೊತ್ತಿನ ದಿವಸ ಹರಿಜನರ ಒಂದು ಪಾಪ್ಯುಲೇಷನ್ ನಮಗೆ ೧೯೭೧ ನೇ ಸೆನ್ಸಸ್ ಪ್ರಕಾರ ಸಿಗುತ್ತದೆ.

ಉಪಾಧ್ಯಕ್ಷರು.—೧೯೮೧ ನೇ ಸೆನ್ಸಸ್‌ನಲ್ಲಿ ಪಾಪ್ಯುಲೇಷನ್ ಬಂದಿದೆ.

ಶ್ರೀ ವೈ. ರಾಮಕೃಷ್ಣ.—ಹೌದು ಬಂದಿದೆ, ಆದರೆ ಈ ಪರಿಶಿಷ್ಟ ಜಾತಿಗೆ ಏನು ೧೦೧ ಜಾತಿಗಳನ್ನು ಸೇರಿಸಿದ್ದಾರೆ ಇವರ ಒಂದು ಅಂಕಿ ೧೯೭೧ ರಲ್ಲಿ ಸಿಗುತ್ತದೆ. ಆ ಒಂದು ಪಂಗಡದವರ ಒಂದು ಗಣತಿ ಈ ದಿವ ಆಗಿಲ್ಲ. ಹಿಂದೆ ಏನು ೬ ಜಾತಿಗಳವರು ಈ ವರ್ಗಕ್ಕೆ ಸೇರಿದ್ದರು ಅವರಿಗೆ ೧೮ ಶೇಕಡ ಮೀಸಲಾತಿಯನ್ನು ಎಂದರೆ ಪರಿಶಿಷ್ಟ ಜಾತಿಯವರಿಗೆ ೧೫ ಶೇಕಡ ಹಾಗೂ ಪರಿಶಿಷ್ಟ ಪಂಗಡದವರಿಗೆ ಶೇಕಡ ೩ ರಿಂದ ಒಟ್ಟು ಶೇಕಡ ೧೮ ಮೀಸಲಾತಿ ಇತ್ತು. ಆದರೆ ಈ ಜಾತಿಗಳಿಗೆ ೧೦೧ ಪಂಗಡಗಳನ್ನು ಸೇರಿಸಿದ ಮೇಲೆ ಈ ಒಂದು ಮೀಸಲಾತಿಯನ್ನು ಏರಿಸಿಲ್ಲ. ನನ್ನ ಒಂದು ಲೆಕ್ಕದ ಪ್ರಕಾರ ಇವರನ್ನೂ ಗಣನೆಗೆ ತೆಗೆದುಕೊಂಡಾಗ ಶೇಕಡ ೩೪ ರಷ್ಟು ಮೀಸಲಾತಿಯನ್ನು ಇವರಿಗೆ ಇಡಬೇಕಾಗುತ್ತದೆ. ಈ ಮೀಸಲಾತಿ ಇಡುವ ಬಗ್ಗೆ ಈ ೧೦೧ ಜಾತಿಯವರ ಒಂದು ಅಂಕಿಸಂಖ್ಯೆಯನ್ನು ತಾವು ಇಟ್ಟಿದ್ದೀರಾ ? ಈ ಬಗ್ಗೆ ಸ್ಟ್ಯಾಟಿಸ್ಟಿಕ್ಸ್ ಇಟ್ಟಿದ್ದೀರಾ ? ಈ ದಿನ ಆ ಜನರಿಗೂ ಒಂದು ಸಹಾಯ ಸಿಗಬೇಕೆಂದು ಸೇರಿಸಿರುವುದರಲ್ಲಿ ನಮ್ಮ ಅಭ್ಯಂತರ ಇಲ್ಲ. ಆದರೆ ಇವೊತ್ತು ಅವರ ಬಗ್ಗೆ ವಿವರ ಇರಬೇಕಾಗುತ್ತದೆ. ಮೊನ್ನೆ ಮಾನ್ಯ ಚಂದ್ರಶೇಖರ್ ಅವರು ಪಾಪ್ಯುಲೇಷನ್ ಸರಿಯಾಗಿ ಗಣನೆಗೆ ತೆಗೆದುಕೊಳ್ಳದೇ

ಮುನಿಸಿಪಲ್ ಎಲೆಕ್ಷನ್ಸ್ ಮಾಡಿ, ಒಂದು ರಾಜಕೀಯ ಮಾಡಿ ಇಲ್ಲಿ ಬಂದು ಕುಳಿತುಬಿಟ್ಟರೋ ಆ ರೀತಿ ಇದು ಆಗಿದೆ. ನಾನು ೧೯೮೧ ಸೆನ್ಸಸ್‌ನ್ನು ನೋಡಿದ್ದೇನೆ. ನಾನು ಬೇರೆ ರಾಜ್ಯಗಳಲ್ಲೂ ಹೋಗಿ ನೋಡಿ ಬಂದಿದ್ದೇನೆ. ಡಿಸೆಂಬರ್ ೧೭ರಂದು ನಾವು ಆಂಧ್ರಪ್ರದೇಶಕ್ಕೆ ಹೋಗಿ ಬಂದಿದ್ದೇವೆ. ಅವರು ಒಂದು ನೋಟ್‌ನ್ನು ಕೊಟ್ಟಿದ್ದಾರೆ. ಅವರು ಈ ರೀತಿ ಹೇಳಿದ್ದಾರೆ.

'On account of removal of area restriction the population of S.Cs has not increased. However, there is increase in the population figures of SCs from 1971 to 1981. Their percentage has also increased. Details are given below.

1971–57,74,548 – 13.27%

1981–79,61,730 – 14.87%

ಇವೊತ್ತು ತಾವು ಹರಿಯಾಣಾಕ್ಕೆ ಹೋಗಿ ನೋಡಿ ಬನ್ನಿ. ಎಲ್ಲಾ ರಾಜ್ಯಗಳಲ್ಲೂ ಅದನ್ನು ಮಾಡಿದ್ದಾರೆ. ಆದರೆ ಈ ೧೦೧ ಜಾತಿಗಳನ್ನು ಏನು ಸೇರಿಸಿದ್ದಾರೆ ಅವರ ಬಗ್ಗೆ ಸೆನ್ಸಸ್ ಮಾಡದಿರುವುದು ಅನ್ಯಾಯ ವಲ್ಲವೇ ? ಈ ಬಗ್ಗೆ ಕೂಡಲೇ ಇಲಾಖೆಯವರು ಕಾರ್ಯಕ್ರಮ ಹಾಕಿಕೊಳ್ಳಬೇಕು. ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಜನ ಇದ್ದಾರೆಂಬ ಬಗ್ಗೆ ತಿಳಿಯಬೇಕು. ಒಂದು ವೇಳೆ ಸೆನ್ಸಸ್ ಕಮಿಷನರ್ ಅವರು ಈ ಬಗ್ಗೆ ರೆಫ್ಯೂಸ್ ಮಾಡಿದರೆ ಸಮಾಜ ಕಲ್ಯಾಣ ಇಲಾಖೆಯವರೇ ಈ ಕೆಲಸವನ್ನು ಮಾಡಿಸ ಬೇಕಾಗುತ್ತದೆ. ಅವರ ಒಂದು ಲೆಕ್ಕವನ್ನು ಹಾಕಿದಾಗ ಈ ದಿನ ನನ್ನ ಪ್ರಕಾರ ಶೇಕಡ ೩೯ರಷ್ಟು ಮೀಸಲಾತಿಯನ್ನು ಅವರಿಗೆ ಕೊಡಬೇಕಾಗುತ್ತದೆ. ಆದ್ದರಿಂದ ನ್ಯಾಯವನ್ನು ದೊರಕಿಸಿಕೊಡುವುದರಲ್ಲಿ ಏನು ಅನ್ಯಾಯ ಆಗುತ್ತದೆ ಅದನ್ನು ಆದಷ್ಟು ಬೇಗ ಸರಿಪಡಿಸಬೇಕೆಂದು ಹೇಳುತ್ತೇನೆ. ಈ ಬಗ್ಗೆ ಸ್ಟ್ಯಾಟಿಸ್ಟಿಕ್ಸ್ ಮಾಡುವಾಗ ಅವರು ಅವಲಂಬಿಸಿರತಕ್ಕ ವೃತ್ತಿ ಯಾವುದು ಎಂಬ ಬಗ್ಗೆ ಯೋಚನೆ ಮಾಡ ಬೇಕಾಗುತ್ತದೆ. ಕಾರಣ ಅವರು ಯಾವ ವೃತ್ತಿಯಲ್ಲಿದ್ದಾರೆ, ಆ ವೃತ್ತಿಯನ್ನು ನಾವು ಎನ್‌ಕರೇಜ್ ಮಾಡಬೇಕಾಗುತ್ತದೆ. ಯಾವ ಜನಾಂಗಕ್ಕೆ ಉಳುವುದಕ್ಕೆ ಭೂಮಿ ಇಲ್ಲ ವ್ಯಾಪಾರ ಮಾಡುವುದಕ್ಕೆ ಬಂಡವಾಳ ಇಲ್ಲ ಅವರನ್ನೆಲ್ಲಾ ಲೆಕ್ಕಕ್ಕೆ ತೆಗೆದುಕೊಂಡು ಬಂದು ಯಾರು ಯಾರು ಕನ್ವೆನ್‌ಷನಲ್ ಪ್ರೊಫೆಷನ್ಸ್ ಮಾಡುತ್ತಿದ್ದಾರೆ ಅವರನ್ನು ಗುರ್ತಿಸಿ ಅವರಿಗೆ ಸಹಾಯ ಮಾಡಬೇಕಾಗುತ್ತದೆ. ಈ ಒಂದು ವಿವರವನ್ನು ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ.

'The earnings of the Scheduled Caste agricultural labourers who are above 70% in Andhra Pradesh vary between Rs. 1200 to Rs. 2,000 per annum'

This is the statistics survey they have made.

'Only about 14% of them own some lands mostly marginal cultivators and the State Government have so far distributed 9 lakhs acres to the scheduled caste people declared under the surplus land ceiling. Apart from these to major occupations' there are 16,909 weavers and 1,42,820 cobblers and 52,531 other workers engaged in various activities...

ಈ ರೀತಿಯ ಒಂದು ಲೆಕ್ಕವನ್ನು ತಾವು ಇಡಿ. ಏಕೆಂದರೆ ಇವರ ರೀಹ್ಯಾಬಿಲಿಟೇಷನ್ ಮಾಡುವ ಬಗ್ಗೆ ಹಣ ಮುಖ್ಯ ಇದೆ. ಇವೊತ್ತು ಹಣವನ್ನು ಬ್ಯಾಂಕಿನವರು ಏನೂ ಸುಮ್ಮನೆ ಕೊಡುವುದಕ್ಕಾಗು ತ್ತದೆಯೇ ? ನಿಜವಾಗಿ ವಯಬಲ್ ಯೂನಿಟ್ಸ್ ಯಾವುವು ಇವೆ ಅವುಗಳನ್ನು ನೋಡಿಕೊಂಡು ಕೊಡ ಬೇಕಾಗುತ್ತದೆ. ಆದ್ದರಿಂದ ಈ ಬಗ್ಗೆ ಒಂದು ಸ್ಟ್ಯಾಟಿಸ್ಟಿಕ್ಸ್ ಆಗಲಿ. ಆದರೆ ನಮ್ಮ ಇಲಾಖೆ ಈ ಬಗ್ಗೆ ಕನ್‌ಫ್ಯೂಷನ್‌ನಲ್ಲಿ ಇದೆ. ಯಾವ ಒಂದು ವಿಷಯದ ಬಗ್ಗೆ ಒಂದು ಸ್ಟ್ಯಾಟಿಸ್ಟಿಕ್ಸ್‌ನ್ನು ತಯಾರು ಮಾಡಿ ಎಂದರೂ ಅದನ್ನು ಮಾಡಲು ಸಾಧ್ಯವಿಲ್ಲವಾಗಿದೆ. ಕಾರಣ ಇವರಲ್ಲಿ ಸರಿಯಾದ ಸ್ಟ್ಯಾಟಿಸ್ಟಿಕ್ಸ್ ಇಲ್ಲದೇ ಇರುವುದು. ಕಾರಣ ಇವರಲ್ಲಿ ಪಾಪ್ಯುಲೇಷನ್ ಗೊಂದಲ ಇದೆ. ಯಾರು ಯಾರು ಎಷ್ಟೆಷ್ಟು

ಸಂಖ್ಯೆಯಲ್ಲಿ ಇದ್ದಾರೆ ಹಾಗೂ ಇವರ ಕಸುಬು ಏನು ಹಾಗೂ ಯಾವ ರೀತಿ ಇವರನ್ನು ರೀಹ್ಯಾಬಿಲಿ-ಟೇಷನ್ ಮಾಡಬಹುದು ಎನ್ನುವ ಬಗ್ಗೆ ಆಲೋಚನೆ ಮಾಡಿದರೆ ಉತ್ತಮ ಎಂದು ನಾನು ಹೇಳುತ್ತೇನೆ. ಅಧ್ಯಕ್ಷರೇ, ಈ ವಿಚಾರಗಳನ್ನು ಪರಿಶೀಲನೆ ಮಾಡುವಾಗ ಕೆಲವು ಪುಸ್ತಕಗಳನ್ನು ರೆಫರ್ ಮಾಡಬೇಕಾಗಿ ಬಂತು. ಇದಕ್ಕೆ ಸಂಬಂಧಪಟ್ಟ ಕೆಲವು ಪುಸ್ತಕಗಳನ್ನು ನಾನು ನಮ್ಮ ಲೈಬ್ರರಿಯಲ್ಲಿ ಹುಡುಕಿದಾಗ ಅವು ಸಿಗಲೇ ಇಲ್ಲ. ಉದಾಹರಣೆಗೆ ಡಾ. ಕಾಕಾ ಕಾಲೇಕರ್ ವರದಿ, ಹಾವನೂರ್ ವರದಿ ಬೇಕಾಗಿತ್ತು. ಅವು ನನಗೆ ಸಿಗಲಿಲ್ಲ. ಹಾಗೇ ಮಂಡಲ್ ಕಮಿಷನ್ ವರದಿ, ಎಲ್ಲೈ ಪೆರುಮಾಳ್ ವರದಿ, ಮಿಲ್ಲರ್ ಸಮಿತಿ ವರದಿ ಕೂಡಾ ಸಿಗಲಿಲ್ಲ. ಹಾಗೂ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ವರದಿಯ ಲೇಟೆಸ್ಟ್ ರಿಪೋರ್ಟ್ ಸಹಾ ಲೈಬ್ರರಿಯಲ್ಲಿ ಇಲ್ಲ. ಹೀಗೆ ಆದರೆ ಹೇಗೆ ? ಎಲ್ಲೈ ಪೆರುಮಾಳ್ ಕಮಿಟಿ ರಿಪೋರ್ಟ್ ಆನ್ ಅನಟಚಬಿಲಿಟಿ, ಅದು ಇಲ್ಲ ಎಂದರೆ ಏನು ಮಾಡುವುದು ? ಇನ್ನು ಮಂಡಲ್ ಕಮಿಷನ್ ರಿಪೋರ್ಟ್ ೧೯೮೦ರಲ್ಲಿ ಆಗಿದೆ. ಅದು ಇಲ್ಲ ಎಂದರೆ ಏನು ಮಾಡಲಿಕ್ಕೆ ಆಗುತ್ತದೆ ? ಇದು ತಮಗೆ ಸೇರಿರತಕ್ಕದ್ದು, ತಾವು ಸ್ಪೀಕರ್, ತಾವು ಅದನ್ನು ಒದಗಿಸಿ ಕೊಡತಕ್ಕ ಜವಾಬ್ದಾರಿ ಇದೆ. ನಮ್ಮ ಲೆಜಿಸ್ಲೇಚರ್ ಲೈಬ್ರರಿಯಲ್ಲಿ ಈ ಕಮಿಷನ್ ವರದಿಗಳನ್ನೆಲ್ಲಾ ತರಿಸಿ ಇಡುವ ವ್ಯವಸ್ಥೆ ಮಾಡಬೇಕು. ಬ್ಯಾಕ್‌ವರ್ಡ್‌ಕ್ಲಾಸ್ ಕಮಿಷನ್‌ನ್ನು ಎಲ್ಲಾ ರಾಜ್ಯಗಳಲ್ಲೂ ಮಾಡಿದ್ದಾರೆ. ಬ್ಯಾಕ್‌ವರ್ಡ್‌ಕ್ಲಾಸ್ ಕಮಿಷನ್ ರಿಪೋರ್ಟ್ ಸುಪ್ರೀಮ್ ಕೋರ್ಟಿಗೆ ಹೋಗಿದೆ. ಇದು ಬಹಳ ಸೆನ್‌ಸಿಟೀವ್ ಸಬ್ಜೆಕ್ಟ್. ನಾವು ತಿಳಿದುಕೊಂಡಿರುವಷ್ಟು ಸುಲಭ ಅಲ್ಲ ಈಗ ಮತ್ತೊಂದು ಬ್ಯಾಕ್‌ವರ್ಡ್‌ಕ್ಲಾಸ್ ಕಮಿಷನ್‌ನ್ನು ಅಪಾಯಿಂಟ್ ಮಾಡಿದ್ದಾರೆ. ಅದರ ಅಗತ್ಯ ಏನಿತ್ತು ಎನ್ನುವುದು ನನಗೆ ತಿಳಿಯುವುದಿಲ್ಲ. ಹಿಂದೆ ನಾವು ಮಾಡಿದಾಗ ಅದು ಲೀಗಲ್ ನೆಸೆಸಿಟಿಯಾಗಿತ್ತು. ಮದ್ರಾಸ್‌ನಲ್ಲಿಯೂ ಲೀಗಲ್ ನೆಸೆಸಿಟಿ ಇದ್ದುದರಿಂದ ಅಲ್ಲಿಯೂ ಸಹ ಈ ರೀತಿ ಅಪಾಯಿಂಟ್ ಮಾಡಿದ್ದಾರೆ. ಆದರೆ ಇಲ್ಲಿ ಏತಕ್ಕೆ ಮಾಡಿದರೋ ನನಗೆ ಅರ್ಥ ಆಗುತ್ತಿಲ್ಲ. ಎಲ್ಲಾ ಕಮಿಷನ್‌ಗಳ ರಿಪೋರ್ಟ್ ಇಲ್ಲದೇ ಯಾವರೀತಿ ನಾವು ಕೆಲಸ ಮಾಡಲಿಕ್ಕೆ ಆಗುತ್ತದೆ ? ಇದರ ಕಡೆ ಹೆಚ್ಚು ಆದ್ಯತೆ ಕೊಟ್ಟು ಎಲ್ಲಾ ರಿಪೋರ್ಟ್‌ಗಳನ್ನು ತರಿಸಿ ಲೈಬ್ರರಿಯಲ್ಲಿಡತಕ್ಕ ವ್ಯವಸ್ಥೆಯನ್ನು ತಾವು ಮಾಡಬೇಕು. ಇನ್ನು ಬಡ್ಜೆಟ್‌ನಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಹಣ ಒದಗಿಸಿರುವ ಬಗ್ಗೆ ಹೇಳಬೇಕೆಂದರೆ, ಸುಮಾರು ೫೦ ಪರ್‌ಸೆಂಟ್ ಪಾಪ್ಯುಲೇಷನ್ ಮಹಿಳೆಯರೇ ಇದ್ದಾರೆ. ನಾಲ್ಕು ಕೋಟಿ ಜನರಲ್ಲಿ ಎರಡು ಕೋಟಿ ಜನರು ಇವರೇ ಬರುತ್ತಾರೆ. ಆ ಖಾತೆಯನ್ನು ಹೊತ್ತಿರುವವರು ಇವರೇ ಆಗಿದ್ದಾರೆ. ರಿಪೋರ್ಟ್ ಪ್ರಕಾರ ನೋಡುವುದಾದರೆ, ಇಪ್ಪತ್ತೆರಡೂವರೆ ಪರ್ಸೆಂಟ್ ಹರಿಜನ ಗಿರಿಜನರು ಇದ್ದಾರೆ. ಅದರ ಜೊತೆಗೆ ೪೬ ಲಕ್ಷ ಮಕ್ಕಳ ಕಲ್ಯಾಣ ಮಾಡಬೇಕಾಗಿದೆ. ಇದನ್ನು ನೋಡಿದಾಗ ನೀವು ಎಷ್ಟು ಸಾವಿರ ಕೋಟಿ ರೂಪಾಯಿಗಳನ್ನು ತೆಗೆದುಕೊಳ್ಳಬೇಕು ಎನ್ನುವುದು ಗೊತ್ತಾಗುತ್ತದೆ. ಈಗ ನೀವು ತೆಗೆದುಕೊಂಡಿರತಕ್ಕ ಹಣ ಸಮುದ್ರದಲ್ಲಿ ಒಂದು ತೊಟ್ಟು ನೀರು ತೆಗೆದು ಕೊಂಡಂತೆ ಆಗಿದೆ. ನಾನ್‌ಪ್ಲಾನ್ ಎಕ್ಸ್‌ಪೆಂಡಿಚರ್‌ನಲ್ಲಿ ೮ ಕೋಟಿ ರೂಪಾಯಿಗಳು, ಪ್ಲಾನ್ ಎಕ್ಸ್‌ಪೆಂಡಿಚರ್‌ನಲ್ಲಿ ೧೨ ಕೋಟಿ ರೂಪಾಯಿಗಳು ಇದು ಒಟ್ಟು ೨೦ ಕೋಟಿ ರೂಪಾಯಿಗಳು ಆಗುತ್ತದೆ. ಸೆಂಟ್ರಲ್ ಗೌರ್ನ್‌ಮೆಂಟಿನಿಂದ ಬರತಕ್ಕದ್ದು ಬಿಟ್ಟರೆ, ನಿಮ್ಮ ಬಡ್ಜೆಟ್ ಸುಮಾರು ೮೦ ಕೋಟಿ ರೂಪಾಯಿಗಳಿಗೆ ಬರಬಹುದು. ೧೬೦೦ ಕೋಟಿ ರೂಪಾಯಿಗಳು ಬಡ್ಜೆಟ್ಟಿನಲ್ಲಿ ಇಷ್ಟು ಎಂದು ಹೇಳಿದಾಗ ತಾವು ಆಲೋಚನೆ ಮಾಡಿ ಸೋಷಿಯಲ್ ಜಸ್ಟೀಸ್‌ನಿಂದ ನಿಮ್ಮ ಪೋರ್ಟ್‌ಫೋಲಿಯೋದಲ್ಲಿ ಕೆಲಸ ಮಾಡಲಿಕ್ಕೆ ಆಗುತ್ತದೆಯೇ ? ಆದ್ದರಿಂದ, ತಾವು ಜಾಸ್ತಿ ಹಣ ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡಬೇಕು.

ಶ್ರೀ ಗೋವಿಂದ ಟಿ. ಒಡೆಯರಾಜ್.—ಅವರು ಎಷ್ಟು ಪ್ರಯತ್ನಪಟ್ಟರೂ ಕೊಡವೇ ಇದ್ದರೆ ಅವರು ಏನು ಮಾಡಲಿಕ್ಕೆ ಆಗುತ್ತದೆ. ?

ಶ್ರೀ ವೈ. ರಾಮಕೃಷ್ಣ.—ಹೋದವರ್ಷ ಎಷ್ಟು ಇತ್ತು, ಅಷ್ಟಾದರೂ ಇರಬೇಕಲ್ಲವೇ ?

ಮೇಜರ್ ಹೆಡ್ಸ್ ೪೮೮ ಕ್ಯಾಪಿಟಲ್ ಔಟ್ ಲೇ ಪಿಡಬ್ಲ್ಯುಡಿ ವರ್ಕ್ಸ್, ಫಾರ್‌ಕನ್‌ಸ್ಟ್ರಕ್ಷನ್ ಸ್ಕೂಲ್ ಬಿಲ್ಡಿಂಗ್, ಮತ್ತು ಮಹಿಳಾ ಸಮಾಜ ಇದಕ್ಕೆ ೧೯೮೨-೮೩ರಲ್ಲಿ ೩ ಕೋಟಿ ೫೪ ಲಕ್ಷ ರೂಪಾಯಿಗಳು ಖರ್ಚಾಗಿದೆ. ಈಗ ತಾವು ೧೯೮೪-೮೫ರಲ್ಲಿ ೩ ಕೋಟಿ ೨೬ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೀರಿ. ತಾವು ೨೮ ಲಕ್ಷ ರೂಪಾಯಿಗಳನ್ನು ಈ ವರ್ಷ ಕಡಿಮೆ ತೆಗೆದುಕೊಂಡಿದ್ದೀರಿ. ತಾವು ಹೋದಸಾರಿ ಭಾಷಣ ಮಾಡುವಾಗ ಏನೇನು ಹೇಳಿದ್ದೀರಿ ಅದನ್ನೆಲ್ಲಾ ನಾನು ಇವೊತ್ತು ತೆಗೆದು ಕೊಂಡು ಬಂದಿದ್ದೇನೆ. ನಿಮ್ಮಲ್ಲಿ ಕೆಲಸ ಮಾಡುವ ಆಸೆ ಇದೆ, ಉತ್ಸಾಹ ಇದೆ. ನಿಮ್ಮ ತಂದೆಯವರು ಹೆಸರು ತೆಗೆದುಕೊಂಡ ಹಾಗೆ

ಹೆಸರು ತೆಗೆದುಕೊಳ್ಳಬೇಕೆಂದು ಆಸೆ ಇದೆ. ಆದರೆ ತಾವು ಲಕ್ಷ್ಮೀಕಟಾಕ್ಷವನ್ನು ತೆಗೆದು ಕೊಂಡಿಲ್ಲ. ಹಿಂದೆ ನೀವು ಎಷ್ಟು ಹಾಸ್ಟಲುಗಳನ್ನು ಮಾಡುತ್ತೇವೆಂದು ಹೇಳಿದ್ದೀರಿ ಅದನ್ನೆಲ್ಲಾ ಹುಡುಕಿಕೊಂಡು ತೆಗೆದು ಕೊಂಡು ಬಂದಿದ್ದೇನೆ. ನೀವು ಹಿಂದೆ ಹೇಳುವಾಗ ೫೦ ಹಾಸ್ಟಲು ೩೩ ಹಾಸ್ಟಲು ಮತ್ತೆ ೧೩ ಹಾಸ್ಟಲು ಎಂದು ಹೇಳಿದ್ದೀರಿ. ಹೋದಸಾರಿ ಎಷ್ಟು ಹಣ ಒದಗಿಸಿದ್ದರೂ ಅದಕ್ಕಿಂತಲೂ ಈ ಸಾರಿ ೨೮ ಲಕ್ಷ ರೂಪಾಯಿಗಳು ಕಡಿಮೆ ತೆಗೆದುಕೊಂಡಿದ್ದೀರಿ ಇನ್ನು ತಾವು ಹಾಸ್ಟಲುಗಳನ್ನು ಕಟ್ಟಲಿಕ್ಕೆ ಎಲ್ಲಿ ಆಗುತ್ತದೆ ?

ಶ್ರೀಮತಿ ಚಂದ್ರಪ್ರಭಾ ಅರಸ್.—ನಾನು ಎಷ್ಟು ಒದಗಿಸಿಕೊಂಡಿದ್ದೇನೆ ಎನ್ನುವುದನ್ನು ಅನಂತರ ಹೇಳುತ್ತೇನೆ.

ಶ್ರೀ ವೈ. ರಾಮಕೃಷ್ಣ.—ಈಗ ವೆಂಕಟಸ್ವಾಮಿ ಕಮಿಷನ್ ಅಪಾಯಿಂಟ್ ಮಾಡಿದ್ದೀರಿ. ಅದು ಈಗತಾನೇ ಸಿಟ್ಟಿಂಗ್ ಪ್ರಾರಂಭ ಮಾಡಿದೆ. ಈಗ ನಮಗೆ ಇರತಕ್ಕದ್ದು ಮಂಡಲ್ ಕಮಿಷನ್ ರಿಪೋರ್ಟ್ ಪ್ರಕಾರ ಹೇಳಬೇಕೆಂದರೆ, ಈ ಬಗ್ಗೆ ಮಾನ್ಯ ಲಕ್ಷ್ಮೀಸಾಗರ್ ಅವರು ಚೆನ್ನಾಗಿ ಕೇಳಬೇಕು. ಏಕೆಂದರೆ ಇದು ಅವರ ತಲೆ ಗೆಹೋಗುತ್ತಿದೆಯೋ ಇಲ್ಲವೋ ಗೊತ್ತಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ತಲೆ ಇದ್ದರೆ, ತಲೆ ಒಳಗಡೆ ಹೋಗುತ್ತದೆ. ತಲೆ ಇಲ್ಲದೇ ಇದ್ದರೆ ತಲೆ ಒಳಗಡೆ ಹೋಗುವುದಿಲ್ಲ.

ಶ್ರೀ ವೈ. ರಾಮಕೃಷ್ಣ.—ಲಕ್ಷ್ಮೀಸಾಗರ್‌ರವರು ಅಮ್ಮಾವರಿಗೆ ಜಾಸ್ತಿ ಹಣ ಕೊಡಿಸಿದರೆ, ತಲೆ ಇದೆ ಎನ್ನುವುದು ಅರ್ಥವಾಗುತ್ತದೆ. This is the Mandal Commission Report. Volume 3 and 4–P rt II. Latest Edition. I quote from page 235. Scheduled Castes and Scheduled Tribes formulate 22.56% of the total population. Second category is non–Hindu communities and religious groups. Muslims 11.19% ; Christians 2.16% ; Sikhs 61.7%; Buddhists 0.67 , and Jains 4.47. he total comes to 16.16% This is second category. And I come to third category. i.e., Forward Hindus and caste Hindus : Bramhins 5.52%; Rajupts 3.90% Maratas 2.21% ; Vysyas and Baniyas 1.83% ; Kshtriyas 1.7% and other Hindus 2%. So the entire third category comprises of 17.58%. Approximately, other backward classes including non-Hindu communities forms 52% of the total population. ಅವರ ಉದ್ಧಾರಕ್ಕೆ ಇಟ್ಟಿರತಕ್ಕ ಹಣ ಎಷ್ಟು ?

ಶ್ರೀ ಎ. ಲಕ್ಷ್ಮೀಸಾಗರ್.––ನಾನು ಅವರ ವಾದವನ್ನು ಒಪ್ಪಿಕೊಳ್ಳುತ್ತೇನೆ ಮಂಡಲ್ ಆಯೋಗದ ವರದಿಯ ಸಾರಾಂಶವನ್ನು ಓದಿದ್ದಾರೆ. ಆ ವಿಚಾರದಲ್ಲಿ ನನಗೂ ಅವರಿಗೂ ವ್ಯತ್ಯಾಸ ಇಲ್ಲ ಎಂಬ ಭಾವನೆ ನನ್ನಲ್ಲಿ ಇದೆ. ಮಂಡಲ್ ವರದಿಯನ್ನು ಕೊಟ್ಟಮೇಲೆ, ಅದನ್ನು ಕೇಂದ್ರ ಸರ್ಕಾರದವರು ಏತಕ್ಕೆ ಜಾರಿಗೆ ಕೊಡಲಿಲ್ಲ ಎನ್ನುವ ಬಗ್ಗೆ ಮಾನ್ಯ ಸದಸ್ಯರು ಏನಾದರೂ ಉತ್ತರ ಹೇಳುತ್ತಾರೆಯೇ ?

ಶ್ರೀ ವೈ. ರಾಮಕೃಷ್ಣ.––ನಾನು ಅಂಕಿ ಅಂಶಗಳನ್ನು ಕೋಟ್ ಮಾಡಲಿಕ್ಕೋಸ್ಕರ ಹೇಳುತ್ತೇನೆಂದು ಹೇಳಿದ್ದೇನೆಯೇ ಹೊರತು, ಆ ಬಗ್ಗೆ ಚರ್ಚೆಗೆ ಇಳಿಯಲಿಕ್ಕೆ ಸಿದ್ಧ ಇಲ್ಲ. ವೆಂಕಟಸ್ವಾಮಿ ಕಮಿಟಿ ರಿಪೋರ್ಟ್ ಇಲ್ಲದೇ ಇರುವುದರಿಂದ, ಮತ್ತು ಇಂಡಿಯಾಕ್ಕೆ ಸಂಬಂಧಪಟ್ಟಂತೆ ಇದು ಒಂದೇ ಇರುವುದರಿಂದ, ಇಲ್ಲಿನ ಅಂಕಿಅಂಶಗಳನ್ನು ತೆಗೆದುಕೊಂಡು ಹೇಳುತ್ತಿದ್ದೇನೆ. ನಾನು ಅವರಿಗಿಂತಲೂ ಮುಂದೆ ಆ ಪೋರ್ಟ್ ಫೋಲಿಯೋ ಇಟ್ಟುಕೊಂಡಿದ್ದೆ, ಅದರ ಬಗ್ಗೆ ನನಗೆ ಚೆನ್ನಾಗಿ ಗೊತ್ತಿದೆ.

ಶ್ರೀ ಎ. ಲಕ್ಷ್ಮೀಸಾಗರ್.––ಮಾನ್ಯ ಸದಸ್ಯರು ರಾಜಕೀಯ ತಜ್ಞರು, ಅನುಭವಸ್ಥರು. ತಿಳುವಳಿಕೆಯುಳ್ಳವರು, ಅವರು ಹಿಂದುಳಿದ ವರ್ಗದವರ ಬಗ್ಗೆ ಬರೀ ಲೆಕ್ಕ ಹೇಳುವುದರಿಂದ ನನಗೆ ಸಮಾಧಾನವಾಗುವುದಿಲ್ಲ. ವರದಿ ಬಂದಮೇಲೆ, ವೈಯಕ್ತಿಕವಾಗಿ ಇವರ ಅಭಿಪ್ರಾಯವೇನು ? ಏತಕ್ಕೋಸ್ಕರ

ಕೇಂದ್ರಸರ್ಕಾರ ಜಾರಿಗೆಕೊಟ್ಟಿಲ್ಲ. ಏತಕ್ಕೋಸ್ಕರ ಮಾನ ಮೋಶ ಎಣಿಸುತ್ತಿದ್ದಾರೆ. ಎನ್ನುವುದನ್ನು ಹೇಳಬೇಕು.

ಶ್ರೀ ವೈ. ರಾಮಕೃಷ್ಣ.—ಅದರ ಬಗ್ಗೆ ಚರ್ಚೆಗೆ ಬಂದಾಗ ನಾನು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಏತಕೋಸ್ಕರ ಜಾರಿಗೆ ತರಲಿಲ್ಲ ಎನ್ನುವುದು ಮಾನ್ಯ ರಾಮಕೃಷ್ಣ ಅವರಿಗೆ ಗೊತ್ತಿದೆ. ಅದನ್ನು ಹೇಳಿಬಿಟ್ಟರೆ ಕಷ್ಟವಾಗುತ್ತದೆಂದು ಹೇಳುತ್ತಿಲ್ಲ.

ಶ್ರೀ ವೈ. ರಾಮಕೃಷ್ಣ.—ಮಂಡಲ್ ಕಮಿಷನ್ ವರದಿಯ ಬಗ್ಗೆ ಪಾರ್ಲಿಮೆಂಟಿನಲ್ಲಿ ಕೂಲಂಕುಷವಾಗಿ ಚರ್ಚೆ ನಡೆದಿದೆ. ಇದು ಇತ್ತೀಚೆಗೆ ಪಾರ್ಲಿಮೆಂಟ್‌ನಲ್ಲಿ ಚರ್ಚೆಯಾಗಿದೆ. ಈ ರಿಪೋರ್ಟ್‌ನಲ್ಲಿ ೨೪೭ ರಿಂದ ೨೫೦ನೇ ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ರಿಪೋರ್ಟ್‌ನಲ್ಲಿ ನಮ್ಮ ಕರ್ನಾಟಕ ಜನರಿಗೆ ಸಂಬಂಧಪಟ್ಟಂತೆ ಹಿಂದುಳಿದ ಜಾತಿಗಳು ೩೩೦ ಇವೆ ಎಂದು ಹೇಳಿದ್ದಾರೆ. ಅವು ಯಾವುವು ಎಂದು ಹೇಳಿದ್ದಾರೆ. ಪೇಜ್‌ವರೆಗೂ ಹೆಸರುಗಳನ್ನು ಕೊಟ್ಟಿದ್ದಾರೆ. ಇದರಲ್ಲಿ ಮೇಜರ್ ಕಮ್ಯೂನಿಟಿಗಳನ್ನೂ ಕೂಡ ಹಾಕಿದ್ದಾರೆ. The major communities are considered as Backward. Even Vokkaligas are considered as Backward and Lingayats are considered as backward and they have been given their respective places. ನಮ್ಮ ರಾಜ್ಯದಲ್ಲಿ ಒಕ್ಕಲಿಗ ಮತ್ತು ಲಿಂಗಾಯಿತ ಜಾತಿಗಳನ್ನು ಮಂಡಲ್ ಕಮಿಷನ್ ರಿಪೋರ್ಟ್‌ನಲ್ಲಿ ಬ್ಯಾಕ್‌ವರ್ಡ್ ಕ್ಲಾಸಸ್‌ಗೆ ಸೇರಿಸಿದ್ದಾರೆ. ಅಂದಮೇಲೆ ಹಿಂದೆ ಇದ್ದಂಥ ೫೨ ಪರ್ಸೆಂಟ್ ಜಾತಿಗಳು ಏನಿದ್ದುವು ಅವು ಇನ್ನೂ ಜಾಸ್ತಿಯಾಗಿವೆ. ಆದ್ದರಿಂದ ಇದಕ್ಕೆ ತಕ್ಕಂತೆ ಹಣವನ್ನೂ ಕೂಡ ಹೆಚ್ಚಿಗೆ ಒದಗಿಸುವ ವ್ಯವಸ್ಥೆ ಮಾಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಇದು ಶುಷ್ಕ ವಾದ ಆಗಬಾರದು.

ಶ್ರೀ ವೈ. ರಾಮಕೃಷ್ಣ.—ಇಷ್ಟೊಂದು ಜನಸಂಖ್ಯೆಗೆ ತಾವು ತೆಗೆದುಕೊಂಡಿರತಕ್ಕ ಹಣ ಏನಿದೆ ಇದು ಬಹಳ ಕಡಿಮೆ. ಆದ್ದರಿಂದ ತಾವು ಈ ಖಾತೆಗೆ ಇನ್ನೂ ಹೆಚ್ಚಿನ ಹಣವನ್ನು ತೆಗೆದುಕೊಂಡು ಬೃಹದಾಕಾರದ ಕೆಲಸಗಳನ್ನು ಮಾಡಬೇಕು. ನಾನು ಪ್ರಪಂಚದಲ್ಲಿ ಎಲ್ಲೋ ಒಂದೆರಡು ದೇಶಗಳನ್ನು ಬಿಟ್ಟರೆ ಇಡೀ ಪ್ರಪಂಚವನ್ನೇ ಸುತ್ತಿಕೊಂಡು ಬಂದಿದ್ದೇನೆ, There I have found that Social Security portfolio is the diggest and most important portfolio always held by the Chief Minister who heads the Government.

ಶ್ರೀ ಎ. ಲಕ್ಷ್ಮೀಸಾಗರ್.—ಇದರ ಪರಿಣಾಮ ಏನಾಗಿದೆ ?

ಶ್ರೀ ವೈ. ರಾಮಕೃಷ್ಣ.—ಪರಿಣಾಮ ಒಳ್ಳೆಯದೇ ಆಗಿದೆ. ಆದರೆ ಇಲ್ಲಿ ಅಲ್ಲ. ಇಲ್ಲಿ ಛಿದ್ರವಿಛಿದ್ರವಾಗಿದೆ. ಇದಕ್ಕೆ ಕಾರಣ ಏನೆಂದರೆ ಕೆಲವಾರು ಡಿಪಾರ್ಟ್‌ಮೆಂಟ್‌ಗಳು ಏನಿವೆ ಅವನ್ನೆಲ್ಲಾ ಇದಕ್ಕೆ ಸೇರಿಸಿದ್ದೀರಿ. ಇವು ಎಷ್ಟಿವೆ ಎನ್ನುವ ಬಗ್ಗೆ ತಾವು ಗಮನಹರಿಸಿಲ್ಲ. ಇವತ್ತು ಈ ಮೋಡಿಯನ್ನು ನೋಡಿದರೆ ಅನೇಕ ಕಾನೂನುಗಳನ್ನು ತಾವು ಕೈಗೆ ತೆಗೆದುಕೊಳ್ಳಬೇಕಾಗುತ್ತದೆ. ಈ ಕಾನೂನುಗಳು ಯಾವುವು ಎಂಬುದನ್ನು ಇಲ್ಲಿ ಹೇಳಿದ್ದಾರೆ : Karnataka Children Act, 1964 the Probation of Offenders Act 1958, Suppression of Immoral Traffic in Women and Girls Act 1956, Dowry Prohibition Act, Marriage Restraint Act, Social and moral Hygiene and After Care Services. Child Welfare, Welfare of the Disables, Old and Infirm, Women's Welfare etc., ಇತ್ತೀಚೆಗೆ ಈ ದೇವದಾಸಿ ಕಾನೂನು ಬರುತ್ತಿದೆ. ತಾವು ಈ ಕಾನೂನನ್ನು ಸರಿಯಾಗಿ ನಿರ್ವಹಿಸಿದರೆ ಈ ಸಮಾಜದಲ್ಲಿ ಕಳ್ಳರು ಇರುವುದಿಲ್ಲ, ದೇವದಾಸಿ ಪದ್ಧತಿ ಇರುವುದಿಲ್ಲ. ಇವತ್ತು ನಮ್ಮ ದೇಶದಲ್ಲಿ ಕಳ್ಳತನ, ದೇವದಾಸಿ ಪದ್ಧತಿ ಇವೆಲ್ಲಾ ಇರುವುದು ಹೊಟ್ಟೆ ಪಾಡಿಗೋಸ್ಕರ. ಆರ್ಥಿಕ ಅಪರಾಧಗಳಿಗೆ ಮೂಲಕಾರಣ ಎಂದರೆ ಈ ಹೊಟ್ಟೆ ಪಾಡು. ಮೊದಲು ಇದನ್ನು ತಾವು ಸರಿಪಡಿಸಿದರೆ ಮುಂದೆ ಕಳ್ಳರ ಸಂಖ್ಯೆ ಸಮಾಜದಲ್ಲಿ ಕಡಿಮೆಯಾಗುತ್ತದೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ನಮ್ಮ ರಾಜ್ಯದಲ್ಲಿರತಕ್ಕ ಯಾವ ಕಾನೂನುಗಳೂ ಸರಿಯಾಗಿ ಕೆಲಸಮಾಡುತ್ತಿಲ್ಲ. ಈ ಕಾನೂನುಗಳೆಲ್ಲಾ ಕೇವಲ ಪುಸ್ತಕದಲ್ಲೇ ಇವೆ. ಇಲ್ಲಿ ಒಂದು ಮಾತನ್ನು ಹೇಳುವುದಾದರೆ, ಪೇಜ್ 5, in respect of Reception Centres and State Homes, ಇದರಲ್ಲಿ ೨೮೫೦ ಜನರಿಗೆ

ಎಂದು ಏನು ಹೇಳಿದ್ದೀರಿ ಇದು ಇನ್ನೂ ಜಾಸ್ತಿ ಇದ್ದರೂ ಕೂಡ ಇದು ದೇಶಕ್ಕೆ ಕೆಟ್ಟದ್ದು ಎಂದು ನಾನು ಹೇಳುವುದಿಲ್ಲ. It is a good sign. We are able to recognise them. ಇವರು ಯಾರು ಎಂಬುದನ್ನು ಪತ್ತೆ ಹಚ್ಚಿ ಆಶ್ರಯ ಕೊಡುತ್ತೀರಿ. ಇಂಥ ಒಂದು ಒಳ್ಳೆಯ ಕಾನೂನು ನಮ್ಮಲ್ಲಿರಬೇಕು. ತಾವು ಏನು ಪತ್ತೆ ಹಚ್ಚಿದ್ದೀರಿ ಇದು ಸಂತೋಷ. ಈ ಕಾನೂನು ಚೆನ್ನಾಗಿ ಕೆಲಸ ಮಾಡಿದೆ. You have done good work with regard to this Immoral Traffic Act,Disabled and Destitutes Act,etc ,ಬಿಜಾಪುರದಲ್ಲಿ ಒಬ್ಬ ಸಬ್ ಇನ್ಸ್‌ಪೆಕ್ಟರ್‌ರವರು ಇದನ್ನು ಮಾಡಿದ್ದಾರೆ. ಮಾನ್ಯ ರಾಷ್ಟ್ರಪತಿಯವರು ಜೂನ್ ೭೪ರಲ್ಲಿ ಇದಕ್ಕೆ ಮುಂದ್ರೆಯನ್ನೊತ್ತಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಒಬ್ಬ ಸಬ್ ಇನ್ಸ್‌ಪೆಕ್ಟರ್‌ರವರ ಮುಖಂಡತ್ವದಲ್ಲಿ ಈ ದೇವದಾಸಿ ಪದ್ಧತಿಯಲ್ಲಿ: ತೊಡಗಿದ್ದವರನ್ನು ಪತ್ತೆ ಹಚ್ಚಿ ಅಲ್ಲಿದ್ದ ಅಷ್ಟು ಜನರಿಗೂ ಅವರು ಮದುವೆ ಮಾಡಿದ್ದಾರೆ. I have to pay my compliments. He requires compliments and he should be given State Award.

SRI. M. VEERAPPA MOILY.—I think the Hon'ble Minister Sri Lakshmisagar should have played a comparable role in these Devadasi marriages.

ಶ್ರೀ ವೈ. ರಾಮಕೃಷ್ಣ.—ಇವರು ಅವರ ಮಂತ್ರಿಮಂಡಲದಲ್ಲಿ ಮಡಿವಂತ ಬ್ರಾಹ್ಮಣ.

ಶ್ರೀ ಎ. ಲಕ್ಷ್ಮೀಸಾಗರ್.—ತಾವು ಏನು ಹೇಳಿದಿರಿ ? ಯಾರಿಗೆ ಹೇಳಿದಿರಿ ?

ಶ್ರೀ ವೈ. ರಾಮಕೃಷ್ಣ.—ತಾವು ಈ ಲೋಕದಲ್ಲಿದ್ದೀರೋ ಅಥವಾ ಬೇರೆ ಲೋಕದಲ್ಲಿದ್ದೀರೋ ! ಈ ಪದ್ಧತಿಯಲ್ಲಿ ಎಷ್ಟು ಜನರಿದ್ದಾರೆ ಎಂಬುದನ್ನು ಇಲ್ಲಿ ಹೇಳಿದೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಲಕ್ಷ್ಮೀಸಾಗರ್‌ರವರು ಮಡಿವಂತ ಬ್ರಾಹ್ಮಣರು ಅವರು ಮದುವೆಗೆ ಹೋಗಲಿಲ್ಲ. ಅಲ್ಲಿ ಹೋಗಿ ಶುದ್ಧಿ ಮಾಡಬೇಕಾಗಿತ್ತು.

ಶ್ರೀ ಎ. ಲಕ್ಷ್ಮೀಸಾಗರ್.—ಬೇರೆಯವರು ಮಾಡಿದ ಗಲೀಜನ್ನು ಸಗಣಿ ಹಾಕಿ ಸಾರಿಸುವ ಕೆಲಸವನ್ನು ನಾನು ಮಾಡಬೇಕಾಗಿದೆ.

ಶ್ರೀ ಎಂ. ವೀರಪ್ಪಮೊಯ್ಲಿ.—೫೨ ದೇವದಾಸಿಯರಿಗೆ ಮದುವೆಯನ್ನು ಮಾಡಿಸಿದ್ದು ಬಹಳ ಒಳ್ಳೆಯ ಕೆಲಸ. ಆದರೆ ಅದರಲ್ಲಿ ನೀವು ಭಾಗವಹಿಸಲಿಲ್ಲವಲ್ಲಾ !

ಒಬ್ಬ ಮಾನ್ಯ ಸದಸ್ಯರು.—ಸ್ವಾಮಿ, ನೀವು ಬೆಂಗಳೂರು ನಗರದಲ್ಲಿರುವ ದೇವದಾಸಿಯರ ಬಗ್ಗೆ ಹೇಳುತ್ತಿದ್ದೀರೋ ಅಥವಾ ಆಂಧ್ರದಿಂದ ಬರತಕ್ಕ ದೇವದಾಸಿಯರ ಬಗ್ಗೆ ಹೇಳುತ್ತಿದ್ದೀರೋ ?

SRI. Y. RAMAKRISHNA.—This Sub-Inspector was able to provide assistance well in time. ದೇವದಾಸಿ ಪದ್ಧತಿಗೆ ಇವರು ಪೂಜೆ ಮಾಡುತ್ತಿದ್ದಾಗ ಅಲ್ಲಿದ್ದ ೩ ಜನ ದೇವದಾಸಿಯರನ್ನೂ ಅರೆಸ್ಟ್ ಮಾಡಿಕೊಂಡು ಬಂದು ಅವರಿಗೆ ಮದುವೆ ಮಾಡಿಸಿದ್ದಾರೆ. ಆದ್ದರಿಂದ ಅವರನ್ನು ಶ್ಲಾಘಿಸುತ್ತಿದ್ದೇನೆ. ಕಾನೂನು ಅಡಿಯಲ್ಲಿ ನೀವು ಕೈಹಾಕಿ ಕೆಲಸಮಾಡಿದರೆ ಒಳ್ಳೆಯದಾಗುತ್ತದೆ. It is a still more compliment any work. I congratulate even that officer.

ಶ್ರೀಮತಿ ಚಂದ್ರಪ್ರಭಾ ಅರಸು.—ಅದೇ ರೀತಿ ಜನರೂ ಕೂಡ ಕೈಹಾಕಬೇಕು.

ಶ್ರೀ ವೈ. ರಾಮಕೃಷ್ಣ.—ಈ ಒಂದು ದೇವದಾಸಿ ಪಿಡುಗು ಹುಟ್ಟಿರುವುದು ನಮ್ಮ ಸಮಾಜದಿಂದ. ಆದ್ದರಿಂದ ಈ ಸಮಾಜವನ್ನೇ ಏತಕ್ಕೆ ಹೊಣೆಗಾರ ಎಂದು ಮಾಡಬಾರದೆಂದು ನಮ್ಮ ವಾದ. ತಾವು ಏನು ಮಾಡಿದ್ದೀರಿ ? ನಾನು ತಮ್ಮಲ್ಲಿ ಬಹಳ ನಮ್ರತೆಯಿಂದ ಕೇಳಿಕೊಳ್ಳುತ್ತಿದ್ದೇನೆ. I entirely agree with the Hon'ble Minister. This protfolio was successively held by the ladies. ಇದಕ್ಕೆ ಮೊದಲು ಈ ಖಾತೆಯನ್ನು ಮನೋರಮ ಮಧ್ವರಾಜ್‌ರವರು, ಶ್ರೀಮತಿ ಯಶೋಧರಮ್ಮ ದಾಸಪ್ಪನವರು. It is the monopoly of the Hon'ble ladies to hold this portfolio with the expectattaion that they would do something better.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಪಿ. ವೆಂಕಟರಮಣರವರೂ ಕೂಡ ಕೆಲವು ದಿವಸ ಈ ಖಾತೆಯ ಸಚಿವರಾಗಿದ್ದರು.

ಶ್ರೀ ವೈ. ರಾಮಕೃಷ್ಣ.--ಅವರನ್ನು ಬಿಡಿ. ಒಟ್ಟಿನಲ್ಲಿ ಈ ಖಾತೆಯನ್ನು ಬಹಳಮಟ್ಟಿಗೆ ಮಹಿಳೆಯರೇ ನೋಡಿಕೊಳ್ಳುತ್ತಿದ್ದರು. ಕೇಂದ್ರ ಸರ್ಕಾರದ ಯೋಜನೆಯ ಪ್ರಕಾರ ಪ್ರತಿ ೫೦೦ ಜನ ಇರುವ ಕಡೆ ಒಂದೊಂದು ಮಹಿಳಾ ಮಂಡಲಗಳನ್ನು ರಚನೆ ಮಾಡಬೇಕೆಂದು ಇದೆ. ಈ ಯೋಜನೆಗೆ ಕೇಂದ್ರಸರ್ಕಾರದವರೇ ಹಣವನ್ನು ಕೊಡುತ್ತಾರೆ. ಆದರೆ ಇದರ ಜವಾಬ್ದಾರಿಯನ್ನು ನೀವು ತೆಗೆದು ಕೊಳ್ಳಬೇಕು. You must recognise them. You must entrust them with the responsibility. The responsibility of running this destitutes Homes. Orphan ages should be entrusted to these "Mahilamandals."

೫೦೦ ಜನಸಂಖ್ಯೆ ಇರತಕ್ಕಂಥ ಕಡೆಗೂ ಕೂಡ ಒಂದೊಂದು ಮಹಿಳಾ ಮಂಡಲಿಯನ್ನು ತೆಗೆದು ಒಂದೊಂದು ಸಾವಿರ ರೂಪಾಯಿಗಳನ್ನು ಕೊಟ್ಟರೆ ಅದರಿಂದ ಆಗತಕ್ಕಂಥ ಕೆಲಸವಾದರೂ ಏನು ? ಒಂದೊಂದು ಮಹಿಳಾ ಮಂಡಳಿಗೆ ೧೦-೧೦ ಸಾವಿರ ರೂಪಾಯಿಗಳನ್ನಾದರೂ ಕೊಡತಕ್ಕಂಥ ಒಂದು ತೀರ್ಮಾನವನ್ನು ತಾವು ತೆಗೆದುಕೊಳ್ಳಿ.

ಇನ್ನು ಈ ಡಿಪಾರ್ಟ್‌ಮೆಂಟನ್ನು ರೀಆರ್ಗನೈಸ್ ಮಾಡುವ ಬಗ್ಗೆ ತೀರ್ಮಾನವನ್ನು ತೆಗೆದು ಕೊಂಡಿತ್ತು. ಇದನ್ನು ರೀಆರ್ಗನೈಸ್ ಮಾಡುವುದಕ್ಕೆ ಏತಕ್ಕೆ ತಡವಾಗುತ್ತಿದೆ ? ಪಂಜಾಬ್‌ನಲ್ಲಿ ರೀಆರ್ಗನೈಸ್ ಮಾಡಿರುತ್ತಾರೆ. ಮಹಾರಾಷ್ಟ್ರದಲ್ಲಿಯೂ ಕೂಡ ರೀಆರ್ಗನೈಸ್ ಮಾಡಿರುತ್ತಾರೆ. ಅಡ್ಮಿನಿಸ್ಟ್ರೇಷನ್, ಪ್ರೈಸ್ ರೈಸ್, ಡೌರಿ ಡೆತ್ಸ್ ಇದೆಲ್ಲಾ ಸಮಸ್ಯೆಗಳೂ ಇವೆ. ಮಾನ್ಯ ಲಕ್ಷ್ಮೀಸಾಗರ್ ರವರು ಅವರೇ ಇದನ್ನೆಲ್ಲವನ್ನೂ ಇಟ್ಟುಕೊಳ್ಳಬಹುದಾಗಿತ್ತು. ಏತಕ್ಕೆಂದರೆ ಅವರು ಲಾ ಮಿನಿಸ್ಟರ್ ಆಗಿರುತ್ತಾರೆ. ಇಷ್ಟು ಕಾನೂನುಗಳು ಇದ್ದರೂ ಸರಿಯಾಗಿ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ. ದಯವಿಟ್ಟು ತಾವು ಇದನ್ನು ಅರ್ಥಮಾಡಿಕೊಳ್ಳಬೇಕು. ಇದೆಲ್ಲಾ ಜವಾಬ್ದಾರಿಗಳನ್ನು ಮಹಿಳಾ ಮಂಡಲಿಗಳಿಗೆ ಏತಕ್ಕೆ ಒಪ್ಪಿಸಬಾರದು ಎಂದು ಬಹಳ ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ. ಇವೊತ್ತು ನಿರ್ಗತಿಕ ವಿಧವೆಯರಿಗೆ ೫೦ ರೂಪಾಯಿಗಳ ಪೆನ್‌ಷನ್ ಕೊಡತಕ್ಕಂಥ ಯೋಜನೆಯನ್ನು ಜಾರಿಗೆ ತಂದಿದ್ದೇವೆಂದು ಹೇಳಿರುತ್ತೀರಿ. ಆದರೆ ಅಷ್ಟಕ್ಕೆ ಆಗಲಿಲ್ಲ. ಸಮಸ್ಯೆ ಏನು ಎಂಬುದನ್ನು ಸಮಾಜದ ಒಳಹೊಕ್ಕು ನೋಡಿದರೆ ಬಾವಿ ಎಷ್ಟು ಆಳವಾಗಿರುತ್ತದೋ ಸಮಸ್ಯೆಗಳೂ ಕೂಡ ಅಷ್ಟೇ ಆಳವಾಗಿರುತ್ತವೆ ಅದನ್ನು ಅರ್ಥಮಾಡಿಕೊಂಡು ಕೆಲಸ ಮಾಡಬೇಕು. ಆಗ ಮಾತ್ರ ಸಮಾಜಕ್ಕೆ ಒಳ್ಳೆಯದಾಗುತ್ತದೆ. ಅದಕ್ಕಾಗಿ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನ್ನು ರೀಆರ್ಗನೈಸ್ ಮಾಡಬೇಕೆಂದು ನಾನು ಹೇಳುತ್ತೇನೆ. ಈ ಇಲಾಖೆಯನ್ನು ಗಂಡಸರ ಕೈಗೆ ಕೊಟ್ಟರೆ ಪಾಲಿಟಿಕ್ಸ್ ಮಾಡುತ್ತಾರೆಂದೇ ಮಹಿಳೆಯರಿಗಾಗಿಯೇ ಇದನ್ನು ಮೀಸಲಿಡಲಾಗಿದೆ. ಮಹಿಳೆಯರು ಆದರೆ ಬಹಳ ಚೆನ್ನಾಗಿ ಕೆಲಸ ಮಾಡುತ್ತಾರೆ ಎನ್ನುವ ಉದ್ದೇಶದಿಂದಲೇ It should be exclusively reserved for women. ಡೌರಿ ಕೇಸಸ್, ಇದನ್ನು ಏತಕ್ಕೆ ಹೇಳುತ್ತಿದ್ದೇವೆಂದರೆ ಪಾಶ್ಚಿಮಾತ್ಯ ದೇಶಗಳಲ್ಲಿ ಇರತಕ್ಕಂಥದ್ದು ಬೇರೆ. ರೋಟರಿ ಕ್ಲಬ್, ಸೆಂಟ್ ಜಾನ್ ಆಂಬುಲೆನ್ಸ್, ಟ್ಯುಬರ್‌ಕ್ಯುಲೇಸಿಸ್ ಅಸೋಸಿಯೇಷನ್ ಇರತಕ್ಕಂಥದ್ದು ಇದೆಲ್ಲವನ್ನು ಇದರಲ್ಲಿ ಸೇರಿಸುವುದಕ್ಕೆ ತಾವು ಆಲೋಚನೆ ಮಾಡಿ. ಅದನ್ನು ಬಿಟ್ಟು, ಮೆಡಿಕಲ್ ಕಾಲೇಜುಗಳನ್ನು ತೆಗೆಯುವುದಕ್ಕೆ ಎಷ್ಟು ಉತ್ಸಾಹ ? ಇಂಜಿನಿಯರಿಂಗ್ ಕಾಲೇಜುಗಳನ್ನು ತೆಗೆಯುವುದಕ್ಕೆ ಎಷ್ಟು ಉತ್ಸಾಹ ? ಬಿ.ಎಡ್ ಕಾಲೇಜುಗಳನ್ನು, ಪ್ರೈವೇಟ್ ಸ್ಕೂಲುಗಳನ್ನು ತೆಗೆಯುವುದಕ್ಕೆ ಎಷು ಉತ್ಸಾಹ ? ಇದೇ ಉತ್ಸಾಹವನ್ನು ಸೋಷಿಯಲ್ ಆರ್ಗನೈಸೇಷನ್ ಇನ್‌ಸ್ಟಿಟ್ಯೂಷನ್‌ಗಳನು ತೆಗೆಯಲಿಕ್ಕೆ ಪ್ರಯತ್ನ ಮಾಡುತ್ತಿಲ್ಲ. ಏತಕ್ಕೆಂದರೆ ಇದು ಲಾಭದಾಯವಾದುದಲ್ಲ. ಲಾಭದಾಯಕವಾಗಿರುವಂಥ ಕಡೆ ಮಾತ್ರ ನೂಕುನುಗ್ಗಲು. ನಿಜವಾಗಿಯೂ ಸಂಘ ಸಂಸ್ಥೆಗಳ ಮುಖಾಂತರ ಗಾಢವಾದ ಸೇವೆಯನ್ನು ಸಲ್ಲಿಸಲು ಯಾರು ಮುಂದೆ ಬರುತ್ತಾರೋ ಅವರಿಗೆ ಕೊಡಿ. ಯಾರುಯಾರು ಮೆಡಿಕಲ್ ಕಾಲೇಜುಗಳನ್ನು ರನ್ ಮಾಡುತ್ತಿರುತ್ತಾರೋ ಇಂಜಿನಿಯರಿಂಗ್ ಕಾಲೇಜುಗಳನ್ನು ನಡೆಸುತ್ತಿರುತ್ತಾರೋ ಅವರಿಗೆ ಈ ಒಂದು ಜವಾಬ್ದಾರಿಯನ್ನು ಹೊರಿಸಿ. ಇಂಜಿನಿಯರಿಂಗ್ ಕಾಲೇಜುಗಳನ್ನು ನಡೆಸತಕ್ಕಂಥವರಿಗೆ ಇದನ್ನು ಅಟ್ಯಾಚ್ ಮಾಡಿ, ಪ್ರೈವೇಟ್ ಕಾಲೇಜಸ್‌ಗಳನ್ನು ನಡೆಸತಕ್ಕಂಥವರಿಗೆ ಅಟ್ಯಾಚ್ ಮಾಡಿ Why should they not take up these responsibilities

of eradicating these social evils prevailing in the society? ಇದೆಲ್ಲಾ ಬಹಳವಾಗಿ ಆಲೋಚನೆ ಮಾಡತಕ್ಕಂತ ಸಮಸ್ಯೆಗಳು. ತಾವು ಕೊಟ್ಟಿರತಕ್ಕಂಥ ವರದಿಯ ಪ್ರತಿಯೊಂದು ಪೇಜನ್ನು ನಾನು ಓದಿದ್ದೇನೆ. ಅಧಿಕಾರಿಗಳು ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡಬೇಕಾದರೆ ಇನ್‌ಸೆಂಟೀವ್ ಡಿಕ್ಲೇರ್ ಮಾಡಿ. ಯಾರು ಪೋಲೀಸ್ ಅಧಿಕಾರಿಗಳು ಸಾಮಾಜಿಕ ಭದ್ರತೆಯ ವಿಚಾರದಲ್ಲಿ ಕೆಲಸ ಚೆನ್ನಾಗಿ ಮಾಡಿರುತ್ತಾರೋ ಅಂತವರಿಗೆ ರಾಷ್ಟ್ರ ಪ್ರಶಸ್ತಿಯನ್ನು ಕೊಡುತ್ತೇವೆಂದು ಹೇಳಿ. ಒಂದು ಹೌಸ್ ಸೈಟ್ ಗ್ರ್ಯಾಂಟ್ ಮಾಡುತ್ತೇವೆಂದು ಹೇಳಿ, ಮನೆಯನ್ನು ಕಟ್ಟಿಸಿಕೊಡುತ್ತೇವೆಂದು ಡಿಕ್ಲೇರ್ ಮಾಡಿ. ಪೋಲೀಸ್ ಅಧಿಕಾರಿಗಳು ಹೆಚ್ಚಿನ ರೀತಿಯಲ್ಲಿ ಸಾಮಾಜಿಕ ಭದ್ರತೆಯನ್ನು ಕಾಪಾಡುವುದಕ್ಕೋಸ್ಕರವಾಗಿ ಪ್ರಾಮಾಣಿಕವಾಗಿ ಕೆಲಸ ಮಾಡಿದವರಿಗೆ ಇನ್‌ಸೆಂಟೀವ್ ಕೊಡುತ್ತೇನೆ ಎಂದರೆ ನಿಜವಾಗಿಯೂ ಬಹಳ ಚೆನ್ನಾಗಿ ಕೆಲಸ ಮಾಡುತ್ತಾರೆಂದು ನಾನು ಭಾವಿಸಿರುತ್ತೇನೆ.

ಮಾನ್ಯ ಅಧ್ಯಕ್ಷರೇ ಮತ್ತೊಂದು ವಿಚಾರವನ್ನು ಸಭೆಯ ಗಮನಕ್ಕೆ ತರಲು ಇಚ್ಛೆಪಡುವುದೇನೆಂದರೆ ನಮ್ಮ ಮಾನ್ಯ ಸಚಿವೆಯರು ಹೇಳಿದ್ದಾರೆ. ಕಳೆದ ಸಾರಿ ಅವರು ಭಾಷಣ ಮಾಡುತ್ತಾ ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಬಸವಣ್ಣನವರ ಕಾಲದಿಂದ ಹಿಡಿದು ಹೇಳಿದ್ದಾರೆ. ಬಹಳ ಸಂತೋಷ ಅವರು ಒಂದು ಕ್ರಾಂತಿಕಾರಕವಾದ ಮನೋಭಾವವನ್ನು ವ್ಯಕ್ತಪಡಿಸಿದ್ದಾರೆ. ಕ್ರಾಂತಿಕಾರಕವಾದ ಮನೋಭಾವವನ್ನು ವ್ಯಕ್ತಪಡಿಸಿದ ಮೇಲೆ ಇತ್ತೀಚೆಗೆ ಯಾಕೋ ಸೈಲೆಂಟ್ ಆಗಿಬಿಟ್ಟಿದ್ದಾರೆ. ಅದನ್ನು ಹೇಳಿದರೆ ಬಹಳ ಚೆನ್ನಾಗಿರುತ್ತದೆ. ಡಾ. ತಿಮ್ಮೇಗೌಡರು ಈ ಸಂದರ್ಭದಲ್ಲಿ ಇದಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ಏತಕ್ಕೆಂದರೆ ಅವರು ಯಾವಾಗಲೂ ನೀವೇನು ಮಾಡಿದಿರಿ ನಿಮ್ಮ ಸರ್ಕಾರ ಇದ್ದಾಗ ಏನು ಮಾಡಿದರು ಎಂದು ಪದೇ ಪದೇ ಕೇಳುತ್ತಿದ್ದರು. ಹರಿಜನ ಸಮಸ್ಯೆ ಎಂದರೆ ಇದು ಪಕ್ಷ ಭೇದವಿಲ್ಲದೆ ಮಾಡಬೇಕಾದ ಕೆಲಸ. ಆ ಪಕ್ಷವೇ ಇರಲಿ, ಈ ಪಕ್ಷವೇ ಇರಲಿ, ಯಾವ ಪಕ್ಷವೇ ಇರಲಿ The entire House is one in tackling the problem of untouchability and extending relief to deserving persons. ಈ ಒಂದು ಮನೋಭಾವವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಕೆಲವಾರು ಸೂಚನೆಗಳನ್ನು ಕೊಡಲಿಕ್ಕೆ ನಾನು ಇಚ್ಛೆಪಡುತ್ತೇನೆ.

ಮೊಟ್ಟಮೊದಲನೆಯದಾಗಿ, ಅಡ್ಮಿನಿಸ್ಟ್ರೇಷನ್‌ನ್ನು ರೀಆರ್ಗನೈಸ್ ಮಾಡಬೇಕು. ಇದು ಬಹಳ ದಿವಸಗಳಿಂದಲೂ ಇದೆ, ಇದಕ್ಕೆ ಕಾರಣವೇನೆಂದರೆ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್, ಅನಿಮಲ್ ಹಸ್‌ಬೆಂಡರಿ, ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್ ಉಳಿದ ಎಲ್ಲಾ ಡಿಪಾರ್ಟ್‌ಮೆಂಟ್‌ಗಳಿಗೆ ಒಂದು ಕಾನೂನು ಆದರೆ ಇದಕ್ಕೆ ಒಂದು ಕಾನೂನು. ನಮ್ಮ ಕಾಲದಲ್ಲಿ ಡಿಕ್ಲೇರ್ ಮಾಡಿದ್ದೆವು, ಡಿಸ್ಟ್ರಿಕ್ಟ್ ಸೋಷಿಯಲ್ ವೆಲ್‌ಫೇರ್ ಆಫೀಸರ್‌ಗಳ ಹುದ್ದೆಯನ್ನು ಅಪ್‌ಗ್ರೇಡ್ ಮಾಡಿದ್ದೆವು, ಅವರಿಗೆ ಇನ್‌ಸೆಂಟೀವ್ ಕೊಡಬೇಕೆಂದು ಹೇಳಿ ಕ್ಲಾಸ್ ಒನ್ ಕೂಡ ಮಾಡಿದ್ದೆವು. ಆದ್ದರಿಂದ You have to make him independent and not to work under the control of the Deputy Commissioner ಅವರು ಡೆಪ್ಯುಟಿ ಕಮಿಷನರ್ ಅಧೀನದಲ್ಲಿ ಕೆಲಸ ಮಾಡತಕ್ಕಂತದ್ದು ಇತ್ತು. He has to preside over about 22 committees. ಇಷ್ಟೊಂದು ಕೆಲಸಗಳನ್ನು ಇಟ್ಟುಕೊಂಡು ಅವರ ಸೋಷಿಯಲ್ ವೆಲ್‌ಫೇರ್ ಕೆಲಸವನ್ನು ಹೇಗೆ ಮಾಡುತ್ತಾರೆಂದು ಹೇಳಿ? ಅದಕ್ಕೋಸ್ಕರವಾಗಿಯೇ ನಾವು ಪ್ರತ್ಯೇಕವಾಗಿ ಒಂದು ಇಲಾಖೆಯನ್ನು ಮಾಡಬೇಕೆಂದು ಹೇಳಿ ಸೋಷಿಯಲ್ ವೆಲ್‌ಫೇರ್ ಆಫೀಸರನ್ನು ಕ್ಲಾಸ್ ಒನ್ ಪೋಸ್ಟ್ ಮಾಡಿದೆವು. The Social Welfore Officers post was upgraded to Class I and now he should work under the Director of Social Welfare and not under the control of Deputy Commissioner. ತಾವು ಇತ್ತೀಚೆಗೆ ಏತಕ್ಕೋ ಇದನ್ನು ಇಷ್ಟಕ್ಕೆ ನಿಲ್ಲಿಸಿ ಬಿಟ್ಟಿದ್ದೀರಿ. ಅವರುಗಳಿಗೆ ಪ್ರಮೋಷನ್ ಕೊಟ್ಟು ಎಲ್ಲೆಲ್ಲಿಗೆ ಹಾಕಬೇಕೋ ಅಲ್ಲಲ್ಲಿಗೆ ಹಾಕಿ. ಅಸಿಸ್ಟೆಂಟ್ ಡೆಪ್ಯುಟಿ ಕಮೀಷನರ್ ಕ್ಲಾಸ್-ಒನ್ ಆಫೀಸರ್ ಆಗಿ ಪೋಸ್ಟ್ ಮಾಡಿ. ಕೆಳದರ್ಜೆಯಲ್ಲಿ ಯಾರು ಕೆಲಸ ಮಾಡುತ್ತಿದ್ದಾರೆ ಅವರಿಗೆ ಪ್ರಮೋಷನ್ ಕೊಟ್ಟು ಸೂಪರಿಂಟೆಂಡೆಂಟ್ ಆಗಿ ಕೆಲಸ ಮಾಡಿದ್ದರೆ, ಮ್ಯಾನೇಜರ್ ಆಗಿ ಕೆಲಸ ಮಾಡಿದ್ದರೆ ಅವರಿಗೆ ಮೆರಿಟ್ ಮೇಲೆ, ಸೀನಿಯಾರಿಟಿ ಮೇಲೆ ಅವರ ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್ ಅನ್ನು ತರಿಸಿಕೊಂಡು ಅವರಿಗೆ ಪ್ರಮೋಷನ್ ಕೊಡಿ. ಈ ಡಿಪಾರ್ಟ್‌ಮೆಂಟನ್ನು ಇತರ ಡಿಪಾರ್ಟ್‌ಮೆಂಟ್‌ಗಳನ್ನು ಯಾವರೀತಿ ರೀಆರ್ಗನೈಸ್ ಮಾಡಿರುತ್ತಾರೆ ಆರೀತಿ ಮಾಡಿ.

ಎರಡನೆಯದಾಗಿ ತಾವು ಕಳೆದ ಭಾಷಣದಲ್ಲಿ ಸೋಷಿಯಲ್ ವೆಲ್‌ಫೇರ್ ಇನ್‌ಸ್ಪೆಕ್ಟರ್‌ರವರಿಗೆ ೮೬೦ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದಿರಿ. ಅವರಿಗೆ ಜವಾಬ್ದಾರಿ ಬಹಳ ಕಡಿಮೆ ಇದೆ. ಅವರಿಗೆ ಇನ್ನೂ ಹೆಚ್ಚಿನ ಜವಾಬ್ದಾರಿಯನ್ನು ಕೊಟ್ಟು ಎಕ್ಸ್‌ಟೆನ್‌ಷನ್ ಆಫೀಸರ್ ಆಗಿ ಮಾಡಿಕೊಡುತ್ತೇವೆಂದು ಹೇಳಿದ್ದಿರಿ. ಇದುವರೆವಿಗೂ ಗೌವರ್ನಮೆಂಟ್ ಆರ್ಡರ್ ಬಂದಿಲ್ಲ. ಇದು ಯಾವಾಗ ಮಾಡುತ್ತೀರಿ ದಯವಿಟ್ಟು ಹೇಳಬೇಕು. ಎಕ್ಸ್‌ಟೆನ್‌ಷನ್ ಆಫೀಸರ್ ಪ್ರಮೋಷನ್ ಕೊಟ್ಟು ಅವರಿಗೆ ಏನೇನು ಜವಾಬ್ದಾರಿಯನ್ನು ವಹಿಸಬೇಕೋ ಅದನ್ನೆಲ್ಲಾ ವಹಿಸಿದರೆ ಕೆಲಸ ಮಾಡಲಿಕ್ಕೆ ಅವಕಾಶವಾಗುತ್ತದೆ. ವಂತ್ತೆ ಡಿಪಾರ್ಟ್‌ಮೆಂಟನ್ನು ರೀಆರ್ಗನೈಸ್ ಮಾಡಿದರೆ ಒಂದು ಹೊಸ ಚೈತನ್ಯ ಬರುತ್ತದೆ. ಡಿಪಾರ್ಟ್‌ಮೆಂಟ್‌ಗೆ ಚೈತನ್ಯ ಬಂದರೆ ಕೆಲಸ ಸರಿಯಾಗಿ ಆಗುತ್ತದೆ. ಅನೇಕ ಮಾನ್ಯ ಮುಖ್ಯ ಮಂತ್ರಿಗಳು ಆಗಿಹೋಗಿದ್ದಾರೆ. ಬಹುಶಃ ಇವೊತ್ತು ಅವರನ್ನು ಯಾರೂ ಮರೆಯುವಂತಿಲ್ಲ. ಅವರನ್ನೆಲ್ಲಾ ನೆನಸಿಕೊಳ್ಳಬೇಕಾಗಿದೆ. ಯಾವ ಮಾನ್ಯ ಮುಖ್ಯಮಂತ್ರಿಗಳೂ ಕೂಡ ಹರಿಜನರ ವಿರುದ್ಧವಾಗಿ ಕೆಲಸ ಮಾಡಿಲ್ಲ, ಅವರನ್ನು ಯಾರೂ ಕಡೆಗಣಿಸಿಲ್ಲ. ಕೆಲವರು ಕಡಿಮೆ ಮಾಡಿರಬಹುದು, ಕೆಲವರು ಜಾಸ್ತಿ ಮಾಡಿರಬಹುದು. ಮಾನ್ಯ ಕೆ. ಸಿ. ರೆಡ್ಡಿಯವರಿಂದ ಹಿಡಿದು, ವಂತ್ತು ಮಾನ್ಯ ರಾಜವರ್ಧನ್ ಅವರ ತಂದೆಯವರಾದ ಚೆನ್ನಿಗರಾಮಯ್ಯನವರು ಮಂತ್ರಿಗಳಾಗಿದ್ದಾಗ ಹೌಸಿಂಗ್ ಸ್ಕೀಮನ್ನು ಜಾರಿಗೆ ತಂದರು. ಅವರಾದ ಮೇಲೆ ಮಾನ್ಯ ಜತ್ತಿಯವರು ಬಂದರು. I think it is the period which no one can forget. ಅವರ ಕಾಲದಲ್ಲಿ ೧೦೦ ಹಾಸ್ಟಲ್‌ಗಳನ್ನು ತೆಗೆದರು. All programmes were diverted towards Education. ಮಾನ್ಯ ಹನುಮಂತಯ್ಯನವರ ಕಾಲದಲ್ಲಿ ಡಿಪಾರ್ಟ್‌ಮೆಂಟಿನಲ್ಲಿ ಸ್ಪೆಷಲ್ ರೆವಿನ್ಯೂ ಡಿಪಾರ್ಟ್‌ಮೆಂಟ್ ಎಂದು ಮಾಡಿ ರೆವಿನ್ಯೂ ಇನ್‌ಸ್ಪೆಕ್ಟರ್‌ಗಳನ್ನು ಅಪಾಯಿಂಟ್ ಮಾಡಿದರು. ಅವರಾದ ಮೇಲೆ ಮಾನ್ಯ ವೀರೇಂದ್ರ ಪಾಟೀಲ್‌ರವರು ಬಂದರು. ಅವರ ಕಾಲದಲ್ಲಿ ಮಾನ್ಯ ಬಿ. ರಾಚಯ್ಯನವರು ಅವರ ಮಂತ್ರಿಮಂಡಲದಲ್ಲಿ ಇದ್ದರು.

ಆ ಸಮಯದಲ್ಲಿ ಸುಮಾರು ೫ ಲಕ್ಷ ಎಕರೆ ಜಮೀನನ್ನು ಹರಿಜನರಿಗೆ ಹಂಚಲಾಯಿತು. ಅವರ ಕಾಲದಲ್ಲಿ ಖಾಸಗಿ ಮೆಡಿಕಲ್ ಕಾಲೇಜುಗಳಿಗೂ ಸಹ ರಿಜರ್ವೇಷನನ್ನು ವಿಸ್ತರಿಸಲಾಯಿತು. ಅವರ ನಂತರ ಶ್ರೀ ದೇವರಾಜ ಅರಸ್ ಅವರು ಮುಖ್ಯ ಮಂತ್ರಿಗಳಾದರು. ಇವರು ಹರಿಜನರಿಗಾಗಿ ಮತ್ತು ಹಿಂದುಳಿದ ವರ್ಗದವರಿಗಾಗಿ ಮಾಡಿದಂಥ ಅದ್ಭುತ ಕೆಲಸಕಾರ್ಯಗಳನ್ನು ಯಾರೂ ಸಹ ಮರೆಯುವಂತಿಲ್ಲ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ತಾವು ಶ್ರೀ ನಿಜಲಿಂಗಪ್ಪನವರ ಹೆಸರನ್ನು ಏತಕ್ಕೆ ಕೈಬಿಟ್ಟಿರಿ ?

ಶ್ರೀ ವೈ. ರಾಮಕೃಷ್ಣ.—ನಾನು ಅವರ ಹೆಸರನ್ನು ಕೈಬಿಡಲಿಲ್ಲ. ಅವರ ಕಾಲದಲ್ಲಿ ಹರಿಜನರಿಗಾಗಿಯೇ ಪ್ರತ್ಯೇಕ ಹಾಸ್ಟಲ್‌ಗಳಿರಬಾರದು ಹಾಗೂ ಪ್ರತ್ಯೇಕ ಕಾಲೋನಿಗಳಿರಬಾರದೆಂಬ ತೀರ್ಮಾನವನ್ನು ತೆಗೆದುಕೊಂಡು, ಅದನ್ನು ಅನುಷ್ಠಾನದಲ್ಲಿ ತೆಗೆದುಕೊಂಡು ಬಂದರು. ಆ ಸಮಯದಲ್ಲಿದ್ದ ಹರಿಜನರ ಹಾಸ್ಟಲ್‌ಗಳನ್ನು ಸಾರ್ವಜನಿಕ ವಿದ್ಯಾರ್ಥಿನಿಲಯಗಳೆಂದು ಪರಿಗಣಿಸಲಾಯಿತು. ಶ್ರೀ ದೇವರಾಜ ಅರಸ್ ಅವರು ಮುಖ್ಯ ಮಂತ್ರಿಗಳಾದ ಸಮಯದಲ್ಲಿ ವಿಶೇಷ ತರಹದ ಒಂದು ಕ್ರಾಂತಿ ನಡೆಯಿತು. ಅಲ್ಲಿಂದೀಚೆಗೆ ಏನೇನು ನಡೆಯಿತು ಎಂಬುದನ್ನು ನಾನು ವಿಶದವಾಗಿ ಹೇಳುತ್ತೇನೆ. ಈ ಹರಿಜನ ಮತ್ತು ಗಿರಿಜನರ ಸಮಸ್ಯೆಗಳನ್ನು ಬಗೆಹರಿಸಲು ಒಬ್ಬಿಬ್ಬರು ಮಂತ್ರಿಗಳ ಕೈಯಿಂದ ಆಗವುದಿಲ್ಲ. ಅಂದರೆ ನಾನು ಯಾರನ್ನೇ ಆಗಲಿ ಟೀಕೆ ಮಾಡಬೇಕೆಂದು ಈ ರೀತಿ ಹೇಳುತ್ತಿಲ್ಲ. ಈ ಜನರ ಸಮಸ್ಯೆಗಳನ್ನು ಬಗೆಹರಿಸಲು ಹತ್ತು ಜನ ಮಂತ್ರಿಗಳನ್ನು ನೇಮಕ ಮಾಡಿದರೂ ಸಹ ಒಬ್ಬೊಬ್ಬರ ಮನೆ ಮುಂದೆಯೂ ೫೦೦ ಜನರು ತಮ್ಮ ಕಷ್ಟಗಳನ್ನು ಹೇಳಿಕೊಳ್ಳಲು ನಿಂತಿರುತ್ತಾರೆ. ಮಾನ್ಯ ಚಂದ್ರಶೇಖರ್ ಅವರ ಮನೆ ಮುಂದೆಯೂ ಸಹ ಕೆಲವರು ಸೈಟ್ ಬೇಕೆಂದು ಕೇಳಲು ನಿಂತುಕೊಳ್ಳಬಹುದು. ಆದರೆ ಹರಿಜನ ಮಂತ್ರಿಗಳ ಹತ್ತಿರ ಅನ್‌ಟಚಬಿಲಿಟಿ ಕೇಸ್ ಬಗ್ಗೆ, ಹೊಲದಿಂದ ತಮ್ಮನ್ನು ಭೂಮಾಲೀಕರು ಓಡಿಸಿದ ಬಗ್ಗೆ, ಪ್ರಮೋಷನ್ ಸಿಗದ ಬಗ್ಗೆ, ಮನೆ ಅಲಾಟ್ ಮಾಡದ ಬಗ್ಗೆ, ದೂರದ ಜಾಗಕ್ಕೆ ವರ್ಗ ಮಾಡಿರುವ ಬಗ್ಗೆ ಹೀಗೆ ಹಲವಾರು ಸಮಸ್ಯೆಗಳನ್ನು ಹೇಳಿಕೊಳ್ಳಲು ಜನರು ಹೋಗುತ್ತಾರೆ. ದಿನಬೆಳಗಾದರೆ ಇಂತಹ ಹಲವಾರು ಸಮಸ್ಯೆಗಳನ್ನು ಹೊತ್ತುಕೊಂಡು ಈ ಮಂತ್ರಿಗಳ ಹತ್ತಿರ ಜನರು ಹೋಗುತ್ತಾರೆ. ಆದ್ದರಿಂದ ಇವರ ಸಮಸ್ಯೆಗಳನ್ನು ಬಗೆಹರಿಸಲು ಹತ್ತು ಜನ ಮಂತ್ರಿಗಳನ್ನು ನೇಮಕ ಮಾಡಿದರೂ ಸಹ ಸಾಕಾಗುವುದಿಲ್ಲ. ಈ ಜನರ ಒಂದು ಸಂಖ್ಯಾಬಲಕ್ಕೆ

ಅನುಗುಣವಾಗಿ ಶ್ರೀ ದೇವರಾಜ ಅರಸ್ ಅವರ ಮಂತ್ರಿಮಂಡಲದಲ್ಲಿ ಮಂತ್ರಿಗಳಿದ್ದರು. ಅವರ ಮಂತ್ರಿಮಂಡಲದಲ್ಲಿ ಶ್ರೀ ರಂಗನಾಥ್, ಶ್ರೀ ಬಸವಲಿಂಗಪ್ಪ, ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ, ಶ್ರೀ ಎನ್. ರಾಚಯ್ಯ, ಶ್ರೀ ಕೆ. ಪ್ರಭಾಕರ್, ಶ್ರೀ ಎಂ. ಶಿವಣ್ಣ, ಶ್ರೀ ಕಿತ್ತೂರ್, ಶ್ರೀ ರಾಥೋಡ್ ಮುಂತಾದ ಅನೇಕ ಜನ ಮಂತ್ರಿಗಳಿದ್ದರು. ಅವರ ಕಾಲದಲ್ಲಿ ವಿದ್ಯಾ ಇಲಾಖೆಯಲ್ಲಿ ೧೮ ಪರ್ಸೆಂಟ್ ಹುದ್ದೆಗಳನ್ನು ಭರ್ತಿ ಮಾಡಲು ಸ್ಪೆಷಲ್ ರೆಕ್ರೂಟ್‌ಮೆಂಟ್ ಮಾಡಲಾಯಿತು. ಈಗ ಆಂಧ್ರದಲ್ಲಿಯೂ ಸಹ ಇದೇರೀತಿ ಮಾಡುತ್ತಿದ್ದಾರೆ. ವಿದ್ಯಾ ಇಲಾಖೆಯಲ್ಲಿ ಮಾಡಿದಂತೆ ಇತರ ಇಲಾಖೆಗಳಲ್ಲಿಯೂ ಮಾಡಬೇಕು. ಶ್ರೀಮತಿ ಚಂದ್ರಪ್ರಭಾ ಅರಸ್ ಅವರು ಸಹ ತಮ್ಮ ಇಲಾಖೆಯಲ್ಲಿ ಈ ರೀತಿ ಸ್ಪೆಷಲ್ ರೆಕ್ರೂಟ್‌ಮೆಂಟ್ ಮಾಡಿದರೆ, ಅದರ ಒಂದು ಕೀರ್ತಿ ತಮಗೇ ಸಲ್ಲುತ್ತದೆ. ಬಡ್ತಿ ಕೊಡುವಾಗಲೂ ಸಹ ಹರಿಜನ ಮತ್ತು ಗಿರಿಜನರಿಗೆ ರಿಜರ್ವೇಷನ್ ಇಡಬಹುದೆಂದು ಹೈಕೋರ್ಟಿನವರು ಮತ್ತು ಸುಪ್ರೀಂ ಕೋರ್ಟಿನವರು ಹೇಳಿದರೂ ಸಹ ಅದನ್ನು ಯಾವ ರಾಜ್ಯದಲ್ಲಿಯೂ ಜಾರಿಗೆ ತಂದಿರಲಿಲ್ಲ. ಆದರೆ ಶ್ರೀ ದೇವರಾಜ ಅರಸ್ ಅವರ ಕಾಲದಲ್ಲಿ ಇದನ್ನು ಮೊದಲ ಸಲ ಕರ್ನಾಟಕ ರಾಜ್ಯದಲ್ಲಿ ಜಾರಿಗೆ ತಂದರು. ಅವರ ಕಾಲದಲ್ಲಿ ಹರಿಜನ ಮತ್ತು ಗಿರಿಜನ ಫೈನಾನ್ಸ್ ಕಾರ್ಪೋರೇಷನ್ ಮತ್ತು ಬ್ಯಾಕ್‌ವರ್ಡ್–ಕ್ಲಾಸ್ ಫೈನಾನ್ಸ್ ಕಾರ್ಪೋರೇಷನ್ ರಚಿತವಾದುವು. ಇವುಗಳು ಯಾವ ರೀತಿ ಕೆಲಸ ಮಾಡುತ್ತಿವೆ ಎಂಬುದನ್ನು ಅನಂತರ ಹೇಳುತ್ತೇನೆ. ಆದೇ ಆಂಧ್ರ ಪ್ರದೇಶದಲ್ಲಿರುವಂತಹ ಹರಿಜನ ಮತ್ತು ಗಿರಿಜನ ಫೈನಾನ್ಸ್ ಕಾರ್ಪೋರೇಷನ್ ವಹಿವಾಟು ೬೦ ಕೋಟಿ ರೂಪಾಯಿಗಳವರೆಗೆ ಇದೆ. ಆ ಕಾರ್ಪೋರೇಷನ್ ಯಾವ ಮಟ್ಟದಲ್ಲಿ ಕೆಲಸ ಮಾಡುತ್ತಿದೆ ಎಂದರೆ, ಬೇರೆ ಜನರಿಂದ ಭೂಮಿಯನ್ನು ಕೊಂಡು ಹರಿಜನರಿಗೆ ಹಂಚುತ್ತಿದ್ದಾರೆ. ಅಷ್ಟು ಚೆನ್ನಾಗಿ ಅದು ಕೆಲಸ ಮಾಡುತ್ತಿದೆ. ಆದರೆ ಇಲ್ಲಿ ಮಾತ್ರ ನಾವು ನಿರೀಕ್ಷೆ ಮಾಡಿದ ಮಟ್ಟದಲ್ಲಿ ಕೆಲಸಗಳಾಗುತ್ತಿಲ್ಲ. ಲೆದರ್ ಬೋರ್ಡ್‌ಗೆ ಶ್ರೀ ಮುನಿಯಪ್ಪನವರೇ ಚೇರ್‌ಮನ್ ಆಗಿದ್ದಾರೆ. ಈ ಲಿಡ್‌ಕರ್ ಬಗ್ಗೆ ನಾನು ಕೈಗಾರಿಕಾ ಇಲಾಖೆ ಡಿಮ್ಯಾಂಡ್ ಬಂದಾಗ ಮಾತನಾಡುತ್ತೇನೆ. ಶ್ರೀ ಅರಸ್ ಅವರ ಕಾಲದಲ್ಲಿ ೬೦ ಪರ್ಸೆಂಟ್‌ವರೆಗೆ ಭೂಮಿಯನ್ನು ಹರಿಜನರಿಗೆ ಹಂಚಬೇಕು ಮತ್ತು ಹರಿಜನರಿಗೆ ಕೊಟ್ಟ ಭೂಮಿಯನ್ನು ಯಾರಾದರೂ ಕಸಿದುಕೊಂಡಿದ್ದರೆ ಅಂತಹ ಭೂಮಿಯನ್ನು ಮತ್ತೆ ಅವರಿಗೇ ವಾಪಸ್ ಕೊಡಿಸಬೇಕೆಂಬ ತೀರ್ಮಾನವನ್ನು ಕೈಗೊಳ್ಳಲಾಯಿತು. ರೆಕ್ರೂಟ್‌ಮೆಂಟ್ ಸಮಯದಲ್ಲಿ ಶೇಕಡಾ ೫೦ರಷ್ಟು ಸ್ಥಾನಗಳನ್ನು ಕೆಲವರಿಗೆ ಮೀಸಲಿಡಬೇಕೆಂದು ತೀರ್ಮಾನ ಕೈಗೊಳ್ಳಲಾಯಿತು. ಇಪ್ಪತ್ತು ಅಂಶಗಳ ಕಾರ್ಯಕ್ರಮವನ್ನು ಮತ್ತು ಎನ್. ಆರ್. ಇ. ಪಿ. ಯನ್ನು ಯಶಸ್ವಿಯಾಗಿ ಜಾರಿಗೆ ತರಲಾಯಿತು. ಬ್ಯಾಕ್‌ವರ್ಡ್–ಕ್ಲಾಸ್ ಕಮಿಷನ್ ಮತ್ತು ಮೈನಾರಿಟಿ ಕಮಿಷನ್‌ಗಳನ್ನು ಅವರು ರಚನೆ ಮಾಡಿದರು. ಮಕ್ಕಳ ಮತ್ತು ಮಹಿಳೆಯರ ಯೋಗಕ್ಷೇಮವನ್ನು ನೋಡಿಕೊಳ್ಳುವ ಸಲುವಾಗಿ ಒಂದು ಹೊಸ ಇಲಾಖೆಯನ್ನೇ ಅವರ ಕಾಲದಲ್ಲಿ ಸ್ಥಾಪನೆ ಮಾಡಲಾಯಿತು. ಹೀಗೆ ಅವರ ಕಾಲದಲ್ಲಿ ಅನೇಕ ಸುಧಾರಣೆಗಳಾದವು. ಇವರ ನಂತರ ಅಧಿಕಾರಕ್ಕೆ ಬಂದ ಶ್ರೀ ಗುಂಡೂರಾವ್ ಅವರು ಈ ಯಾವ ಯೋಜನೆಗಳನ್ನೂ ಸಹ ಕಿತ್ತು ಹಾಕಲಿಲ್ಲ. ಎಲ್ಲವನ್ನೂ ಮುಂದುವರಿಸಿಕೊಂಡು ಬಂದರೆಂದು ನಾನು ಧೈರ್ಯವಾಗಿ ಹೇಳುತ್ತೇನೆ. ಶ್ರೀ ದೇವರಾಜ ಅರಸ್ ಅವರ ಕಾಲದಲ್ಲಿ ಹರಿಜನ ಮತ್ತು ಗಿರಿಜನರಿಗೆ ಸಂಬಂಧಪಟ್ಟಂತೆ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಕೆಲವೊಂದು ಯೋಜನೆಗಳನ್ನು ಜಾರಿಗೆ ತಂದರೂ ಸಹ, ದಲಿತ ಸಂಘರ್ಷ ಸಮಿತಿಯವರ ಕೆಲವೊಂದು ಬೇಡಿಕೆಗಳನ್ನು ಅವರು ಈಡೇರಿಸಲಿಲ್ಲ. ಕೆಲವು ವಿಚಾರಗಳಲ್ಲಿ ಅವರ ಮನಸ್ಸಿನಲ್ಲಿ ಒಂದು ರೀತಿಯ ಸಂದೇಹವಿತ್ತು. ಕೆಲವು ಕೆಲಸಗಳನ್ನು ಮಾಡಿದರೆ ಏನಾಗಿಬಿಡುತ್ತದೋ ಎಂಬ ಸಂದೇಹ ಅವರ ಮನಸ್ಸಿನಲ್ಲಿತ್ತು. ಈ ಮನೆಯಲ್ಲಿ ಡಾ. ಅಂಬೇಡ್ಕರ್ ಅವರ ಭಾವಚಿತ್ರವನ್ನು ಇಡಬೇಕೆಂದು ಶ್ರೀ ಆರ್ಮುಗಂ ಅವರು ಮತ್ತು ಶ್ರೀ ಅರಕೇರಿ ಅವರು ಅನೇಕ ಸಲ ಪ್ರಸ್ತಾಪ ಮಾಡಿದರೂ ಸಹ ಅದು ಅವರ ಕಾಲದಲ್ಲಿ ಆಗಲಿಲ್ಲ, ಆಗ ಈ ಸಭೆಯ ಅಧ್ಯಕ್ಷರಾಗಿದ್ದ ಶ್ರೀಮತಿ ನಾಗರತ್ನಮ್ಮ ಅವರಿಗೂ ಸಹ ಇದು ಗೊತ್ತು. ಈ ಹಿಂದಿನ ಪ್ರೊಸೀಡಿಂಗ್ಸ್‌ನ್ನು ತೆಗೆದು ನೋಡಿದರೆ ಇದು ತಿಳಿಯುತ್ತದೆ. ಕೊನೆಗೆ ಶ್ರೀ ಗುಂಡೂರಾವ್ ಅವರ ಕಾಲದಲ್ಲಿ ಈ ಸಭೆಯಲ್ಲಿ ಡಾ. ಅಂಬೇಡ್ಕರ್ ಅವರ ಭಾವಚಿತ್ರವನ್ನು ಅನಾವರಣಗೊಳಿಸಲಾಯಿತು. ಅದೇ ರೀತಿ ವಿಧಾನಸೌಧದ ಮುಂದೆ ಡಾ. ಅಂಬೇಡ್ಕರ್ ಅವರ ಪ್ರತಿಮೆಯನ್ನು ನಿಲ್ಲಿಸಬೇಕೆಂದು ಅನೇಕ ವರ್ಷಗಳಿಂದ ಹೋರಾಟ ನಡೆದಿತ್ತು. ಅನೇಕ ಚಳುವಳಿಗಳಾದವು, ಅನೇಕ ಧರಣಗಳು ನಡೆದವು. ಕೊನೆಗೆ ಶ್ರೀ ಗುಂಡೂರಾವ್ ಅವರು ಮುಖ್ಯ ಮಂತ್ರಿಗಳಾಗಿದ್ದಾಗ ಶ್ರೀ ಆರ್ಮುಗಂ ಅವರು ವಿಧಾನಸೌಧದ ಮುಂದೆ ಡಾ. ಅಂಬೇಡ್ಕರ್ ಅವರ ಪ್ರತಿಮೆಯನ್ನು ಸ್ಥಾಪಿಸಲು ಧೈರ್ಯ ಮಾಡಿದರು.

ಶ್ರೀ ಬಿ. ದೊಡ್ಡಬೋರೇಗೌಡ.—ಅವರ ಪ್ರತಿಮೆ ಸ್ಥಾಪನೆಯಾದರೆ ಈ ವರ್ಗದ ಜನರ ಉದ್ಧಾರವಾದಂತೆ ಆಯಿತೇ ?

(ಗೊಂದಲ)

ಶ್ರೀ ವೈ. ರಾಮಕೃಷ್ಣ.—ಅದು ತಮ್ಮ ಅಭಿಪ್ರಾಯ. ಆದರೆ ಈ ಪ್ರತಿಮೆಯನ್ನು ನೋಡಿದ ವರಿಗೆ ತಾವೂ ಸಹ ಅವರಂತೆ ಆಗಬಾರದೇಬ ಅಭಿಮಾನ ಹುಟ್ಟುತ್ತದೆ. ಇಂತಹವರು ಸಹ ಇದ್ದ ರೆಂಬುದನ್ನು ತಿಳಿದುಕೊಂಡು ಸಂತೋಷಪಡುತ್ತಾರೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಇಂಥಾದ್ದೆಲ್ಲಾ ಬೇಡ ಎಂಬುದು ಮಾನ್ಯ ಸದಸ್ಯರ ಅಭಿಪ್ರಾಯವೇ ಹೇಗೆ ?

ಶ್ರೀ ಬಿ. ದೊಡ್ಡಬೋರೇಗೌಡ.—ಇದಕ್ಕಿಂತ ಮುಖ್ಯವಾಗಿ ಈ ಜನರ ಒಂದು ದುಃಖದುಮ್ಮಾನ ಗಳನ್ನು ಹೋಗಲಾಡಿಸಲು ಕೆಲಸ ಮಾಡಿ ಎಂದು ನಾನು ಹೇಳಿದ್ದುದು.

ಶ್ರೀ ವೈ. ರಾಮಕೃಷ್ಣ.—ಡಾ. ಅಂಬೇಡ್ಕರ್ ಅವರ ಹುಟ್ಟುಹಬ್ಬವನ್ನು ಜನರಲ್-ಹಾಲಿಡೆ ಎಂದು ಶ್ರೀ ಗುಂಡೂರಾವ್ ಅವರು ಡಿಕ್ಲೇರ್ ಮಾಡಿದರು. ಅವರ ಹೆಸರಿನಲ್ಲಿ ನಮ್ಮ ರಾಜ್ಯದಲ್ಲಿ ಕಾಲೇಜುಗಳು ಮತ್ತು ಮೆಡಿಕಲ್ ಕಾಲೇಜುಗಳು ಸ್ಥಾಪನೆಯಾದವು.

ಶ್ರೀ ಜಿ. ಎಂ. ಕಾನಡೆ.—ಬ್ರಾಹ್ಮಣರ ಇಲ್ಲವೇ ಲಿಂಗಾಯಿತರ ಇಲ್ಲವೇ ಮೇಲ್ಜಾತಿಗೆ ಸೇರಿದವ ರೊಬ್ಬರ ಪ್ರತಿಮೆಯನ್ನು ಸಾಪನೆ ಮಾಡಿದ್ದರೆ ಮಾನ್ಯ ಸದಸ್ಯರಿಗೆ ಸಂತೋಷವಾಗುತ್ತಿತ್ತು. ಆದರೆ ಡಾ. ಅಂಬೇಡ್ಕರ್ ಅವರ ಪ್ರತಿಮೆಯನ್ನು ಸ್ಥಾಪನೆ ಮಾಡಿದ್ದರಿಂದ ಅವರಿಗೆ ಹೊಟ್ಟೆಹುರಿ ಬಂದಿದೆ.

ಶ್ರೀ ವೈ. ರಾಮಕೃಷ್ಣ.—ಹರಿಜನರಿಗಾಗಿ ನೀವೇನು ಮಾಡಿದ್ದೀರಿ ಎಂದು ಪದೇಪದೇ ನನ್ನನ್ನು ಕೇಳುತ್ತಾರೆ. ಶ್ರೀ ದೇವರಾಜ ಅರಸ್ ಅವರು ಹರಿಜನರ ಪುರೋಭಿವೃದ್ಧಿಗಾಗಿ ಸಾಕಷ್ಟು ದುಡಿದರು ಮತ್ತು ಅವರ ಮಂತ್ರಿಮಂಡಲದಲ್ಲಿ ಸಾಕಷ್ಟು ಜನ ಹರಿಜನ ಮಂತ್ರಿಗಳಿದ್ದರು. ಇವರ ಮಂತ್ರಿ ಮಂಡಲದಲ್ಲಿ ಎಷ್ಟು ಜನ ಹರಿಜನ ಮಂತ್ರಿಗಳಿದ್ದಾರೋ ಅಷ್ಟೇ ಜನ ಶ್ರೀ ಗುಂಡೂರಾವ್ ಅವರ ಮಂತ್ರಿಮಂಡಲದಲ್ಲಿಯೂ ಇದ್ದರು. ಆದರೆ ಈಗಿನ ಮಂತ್ರಿಮಂಡಲದಲ್ಲಿ ಎಷ್ಟು ಜನರಿದ್ದಾರೆಂಬ ಬಗ್ಗೆ ಶ್ರೀ ದೊಡ್ಡಬೋರೇಗೌಡರೇ ಉತ್ತರ ಕೊಡಲಿ. ಕೆಲವು ವಿಚಾರಗಳು ಇವರಿಗೆ ಅರ್ಥವಾಗುವು ದಿಲ್ಲ.

ಶ್ರೀ ಬಿ. ದೊಡ್ಡಬೋರೇಗೌಡ.—ಕೇವಲ ಸಂಖ್ಯಾಬಲದಿಂದ ಈ ವರ್ಗದ ಜನರನ್ನು ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವೇ ?

(ಗೊಂದಲ)

ಶ್ರೀ ಪಿ. ತಿಪ್ಪಯ್ಯ.—ಈಗಿನ ಮಂತ್ರಿಮಂಡಲದಲ್ಲಿ ಹರಿಜನ ಶಾಸಕರಿಗೆ ಸಾಕಷ್ಟು ಪ್ರಾತಿನಿಧ್ಯ ಕೊಟ್ಟಿಲ್ಲವೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ನಾನು ಒಂದು ಪ್ರಶ್ನೆ ಕೇಳುತ್ತೇನೆ, ಏನೆಂದರೆ, ಕಳೆದ ೩೫ ವರ್ಷಗಳಿಂದ ಹರಿಜನರ ಪ್ರತಿನಿಧಿಗಳಾಗಿ ಆರಿಸಿ ಬಂದವರು ಮತ್ತು ಮಂತ್ರಿ ಗಳಾದವರು ಸಾಕಷ್ಟು ದುಡಿದರೂ ಸಹ ಇವರ ಏಳಿಗೆ ಏತಕ್ಕೆ ಆಗಲಿಲ್ಲ ? ಇದಕ್ಕೆ ತಾವು ಉತ್ತರ ಕೊಡಬೇಕು ?

ಶ್ರೀ ವೈ. ರಾಮಕೃಷ್ಣ.—ನಮ್ಮ ಮಾನ್ಯ ಸದಸ್ಯರಾದಂಥ ತಿಪ್ಪಯ್ಯನವರು ಶಾಸಕರಾಗಿ ಬಂದಿದ್ದ ರಿಂದ ನಮ್ಮ ಗತಿ ಈ ರೀತಿ ಆಗಿದೆ

ಶ್ರೀ ಪಿ. ತಿಪ್ಪಯ್ಯ.—ಸ್ವಾಮಿ ನಮಗೂ ಕೂಡ ಒಂದು ಸ್ಥಾನಮಾನ ಸಿಗಬೇಕಾದರೆ ಸ್ವಲ್ಪ ದಿವಸ ಸಾರ್ವಜನಿಕರ ಸೇವೆ ಮಾಡಿ ಆ ಶಕ್ತಿಯನ್ನು ನಾವೂ ಸಹ ಪಡೆದುಕೊಳ್ಳಬೇಕು.

ಶ್ರೀ ವೈ. ರಾಮಕೃಷ್ಣ.—ನಿಮ್ಮಂತಹವರು ಇರುವುದರಿಂದಲೇ ಈ ರೀತಿ ಆಗಿದೆ. ಆದರೆ ಮಾನ್ಯ ಸದಸ್ಯರು ನನ್ನನ್ನು ಕೇಳುತ್ತಿದ್ದರು ನೀವು ಅಧಿಕಾರದಲ್ಲಿದ್ದಾಗ ಹರಿಜನ ಮತ್ತು ಗಿರಿಜನರ ಉದ್ಧಾರ ಏನು ಮಾಡಿದ್ದೀರಿ ಎಂದು. ಆದರೆ ಆ ಕಾಲ ಈಗ ಬಂದಿದೆ ಹೇಳುತ್ತೇನೆ ದಯಮಾಡಿಟ್ಟು ಕೇಳಿ.

ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳು ಈ ವರ್ಗದ ಜನತೆಯ ಉದ್ಧಾರವನ್ನು ಏನು ಮಾಡಿದ್ದಾರೆ ಎನ್ನುವುದನ್ನು ಹೇಳುತ್ತೇನೆ ನಾನು ನಾನು ಒಂದು ವೇಳೆ ತಪ್ಪು ಹೇಳಿದ್ದರೆ ಮಾನ್ಯ ಸದಸ್ಯರು ಮಾತನಾಡುವಾಗ ಅದು ತಪ್ಪು ಎಂದು ಹೇಳಲಿ ಅದು ಬಿಟ್ಟು ಈ ರೀತಿ ಮಧ್ಯೆ ಮಧ್ಯೆ ಪ್ರವೇಶ ಮಾಡಿ ತೊಂದರೆ ಮಾಡುವುದು ಸರಿಯಲ್ಲ. ಸ್ವಾಮಿ ಶ್ರೀಮಾನ್ ದೇವರಾಜ ಅರಸುರವರು ಮುಖ್ಯಮಂತ್ರಿಗಳಾಗಿದ್ದಾಗ ಸುಮಾರು ೮ ಜನ ಹರಿಜನ ಮತ್ತು ಗಿರಿಜನರ ಮಂತ್ರಿಗಳು ಇದ್ದರು. ಆದರೆ ಇವತ್ತು ತಮ್ಮ ಮಂತ್ರಿಮಂಡಲದಲ್ಲಿ ಎಷ್ಟು ಜನ ಹರಿಜನ ಮತ್ತು ಗಿರಿಜನರ ಮಂತ್ರಿಗಳು ಇದ್ದಾರೆ ?

ಶ್ರೀ ಬಿ. ದೊಡ್ಡಬೋರೇಗೌಡ.—ಸ್ವಾಮಿ ಬರೀ ಮಂತ್ರಿಗಳು ಇದ್ದರೆ ಅವರ ಉದ್ಧಾರ ಆಗುವುದಿಲ್ಲ

ಉಪಾಧ್ಯಕ್ಷರು.—ಸ್ವಾಮಿ ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಅವಕಾಶ ಮಾಡಿ ಕೊಡಿ ತಮಗೆ ಅವಕಾಶ ಸಿಕ್ಕಿದಾಗ ತಾವು ಕೂಡ ಮಾತನಾಡಿ. ಆದ್ದರಿಂದ ಈಗ ತಾವು ತೊಂದರೆ ಮಾಡುವುದು ಬೇಡ.

ಶ್ರೀ ಆರ್. ಎ. ನಾಯಕ್.—ಸ್ವಾಮಿ ಲಿಂಗಾಯಿತ ಮುಖ್ಯಮಂತ್ರಿಗಳಾಗಿದ್ದಾಗ ಬಸವ ಜಯಂತಿಗೆ ರಜ ಕೊಡಲಿಲ್ಲ. ಆದರೆ ನಮ್ಮ ಮಾನ್ಯ ಗುಂಡೂರಾವ್ ಸಚಿವ ಸಂಪುಟದಲ್ಲಿ ಬಸವ ಜಯಂತಿಗೆ ರಜೆ ಘೋಷಣೆ ಮಾಡಿದ್ದಾರೆ

ಶ್ರೀ ವೈ. ರಾಮಕೃಷ್ಣ.—ಸ್ವಾಮಿ ಶ್ರೀಮಾನ್ ಗುಂಡೂರಾವ್‌ರವರ ಸಚಿವಸಂಪುಟದಲ್ಲಿ ಕೂಡ ಸುಮಾರು ೬ ಜನ ಹರಿಜನ ಮತ್ತು ಗಿರಿಜನ ಮಂತ್ರಿಗಳು ಇದ್ದರು. ಆದರೆ ಇವತ್ತು ತಮ್ಮ ಸಂಪುಟದಲ್ಲಿ ಎಷ್ಟು ಜನ ಇದ್ದಾರೆಂದು ನಾನು ಕೇಳುತ್ತೇನೆ. ಮಾನ್ಯ ಕಾನೂನುಮಂತ್ರಿಗಳು ಇವೊತ್ತು ಇದಿದ್ದರೆ ಬಹಳ ಚನ್ನಾಗಿರುತ್ತಿತ್ತು. I will be thankful to the Speaker if you send for him. Because I want to confrom him with these facts. ನೋಡಿ ಸ್ವಾಮಿ ಶ್ರೀಮಾನ್ ಗುಂಡೂರಾವ್ ಸರ್ಕಾರದಲ್ಲಿ ಸುಮಾರು ೬ ಜನರು ಮಂತ್ರಿಗಳು ಇದ್ದಾರೆ ಅವರ ಹೆಸರುಗಳನ್ನು ಬೇಕಾದರೆ ನಾನು ಹೇಳುತ್ತೇನೆ. ಶ್ರೀ ಕೆ. ಯಂಕಟಪ್ಪನವರು ಮತ್ತೆ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು, ಮತ್ತು ಶ್ರೀ ಪಿ. ವೆಂಕಟರಮಣರವರು ಹಾಗೂ ಶ್ರೀಮತಿ ರೇಣುಕಾ ರಾಜೇಂದ್ರನ್‌ರವರು ಹಾಗೂ ಶ್ರೀ ಕೆ. ಹೆಚ್. ರಂಗನಾಥ್‌ರವರು ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಮತ್ತೆ ವೈ. ರಾಮಕೃಷ್ಣರವರು ಆದರೆ ಅವರ ಸಂಪುಟದಲ್ಲಿ ಅವರಿಗೆ ಯಾವ ಆರ್ಥಿಕ ಮತ್ತು ಸಾಮಾಜಿಕ ನ್ಯಾಯಸಿಗಬೇಕಾಗಿತ್ತೋ ಆ ನ್ಯಾಯವನ್ನು ಕಲ್ಪಿಸಿಕೊಟ್ಟಿದ್ದಾರೆ. ಆದರೆ ಮಂತ್ರಿಗಳು ಇದ್ದ ಮಾತ್ರಕ್ಕೆ ಎಲ್ಲಾ ಸಮಸ್ಯೆಗಳನ್ನು ಪರಿಹಾರ ಮಾಡುತ್ತಾರೆಂದು ನಾನು ಹೇಳುತ್ತಿಲ್ಲ.

ಶ್ರೀ ರಾಜವರ್ಧನ್.—ಮಂತ್ರಿಗಳು ಇದ್ದಮಾತ್ರಕ್ಕ ಹರಿಜನರ ಉದ್ಧಾರವಾಗುತ್ತಿದೆ ಎಂದು ಹೇಳುತ್ತೀರಾ ?

ಶ್ರೀ ವೈ ರಾಮಕೃಷ್ಣ.—ಸ್ವಾಮಿ ಇವೊತ್ತು ಹಳ್ಳಿಗಳಲ್ಲಿರತಕ್ಕಂಥ ಹರಿಜನ ಮತ್ತು ಗಿರಿಜನರ ಉದ್ಧಾರ ಯಾವ ರೀತಿಯಲ್ಲಿ ಆಗುತ್ತಿದೆ ಎನ್ನುವುದನ್ನು ತಾವು ಹೋಗಿ ನೋಡಿದರೆ ಗೊತ್ತಾಗುತ್ತದೆ.

ಶ್ರೀ ಗೋಪಾಲ ಮುಕುಂದ ಕಾಮತ್.—ಸ್ವಾಮಿ ಹರಿಜನ ಮತ್ತು ಗಿರಿಜನರಿಗೆ ಸಿಗುವಂಥ ಸೌಲಭ್ಯಗಳನ್ನು ಪಡೆಯುವುದಕ್ಕಾಗಿ ಸುಳ್ಳು ಸರ್ಟಿಫಿಕೇಟ್‌ಗಳನ್ನು ಪಡೆದು ಹರಿಜನರೆಂದು ಹೇಳಿಕೊಳ್ಳುತ್ತಾರೆ. ಆದರೆ ಯಾರು ಈ ರೀತಿ ಹರಿಜನರಾಗಿರುತ್ತಾರೊ ಗಿರಿಜನರಾಗಿರುತ್ತಾರೋ ಅವರನ್ನು ಕಂಡಲ್ಲಿ ಗುಂಡಿಟ್ಟು ಕೊಲ್ಲಿ ಎಂದು ಹೇಳಿದರೆ ಆಗ ಎಲ್ಲರೂ ವಾಪಸ್ಸು ತೆಗೆದುಕೊಳ್ಳುತ್ತಾರೆ.

ಶ್ರೀ ವೈ. ರಾಮಕೃಷ್ಣ.—ಸ್ವಾಮಿ ನಮ್ಮ ಕಾಲದಲ್ಲಿ ಸುಮಾರು ೬ ಜನರು ಮಂತ್ರಿಗಳು ಇದ್ದರು. ಅವರು ಏನು ಮಾಡಿದ್ದಾರೆಂದು ಹೇಳುತ್ತೇನೆ ಕೇಳಿ

ಉಪಾಧ್ಯಕ್ಷರು.—ಸ್ವಾಮಿ ಈ ಬೇಡಿಕೆಗಳು ಸುಮಾರು ಎರಡು ಗಂಟೆಯ ವೇಳೆಗೆ ಮುಗಿಸಬೇಕು. ಆದ್ದರಿಂದ ಮಾನ್ಯ ಸದಸ್ಯರು ಯಾರೂ ಕೂಡ ತೊಂದರೆ ಮಾಡಬಾರದು. ತಮಗೆ ಅವಕಾಶ ಸಿಕ್ಕಿದಾಗ ಬೇಕಾದರೆ ತಾವು ಉತ್ತರ ಕೊಡಿ.

ಶ್ರೀ ವೈ, ರಾಮಕೃಷ್ಣ.—ಸ್ವಾಮಿ ಪ್ರಪ್ರಥಮವಾಗಿ ಒಬ್ಬ ಹರಿಜನ ಮತ್ತು ಗಿರಿಜನರ ಗುಂಪಿಗೆ ಸೇರಿದ ವ್ಯಕ್ತಿಯನ್ನು ವೈಸ್ ಚಾನಸಲರ್ ಆಗಿ ನೇಮಕ ಮಾಡಿದ್ದೇವೆ. ಅವರ ಹೆಸರು ನಾಗರಾಜ್

ಎಂದು. ಅವರು ಗುಲ್ಬರ್ಗ ಯೂನಿವರ್ಸಿಟಿಯಲ್ಲಿ ಕೆಲಸ ಮಾಡುತ್ತಿದ್ದಾನೆ. ಮತ್ತೆ ಒಬ್ಬ ಹೈಕೋರ್ಟಿನ ಮುಖ್ಯ ನ್ಯಾಯಾದೀಶರನ್ನಾಗಿ ಮಾಡಿದ್ದೆವು. ಮತ್ತೆ ಶ್ರೀ ರಾಮಕೃಷ್ಣ ಎನ್ನತಕ್ಕಂಥವರನ್ನು ಹೈಕೋರ್ಟಿನ ನ್ಯಾಯಾದೀಶರನ್ನಾಗಿ ನೇಮಕ ಮಾಡಿದ್ದೆವು. ಮತ್ತೆ ನಾವು ಏನು ಮಾಡಿದ್ದೇವೆ ಎನ್ನುವುದನ್ನು ಹೇಳುತ್ತೇನೆ ಕೇಳಿ. ಮತ್ತೆ ಒಬ್ಬರನ್ನು ಲೋಕಸೇವಾ ಸದಸ್ಯರನ್ನಾಗಿ ನೇಮಕ ಮಾಡಿದ್ದೇವೆ.

ಶ್ರೀ ಬಿ. ದೊಡ್ಡಬೋರೇಗೌಡ.—ಮಾನ್ಯ ಅಧ್ಯಕ್ಷರೇ ಪ್ರತಿಯೊಂದು ಪಂಚಾಯ್ತಿಯಲ್ಲಿ ಕೂಡ ಯಾವುದೇ ಒಬ್ಬ ಹರಿಜನ ಮತ್ತು ಗಿರಿಜನರಿಗೆ ಅನುಕೂಲ ಮಾಡಿಕೊಟ್ಟಿಲ್ಲ. ತಮ್ಮ ಕಾಲದಲ್ಲಿ ಹರಿಜನರ ರಕ್ತವನ್ನು ಹೀರಿದ್ದೀರಿ.

ಶ್ರೀ ವೈ. ರಾಮಕೃಷ್ಣ.—ಸ್ವಾಮಿ ಮಾನ್ಯ ಸದಸ್ಯರು ಈ ರೀತಿ ಹೇಳಬಾರದು. ಇದು ಅವರು ಹೇಳತಕ್ಕಂಥ ಮಾತು ಅಲ್ಲ

ಶ್ರೀ ಎಂ. ವೀರಪ್ಪಮೊಯ್ಲಿ.—ಸ್ವಾಮಿ ನಾವು ನಿನ್ನೆಯ ದಿವಸ ಈ ಬೇಡಿಕೆಯನ್ನು ಎರಡು ಗಂಟೆಗಳಿಗೆ ಮುಗಿಸಬೇಕೆಂದು ತೀರ್ಮಾನ ಮಾಡಿದ್ದೇವೆ, ಆದರೆ ಮಾನ್ಯ ಸದಸ್ಯರು ಮಧ್ಯೆ ಪ್ರವೇಶ ಮಾಡಿ ಈ ರೀತಿ ತೊಂದರೆ ಮಾಡಿದರೆ ಹೇಗೆ ?

ಡಾ. ವಿ. ಎಲ್. ಆಚಾರ್ಯ.—ಸ್ವಾಮಿ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ನಿನ್ನೆಯ ದಿವಸ ನಾವು ತೀರ್ಮಾನ ಮಾಡಿದ ಪ್ರಕಾರ ಇವೊತ್ತು ಎರಡು ಗಂಟೆಗಳಿಗೆ ಇದು ಮುಕ್ತಾಯವಾಗಬೇಕು. ಈಗಾಗಲೇ ಸುಮಾರು [illegible] ನಿಮಿಷಗಳು ಆಗುತ್ತಾ ಬಂದಿದೆ, ಆದರೆ ಈ ರೀತಿ ಸದಸ್ಯರು ತೊಂದರೆ ಮಾಡುತ್ತಾ ಹೋದರೆ ಕೊನೆಯಲ್ಲಿ ಮಾತನಾಡುವಂತ ಸದಸ್ಯರಿಗೆ ಅವಕಾಶವಿರುವುದಿಲ್ಲ. ಆದ್ದರಿಂದ ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಅವಕಾಶ ಮಾಡಿ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಬೇಗ ಮುಗಿಸಿದರೆ ಒಳ್ಳೆಯದು

ಶ್ರೀ ವೈ. ರಾಮಕೃಷ್ಣ.—ಸ್ವಾಮಿ ಮುಗಿಸುವ ಪ್ರಶ್ನೆಯಲ್ಲ. ಆದರೇ ಮಾನ್ಯ ಸದಸ್ಯರು ಯಾವಾಗಲೂ ನಿಮ್ಮ ಕಾಲದಲ್ಲಿ ಏನು ಮಾಡಿದ್ದೀರಿ ಎಂದು ಪ್ರಶ್ನೆ ಮಾಡುತ್ತಿದ್ದರು ಅದನ್ನು ನಾನು ಈಗ ಹೇಳುತ್ತಿದ್ದೇನೆ. ಅದನ್ನು ಅವರು ಗಂಭೀರವಾಗಿ ಕೇಳುವುದಕ್ಕೆ ತೊಂದರೆ ಏನು ? ಸ್ವಾಮಿ ಇವೊತ್ತು ಎಲ್ಲೆಲ್ಲಿ ಹರಿಜನ ಮತ್ತು ಗಿರಿಜನರಿಗೆ ೧೮ ಪರ್ಸೆಂಟ್ ಮೀಸಲಾತಿಯನ್ನು ಕೊಟ್ಟಿಲ್ಲ ಅಲ್ಲಿ ತಾವು ಕಾನೂನನ್ನು ಅಮೆಂಡ್ ಮಾಡಿ ಬೇಕಾದರೆ ಆ ಮೀಸಲಾತಿಯನ್ನು ಕೊಡಿ ನಾನು ಬೇಡವೆಂದು ಹೇಳುವುದಿಲ್ಲ. ಆದರೆ ನಮ್ಮ ಕಾಲದಲ್ಲಿ ಇದ್ದಂಥ ರೋಸ್ಟರ್ ಸಿಸ್ಟಂನ್ನು ತಾವು ರದ್ದುಮಾಡಿದ್ದೀರಿ. ಸ್ವಾಮಿ ಇವೊತ್ತು ಹರಿಜನ ಮತ್ತು ಗಿರಿಜನರ ಜಾತಿಗೆ ಸೇರಿದ ಯಾವ ಒಬ್ಬ ಅಧಿಕಾರಿಯೂ ಕೂಡ ನೆಮ್ಮದಿಯಿಂದ ಜೀವನ ಮಾಡುವುದಕ್ಕೆ ತಾವು ಬಿಟ್ಟಿಲ್ಲ. ಅವರನ್ನು ತಾವು ಕಾಡ ಡವಲಪ್‌ಮೆಂಟ್ ಸ್ಕೀಮ್‌ಗಳಿಗೆ ಹಾಕಿದ್ದೀರಿ. ಅಲ್ಲಿ ಅವರಿಗೆ ಮನೆ ಸಿಕ್ಕುವುದಿಲ್ಲ. ನೀರು ಸಿಕ್ಕುವುದಿಲ್ಲ ಅಂಥ ಕಡೆಗಳಲ್ಲಿ ಇಲ್ಲದ್ದೀರಿ ಇಲ್ಲದಿದ್ದರೆ ಕೇಂದ್ರ ಸರ್ಕಾರದ ಸೇವೆಗೆ ಕಳುಹಿಸಿಕೊಟ್ಟಿದ್ದೀರಿ. ಎಷ್ಟೋ ಜನ ಹರಿಜನ ಮತ್ತು ಗಿರಿಜನರ ಡಾಕ್ಟರ್‌ಗಳು ಮನಸಿಕ್ಕಿಲ್ಲವೆಂದು ಹೇಳಿ ವಾಪಸ್ಸು ಬಂದಿದ್ದಾರೆ. ಆದರೆ ನೀವು ಏನೇನು ಮಾಡಿದ್ದೀರಿ ಹೇಳಿ ? ನೀವೂ ಏನಾದರೂ ಒಂದು ಕೆಲಸವನ್ನು ಹರಿಜನ ಮತ್ತು ಗಿರಿಜನರಿಗೆ ಮಾಡಿಕೊಟ್ಟಿದ್ದರೆ ನಾನು ಈ ಕೂಡಲೇ ರಾಜೀನಾಮೆಯನ್ನು ಕೊಡುತ್ತೇನೆ

ಇದನ್ನು ನಾನು ಬಹಳ ನೊಂದ ಮನಸ್ಸಿನಿಂದ ಹೇಳಬೇಕಾಗಿದೆ. ನಾವು ಏನು ಮಾಡಿದ್ದೇವೆ ಎನ್ನುವ ಪಟ್ಟಿಯನ್ನು ಓದುತ್ತೇನೆ ಸ್ವಲ್ಪ ಕೇಳಿ. ಲೋಕೋಪಯೋಗಿ ಇಲಾಖೆಯಲ್ಲಿ ಪರ್ಸೆಂಟೇಜ್ ಸಾಲದು ಎನ್ನುವ ಪ್ರಶ್ನೆ ಬಂದಾಗ, ೫ ವರ್ಷ ಇದ್ದಂತಹ ಕಡ್ಡಾಯ ಸೇವೆಯನ್ನು ನಾವು ಮೂರು ವರ್ಷಗಳಿಗೆ ಇಳಿಸಿದ್ದೇವೆ. ಈ ಸರ್ಕಾರ ಬಂದು ಎಲ್ಲವನ್ನು ಕಿತ್ತುಹಾಕಿದ್ದಾರೆ. ಮಾನ್ಯ ರಾಜವರ್ಧನ್ ರವರು ರಾಜೀನಾಮೆಯನ್ನು ಕೊಟ್ಟು ಮನೆಗೆ ಹೋಗಿ ತಪಸ್ಸು ಮಾಡಲಿ. ಸೆಕ್ರೆಟರಿ ಮಟ್ಟದಲ್ಲಿ ಎಷ್ಟು ಜನ ಹರಿಜನ ಅಧಿಕಾರಿಗಳು ಇದ್ದಾರೆ? ಹೆಡ್ಸ್ ಆಫ್ ಡಿಪಾರ್ಟ್‌ಮೆಂಟ್‌ನಲ್ಲಿ ಎಷ್ಟು ಜನ ಹರಿಜನ ಅಧಿಕಾರಿಗಳು ಇದ್ದಾರೆ ? ಅಡಿಶನಲ್ ಸೆಕ್ರೆಟರಿ ಆಗಿ ನಾರಾಯಣಸ್ವಾಮಿಯವರನ್ನು ಅಗ್ರಿಕಲ್ಚರಲ್ ಅಂಡ್ ಅನಿಮಲ್ ಅಸ್ಬೆಂಡರಿ ಡಿಪಾರ್ಟ್‌ಮೆಂಟ್‌ನಲ್ಲಿ ಅಪಾಯಿಂಟ್ ಮಾಡಿದ್ದೇವೆ. ಮಾನ್ಯ ಕುಮಾರ ಸ್ವಾಮಿಯವರನ್ನು ಅಡಿಷನಲ್ ಸೆಕ್ರೆಟರಿ ಆಗಿ ಲಾ ಡಿಪಾರ್ಟ್‌ಮೆಂಟ್‌ಗೆ ಅಪಾಯಿಂಟ್

ಮಾಡಿದ್ದೇವೆ. ನಾವು ಯಾರ್ಯಾರನ್ನು ಅಡಿಷನಲ್ ಸೆಕ್ರೆಟರಿ ಆಗಿ ಪೋಸ್ಟ್ ಮಾಡಿದೇವು ಇವೊತ್ತು ನೀವು ಯಾರನ್ನಾದರೂ ಒಬ್ಬರನ್ನು ಇಟ್ಟಿದ್ದೀರಾ? ಎಷ್ಟು ಜನ ಹರಿಜನ ಸೆಕ್ರೆಟರಿಗಳನ್ನು ಇಟ್ಟಿದೀರಿ?

ಶ್ರೀ ಜಿ. ಎಂ. ಕಾನಡೆ.—ಮಾನ್ಯ ರಘುಪತಿಯವರು ಇದರ ಬಗ್ಗೆ ಹೇಳಬೇಕು ?

ಶ್ರೀ ವೈ. ರಾಮಕೃಷ್ಣ.—ಮಾನ್ಯ ತಿಮ್ಮೆಗೌಡರು ಜ್ಯುಡಿಷಿಯರಿ ಬಗ್ಗೆ ಒಂದು ಪ್ರಶ್ನೆ ಕೇಳಿದರು. ಅಲ್ಲಿ ಮುನ್ಸೀಫ್ ಎಷ್ಟು ಜನರು ಇದ್ದಾರೆಂದು ಕೇಳಿದರು. ನಾನು ಅದರ ಬಗ್ಗೆ ಒಂದು ಮಾತು ಹೇಳಲಿಕ್ಕೆ ಇಷ್ಟಪಡುತ್ತೇನೆ. ಮುನ್ಸೀಫ್ ಪೋಸ್ಟ್‌ಗಳಿಗೆ ರಿಸರ್ವೇಷನ್ ಇರಲಿಲ್ಲ. ಜಡ್ಜ್‌ಗಳಲ್ಲಿ ರಿಜಿಸ್ಟ್ರೇಷನ್ ಇದೆ. ಅಲ್ಲಿರತಕ್ಕ ಮಿನಿಸ್ಟ್ರಿಯಲ್ ಸ್ಟಾಫ್‌ಗೆ ರಿಸರ್ವೇಷನ್ ಇರಲಿಲ್ಲ. ರಿಸರ್ವೇಷನ್ ಪಾಲಿಸಿಯನ್ನು ಜಾರಿಗೆ ತಂದದ್ದು ನಮ್ಮ ಸರ್ಕಾರ. ನಾವು ರಿಸರ್ವೇಷನ್ ಪದ್ಧತಿಯನ್ನು ಜಾರಿಗೆ ತಂದಮೇಲೆ ಇವೊತ್ತು ರಿಸರ್ವೇಷನ್ ಜಾರಿಯಲ್ಲಿದೆ. ಮುನ್ಸೀಫ್ ಮತ್ತು ಜಡ್ಜ್‌ಗಳನ್ನು ಅಪಾಯಿಂಟ್ ಮಾಡತಕ್ಕ ಅಧಿಕಾರ ಹೈಕೋರ್ಟಿಗೆ ಇತ್ತು ನಾವು ಅದನ್ನು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಕೊಟ್ಟಿದ್ದೇವೆ. ೨೦ ವರ್ಷಗಳ ಅನುಭವದಿಂದ ಆ ಒಂದು ಬ್ಯಾಂಕ್‌ಗ್ರೌಂಡ್‌ನಲ್ಲಿ ಈ ಒಂದು ಆರ್ಡರನ್ನು ಮಾಡಿದ್ದೇವೆ. ಇವರು ಏನು ಹೇಳುತ್ತಾರೆಂದರೆ found unsuitable ಎಂದು ಹೇಳತಕ್ಕದ್ದು ಸರಿಯಲ್ಲ. This is the most convenient word, ಷೆಡ್ಯೂಲ್ಡ್ ಕಾಸ್ಟ್‌ನವರು ಸೂಟಬಲ್ ಇರುವುದಿಲ್ಲವೆ ? ನಿಮ್ಮ ಇಲಾಖೆಯಲ್ಲಿ ಹರಿಜನರಿಗೆ ಪ್ರಾತಿನಿಧ್ಯ ಇಲ್ಲ ಎನ್ನುವುದನ್ನು ಮನಗಂಡು ನೀವು ಎಷ್ಟು ಜನ ಗೌರ್ನಮೆಂಟ್ ಪ್ಲೀಡರ್‌ಗಳನ್ನು ನೇಮಕ ಮಾಡಿದ್ದೀರಿ? ಎಷ್ಟು ಜನ ಪಬ್ಲಿಕ್ ಪ್ರಾಸಿಕ್ಯೂಟರ್‌ಗಳನ್ನು ನೇಮಕ ಮಾಡಿದ್ದೀರಿ? ನಾವು ಏನೇನು ಮಾಡಿದ್ದೇವೆ ಎನ್ನುವುದನ್ನು ಹೇಳುತ್ತೇನೆ. ತಾವು ಸ್ವಲ್ಪ ತಾಳ್ಮೆಯಿಂದ ಕೇಳಿ. ರಾಮಕೃಷ್ಣಯ್ಯ ಎಂಬುವವರನ್ನು ಹೈಕೋರ್ಟ್ ಜಡ್ ಆಗಿ ನೇಮಕ ಮಾಡಿದ್ದೇವೆ. ಬಿಳಿಗಿರಿರಂಗಯ್ಯ ಮತ್ತು ವೆಂಕಟಾಚಲಯ್ಯ ಅವರನ್ನು ಗೌರ್ನಮೆಂಟ್ ಹೈಕೋರ್ಟ್ ಪ್ಲೀಡರ್‌ಗಳನ್ನಾಗಿ ನೇಮಕ ಮಾಡಿದ್ದೇವೆ. ಪುನರಾಮ್ ಎಂಬುವರನ್ನು ಗೌರ್ನಮೆಂಟ್ ಪ್ಲೀಡರ್ ಆಗಿ ನೇಮಕ ಮಾಡಿದ್ದೇವೆ. ಗಂಗಹನುಮಯ್ಯ ಎಂಬುವವರನ್ನು ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ ನೇಮಕ ಮಾಡಿದ್ದೇವೆ. ಹೀಗೆ ಹಲವಾರು ವಕೀಲರುಗಳನ್ನು ದೊಡ್ಡ ದೊಡ್ಡ ಹುದ್ದೆಗಳಿಗೆ ನೇಮಕ ಮಾಡಿದ್ದೇವೆ. ಶ್ರೀ ಗಟ್ಟಿ ಎಂಬುವರು ಮಾನ್ಯ ಹೆಗರೆಯವರ ಕ್ಷೇತ್ರದವರು He has been made as Official Receiver. ಪುಟ್ಟಸಿದ್ದಯ್ಯ ಎಂಬುವರನ್ನು He has been made as Asst. Government Pleader ಇವರು ಮಾನ್ಯ ರಾಚಯ್ಯನವರ ಕ್ಷೇತ್ರದವರು. ವೀರಭದ್ರಯ್ಯ ಎಂಬುವರನ್ನು ಡಿಸ್ಟ್ರಿಕ್ಟ್ ಜಡ್ಜ್ ಆಗಿ ಅಪಾಯಿಂಟ್ ಮಾಡಿದ್ದೇವೆ. ಆರು ಮುನ್ಸೀಫ್ ಹುದ್ದೆಗಳನ್ನು ಒಂದು ಆಡಿಷನಲ್ ಗೌರ್ನಮೆಂಟ್ ಪ್ಲೀಡರ್ ಒಂದು ಅಫೀಷಿಯಲ್ ರಿಸೀವರ್ ಪೋಸ್ಟ್ ಈ ಹುದ್ದೆಗಳಿಗೆಲ್ಲಾ ನಾವು ಅಪಾಯಿಂಟ್ ಮಾಡಿದ್ದೇವೆ. Is it cheating on the Scheduled Caste ? Is it cheating ? Why the Government order was not issued ? ನೀವು ಅಧಿಕಾರಕ್ಕೆ ಬಂದ ಮೇಲೆ ಯಾರಾದರೂ ಒಬ್ಬರನ್ನು ನೇಮಕ ಮಾಡಿದ್ದೀರಾ ? ನೀವು ಅಧಿಕಾರಕ್ಕೆ ಬಂದ ಮೇಲೆ ಯಾವ ಹುದ್ದೆಗೆ ಹರಿಜನರನ್ನು ನೇಮಕ ಮಾಡಿದ್ದೀರಿ ? ಎಂ.ಎ., ಎಂ.ಕಾಂ., ಎಂ.ಎಸ್ಸಿ. ಪದವಿ ತೆಗೆದುಕೊಂಡಿರತಕ್ಕ ಹರಿಜನ ಗಿರಿಜನ ಅಭ್ಯರ್ಥಿಗಳಲ್ಲಿ ಯಾರು ಜಾಸ್ತಿ ಅಂಕಗಳನ್ನು ಪಡೆದುಕೊಂಡು ಉತ್ತೀರ್ಣರಾಗಿರುತ್ತಾರೆ ಅಂತಹವರಿಗೆ ನಾವು ಯಾವುದೇ ರೀತಿಯ ಎಕ್ಸಾಮ್ ಇಲ್ಲದೆ ಎ-ಬಿ-ಸಿ. ಹುದ್ದೆಗಳಿಗೆ ನೇರವಾಗಿ ನೇಮಕ ಮಾಡಿಕೊಳ್ಳುತ್ತೇವೆಂದು ಕಳೆದ ವರ್ಷ ಹೇಳಿದ್ದೀರಿ. ನೀವು ಎಷ್ಟು ಜನರನ್ನು ಈ ರೀತಿ ನೇಮಕ ಮಾಡಿಕೊಂಡಿದ್ದೀರಿ? ಈ ವರ್ಷ ಕೂಡ ಅದೇ ಮಾತನ್ನು ಹೇಳುತ್ತಿದ್ದೀರಿ ಇದು ಹೇಗಿದೆ ಎಂದರೆ 'ಹೇಳಿದ್ದೊ ಹೇಳೊ ಕಿಸಿಬಾಯಿದಾಸ' ಆಗಿದೆ. ಈ ವರ್ಷ ಕೂಡ ಅದನ್ನೇ ಹೇಳಿದ್ದೀರಿ. ನೀವು ಎಷ್ಟು ಜನರಿಗೆ ಉದ್ಯೋಗ ಕೊಟ್ಟಿದ್ದೀರಿ ? ನೀವು ಆರ್ಡರ್ಸ್ ಇಷ್ಟು ಮಾಡುವುದಕ್ಕೆ ಒಂದು ವರ್ಷ ಬೇಕೆ ? ಎಷ್ಟು ವರ್ಷಗಳಾದ ಮೇಲೆ ಆ ಕೆಲಸವನ್ನು ಮಾಡುತ್ತೀರಿ ? ನೀವು ಒಂದು ಕಾಸಿನ ಕೆಲಸವನ್ನು ಮಾಡಿಲ್ಲ ಹರಿಜನರನ್ನು ಚೀಟ್ ಮಾಡಲಿಕ್ಕೆ ಹೊರಟಿದ್ದೀರಿ ? ನೀವು ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ ? ೨೦ ಅಂಶಗಳ ಕಾರ್ಯಕ್ರಮ ಇದೆ ಇದರಲ್ಲಿ ನೀವು ಕೊಟ್ಟಿರತಕ್ಕ ಸೈಟುಗಳ ಸಂಖ್ಯೆ ಎಷ್ಟು? ಹತ್ತನೆಯ ಒಂದು ಭಾಗ ಸೈಟುಗಳನ್ನು ಕೊಟ್ಟಿದ್ದೀರಾ ? ಎಷ್ಟು ಮನೆಗಳನ್ನು ಕಟ್ಟಿಸಿದ್ದೀರಿ * ನೀವು ಮಾತೆತ್ತಿದರೆ ದುಡ್ಡಿಲ್ಲವೆಂದು ಹೇಳುತ್ತೀರಿ, ನಿಮ್ಮ ಹಾಗೆ ಇರತಕ್ಕ ಸರ್ಕಾರಗಳು ಯಾವ ರೀತಿ ಕೆಲಸ ಮಾಡಿವೆ ಎಂಬುದನ್ನು ನೋಡಿ

ದ್ದೀರಾ ? ಆಂಧ್ರಪ್ರದೇಶದಲ್ಲಿ ಹರಿಜನ ಗಿರಿಜನರಿಗಾಗಿ ಯಾವ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆಂಬುದನ್ನು ಹೋಗಿ ನೋಡಿ. ಹರಿಜನಗಿರಿಜನ ಅಭಿವೃದ್ಧಿ ಕಾರ್ಪೊರೇಷನ್‌ನಲ್ಲಿ ೬೦ ಕೋಟಿ ರೂಪಾಯಿಗಳನ್ನು ಒದಗಿಸಿ ಕೆಲಸ ಮಾಡಿದ್ದಾರೆ. ಅಲ್ಲಿ ಒಂದು ಆರ್ಡರ್ ಹೊರಡಿಸಿದ್ದಾರೆ, ನಗರ ಮತ್ತು ಗ್ರಾಮಾಂತರ ಪ್ರದೇಶಗಳಿಗೆ ಸಂಬಂಧಪಟ್ಟಂತೆ 50% of the seats are res rved for Scheduled Caste. ಇಂತಹ ಉತ್ತಮ ಕೆಲಸಗಳನ್ನು ಅವರು ಮಾಡಿದ್ದಾರೆ. 14% of the houses constructed are exclusively reserved for Scheduled Castes. These are the suggestions I am throwing. ಕಾಂಗ್ರೆಸ್ ಸರ್ಕಾರ ಆಂಧ್ರ ಪ್ರದೇಶದಲ್ಲಿದ್ದಾಗ ಈ ಕೆಲಸವನ್ನು ಮಾಡಿದ್ದಾರೆ. ಇಪ್ಪತ್ತು ನಮ್ಮ ರಾಜ್ಯದಲ್ಲಿ ಎಷ್ಟು ಮನೆಗಳನ್ನು ಹರಿಜನ ಗಿರಿಜನರಿಗೆ ಕೊಟ್ಟಿದ್ದೀರಿ ? ಶೇಕಡ ೧೪ ಅಲ್ಲಿ, ಶೇಕಡ ೪೦ರಷ್ಟು ಬರುವುದಿಲ್ಲ. ನಾನು ಟೀಕೆ ಮಾಡುವುದು ಅಷ್ಟೇ ಅಲ್ಲ, ಸಲಹೆ ಕೊಡುವುದು ಕೂಡ ನನ್ನ ಧರ್ಮವಾಗಿದೆ. ನಾನು ಸಲಹೆಗಳನ್ನು ಕೊಡುತ್ತಿದ್ದೇನೆ. Budget is for Rs. 40 crorers for housing. Rs. 18 Crorers are earmarked for construction of honses for Scheduled Caste people There are 7 mobile courts to try offences. ಇಲ್ಲಿ ಏನು ಮಾಡಿದ್ದಾರೆಂದರೆ, ನಾನು ತುಂಬಾ ನೊಂದ ಮನಸ್ಸಿನಿಂದ ಹೇಳಬೇಕಾಗಿದೆ. ಅಸ್ಪೃಶ್ಯತಾ ನಿವಾರಣಾ ಕಾನೂನು ಪ್ರಕಾರ ನಮ್ಮ ರಾಜ್ಯದಲ್ಲಿ ಕೇಸ್‌ಗಳ ಸಂಖ್ಯೆಯನ್ನು ಕಡಿಮೆ ಮಾಡುವುದಕ್ಕೋಸ್ಕರ. ಜನರಲ್ ಆಕ್ಟ್ ಪ್ರಕಾರ ಐ.ಪಿ.ಸಿ. ಸೆಕ್ಷನ್ ಅನ್ನು ಜಾರಿ ಮಾಡಿ ಇಬ್ಬರ ಮೇಲೂ ಕೇಸುಗಳನ್ನು ಹಾಕುತ್ತಿದ್ದಾರೆಂದು ನನಗೆ ಯಾರೋ ಒಬ್ಬರು ಹೇಳಿದರು ಸ್ಪೆಷಲ್ ಆಕ್ಟ್ ಪ್ರಕಾರ ಕೇಸು ಹಾಕುವುದನ್ನು ಬಿಟ್ಟು ಐ.ಪಿ.ಸಿ. ಸೆಕ್ಷನ್ ಪ್ರಕಾರ ಕೇಸನ್ನು ಹಾಕಿ ನಮ್ಮ ರಾಜ್ಯದಲ್ಲಿ ಅನ್ ಟಚ್ಚಬಿಲಿಟಿ ಕೇಸುಗಳು ಇಲ್ಲವೆಂದು ಹೇಳುತ್ತಾರೆ. ನಮ್ಮ ರಾಜ್ಯದಲ್ಲಿ ಐ. ಪಿ. ಸಿ. ಕೇಸುಗಳು ೨೨ ಸಾವಿರ ಕೇಸುಗಳಿವೆ. ಈ ಒಂದು ಪದ್ಧತಿ ಮೊದಲು ಹೋಗಬೇಕು. ಆಂಧ್ರರಾಜ್ಯದಲ್ಲಿ ಕಂಟ್ರಾಕ್ಟ್ ವರ್ಕ್‌ನಲ್ಲಿ, ಬಸ್ ರೂಟ್ಸ್‌ಗಳಲ್ಲಿ, ಪಿ. ಡಬ್ಲ್ಯು. ಡಿ. ಕಂಟ್ರಾಕ್ಟ್ಸ್ ಇಂಡಸ್ಟ್ರಿಯಲ್ ಷೆಡ್ಸ್ ಎಲ್ಲದರಲ್ಲೂ ರಿಸರ್ವ್ ಮಾಡಿದ್ದಾರೆ. ೫೫ ಸಾವಿರ ರೂಪಾಯಿಗಳ ಸಹಾಯಧನ ಒಬ್ಬೊಬ್ಬರಿಗೆ ಇಂಡಿವಿಜುಯಲ್ ಕ್ರಷರ್ಸ್‌ಗೆ ಮತ್ತು ೩೦ ಸಾವಿರ ನ್ಯಾಯಬೆಲೆ ಅಂಗಡಿಗಳಲ್ಲಿ ೬ ಸಾವಿರ ನ್ಯಾಯಬೆಲೆ ಅಂಗಡಿಗಳನ್ನು ರಿಸರ್ವೇಷನ್ ಪ್ರಕಾರ ಕೊಟ್ಟಿದ್ದಾರೆ. ಅವರು ಅನೇಕ ಉದ್ಯಮಗಳನ್ನು ತೆಗೆದುಕೊಂಡು ಅದರಲ್ಲಿಯೂ ರಿಸರ್ವೇಷನ್ ಕೊಟ್ಟಿದ್ದಾರೆ. ನೀವು ಒಂದಾದರೂ ಮಾಡಿ. ಕೊನೆಯ ಪಕ್ಷ ರಾಜಸ್ಥಾನದಲ್ಲಿ ಮಾಡಿರುವಂತೆ ಹರಿಜನ ಗಿರಿಜನರ ಮಕ್ಕಳು ಯಾರು ಎಸ್.ಎಸ್.ಎಲ್.ಸಿ ಪಾಸ್ ಮಾಡಿರುತ್ತಾರೆ ಅಂತಹವರಿಗೆ ಕೆಲಸ ಸಿಗುವವರೆಗೆ ತಿಂಗಳಿಗೆ ೧೫೦ ರೂಪಾಯಿಗಳನ್ನು ಕೊಡಿ. ಪದವೀಧರರು ಆಗಿದ್ದರೆ ಅವರಿಗೆ ೨೫೦ ರೂಪಾಯಿಗಳ ಸ್ಟೈಪೆಂಡ್ ಕೊಡಿ. ನೀವು ಏತಕ್ಕೆ ಇಂತಹ ಕೆಲಸಗಳನ್ನು ಮಾಡಬಾರದು ? ನೀವು ಈ ರೀತಿ ಮಾಡದಿದ್ದರೆ ಸಮಸ್ಯೆಗಳು ಬಗೆಹರಿಯುವುದಿಲ್ಲ. ನೀವು ಹರಿಜನ ಗಿರಿಜನರಿಗೆ ನೌಕರಿ ಕೊಡಲಿಕ್ಕೆ ಹೊರಟಿದ್ದೇವೆಂದು ಹೇಳಿದ್ದೀರಿ, ತಾವು ಎಷ್ಟು ಜನರಿಗೆ ಆರ್ಡರ್ ಮಾಡಿದ್ದೀರಿ ?

All SC/ST girls who have passed SSLC are likely to get jobs within March 84. 27 ಜಿಲ್ಲೆಗಳಲ್ಲಿ ಯಾವ ಯಾವ ಇಲಾಖೆಗಳಲ್ಲಿ ಎಷ್ಟೆಷ್ಟು ಜನಕ್ಕೆ ಕೆಲಸ ಆಗಬೇಕು ? ಮಾರ್ಚ್ ೩೧ರಲ್ಲಿ ಹ್ಯಾಂಡಿಕ್ರಾಫ್ಟ್ಸ್‌ಗೆ ೪೦೦ ಖಾದಿ ಗ್ರಾಮೋದ್ಯೋಗದಲ್ಲಿ ೩೦೦. ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ನಲ್ಲಿ ೨೦೦ special recruiment. ಆಗಿದೆ just to make up 29 ಇಂತಹ ಕೆಲಸವನ್ನು ಏನಾದರೂ ತಾವು ಮಾಡಿದ್ದೀರಾ ? ಒಂದೂ ಇಲ್ಲ. ನಾನು ಮೊದಲೇ ಹೇಳಿದ ಹಾಗೆ ಕಳೆದ ಬಡ್ಜೆಟ್ಟಿನಲ್ಲಿ ಏನು ಹೇಳಿದ್ದೀರೋ ಅದನ್ನು ಅನುಷ್ಠಾನ ಮಾಡಲಿಕ್ಕೆ ಆಗಲಿಲ್ಲ. ಸ್ಕಾಲರ್‌ಷಿಪ್ ಜಾಸ್ತಿ ಮಾಡಿದ್ದೇವೆ ಎಂದು ಹೇಳಿದ್ದಾರೆ ಮಾಡಿರಬಹುದು, ನನಗೆ ಗೊತ್ತಿಲ್ಲ ಇವತ್ತಿನ ದಿವಸ ಕಟ್ಟಕಡೆಯದಾಗಿ ಒಂದು ಮನವಿಯನ್ನು ನಾನು ಮಾಡಿಕೊಳ್ಳುತ್ತೇನೆ. ಎಲ್ಲಾ ಸ್ಕೀಮ್‌ಗಳನ್ನು ತೆಗೆದು ಬಿಟ್ಟು ಒಂದು ಸ್ಕೀಮನ್ನು ಮಾತ್ರ ದಯವಿಟ್ಟು ಅನುಷ್ಠಾನಕ್ಕೆ ತನ್ನಿ. Training programme exclusively for SCs. ಪ್ರತಿಯೊಂದು ತಾಲ್ಲೂಕಿನಲ್ಲಿ ವಿದ್ಯೆ ಕಲಿತು ಯಾರು ಕೆಲಸ ಇಲ್ಲವೆಂದು ಮನೆಯಲ್ಲಿಯೇ ಇದ್ದಾರೆ ಅವರಿಗೆ ವ್ಯವಸಾಯ ಮಾಡಲಿಕ್ಕೆ ಭೂಮಿ ಇಲ್ಲ, ಬಂಡವಾಳ ಇಲ್ಲ. ತಂದೆ ತಾಯಿಗಳಿಗೆ ಹೊರೆಯಾಗಿ ಮನೆಯಲ್ಲಿ ಬಿದ್ದಿದ್ದಾರೆ. ಷೆಡ್ಯೂಲ್ಡ್ ಕ್ಲಾಸ್‌ಗೆ ಸೇರಿದ ಪದವೀಧರರು ಯಾರು ಇದ್ದಾರೆ, ಅವರಿಗೆ ತಿಂಗಳಿಗೆ ೫೦ ರೂಪಾಯಿ ಅದರೂ ಸಂಬಳ ಕೊಡುವುದಕ್ಕೆ

ಅವರ ನಿರುದ್ಯೋಗ ಸಮಸ್ಯೆಯನ್ನು ಸ್ವಲ್ಪ ಮಟ್ಟಿಗಾದರೂ ತಡೆಯುವುದಕ್ಕೆ ಒಂದು ಸ್ಕೀಮನ್ನು ಹಾಕಿಕೊಳ್ಳಿ. At least give them training and give them stipend until they get their jobs. ಇಲ್ಲದೇ ಹೋದರೆ, ಬಹುಶಃ ಈ ಸಮಸ್ಯೆ ಬಹಳ ದೊಡ್ಡ ಸಮಸ್ಯೆಯಾಗುತ್ತದೆ. ಹರಿಜನರಿಗೆ ಮಾತ್ರ ಇದನ್ನು ಮೀಸಲಿಡಬೇಕೆಂದು ನಿರ್ಧಾರ ಮಾಡಿ ಎಲ್ಲರಿಗೂ ಕೆಲಸ ಕೊಡಲಿಕ್ಕೆ ಸಾಧ್ಯವಿಲ್ಲವೆನ್ನುವುದಾದರೆ ಬ್ಯಾಂಕಿನಿಂದ ಸಾಲಭದಲ್ಲಿ ಅವರಿಗೆ ಸಾಲಕೊಟ್ಟು ಅದರಿಂದ ಅವರು ಸ್ವಂತ ಉದ್ಯಮ ಮಾಡಿಕೊಳ್ಳಲು ಸಾಧ್ಯವಾಗಿ ತಮ್ಮ ಕಾಲ ಮೇಲೆ ನಿಲ್ಲುವ ಹಾಗೆ ಆದರೂ ಮಾಡಿ. ನಮ್ಮ ಸರ್ಕಾರದಲ್ಲಿ ಹಿಂದೆ ಕೈಗೊಂಡಿದ್ದ ಯೋಜನೆಗಳಾದ ಗೃಹ ಕಲ್ಯಾಣ, ನೇಗಿಲು ಭಾಗ್ಯ ಆದಿಯಾಗಿ ಕೆಲವು ಹೊಸ ಹೊಸ ಸ್ಕೀಮುಗಳು ಇದ್ದುವು. ಈಗ ನೇಗಿಲು ಭಾಗ್ಯ, ಗೃಹ ಕಲ್ಯಾಣ ಎಂದರೆ ಯಾರಿಗೂ ಗೊತ್ತಿಲ್ಲ.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ರಾಮಕೃಷ್ಣ ಅವರ ಮಾತು ಕೇಳಿದರೆ ಅವರ ಕಾಲದಲ್ಲಿ ಸ್ವರ್ಗವನ್ನೇ ನಿರ್ಮಾಣ ಮಾಡಿದ್ದರು ಎಂದು ಭಾಸವಾಗುತ್ತದೆ.

ಶ್ರೀ ವೈ. ರಾಮಕೃಷ್ಣ.—ಇದು ಏನು ಆಗಿದೆ ಎಂದರೆ ಹಿಂದಿನ ಸರ್ಕಾರದಲ್ಲಿ ಇಷ್ಟು ಕೆಲಸ ಆಯಿತು ಎಂದು ಹೇಳುತ್ತಿದ್ದರೆ a sense of intolerance ತೋರಿಸಿದರೆ ಹೇಗೆ ? It is very bad. ಇವೊತ್ತು ನಾನು ಹೇಳುವುದು ಏನೆಂದರೆ ಹೆಗ್ಡೆಯವರ ಸರ್ಕಾರ ಏನು ಮಾಡಿದೆ ಎಂದು ಯೋಚನೆ ಮಾಡಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಇವರು ಏನೂ ಮಾಡಿಲ್ಲ. ಇದನ್ನು ನೋಡಿದಾಗ ಮನಸ್ಸಿಗೆ ಬಹಳ ಕಷ್ಟವಾಗುತ್ತದೆ. that shows how the vested interest is playing still with this Janata Government. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ವಿ. ಎಸ್. ಆಚಾರ್ಯ (ಉಡುಪಿ).—

ಸನ್ಮಾನ್ಯ ಅಧ್ಯಕ್ಷರೇ, ನಗರಾಭಿವೃದ್ಧಿ ಮತ್ತು ಈ ಖಾತೆಗೆ ಸಂಬಂಧಪಟ್ಟ ಇತರ ಇಲಾಖೆಗಳು ಮತ್ತು ಸಮಾಜ ಕಲ್ಯಾಣ ಇಲಾಖೆಯ ಬೇಡಿಕೆಗಳ ಬಗ್ಗೆ ಮಾತನಾಡುತ್ತೇನೆ. ರೇಷ್ಮೆ ಖಾತೆ ಮತ್ತು ಸಮಾಜ ಕಲ್ಯಾಣ ಖಾತೆಯ ಬಗ್ಗೆ ನಮ್ಮ ಪಕ್ಷದ ಪರವಾಗಿ ಮಿತ್ರರು ಮಾತನಾಡುತ್ತಾರೆ. ನಗರಾಭಿವೃದ್ಧಿ ಖಾತೆಯ ಬಗ್ಗೆ ಕೆಲವೊಂದು ಪ್ರಮುಖವಾದ ಸಂಗತಿಗಳ ಬಗ್ಗೆ ಮಿತ್ರರು ಈಗಾಗಲೇ ಮಾತನಾಡಿದ್ದಾರೆ. ಇವೊತ್ತು ಎರಡು ಗಂಟೆಗೆ ಚರ್ಚೆ ಮುಕ್ತಾಯ ಆಗಬೇಕಾಗಿದೆ. ಈ ದೃಷ್ಟಿಯಿಂದ ಆದಷ್ಟು ಸೂಕ್ಷ್ಮವಾಗಿ ನನ್ನ ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಪ್ರಾರಂಭದಲ್ಲಿ ನಮ್ಮ ಸರ್ಕಾರಕ್ಕೆ ಮತ್ತು ಸಚಿವರಿಗೆ ಅಭಿನಂದನೆಗಳು ಸಲ್ಲಬೇಕಾಗಿದೆ. ಏಕೆಂದರೆ, ಮಾತು ಕೊಟ್ಟಂತೆ ಬಹುಶಃ ಹೈಕೋರ್ಟಿಗೆ ಹೋಗಿ ಸ್ಟೇ ತಂದಿರುವಂಥ ಏಳು ಸ್ಥಳೀಯ ಸಂಸ್ಥೆಗಳನ್ನು ಆರು ಟೌನ್ ಮುನಿಸಿಪಾಲಿಟಿಗಳನ್ನು ಬಿಟ್ಟು ಬೇರೆ ಎಲ್ಲಾ ಕಾರ್ಪೊರೇಷನ್ ಸಿಟಿ ಮುನಿಸಿಪಾಲಿಟಿಗಳಿಗೆ ಮತ್ತು ಪುರಸಭೆಗಳಿಗೆ ಚುನಾವಣೆ ನಡೆಸಿ ಜನತೆಯ ಕೈಗೆ ಆಡಳಿತವನ್ನು ಕೊಟ್ಟಿದ್ದಾರೆ ಮತ್ತು ಮತದಾನದ ವಯಸ್ಸನ್ನು ಹದಿನೆಂಟು ವರ್ಷಗಳಿಗೆ ಇಳಿಸಿ ಹದಿನೆಂಟು ವರ್ಷದ ಯುವಕರಿಗೆ ಮತದಾನದ ಹಕ್ಕನ್ನು ಕೊಟ್ಟಿದ್ದಾರೆ. ಮಾತ್ರವಲ್ಲ ಮಹಿಳೆಯರಿಗೆ ಪ್ರಥಮ ಬಾರಿಗೆ ಶೇಕಡಾ ೨೦ರಷ್ಟು ಸ್ಥಾನಗಳನ್ನು ಕೊಟ್ಟಿದ್ದಾರೆ. ಬೇರೆ ಬೇರೆ ಕಡೆಗೆ ಕಾರ್ಪೊರೇಷನ್ ಅಥವಾ ಮುನಿಸಿಪಾಲಿಟಿಗೆ ಹೋಗುವಾಗ ಒಂದು ದೃಶ್ಯ ಕಣ್ಣಿಗೆ ಕಾಣುತ್ತದೆ ಈ ಮಹಿಳಾ ಪ್ರತಿನಿಧಿಗಳು ಉತ್ಸಾಹದಿಂದ ಸ್ಥಳೀಯ ಸಂಸ್ಥೆಗಳ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದಾರೆ. ಅವರಿಗೆ ಈಗ ಎಷ್ಟು ಧೈರ್ಯ ಬಂದಿದೆಯೆಂದರೆ ಮೀಸಲಾತಿ ಇರುವ ಸ್ಥಾನಗಳಲ್ಲಿ ಸ್ಪರ್ಧೆ ಮಾಡುವುದಲ್ಲದೆ ಸಾಮಾನ್ಯ ಸ್ಥಾನಗಳಿಗೂ ಕೂಡ ಸ್ಪರ್ಧೆ ಮಾಡಿ ಗೆದ್ದು ಬರುವ ಆಶಯವನ್ನು ಹೊಂದಿದವರಾಗಿದ್ದಾರೆ. ನನ್ನ ಮತ ಕ್ಷೇತ್ರದಲ್ಲಿ ಪ್ರಥಮ ಬಾರಿಗೆ ಹತ್ತೊಂಬತ್ತು ಜನಗಳ ಪೈಕಿ ನಾಲ್ಕು ಜನ ಮಹಿಳೆಯರು ಇದ್ದಾರೆ. ಅಲ್ಲಿಗೆ ಶೇಕಡಾ ೨೦ ಆಯಿತು. ಸಕಲೇಶಪುರದಲ್ಲಿ ಹದಿನೈದಕ್ಕೆ ಐದು ಮಂದಿ ಮಹಿಳೆಯರು ಇದ್ದಾರೆ. ಆದ್ದರಿಂದ ಈ ಅವಕಾಶವನ್ನು ಮಾಡಿಕೊಟ್ಟ ಸರ್ಕಾರ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಬೇಕು. ಸ್ಥಳೀಯ ಸಂಸ್ಥೆಗಳಲ್ಲಿ ಚುನಾಯಿತ ಪ್ರತಿನಿಧಿಗಳು ಏನು ಅಭಿಪ್ರಾಯ ಪಡುತ್ತಾರೆ ಎಂದರೆ ಎಷ್ಟೋ ವರ್ಷಗಳ ನಂತರ ಚುನಾವಣೆ ಆಗಿದೆ. ಅವರಿಗೆ ಅಧಿಕಾರ ಬಂದಿದೆ. ಜೊತೆಗೆ ಜನರ ನಿರೀಕ್ಷೆ ಕೂಡ ಜಾಸ್ತಿಯಾಗಿದೆ. ಆದ್ದರಿಂದ ಅವರಿಗೆ ಸರಿಯಾಗಿ ಕೆಲಸ ಮಾಡಲಿಕ್ಕೆ ಬೇಕಾದಂಥ ಆರ್ಥಿಕ ವ್ಯವಸ್ಥೆಯನ್ನು ಕೂಡ ಮಾಡಬೇಕಾಗುತ್ತದೆ. ನಗರ ಸಭೆಗಳು ಮುಖ್ಯವಾಗಿ ೨೦-೨೫ ಕೆಲಸಗಳನ್ನು ಮಾಡಬೇಕಾಗು

ತ್ತದೆ. ಪ್ರಾಮುಖ್ಯವಾಗಿ ನಗರದಲ್ಲಿ ಓಡಾಡಲಿಕ್ಕೆ ಬೇಕಾದಂಥ ಒಳ್ಳೆಯ ರಸ್ತೆ, ರಾತ್ರಿ ಕಾಲದಲ್ಲಿ ಓಡಾಡಲಿಕ್ಕೆ ಸರಿಯಾದ ದೀಪದ ವ್ಯವಸ್ಥೆ ಒಳ್ಳೆಯ ಕುಡಿಯುವ ನೀರಿನ ಪೂರೈಕೆ, ಸಾರ್ವಜನಿಕ ಸ್ವಚ್ಛತೆ ಇವೇ ಮೊದಲಾದ ಕೆಲಸಗಳು ಆಗಬೇಕು. ಸನ್ಮಾನ್ಯ ಸಚಿವರಿಗೆ ಗೊತ್ತು, ಅವರು ಸ್ವತಃ ಇಂಜಿನೀಯರ್ ಆಗಿದ್ದಾರೆ. ಅವರಿಗೆ ಗೊತ್ತು ಒಂದು ಮಿಲಿಯನ್ ಗ್ಯಾಲನ್ ನೀರು ಈ ನಗರಕ್ಕೆ ಬರಬೇಕಾದರೆ ಒಂದು ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಬೇಕಾಗುತ್ತದೆ. ಎಂದು ಇದೇ ರೀತಿ ಒಂದು ಕಿಲೋಮೀಟರ್ ಡಾಂಬರು ರಸ್ತೆ ಮಾಡಬೇಕಾದರೆ ಒಂದೂವರೆ ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಒಂದು ದೀಪ ಹೊಸದು ಹಾಕಬೇಕಾದರೆ ಮೂರುವರೆ ಸಾವಿರ ರೂಪಾಯಿಗಳು ಬೇಕಾಗುತ್ತದೆ. ಸಾರ್ವಜನಿಕ ಸ್ವಚ್ಛತೆಗೆ ವ್ಯವಸ್ಥೆ ಮಾಡಬೇಕೆಂದು ಕಡಿಮೆಯೆಂದರೂ ಎರಡೂವರೆ ಲಕ್ಷ ಬೇಕು. ಇಂತಹ ಪರಿಸ್ಥಿತಿಯಲ್ಲಿ ಆರ್ಥಿಕ ಬೆಂಬಲ ಕೊಡುವ ರೀತಿಯಲ್ಲಿ ಸರ್ಕಾರ ವ್ಯವಸ್ಥೆ ಮಾಡಬೇಕಾದುದು ಅಗತ್ಯ. ಈ ದೃಷ್ಟಿಯಲ್ಲಿ ತಾವು ಮುಂದೆ ಹೋಗಿದ್ದೀರಿ ಎಂದು ವರದಿಯಲ್ಲಿ ಹೇಳಲಾಗಿದೆ ಈ ಸ್ಥಳೀಯ ಸಂಸ್ಥೆಗಳಿಗೆ ಧನ ಆಯೋಗವನ್ನು ರಚನೆ ಮಾಡಿದ್ದಾರೆ. ಫಾದರ್ ಜಾಕೋಬ್ ಅವರ ನೇತೃತ್ವದಲ್ಲಿ ಸ್ಥಳೀಯ ಸಂಸ್ಥೆಗಳ ಆರ್ಥಿಕ ವ್ಯವಸ್ಥೆ ಹೇಗೆ ಇರಬೇಕು, ಸರ್ಕಾರ ಸ್ಥಳೀಯ ಸಂಸ್ಥೆಗಳ ಆರ್ಥಿಕ ವ್ಯವಸ್ಥೆಯಲ್ಲಿ ಯಾವ ರೀತಿ ಭಾರ ಹೊರಬೇಕೆಂದು ಚರ್ಚೆ ಮಾಡಲಿಕ್ಕೆ ಒಂದು ಆಯೋಗ ಮಾಡಿ ಈಗಾಗಲೇ ಪ್ರಶ್ನಾವಳಿಗಳನ್ನು ಬೇರೆ ಬೇರೆ ಪುರಸಭೆಗಳಿಗೆ, ಶಾಸಕರಿಗೆ ಕೊಟ್ಟಿದ್ದಾರೆ. ಈ ವೇದಿಕೆಯಲ್ಲಿ ನಾನು ಹೇಳುತ್ತಿದ್ದೇನೆ. ಏನೆಂದರೆ ಆಯೋಗದ ವರದಿಯನ್ನು ಆದಷ್ಟು ಬೇಗನೆ ನಿರೀಕ್ಷೆ ಮಾಡಿದ್ದರೂ ಈಗಿರುವ ಸ್ಥಿತಿಯನ್ನು ಅರ್ಥ ಮಾಡಿಕೊಂಡು ಸರ್ಕಾರದವರು, ಹಿಂದೆ ಕರ್ನಾಟಕ ಟ್ಯಾಕ್ಸೇಶನ್ ರಿವ್ಯೂ ಕಮಿಟಿ ಎಂದು ಮಾಡಿದ್ದರು. ಶ್ರೀ ಗುಂಡೂರಾವ್‌ರವರು ಅದರ ಅಧ್ಯಕ್ಷರಾಗಿದ್ದರು. ಕರ್ನಾಟಕ ಟ್ಯಾಕ್ಸೇಷನ್ ರಿವ್ಯೂ ಕಮಿಟಿಯವರು ೧೯೮೨ನೇ ಇಸವಿಯಲ್ಲಿ ವರದಿಯನ್ನು ಕೊಟ್ಟಿದ್ದಾರೆ. ಅದರಲ್ಲಿ ಅನೇಕ ಶಿಫಾರಸ್ಸುಗಳನ್ನು ತತ್‌ಕ್ಷಣ ಜಾರಿಗೆ ತರುವ ಅಗತ್ಯತೆ ಇದೆ. ಏಕೆಂದರೆ ಕಳೆದ ಏಳೆಂಟು ವರ್ಷಗಳ ಅವಧಿಯಲ್ಲಿ. ಹೋದ ವರ್ಷ ಕೂಡ ನಾವು ಇದೇ ಸಂದರ್ಭದಲ್ಲಿ ಇದನ್ನು ಹೇಳಿದ್ದೆ. ಈ ವರ್ಷ ಕೂಡ ಅಗತ್ಯವಾಗಿ ಹೇಳಬೇಕಾಗಿದೆ. ಕಳೆದ ಏಳೆಂಟು ವರ್ಷಗಳ ಅವಧಿಯಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಪ್ರತಿನಿಧಿಗಳು ಇಲ್ಲದಿದ್ದ ಸಂದರ್ಭದಲ್ಲಿ ತಂತರ್ಂಪರಿಸ್ಥಿತಿ ಹೊರಿಸಿದ್ದಂತಹ ಸಂದರ್ಭದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಇದ್ದಂತ ಆದಾಯವೇನು ?

ಸ್ಥಳೀಯ ಸಂಸ್ಥೆಗಳ ಒಳ್ಳೆಯ ಆದಾಯ ಮೂಲಗಳನ್ನು ರಾಜ್ಯ ಸರ್ಕಾರ ಪುನಃ ವಾಪಸ್ಸು ತೆಗೆದುಕೊಂಡು ಈ ಆದಾಯದಿಂದ ಸ್ಥಳೀಯ ಸಂಸ್ಥೆಗಳಿಗೆ ವಂಚನೆ ಮಾಡಿರತಕ್ಕಂಥ ಸಂದರ್ಭ ಬಂದಿದೆ. ಇಲ್ಲದಿದ್ದರೆ ಸ್ಥಳೀಯ ಸಂಸ್ಥೆಗಳಿಗೆ ನ್ಯಾಯವಾದ ತೆರಿಗೆ ಮೂಲಗಳು, ಟ್ಯಾಕ್ಸ್ ರೆವಿನ್ಯೂ, ಪ್ರಾಪರ್ಟಿ ಟ್ಯಾಕ್ಸ್, ಪ್ರೊಫೆಷನಲ್ ಟ್ಯಾಕ್ಸ್ ಆನ್ ಅಡ್ಜಸ್ಟ್‌ಮೆಂಟ್, ಬಿಸಿನೆಸ್ ಟ್ಯಾಕ್ಸ್ ಹೀಗೆ ಏನು ತರಹದ ಟ್ಯಾಕ್ಸ್. ಇದರಲ್ಲಿ ಉಳಿಯುವಂಥಹದ್ದು ಪ್ರಾಪರ್ಟಿ ಟ್ಯಾಕ್ಸ್ ಮತ್ತು ಜಾಹಿರಾತು ಟ್ಯಾಕ್ಸ್ ಮಾತ್ರ. ಇಷ್ಟರವರೆಗೆ ರಿಂದ ಆಕ್ಟ್ರಾಯನ್ನು ತೆಗೆದುಹಾಕಿದ್ದಾರೆ ಅದರ ಬದಲಿಗೆ ಪರಿಹಾರ ಮಾತ್ರ ಕೊಡುತ್ತೇವೆಂದು ಹೇಳಿದ್ದೀರಿ. ಸೆಸ್‌ಗಳು ಸರ್ಕಾರಕ್ಕೆ ಬರುತ್ತದೆ. ಮೋಟಾರ್ ವೆಹಿಕಲ್ ಟ್ಯಾಕ್ಸ್, ಮನರಂಜನಾ ತೆರಿಗೆ ವೃತ್ತಿ ತೆರಿಗೆ ಇವುಗಳಲ್ಲಿ ಪರಸ್ಪರ ಪಾಲುಮಾಡಿಕೊಳ್ಳುವುದು ಇದೆ ನಾನ್ ಟ್ಯಾಕ್ಸ್ ರೆವಿನ್ಯೂ ಕೂಡಾ ಇದೆ. ಡೆವಲಪ್‌ಮೆಂಟ್ ಗ್ರಾಂಟ್ಸ್ ಇನ್ನಿತರ ಸುಮಾರು ೨೫ ರಿಂದ ೩೦ ಬಗೆಯ ಆದಾಯ ಮೂಲಗಳನ್ನು ತಿಳಿಸಿದ್ದೀರಿ. ಇಲ್ಲಿ ಪ್ರಶ್ನೆ ಏನು ಅಂದರೆ ಪ್ರಾಪರ್ಟಿ ಟ್ಯಾಕ್ಸ್ ಪ್ರಥಮ ಸ್ಥಾನವನ್ನು ಪಡೆಯುತ್ತದೆ ವೈಜ್ಞಾನಿಕವಾಗಿ ನಾನು ಇದರ ಬಗ್ಗೆ ವಿಶ್ಲೇಷಣೆ ಮಾಡತಕ್ಕಂಥಾದ್ದು ಅವಶ್ಯಕತೆ ಇದೆ. ಇವೊತ್ತು ಸಬ್ಜೆಕ್ಟೀವ್ ಅಸೆಸ್‌ಮೆಂಟ್ ಮತ್ತು ಆಬ್ಜೆಕ್ಟೀವ್ ಗೈಡ್‌ಲೆನ್ಸ್ ನಮ್ಮಲ್ಲಿಲ್ಲ. ಟ್ಯಾಕ್ಸೇಷನ್ ರೆವ್ಯೂ ಕಮಿಟಿಯವರು ಏನೊಂದು ಸಲಹೆಗಳನ್ನು ಕೊಟ್ಟಿದ್ದಾರೆ. ಆ ಸಲಹೆಗಳನ್ನು ಜಾರಿಗೊಳಿಸ ಬೇಕು. ಅದರಲ್ಲಿ ಏನು ಬರುತ್ತದೆ ಎಂದರೆ ಪ್ಯಾರಾ ೫ ಮತ್ತು ಸಬ್ ಪ್ಯಾರ ಎರಡರಲ್ಲಿ ಈ ರೀತಿ ಇದೆ.

"Tho Committee strongiy feels that the rent fixed by the Rent Controller should not necessarily be the basis of ARV rent controlled properties. theARV should be dilinked from the controlled rent and shovld be decided on the basis of the economic and prevailing rent in the market.

ಸ್ಥಳವನ್ನು ಕಡಿಮೆ ಬಾಡಿಗೆಗೆ ಕೂಡಾ ಕೊಟ್ಟಿದ್ದಾರೆ. ಇದರ ಲಾಭವನ್ನು ನಗರಸಭೆಗಳಿಗೆ ಕೊಡಬೇಕು, ನಷ್ಟ ಆಗಬಾರದು. ವ್ಯವಹಾರಿಕವಾಗಿ ರೆಂಟಲ್ ವ್ಯಾಲ್ಯು ನಿಶ್ಚಯ ಮಾಡಿ ಬಾಡಿಗೆದಾರರು ಮಾಲೀಕರು ಕೊಡುವಂಥ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಇದರ ಗೈಡ್‌ಲೈನ್ಸ್ ಸ್ಪಷ್ಟವಾಗಿ ಇರಬೇಕು. ಇಲ್ಲದಿದ್ದರೆ, ಅಸೆಸ್‌ಮೆಂಟ್ ಅಧಿಕಾರಿಗಳು ಅನೇಕ ರೀತಿಯಲ್ಲಿ ಭ್ರಷ್ಟಾಚಾರ ಮಾಡುವುದಕ್ಕೆ ಅವಕಾಶವಾಗುತ್ತದೆ. ಮೂಲತಃ ಪ್ರಾಮುಖ್ಯವಾದ ವಿಚಾರ, ಇವು ಗಳಿಗೆ ಆರ್ಥಿಕವಾಗಿ ಬೆಂಬಲ ಕೊಡುವಂಥ ವಿಚಾರದಲ್ಲಿ ವೃತ್ತಿ ತೆರಿಗೆ ಮುನಿಸಿಪಾಲಿಟಿಯವರಿಗೆ ಬರಬೇಕಾಗಿತ್ತು. ೧೯೭೬ ರಿಂದ ಸ್ಥಳೀಯ ಸಂಸ್ಥೆಗಳಿಂದ ತೆಗೆದುಹಾಕಿದ್ದಾರೆ. ರಾಜ್ಯ ಸರ್ಕಾರ ಅಭಿವೃದ್ಧಿಗೋಸ್ಕರ ಮಧ್ಯೆ ಕೊಡುತ್ತಿದೆಯೆಂದು ಹೇಳುತ್ತಿದ್ದಾರೆ. ವೃತ್ತಿ ತೆರಿಗೆ, ಮುನಿಸಿಪಾಲಿಟಿ ಲಿಸ್ಟಿನಲ್ಲಿದ್ದಂಥ ಒಂದು ಭಾಗ. ಸುಮಾರು ೧೦–೧೨ ಕೋಟಿ ರೂಪಾಯಿಗಳನ್ನು ಇದರಿಂದ ವಸೂಲ್ಮಾಡುತ್ತಿದ್ದಾರೆ. ಕಳೆದ ವರ್ಷ ಸ್ವಲ್ಪ ಮಟ್ಟಿನ ರಿಯಾಯಿತಿಯನ್ನು ಘೋಷಣೆ ಮಾಡು ವುದಕ್ಕಿಂತ ಮುಂಚೆ ಒಂದೂವರೆ ಅಥವಾ ಎರಡು ಕೋಟಿ ರೂಪಾಯಿಗಳನ್ನು ಮಾತ್ರ ಅಭಿವೃದ್ಧಿಗಾಗಿ ಕೊಟ್ಟಿದ್ದೀರಿ. ರಿಯಾಯಿತಿ ಕೊಟ್ಟು ನಂತರ ನೀವು ವಸೂಲ್ಮಾಡಿದಂಥ ವೃತ್ತಿ ತೆರಿಗೆ ನಾಲ್ಕು ಕೋಟಿ ಮೂವತ್ತು ಲಕ್ಷ ರೂಪಾಯಿಗಳು. ಅದನ್ನು ಜಾಸ್ತಿ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಮೋಟಾರು ವಾಹನಗಳ ತೆರಿಗೆ ವಿಚಾರವಲ್ಲಿ ಹೇಳಬೇಕೆಂದರೆ ಶಾಲಗೆ ಇಲಾಖೆಯಲ್ಲಿ ಸುಮಾರು ಒಂದು ಸಾವಿರದಿಂದ ಎರಡು ಸಾವಿರ ಬಸ್ಸುಗಳು ನಗರದಲ್ಲಿ ಓಡಾಡುತ್ತಿವೆ. ನ್ಯಾಷನಲ್ ಹೈವೇಗಳಿಗೆ ಕೇಂದ್ರ ಸರ್ಕಾರದಿಂದ ಹಣ ಬರಬೇಕು, ಅದಕ್ಕೆ ಬೇಕಾದ ಮೈನ್ಟೇನೆನ್ಸ್ ಮಾಡಬೇಕು. ಹಳ್ಳಿ ಹೆದ್ದಾರಿಗಳಿಗೆ ಹೊಸ ಕೊಡುಗೆಯನ್ನು ಮಾನ್ಯ ದೇವೇಗೌಡರು ಕೊಟ್ಟಿದ್ದಾರೆ ಅದಕ್ಕೆ ಬೇರೆ ವ್ಯವಸ್ಥೆ ಮಾಡಬೇಕು. ಪಟ್ಟಣದಲ್ಲಿರುವಂಥ ಹೆದ್ದಾರಿಗಳನ್ನು ಮುನಿಸಿಪಾಲಿಟಿಯವರು ನೋಡಿ ಕೊಳ್ಳಬೇಕು. ಪಟ್ಟಣಗಳಲ್ಲಿರುವಂಥ ರಸ್ತೆಗಳು, ಲಾರಿಗಳು ಬಸ್ಸುಗಳು ಓಡಾಡುವುದರಿಂದ ರಸ್ತೆ ಕಿತ್ತು ಹೋಗುತ್ತವೆ. ರಸ್ತೆಗಳಿಗೆ ಡಾಮರನ್ನು ಸರಿಯಾಗಿ ಹಾಕಿರುವುದಿಲ್ಲ. ನಗರಸಭೆ, ಪುರಸಭೆಗಳಿಗೆ ಸರ್ಕಾರದವರು ಕೊಟ್ಟಿರತಕ್ಕಂಥ ಹಣ ಕಡಿಮೆ ಇದೆ. ಪರಿಹಾರಕ್ಕಾಗಿ ೮೦ ಕೋಟಿ ರೂಪಾಯಿಗಳನ್ನು ವಸೂಲ್ಮಾಡಿ, ಅದರಲ್ಲಿ ೮ ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದೀರಿ. ಕೆಲವು ಮುನಿಸಿಪಾಲಿಟಿ ಗಳಿಗೆ ಐದು ರೂಪಾಯಿಗಳು ಮಾತ್ರ ಮೋಟಾರು ವಾಹನ ತೆರಿಗೆ ಕಾಂಪನ್ಸೇಷನ್ ಇದೆ. ಕಾಗದ ಪತ್ರದ ಖರ್ಚು ಆರು ರೂಪಾಯಿಗಳಾಗಬಹುದು. ಬೇರೆ ಮುನಿಸಿಪಾಲಿಟಿಗಳಿಗೆ ಕಡಿಮೆ ಕೊಟ್ಟಿದ್ದೀರಿ. ಬೇರೆ ಕಾರ್ಪೊರೇಷನ್‌ಗಳಿಗಿಂತ ಬೆಂಗಳೂರು ನಗರ ಕಾರ್ಪೊರೇಷನ್‌ಗೆ ನಾಲ್ಕು ಲಕ್ಷ ಐವತ್ತೇಳು ಸಾವಿರ ಕೊಟ್ಟಿದ್ದೀರಿ. ನಮ್ಮ ಸಣ್ಣಪುಟ್ಟ ತಾಲ್ಲೂಕುಗಳಿಗೆ ಆದರಿಂದ ಏಳು ಸಾವಿರದವರೆಗೆ ಕೊಟ್ಟಿದ್ದೀರಿ. ನಮ್ಮ ಮಂಗಳೂರಿನಲ್ಲಿನ ಮುನಿಸಿಪಾಲಿಟಿಗೆ ಬರೀ ೨೨ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೀರಿ. ಕಳೆದವರ್ಷ ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದಾಗ ನೀವು ೧೫ ಲಕ್ಷ ಹೆಚ್ಚಿಗೆ ಕೊಡುತ್ತೇವೆಂದು ಹೇಳಿದ್ದಿರಿ. ಏಳು ಎಂಟು ಲಕ್ಷ ಕೊಡುತ್ತೇವೆಂದು ಹೇಳಿದವರು ಸ್ವಲ್ಪ ಮಾತ್ರ ಹಣ ಕೊಟ್ಟಿದ್ದೀರಿ. ನಾನು ಏನು ಕೇಳುತ್ತಿದ್ದೇನೆ ಎಂದರೆ ಟ್ಯಾಕ್ಸೇಷನ್ ರಿವ್ಯೂ ಕಮಿಟಿಯವರು ಹೇಳಿದಂತೆ ಅಡ್‌ಹಾಕ್ ಆಗಿ ಮೋಟಾರು ವಾಹನ ತೆರಿಗೆಯಲ್ಲಿ, ಶೇಕಡಾ ೨ ರಷ್ಟನ್ನು ಮುನಿಸಿಪಾಲಿಟಿಗಳಿಗೆ ಕೊಡಬೇಕೆಂದು ಹೇಳಿದ್ದಾರೆ. ಎರಡು ಪರ್ಸೆಂಟ್ ಕೊಟ್ಟರೆ ಎಷ್ಟಾಗುತ್ತದೆ ಎಂದರೆ ಸುಮಾರು ಆರು ಕೋಟಿ ಅರವತ್ತು ಲಕ್ಷ ಆಗುತ್ತದೆ. ಇಷ್ಟೊತ್ತು ರಾಜ್ಯದಲ್ಲಿರತಕ್ಕಂಥ ಎಲ್ಲಾ ವಾಹನಗಳು ಸ್ಥಳೀಯ ಸಂಸ್ಥೆಗಳು ನಗರಸಭೆಗಳು, ಮತ್ತು ಮುನಿಸಿಪಾಲಿಟಿ ರಸ್ತೆಗಳ ಮೇಲೆ ತಿರುಗಾಡುತ್ತಿವೆ. ಕಾರ್ಪೊರೇಷನ್‌ಗಳಿನ ಶೇಕಡಾ ೧೦ ರಷ್ಟು ಪರಿಹಾರ ಕೇಳುತ್ತಿದ್ದಾರೆ. ರಾಜ್ಯದ ಖಜಾನೆಗೆ ಬರುವಂಥ ಆದಾಯದಲ್ಲಿ ಮೂರು ಮುಖ್ಯವಾದ ಆದಾಯಗಳು ಸೇಲ್ಸ್ ಟ್ಯಾಕ್ಸ್, ಅಬ್ಕಾರಿ, ಹಾಗೂ ವಾಹನ ತೆರಿಗೆ. ಈ ತೆರಿಗೆ ಹಣವೆಲ್ಲವೂ ಸಮಗ್ರ ಅಭಿವೃದ್ಧಿಗೆ ಹೋಗಬೇಕು, ಪಟ್ಟಣಕ್ಕೆ ಮಾತ್ರವಲ್ಲ ಇಡೀ ರಾಜ್ಯಕ್ಕೆ ಸಿಗಬೇಕು. ಸಾಗಾಣಿಕೆಯಿಂದ ಶೇಕಡ ೧೦ ರಂತೆ ಇಷ್ಟೊತ್ತು ಎಂಟು ಕೋಟಿ ರೂಪಾಯಿ ಗಳನ್ನು ಸ್ಥಳೀಯ ಸಂಸ್ಥೆಗಳಿಗೆ ಕೊಡಬೇಕಾಗಿತ್ತು. ನಗರಸಭೆಯವರು ಈ ಬಗ್ಗೆ ದಾಕ್ಷಿಣ್ಯದಿಂದ ಮುಖ್ಯಮಂತ್ರಿಗಳನ್ನು ಹತ್ತಿರ ಮಾತನಾಡಿದ್ದಾರೆಂದು ಭಾಸವಾಗುತ್ತದೆ. ಈಗ ಇಂತಹಂಥ ತೆರಿಗೆ ಬದಲಾವಣೆಯಾಗಬೇಕು. ಟ್ಯಾಕ್ಸೇಷನ್ ಕಮಿಟಿಯವರು ಹೇಳಿರುವ ಪ್ರಕಾರ ಶೇಕಡ ೫ ರಷ್ಟು ಜನಸಂಖ್ಯೆ ಆಧಾರದ ಮೇಲೆ ಟ್ಯಾಕ್ಸನ್ನು ವಿಂಗಡಣೆ ಮಾಡಬೇಕು. ಪುರಸಭೆ ಮತ್ತು ನಗರಸಭೆಗಳಿಗೆ ವ್ಯಾಪ್ತಿಯಲ್ಲಿ ರಿಜಿಸ್ಟರಾದ ವಾಹನಗಳ ಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು ತಾವು ಇದನ್ನು

ಪರಿಶೀಲನೆ ಮಾಡಬೇಕು. ಇದನ್ನು ಸ್ವಲ್ಪ ತಿದ್ದುಪಡಿ ಮಾಡಿ ಜನಸಂಖ್ಯೆ ಶೇಕಡ ೪೦ ಎಂದು ಇಟ್ಟುಕೊಳ್ಳಬೇಕು. ರಿಜಿಸ್ಟರಾದ ವಾಹನಗಳಲ್ಲಿ ಶೇಕಡ ೩೫ ರಷ್ಟು ಮತ್ತು ಶೇಕಡ ೨೦ ರಷ್ಟು ಮೋಟಾರು ವಾಹನಗಳಲ್ಲಿ ಸರಿಯಾದ ಪಾಲನ್ನು ಕೊಡದಿದ್ದರೆ ನಗರಸಭೆಗಳು ಮತ್ತು ಮುನಿಸಿಪಾಲಿಟಿಗಳ ರಸ್ತೆಗಳನ್ನು ಮೆಂಟೇನೆನ್ಸ್ ಮಾಡುವುದು ಕಷ್ಟವಾಗುತ್ತದೆ. ಟ್ಯಾಕ್ಸೇಷನ್ ರಿವ್ಯೂ ಕಮಿಟಿಯ ಶಿಫಾರಸ್ಸು ಪ್ರಕಾರ ಮೋಟಾರು ವಾಹನಗಳ ತೆರಿಗೆಯಿಂದ ಬರತಕ್ಕ ಹಣದಲ್ಲಿ ೮೪-೮೫ರಲ್ಲಿ ಶೇಕಡ ೨ರಷ್ಟು ಕೊಟ್ಟರೂ, ೧,೬೦ ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಮಾನ್ಯ ನಗರಾಭಿವೃದ್ಧಿ ಸಚಿವರನ್ನು ವಿನಂತಿಸುತ್ತೇನೆ.

ಸನ್ಮಾನ್ಯ ಅಧ್ಯಕ್ಷರೇ, ಮನರಂಜನೆ ತೆರಿಗೆ ವಿಚಾರ, ಮುಂಚೆ ಮನರಂಜನೆ ತೆರಿಗೆ ಸಂಪೂರ್ಣವಾಗಿ ಸ್ಥಳೀಯ ಪುರಸಭೆಗಳಿಗೆ ಹೋಗುತ್ತಿತ್ತು. ಈಗ ಶೇಕಡ ೧೦ ರಷ್ಟು ಕಲೆಕ್ಷನ್ ಕಮರ್ಷಿಯಲ್ ಟ್ಯಾಕ್ಸ್ ಹೋಗುತ್ತಿದೆ. ೧೯೮೨-೮೩ರ ಅಂಕಿ ಅಂಶಗಳನ್ನು ನೋಡುವುದಾದರೆ ೧೦ ಕೋಟಿ ವಸೂಲಾದರೆ ೧೦ ಕೋಟಿ ಸ್ಥಳೀಯ ಸಂಸ್ಥೆಗಳಿಗೆ ಸಿಕ್ಕುತ್ತಿತ್ತು. ಈಗ ೨೬ ಕೋಟಿ ವಸೂಲು ಮಾಡುತ್ತಿದ್ದಾರೆ. ಇದರಲ್ಲಿ ಮನರಂಜನೆ ತೆರಿಗೆಯಿಂದ ಸ್ಥಳೀಯ ಸಂಸ್ಥೆಗಳಿಗೆ ಸಿಕ್ಕುವುದು ಕೇವಲ ೨೨ ಕೋಟಿ ರೂಪಾಯಿಗಳು ಮನರಂಜನೆ ತೆರಿಗೆ ಮೇಲೆ ಸರ್‌ಚಾರ್ಜ್ ಹಾಕುತ್ತಿದ್ದೀರಿ. ನೂರಕ್ಕೆ ನೂರರಷ್ಟು ಸರ್‌ಚಾರ್ಜ್ ಹಾಕಿದರೂ ಕೂಡ ಒಂದು ನಯಾಪೈಸಾ ಇವರಿಗೆ ಸಿಕ್ಕುತ್ತಿಲ್ಲ. ಪೂರ್ತಿ ರಾಜ್ಯ ಸರ್ಕಾರಕ್ಕೆ ಎಂದು ಹೇಳಿದ್ದೀರಿ. ಒಂದು ಕಾಲದಲ್ಲಿ ನೂರು ರೂಪಾಯಿಗಳ ಮನರಂಜನೆ ತೆರಿಗೆ ಇದ್ದುದ್ದು ೬೦ ರೂಪಾಯಿಗೆ ಬಂತು, ೬೦ ರೂಪಾಯಿ ಇದ್ದುದ್ದು ೪೫ ರೂಪಾಯಿಗೆ ಬಂತು. ೨೦೦ ರೂಪಾಯಿ ವಸೂಲಾದರೆ ೧೦೦ ರಾಜ್ಯ ಸರ್ಕಾರಕ್ಕೆ ೬೦ ರೂಪಾಯಿ ಸ್ಥಳೀಯ ಸಂಸ್ಥೆಗೆ ಹೋಗುತ್ತಿದೆ. ನಗರಾಭಿವೃದ್ಧಿಯ ಬಗ್ಗೆ ಹೇಳುವುದಾದರೆ ನಗರ ಸಭೆಗಳಿಗೆ ಉಸ್ತುವಾರಿ ಖರ್ಚು ಇರುತ್ತದೆ. ಸಿಬ್ಬಂದಿ ವ್ಯವಸ್ಥೆಯ ಖರ್ಚು ಇರುತ್ತದೆ. ಇದರ ಬಗ್ಗೆ ಎಂಫಸೈಜ್ ಮಾಡಿ ಮಾತನಾಡುತ್ತಿದ್ದೇನೆ. ಸಚಿವರಿಗೆ ಗೊತ್ತಿಲ್ಲವೆಂದು ಏನೂ ಇಲ್ಲ. ಪುರಸಭಾಧ್ಯಕ್ಷರ ಸಮ್ಮೇಳನ ಮಾಡಿ ಸಚಿವರಿಗೆ ವಿಚಾರವನ್ನು ಈಗಾಗಲೇ ತಿಳಿಸಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ೩ ಕೋಟಿ ೬೫ ಲಕ್ಷ ಜನರಲ್ಲಿ ಹೆಚ್ಚು ಕಡಿಮೆ ೧ ಕೋಟಿ ೩೫ ಲಕ್ಷ ಜನರು ನಗರದಲ್ಲಿದ್ದಾರೆ. ಈಗ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿ ದೃಷ್ಟಿಯಿಂದ ಪಟ್ಟಣ ಪ್ರದೇಶಗಳ ಅಭಿವೃದ್ಧಿ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಮನರಂಜನೆ ತೆರಿಗೆಯಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಕನಿಷ್ಠ ಪಕ್ಷ ೭೫ ರಷ್ಟು ಸರ್‌ಚಾರ್ಜ್ ಹೋಗಬೇಕು. ಲೋಕಲ್ ಟ್ಯಾಕ್ಸ್ ಬಹಳ ಹಿಂದಿನ ಕಾಲದಿಂದಲೂ ಬಂದಿರತಕ್ಕದ್ದು. ರಾಜ್ಯ ಸರ್ಕಾರಕ್ಕೆ ೯೦ ರಷ್ಟು ಪಾಲನ್ನು ಕೊಡತಕ್ಕದ್ದನ್ನು ಮಾಡಬಾರದೆಂದು ಹೇಳುತ್ತೇನೆ. ಆಕ್ಟ್ರಾಯ್ ವಿಚಾರದ ಬಗ್ಗೆ ಹೇಳುವುದಾದರೆ, ಇಡೀ ರಾಜ್ಯದಲ್ಲಿ ಈ ವರ್ಷ ಇದನ್ನು ರಿವೈಸ್ ಮಾಡಿ ೫೧ ಕೋಟಿ ರೂಪಾಯಿಗಳನ್ನು ವಿತರಣೆ ಮಾಡಿದ್ದೇವೆಂದು ಹೇಳಿದ್ದೀರಿ. ಅದರಲ್ಲಿ ೧೪ ಕೋಟಿ ಬೆಂಗಳೂರು ನಗರ ಸಭೆಯವರಿಗೆ ಹೋಗಿದೆ. ಅದಕ್ಕೆ ಒಂದು ಲೆಕ್ಕಾಚಾರದ ಪ್ರಕಾರವೇ ಕೊಟ್ಟಿದ್ದಾರೆ. ೧೯೮೨ರಲ್ಲಿ ೨೩ ಕೋಟಿ ಇತ್ತು. ಶೇಕಡ ೫ರ ಬೆಳವಣಿಗೆ ದೃಷ್ಟಿಯಿಂದ ೧೦ರ ಪ್ರಕಾರ ಲೆಕ್ಕಾಚಾರ ಮಾಡಿ ಪುನಃ ೨ ಕೋಟಿ ಸೇರಿಸಿ ಜಾಸ್ತಿ ಕೊಟ್ಟಿದ್ದಾರೆ. ಅದರ ಬಗ್ಗೆ ನಾನು ಸವಿಸ್ತಾರವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಒಂದು ವಿಚಾರ ಏನೆಂದರೆ ಮುನಿಸಿಪಾಲಿಟಿಗಳಲ್ಲಿ ಇಡೀ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತು ಇತರ ಜಿಲ್ಲೆಗಳ ಮುನಿಸಿಪಾಲಿಟಿಗಳಲ್ಲಿ ವಸೂಲು ಮಾಡುತ್ತಿಲ್ಲ ಆಕ್ಟ್ರಾಯ್ ಎಂಬ ಕಾರಣಕ್ಕಾಗಿ ಅವರಿಗೆ ಕಾಂಪೆನ್‌ಸೇಷನ್ ಕೊಡುತ್ತಿಲ್ಲ. ಇದು ಬಹಳ ಅನ್ಯಾಯ ಇದನ್ನು ಸರ್ಕಾರ ಕೂಡ ಒಪ್ಪಿಕೊಂಡಿದೆ.

SRI A LAKSHMI SAGAR.—We have no Argument.

ಡಾ|| ವಿ. ಎಸ್. ಆಚಾರ್ಯ.—ಕಿವಿಟಿ ಹಾಕಬೇಡಿ.

ಶ್ರೀ ಎ. ಲಕ್ಷ್ಮೀಸಾಗರ್.—ಆಕ್ಟ್ರಾಯ್ ಬಾಬಿನಿಂದ ಬರತಕ್ಕ ಆದಾಯ ಇಲ್ಲದೇ ಇರುವುದರಿಂದ ಆಡಳಿತ ನಡೆಸುವುದಕ್ಕೆ ಕಷ್ಟವಾಗುತ್ತದೆ ಎಂದು ಹೇಳಿಯೇ ೧೯೮೩-೮೪ ರಲ್ಲಿ ೩೧ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಯಾವ ರೀತಿಯಾಗಿ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ ಆಕ್ಟ್ರಾಯ್ ಇಲ್ಲದೆ ಇದ್ದ ಕಡೆಯಲ್ಲಿ ನಮಗೂ ಕೂಡ ಕೊಡಿ ಎನ್ನುವ ವಾದ ನೀವು ಮುಂಡಿಸುತ್ತಿದ್ದೀರಿ.

ಡಾ|| ವಿ. ಎಸ್. ಆಚಾರ್ಯ.—ತಾವು ಕಾನೂನು ಮಂತ್ರಿಗಳು No tax can be levied without authority of law ಇದನ್ನು ಒಪ್ಪುತ್ತೀರಾ? ಈಗ ಎಂಟ್ರಿ ಟ್ಯಾಕ್ಸ್ ಇದೆ.

ಮೊದಲು ಇರಲಿಲ್ಲವೇ ? ೧೯೭೭ರ ವರೆಗೆ ಇದು ಆಕ್ಟ್ರಾಯ್ ಎಂದು ಕರೆದಿದ್ದೀರಿ ಅನಂತರ Tax on entry of goods into Local Areas for Sale, Use, or Consumption. Is it the constitutional defiuition? ಈಗ ಅದಕ್ಕೆ ಹೆಸರು ಬದಲಾವಣೆ ಮಾಡಿದ್ದೀರಿ,

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು.—ಟೈಮ್ ಬಗ್ಗೆ ಲಿಮಿಟ್ ಹಾಕಿಕೊಂಡಿದ್ದೇವೆ.

ಡಾ|| ವಿ. ಎಸ್. ಆಚಾರ್ಯ.—ನನ್ನ ದುರಾದೃಷ್ಟ ಏನೆಂದರೆ ಟೈಮ್ ಕಾನ್ಷಿಯನ್ಸ್ ನಾನು ಮಾತನಾಡುವಾಗ ಮಾತ್ರ ಬರುತ್ತದೆ. ನನಗಿಂತ ಮುಂಚೆ ಮಾನ್ಯ ರಾಮಕೃಷ್ಣ ಅವರು ೨ ಗಂಟೆ ೨೦ ನಿಮಿಷ ಮಾತನಾಡಿದ್ದಾರೆ. ನನಗೂ ಸ್ವಲ್ಪ ಮಾತನಾಡುವುದಕ್ಕೆ ಅವಕಾಶ ಮಾಡಿ ಕೊಡಿ.

ಅಧ್ಯಕ್ಷರು.—ನೀವೆಲ್ಲಾ ಒಪ್ಪಿಕೊಂಡರೆ ನನ್ನದೇನೂ ಇಲ್ಲ, ಆದರೆ ೨ ಗಂಟೆಯೊಳಗೆ [illegible] ಮುಗಿಯಬೇಕು.

ಡಾ|| ವಿ. ಎಸ್. ಆಚಾರ್ಯ.—ನನ್ನಿಂದ ಈ ಬಗ್ಗೆ ಹೆಚ್ಚು ತೊಂದರೆಯಾಗುವುದಿಲ್ಲ. ಆದರೆ ಒಂದು ಮುಖ್ಯವಾದ ಪ್ರಶ್ನೆ ಇದೆ. ಇನ್ನು ಐದು ನಿಮಿಷ ಹೆಚ್ಚಿಗೆ ಮಾತನಾಡಲು ಬೇಕಾಗುತ್ತದೆ. ಆಕ್ಟ್ರಾಯ್ ಮುನಿಸಿಪಲ್ ಲಿಸ್ಟ್‌ನಲ್ಲಿ ಇದ್ದುದರಿಂದ ಎಂಟ್ರಿ ಟ್ಯಾಕ್ಸ್ ವಸೂಲಿ ಮಾಡುತ್ತಿದ್ದೀರಿ. ಈ ಆಕ್ಟ್ರಾಯ್ ಇಲ್ಲದಿದ್ದ ಕಡೆಯಲ್ಲಾ ಹಾಕಿದ್ದೀರಿ. ಕೆಲವು ಊರುಗಳಲ್ಲಿ ಎಂಟ್ರಿ ಟ್ಯಾಕ್ಸ್, ಸರ್‌ಚಾರ್ಜ್ ಸೇಲ್ಸ್ ಟ್ಯಾಕ್ಸ್ ಮೋಟಾರು ವಾಹನ ತೆರಿಗೆಯನ್ನು ಹಾಕಿರುವುದನ್ನು ಮಾಫಿ ಮಾಡುತ್ತೀರಾ ? ನಮ್ಮ ಊರಿನಲ್ಲಿ ಎಂಟ್ರಿ ಟ್ಯಾಕ್ಸ್ ಕೊಡುತ್ತಿದ್ದಾರೆಂದು ತಮಗೆ ಮನವರಿಕೆ ಮಾಡಲು ಬಯಸುತ್ತೇನೆ. ಈ ಆಕ್ಟ್ರಾಯ್‌ನ್ನು ತೆಗೆದು ಹಾಕಿ ಅದರ ಬದಲು ಪರಿಹಾರ ಹಣವನ್ನು ಇಲ್ಲಿಯವರೆಗೆ ದಕ್ಷಿಣ ಕನ್ನಡ ಜಿಲ್ಲೆಯ ೨೪ ಸ್ಥಳೀಯ ಸಂಸ್ಥೆಗಳಿಗೆ ಮತ್ತು ಧಾರವಾಡದ ಅಣ್ಣಿಗೇರಿಗೆ ಕೊಟ್ಟಿಲ್ಲ. ಈ ಹಣವನ್ನು ೧೯೮೩-೮೪ರ ಮಾರ್ಚ್ ೩೧ ರೊಳಗೆ ಒದಗಿಸಿಕೊಡಬೇಕೆಂದು ಮಾನ್ಯ ಮಂತ್ರಿಗಳವರಲ್ಲಿ ಕೇಳಿ ಕೊಳ್ಳುತ್ತೇನೆ. ಮುನಿಸಿಪಾಲಿಟಿಯವರಿಗೆ ವಾಟರ್ ಸಪ್ಲೈ ಮತ್ತು ಡ್ರೈನೇಜ್ ಬೋರ್ಡ್ ಇನ್ನಿತರ ಕೆಲಸ ಕಾರ್ಯಗಳನ್ನು ಮಾಡಬೇಕಾಗಿರುತ್ತದೆ. ಅವರಿಗೆ ಪರಿಹಾರವನ್ನು ಕೊಡದಿದ್ದರೆ ಬಹಳ ಕಷ್ಟವಾಗುತ್ತದೆ. ಆದುದರಿಂದ ಪರಿಹಾರ ಹಣವನ್ನು ಆದಷ್ಟು ಜಾಗ್ರತೆ ಒದಗಿಸಬೇಕೆಂದು ಕೇಳಿ ಕೊಳ್ಳುತ್ತೇನೆ. ಮಾರಾಟ ತೆರಿಗೆಯನ್ನು ರಾಜ್ಯ ಸರಕಾರದವರು ವಸೂಲು ಮಾಡುತ್ತಿದ್ದಾರೆ. ಈ ರೀತಿ ವಸೂಲು ಆದಂತಹ ವಸ್ತುಗಳು ಕೊನೆಗೆ ಮಾರಾಟವಾಗತಕ್ಕದ್ದು ನಗರ ಸಭೆಗಳ ಮತ್ತು ಪುರಸಭೆಗಳು ಇರತಕ್ಕ ಪ್ರದೇಶಗಳಲ್ಲಿ. ಗಲ್ಲಿಯ ಕಸದ ತೊಟ್ಟಿಯಲ್ಲಿ ಏನು ಇರುತ್ತದೆ ಎಂದರೆ ಗ್ಲಾಸಿನ ಚೂರುಗಳು, ಬ್ರೋಕನ್ ಮೆಟೀರಿಯಲ್ಸ್ ಇರುತ್ತವೆ. ಈ ಎಲ್ಲಾ ಸಾಮಾನುಗಳಿಗೂ ರಾಜ್ಯ ಸರಕಾರದವರು ಮಾರಾಟ ತೆರಿಗೆಯನ್ನು ತೆಗೆದಿರುತ್ತಾರೆ. ಆದುದರಿಂದ ಈ ಸ್ವಚ್ಛ ಮಾಡತಕ್ಕ ಕೆಲಸ ಮಾತ್ರ ಮುನಿಸಿಪಾಲಿಟಿ ಮೇಲೆ ಬಿದ್ದಿರುತ್ತದೆ. ಆದ್ದರಿಂದ ಈ ಮಾರಾಟ ತೆರಿಗೆಯಲ್ಲಿ ಒಂದು ಅಥವಾ ಎರಡು ಪರ್ಸೆಂಟನ್ನು ಪುರಸಭೆ ಮತ್ತು ನಗರ ಸಭೆಗೆ ಕೊಡಬೇಕು. ಇದೇ ತರಹ ಸ್ಟೇಟ್ ಎಕ್ಸೈಜ್‌ನಲ್ಲಿ ಒಂದು ಸಣ್ಣ ಪಾಲು ಈ ಸ್ಥಳೀಯ ಸಂಸ್ಥೆಗಳಿಗೆ ಸಿಗಬೇಕು.

ನಾಲ್ಕು ವರ್ಷಕ್ಕೊಮ್ಮೆ ಯಾವ ರೀತಿ ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳ ನಡುವೆ ಆರ್ಥಿಕ ವಿನಿಯೋಗ ಇರಬೇಕೆಂಬುದನ್ನು ನಿರ್ಧರಿಸಲು ಆರ್ಥಿಕ ಆಯೋಗವನ್ನು ನೇಮಿಸುತ್ತಾರೆ. ಅದೇ ರೀತಿ ಈ ಸ್ಥಳೀಯ ಸಂಸ್ಥೆಗಳಿಗೆ ಮತ್ತು ರಾಜ್ಯ ಸರಕಾರದ ನಡುವೆ ಯಾವ ರೀತಿ ಹಣ ವಿನಿಯೋಗ ಆಗಬೇಕೆಂಬ ಬಗ್ಗೆ ಆಗಿಂದಾಗ್ಗೆ ಆರ್ಥಿಕ ಆಯೋಗಗಳನ್ನು ನೇಮಿಸಬೇಕು. ಆಗ ವರದಿ ಬರುವುದಕ್ಕೆ ಮುಂಚೆಯೇ ಈ ದಿಸೆಯಲ್ಲಿ ಏನಾದರೂ ಕಾರ್ಯಕ್ರಮ ಹಾಕಿಕೊಳ್ಳಬೇಕು.

ಇನ್ನು ನಮ್ಮ ಭಾರತೀಯ ಜನತಾ ಪಕ್ಷದ ಪರವಾಗಿ ಕೆಲವು ವಿಚಾರಗಳನ್ನು ಆರ್ಥಿಕ ಮೂಲದ ಬಗ್ಗೆ ಹೇಳಲಿಚ್ಛಿಸುತ್ತೇನೆ. ಎಲ್ಲೆಲ್ಲಿ ನಮ್ಮ ಪಕ್ಷವು ಆಡಳಿತ ನಡೆಸುತ್ತಿದೆ ಅಲ್ಲಿ ಅಭಿವೃದ್ಧಿಯ ಕೆಲಸಗಳನ್ನು ಮಾಡಲು ಆರ್ಥಿಕ ಸಂಪನ್ಮೂಲಗಳ ಕೊರತೆ ಇದೆ. ಇದರ ಕಡೆ ಸರಕಾರ ಹೆಚ್ಚಿನ ಗಮನ ಹರಿಸಿ, ಹಣ ಸಹಾಯವನ್ನು ಒದಗಿಸಿ ಕೊಡಬೇಕು.

ಇನ್ನು ಅಧಿಕಾರ ವ್ಯಾಪ್ತಿ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ನಮ್ಮಲ್ಲಿ ಒಂದು ಟ್ಯೂಬ್ ವಾಟರ್ ಸ್ಕೀಮ್ ಇತ್ತು. ಅದಕ್ಕೆ ಒಂದು ರೂಪಾಯಿಯನ್ನು ಏರಿಸಬೇಕಾದರೆ ನಾವು ರೆಗ್ಯುಲೇಷನ್ ಮಾಡಿ ಸರಕಾರಕ್ಕೆ ಕಳುಹಿಸಬೇಕು. ಆಕ್ಷೇಪಣೆಗಳು ಗೆಜೆಟ್‌ನಲ್ಲಿ ಬರಬೇಕು, ಅದಕ್ಕಿಲಾ ಬಹಳ ಕಾಲ ಹಿಡಿಯುತ್ತದೆ. ೧೯೮೨ ರಲ್ಲಿ ಮಾಡಿದಂತ ಒಂದು ರೆಗ್ಯುಲೇಷನ್ ಇನ್ನೂ ಸರಕಾರದಿಂದ ಒಪ್ಪಿಗೆ ಪಡೆದಿಲ್ಲ. ಹಾಗೆಯೇ ನಿಮ್ಮ ಬೆಳಗಾಂ ಕಾರ್ಪೋರೇಶನ್‌ನಿಂದ ನಿಮಗೆ ಮುಟ್ಟಿಲ್ಲ. ಆದುದರಿಂದ ಆಡಳಿತ ವ್ಯವಸ್ಥೆಯಲ್ಲಿ ಬಹಳ ಬದಲಾವಣೆ ಆಗಬೇಕಾಗಿದೆ.

.. ...ನಮ್ಮಲ್ಲಿ ಆಡಳಿತ ಅಧಿಕಾರಿಗಳು ಇದ್ದಾಗ ನೀರಿನ ತೆರಿಗೆ ಬಗ್ಗೆ ರಿವಿಷನ್ ಮಾಡಬೇಕೆಂದು ಎರಡು ವರ್ಷದ ಹಿಂದೆಯೇ ಕಳುಹಿಸಿದ್ದರು. ಇವೊತ್ತು ಅದರ ಬಗ್ಗೆ ಪ್ರಿಲಿಮಿನರಿ ಅಬ್ಜೆಕ್ಷನ್ಸ್ ಸಹ ಪೇಪರನಲ್ಲಿ ಪ್ರಕಟವಾಗಲಿಲ್ಲ. ಟೌನ್ ಮುನ್ಸಿಪಾಲಿಟಿಗಳಿಗೆ ಜಿಲ್ಲಾಧಿಕಾರಿಗಳು, ಸಿಮುನ್ಸಿಪಾಲಿಟಿಗಳಿಗೆ ಡಿವಿಜನಲ್ ಕಮಿಷನರ್ ಮತ್ತು ಕಾರ್ಪೋರೇಷನ್‌ಗಳಿಗೆ ಸರಕಾರದಿಂದ ಅಧಿಕಾರ ವ್ಯಾಪ್ತಿಯನ್ನು ವಿಕೇಂದ್ರೀಕರಣ ಮಾಡಬಹುದು.

ಶ್ರೀ ಧರ್ಮಸಿಂಗ್‌ರವರು, ಶ್ರೀ ನಾಯ್ಕರ್‌ರವರು, ಶ್ರೀ ಬಸವಲಿಂಗಪ್ಪನವರು ಇದ್ದಾಗ ಈ ನಗರ ಸಭಾ ನಿರ್ದೇಶನಾಲಯವನ್ನು ಮಾಡಬೇಕೆಂದು ಒಂದು ಯೋಜನೆಯನ್ನು ಇಟ್ಟುಕೊಂಡಿದ್ದರು. ಇದರಿಂದ ಅಲ್ಲಿ ನಡೆಯತಕ್ಕ ಕೆಲಸಗಳ ಉಸ್ತುವಾರಿ ನೋಡಿಕೊಳ್ಳಲು ಸಹಾಯ ಆಗುತ್ತದೆಂದು ಈ ನಿರ್ಧಾರವನ್ನು ಅವರು ತೆಗೆದುಕೊಂಡಿದ್ದರು. ಆದು ಇದುವರೆಗೂ ಆಗಿಲ್ಲ ತಾವುಗಳು ಈ ನಗರ ಸಭಾ ನಿರ್ದೇಶನಾಲಯ ಮಾಡಲು ಎಲ್ಲಾ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು.

ಕೆಲವು ಚಿಕ್ಕ ಪುರಸಭೆಗಳಿಗೆ ಕೇಂದ್ರ ಸರಕಾರದಿಂದ ಬರತಕ್ಕ ಐ.ಆರ್.ಡಿ.ಪಿ. ಮತ್ತು ಎನ್. ಆರ್.ಇ.ಪಿ ಯೋಜನೆಗಳು ಸಿಕ್ಕಲು ಸಾಧ್ಯವಿಲ್ಲ. ಆದುದರಿಂದ ಈ ಜನಸಂಖ್ಯೆ ಕಡಿಮೆ ಇರತಕ್ಕಂತಹ ಪುರಸಭೆಗಳಿಗೆ ಅನೇಕ ಕಾರ್ಯಕ್ರಮಗಳನ್ನು ಸೇರಿಸಿಕೊಂಡು ಈ ಯೋಜನೆಗಳ ಸೌಲಭ್ಯವೂ ಸಿಕ್ಕುವಂತೆ ಮಾಡಲು ಒಂದು ಸೂಕ್ತ ತಿದ್ದುಪಡಿಯನ್ನು ಈ ಅಧಿವೇಶನದಲ್ಲಿ ತರಬೇಕು. ಹಾಗೆಯೇ ಪುರಸಭೆಗಳು ಜಿಲ್ಲಾಮಟ್ಟದಲ್ಲಿರತಕ್ಕ ಜಿಲ್ಲಾ ಅಭಿವೃದ್ಧಿ ಸಮಿತಿ ಅಥವಾ ತಾಲ್ಲೂಕು ಮಟ್ಟದ ಇಪ್ಪತ್ತು ಅಂಶದ ಕಾರ್ಯಕ್ರಮದ ಸಮಿತಿ ಸಭೆಗಳಲ್ಲಿ ಭಾಗವಹಿಸುವಂತೆ ಅವಕಾಶ ಮಾಡಿಕೊಡಲು ಒಂದು ತಿದ್ದುಪಡಿ ತರಬೇಕು.

ನಗರಸಭೆ, ಕಾರ್ಪೋರೇಷನ್‌ಗಳಲ್ಲಿ ಯಾವರೀತಿ ಶಾಸಕರು ಭಾಗವಹಿಸಲು ಅವಕಾಶ ಇದೆ, ಅದೇ ರೀತಿ ಪುರಸಭೆಗಳಲ್ಲಿ ಆಯಾಯಾ ಶಾಸಕರು ಭಾಗವಹಿಸಲು ಅವಕಾಶ ಮಾಡಿಕೊಡಲು ಒಂದು ತಿದ್ದುಪಡಿಯನ್ನು ಈ ಅಧಿವೇಶನದಲ್ಲಿ ತರಬೇಕು.

ನಮ್ಮ ಶಾಸಕರ ಭವನಕ್ಕೆ ಬರತಕ್ಕಂತಹ ಸಂದರ್ಶಕರ ಪೈಕಿ ಬಹಳ ಜನರು ಬೆಂಗಳೂರು ನಗರ ಕಾರ್ಪೋರೇಷನ್ ಮತ್ತು ಬಿ.ಡಿ.ಎ. ಬಗ್ಗೆ ತಮ್ಮ..... ತೊಂದರೆಗಳನ್ನು ಹೇಳಿಕೊಳ್ಳಲು ಬರುತ್ತಿದ್ದಾರೆ ಇಡೀ ಕರ್ನಾಟಕ ರಾಜ್ಯದ ಅರ್ಧ ಸಮಸ್ಯೆಗಳು ಬಿ.ಡಿ.ಎ.ಗೆ ಸಂಬಂಧ ಪಟ್ಟಿದ್ದು ಆಗಿದೆ. ಆದ್ದರಿಂದ ಈ ಬಿ. ಡಿ.ಎ .ನಲ್ಲಿ ಜನಗಳಿಗೆ ಆಗುವ ತೊಂದರೆಗಳನ್ನು ತಪ್ಪಿಸಲು ಕ್ರಮ ತೆಗೆದುಕೊಳ್ಳಬೇಕು.

ಸಿಬ್ಬಂಧಿ ವಿಚಾರವಾಗಿ ಹೇಳುವುದಾದರೆ, ಕೆಲವೊಂದು ಒಳ್ಳೆಯ ಕೆಲಸಗಳನ್ನು ಮಾಡಿದ್ದೀರಿ. ನಗರಸಭೆ ಮತ್ತು ಪುರಸಭೆ ಸಿಬ್ಬಂದಿಗಳಿಗೆ ಫ್ಯಾಮಿಲಿ ಪೆನ್‌ಷನ್ ಮತ್ತು ಇತರ ಸೌಲಭ್ಯಗಳನ್ನು ಒದಗಿಸಿದ್ದಾರೆ. ರಾಜ್ಯ ಸರಕಾರದ ನೌಕರರುಗಳಿಗೆ ಯಾವುದೇ ಸೌಲಭ್ಯಗಳನ್ನು ಒದಗಿಸಿದಾಗ ಏಕಕಾಲದಲ್ಲಿ ನಗರಸಭೆ ಮತ್ತು ಸ್ಥಳೀಯ ಸಂಸ್ಥೆಗಳ ನೌಕರರುಗಳಿಗೆ ದೊರಕುವಂತೆ ಮಾಡಬೇಕು. ಅದಕ್ಕಾಗಿ ಮತ್ತೊಂದು ಹೊಸ ಆಜ್ಞೆ ಹೊರಡಿಸಬೇಕಾದ ಅಗತ್ಯ ಇಲ್ಲ.

ಈಗಾಗಲೇ ಪುರಸಭೆಗಳಲ್ಲಿ ರಿಟೈರ್ಡ್ ಆಗಿರುವ ಸುಮಾರು ೫೦೦ ಜನರಿಗೆ ಪೆನ್‌ಷನ್ ಮತ್ತಿತರ ಸೌಲಭ್ಯಗಳು ದೊರಕಬೇಕಾಗಿದೆ. ಅದರ ಬಗ್ಗೆ ತಾವು ಗಮನಹರಿಸಬೇಕು. ಮತ್ತೊಂದು ವಿಷಯ. ಬಿ. ಡಿ. ಎ. ಬಗ್ಗೆ ಹೇಳಲು ಮರೆತಿದ್ದೆ. ಅದೇನೆಂದರೆ ಬಿ. ಡಿ. ಎ. ಬಗ್ಗೆ ಬರತಕ್ಕಂತಹ ಜನರ ಸಮಸ್ಯೆಗಳನ್ನು ಕೈಗೆ ತೆಗೆದುಕೊಂಡರೆ ಶಾಸಕರಿಗೆ ಬೇರೆ ಯಾವ ಕೆಲಸವನ್ನು ಮಾಡಲು ಸಮಯ ಸಿಗುವುದಿಲ್ಲ. ಕೆಲವು ಕೇಸುಗಳು ಹತ್ತು ವರ್ಷಗಳಿಂದಲೂ ಇತ್ಯರ್ಥ ಆಗದೆ ಹಾಗೆಯೇ ಉಳಿದಿವೆ. ಎಷ್ಟೋ ಜನರಿಗೆ ಮನೆ ಅಕ್ವೈರ್ ಆಗಿ, ಪೊಸೆಷನ್ ಸರ್ಟಿಫಿಕೇಟ್ ತೆಗೆದು

ಕೊಂಡು ಮನೆ ಕಟ್ಟಲು ಹೊರಟರೆ ಆ ಜಾಗವೇ ಅಕ್ವೈರ್ ಆಗಿಲ್ಲ ಎಂದು ಹೇಳಿದ್ದಾರೆ. ಇದು ಹೆಚ್. ಎ. ಎಲ್. ಮೂರನೆಯ ಹಂತದಲ್ಲಿ ನಡೆದಿದೆ. ಅಲ್ಲಿ ರಸ್ತೆ, ನೀರು, ಡ್ರೈನೇಜ್ ಎಲ್ಲವನ್ನೂ ಮಾಡಿದ್ದಾರೆ. ಆದರೆ ಜಮೀನನ್ನು ಅಕ್ವೈರ್ ಮಾಡಿಲ್ಲವೆಂದು ಹೇಳಿದರೆ ಜನಗಳಿಗೆ ಮನೆಗಳನ್ನು ಕಟ್ಟುವುದು ಕಷ್ಟವಾಗುತ್ತದೆ. ಇದರ ಬಗ್ಗೆ ತಾವು ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

ಇನ್ನು ಗ್ರೀನ್ ಬೆಲ್ಟ್ ವಿಚಾರ. ಈ ಗ್ರೀನ್ ಬೆಲ್ಟ್ ಹೆಸರಿನಲ್ಲಿ ರೆಡ್ ಟೇಪಿಸಂ ಬಹಳ ಜಾಸ್ತಿ ಆಗುತ್ತಿದೆ. ರೆವಿನ್ಯೂದಿಂದ ಬಿ.ಡಿ.ಎ.ಗೆ ಈ ಗ್ರೀನ್ ಬೆಲ್ಟ್ ನೆಪದಲ್ಲಿ ಸಾವಿರಾರು ಜನರು ಅಲೆಯುವ ಸ್ಥಿತಿ ಬಂದಿದೆ. ಗ್ರೀನ್ ಬೆಲ್ಟ್‌ನಿಂದ ನೊಂದರವರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಈ ಗ್ರೀನ್‌ಬೆಲ್ಟ್ ಕಲ್ಪನೆ ಏನೋ ದೊಡ್ಡದು. ಆದರೆ ಇದರ ಹೊಡೆತ ಅನೇಕ ಜನರ ಮೇಲೆ ಬಿದ್ದಿದೆ. ಚಿಕ್ಕಮಾರನ ಹಳ್ಳಿ ಅಕ್ವಿಸಿಷನ್ ಮಾಡಿದ ನಂತರ ಸರಿಯಾಗಿ ಉಸ್ತುವಾರಿ ಇಲ್ಲದೆ ಇದ್ದುದರಿಂದ ಏನಾಗಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಹಲವಾರು ಬಡವರು ಸಾಲ ಮಾಡಿಕೊಂಡು ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಬಿ. ಡಿ. ಎ.ದವರು ಸರಿಯಾದ ಉಸ್ತುವಾರಿ ಮಾಡಿದ್ದರೆ ಪರಿಸ್ಥಿತಿ ಉತ್ತಮಗೊಳ್ಳುತ್ತಿತ್ತು.

ಇನ್ನು ಇವರು ಹಾಕತಕ್ಕಂಥ ಡೆವಲಪ್‌ಮೆಂಟ್ ಚಾರ್ಜಸ್ ವಿಷಯದಲ್ಲೂ ಕೂಡ ವ್ಯತ್ಯಾಸ ತುಂಬಾ ಇದೆ. ಇದರ ಬಗ್ಗೆ ಹೆಚ್ಚಿನ ಗಮನ ಕೊಟ್ಟು ಆದಷ್ಟು ಕಡಿಮೆ ಚಾರ್ಜಸ್ ಹಾಕುವಂತೆ ಮಾಡಬೇಕು. ಕಾಚರಕನಹಳ್ಳಿ ಪ್ರಶ್ನೆ ಸಭೆಯ ಮುಂದೆ ಬರಬೇಕೆಂದು ನಾನು ಮತ್ತು ಮಾನ್ಯ ಬಂಗಾರಪ್ಪನವರು ಹೇಳಿದ್ದೆವು. ಅಲ್ಲದೆ ಸಚಿವರ ಹತ್ತಿರ ಈ ಬಗ್ಗೆ ಮಾತನಾಡಿದ್ದೆವು. ಲಿಂಗರಾಜಪುರ, ಕಮ್ಮನಹಳ್ಳಿ, ಚಿಕ್ಕಬಾಣಸವಾಡಿ ಮುಂತಾದ ಪ್ರದೇಶಗಳಲ್ಲಿ ನಾವು ಹೋಗಿ ನೋಡಿದ್ದೇವೆ. ಒಂದು ಸಾರಿ ಅಲ್ಲ, ಎರಡು ಸಾರಿ ಅಲ್ಲ, ಮೂರು ಸಾರಿ ನೋಡಿದ್ದೇವೆ. ಮಾನ್ಯ ಸೂರ್ಯನಾರಾಯಣ ರಾವ್ ಅವರ ಕ್ಷೇತ್ರದ ಒಂದು ಭಾಗ ಕೂಡ ಅಲ್ಲಿ ಬರುತ್ತದೆ. ೧೯೭೭ರಲ್ಲಿ ಪ್ರಿಲಿಮಿನರಿ ನೋಟಿಫಿಕೇಷನ್ ಆಯಿತು. ೧೯೭೮ರಲ್ಲಿ ಡಿ-ನೋಟಿಫೈ ಆಯಿತು. ಇದಾದ ನಂತರ ಕೆಲವಾರು ಜನ ತೆಗೆದುಕೊಂಡರು. ಇವತ್ತು ಅಲ್ಲಿ ಒಳ್ಳೊಳ್ಳೆಯ ಮನೆಗಳು ಬಂದು ವ್ಯವಸ್ಥಿತವಾಗಿ ಸೆಟ್ಲಾಗಿದೆ. ೧೯೮೦ರ ನಂತರ ಒಂದು ಪ್ರಕಟಣೆ ಕೊಟ್ಟು ಅಲ್ಲಿ ನೆಲೆಗೊಂಡಿರುವವರಿಗೆ ತೊಂದರೆ ಮಾಡಿದರು. ಈ ರೀತಿ ನೆಲೆಗೊಂಡಿರುವ ಸ್ಥಳ ನಗರ ಪ್ರದೇಶದಿಂದ ಹೊರಗೆ ಇದ್ದು, ಅಲ್ಲಿ ಬೀದಿ ದೀಪ, ವಾಟರ್ ಸಪ್ಲೈ ಎಲ್ಲಾ ಮೆಯಿನ್‌ಟೇನ್ ಮಾಡುತ್ತಿದ್ದಾರೆ. ಅಂತಹ ಪ್ರದೇಶವನ್ನು ಒಮ್ಮೆಗೆ ವಿಸ್ತರಣೆ ಮಾಡಿಕೊಂಡಿರುವುದರಿಂದ, ಅವರಲ್ಲಿ ಒಂದು ಭಯದ ವಾತಾವರಣ ನಿರ್ಮಾಣವಾಗಿದೆ. ಅಲ್ಲಿ ಕೆಲವೊಂದು ದೊಡ್ಡ ರಸ್ತೆಗಳನ್ನು ಮಾತ್ರ ನೀವು ನಿರ್ಮಾಣ ಮಾಡುತ್ತಿದ್ದೀರಿ. ಇದಕ್ಕೆ ಮಧ್ಯದಲ್ಲಿ ಬರುವಂತಹ ಕೆಲವೊಂದು ಮನೆಗಳನ್ನು ತೆಗೆಯಬೇಕಾಗುತ್ತದೆ. ಮೊದಲು ಬಿಲ್ಟ್ ಅಪ್ ಏರಿಯಾಕ್ಕೆ ಡಿಸ್ಟರ್ಬ್ ಮಾಡುವುದಿಲ್ಲವೆಂದು ಹೇಳಿದಿರಿ. ಬೆಂಗಳೂರು ಯಾವ ರೀತಿ ಬೆಳೆಯುತ್ತಿದೆಯೆಂದು ತಮಗೆ ಗೊತ್ತಿದೆ. ನಮ್ಮ ದೇಶದಲ್ಲಿಯೇ ಬೆಂಗಳೂರು ಅತಿ ವೇಗದಲ್ಲಿ ಬೆಳೆಯುತ್ತಿದೆ. ೧೦ ವರ್ಷದ ಅವಧಿಯಲ್ಲಿ ಶೇಕಡ ೭೬ರಷ್ಟು ಬೆಂಗಳೂರು ಬೆಳವಣಿಗೆಯಾಗಿದೆ. ಇಂಥಾದ್ದರಲ್ಲಿ ತಾನಾಗಿಯೇ ನೆಲೆಗೊಂಡಿರುವ ಜನರಿಗೆ ಡಿಸ್-ಲೊಕೇಷನ್ ಆಗಿದೆ. ಆದುದರಿಂದ ಮೊದಲು ಬಿಲ್ಟ್ ಅಪ್ ಏರಿಯಾ ಬಿಟ್ಟು ಹೊರ ಪ್ರದೇಶದಲ್ಲಿ ಲೇಔಟ್ ಮಾಡಿ, ರಸ್ತೆಗಳನ್ನು ಲಿಂಕ್ ರೋಡುಗಳನ್ನು ಮಾಡುವುದಕ್ಕೆ ಕೈ ಹಾಕಿ.

ಬೆಂಗಳೂರು ಶಾಸಕರು, ನಗರಾಭಿವೃದ್ಧಿ ಸಚಿವರು ಹಾಗೂ ಈ ಬಗ್ಗೆ ಆಸಕ್ತಿ ಇರುವಂತಹ ಸದಸ್ಯರನ್ನು ಸೇರಿಸಿಕೊಂಡು, ಕುಳಿತು ಕೆಲಸ ಮಾಡಿದರೆ, ಕೋ-ಆರ್ಡಿನೇಟ್ ಮಾಡಬಹುದು. ಇಲ್ಲದೇ ಹೋದರೆ ಅವರು ಮಾಡುವುದು ಇವರಿಗೆ ಗೊತ್ತಾಗುವುದಿಲ್ಲ, ಇವರು ಮಾಡಿದ್ದು ಅವರಿಗೆ ಗೊತ್ತಾಗುವುದಿಲ್ಲ. ಹೀಗಾಗಿ ಬಹು ರೀತಿಯ ಗೊಂದಲವಾಗುತ್ತದೆ. ಆದುದರಿಂದ ಬೆಂಗಳೂರಿನ ೧೨ ಜನ ಶಾಸಕರು ಏನು ಮಾಡುತ್ತಿದ್ದಾರೆ ಎಂದು ನಾನು ಕೇಳುತ್ತಾ ಇದ್ದೇನೆ.

ಶ್ರೀ ಪಿ. ರಾಮದೇವ್.—ಬೆಂಗಳೂರು ವಿಚಾರವನ್ನು ನಮಗೆ ಬಿಟ್ಟು ಬಿಡಿ.

ಶ್ರೀ ಪಿ.ಎಸ್. ಆಚಾರ್ಯ.—ಕರ್ನಾಟಕದಲ್ಲಿ ನೀರು ಪೂರೈಕೆಗಾಗಿ ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಅಂಡ್ ಡ್ರೈನೇಜ್ ಬೋರ್ಡ್ ಸ್ಕೀಂ ಇದೆ, ಅದಕ್ಕಾಗಿ ಬಜೆಟ್‌ನಲ್ಲಿ ಎಷ್ಟು ಕೊಟ್ಟಿದ್ದೀರಿ ?

ಅಧ್ಯಕ್ಷರು.—ನೀವು ಈ ರೀತಿ ಸಮಯ ಹೆಚ್ಚು ತೆಗೆದುಕೊಳ್ಳುವುದರಿಂದ ನಮಗೆ ಕಷ್ಟವಾಗುತ್ತದೆ. ಪಾರ್ಟಿ ಲೀಡರ್‌ಗಳು ಈ ರೀತಿ ಹೆಚ್ಚು ಸಮಯ ತೆಗೆದುಕೊಳ್ಳುವುದರಿಂದ, ಬೇರೆ ಸದಸ್ಯರಿಗೆ ಸಮಯವೇ ಸಿಗುವುದಿಲ್ಲ.

ಶ್ರೀ ವಿ. ಎಸ್. ಆಚಾರ್ಯ.—ಮಾನ್ಯ ಅಧ್ಯಕ್ಷರೇ, ವಾಟರ್‌ಸಪ್ಲೈ ಬೋರ್ಡ್‌ನಿಂದ ೬೪ ಮುನಿಸಿಪಾಲಿಟಿಯವರಿಂದ ೧೬ ಮತ್ತು ಮೂರು ಬೇರೆ—ಒಟ್ಟು ೮೩ ವಾಟರ್ ಸಪ್ಲೈ ಸ್ಕೀಂಗಳನ್ನು ಕೈಗೆತ್ತಿಕೊಂಡಿದ್ದೀರಿ. ಒಟ್ಟು ೧೦೩ ಸ್ಕೀಂಗಳು ನಿಮ್ಮಲ್ಲಿ ಇದ್ದರೆ ೧೯೮೪-೮೫ರಲ್ಲಿ ನೀವು ಸೀಮಿತಗೊಳಿಸಿರುವುದು ವಾಟರ್ ಸಪ್ಲೈನಲ್ಲಿ ಕೇವಲ ೨೯, ಡ್ರೈನೇಜ್‌ನಲ್ಲಿ ೪, ೧೦೩ರಲ್ಲಿ ೩೩ ಮಾತ್ರ ತೆಗೆದುಕೊಂಡು ೭೭೦ ಲಕ್ಷ ಇದ್ದುದನ್ನು ೮೭೦ ಲಕ್ಷಕ್ಕೆ ಹೆಚ್ಚಿಸಿದ್ದೇವೆಂದು ಹೇಳಿದ್ದಾರೆ. ಆದರೆ ದುಡ್ಡು ಖರ್ಚು ಮಾಡಿರುವಂಥಾದ್ದು ನೋಡಿದರೆ ಬಹಳ ಬೇಸರವಾಗುತ್ತದೆ. ಅಂಡರ್‌ಗ್ರೌಂಡ್ ಡ್ರೈನೇಜ್‌ಗೆ ೧೭೩.೭ ಲಕ್ಷ ರೂಪಾಯಿಗಳನ್ನು ಇಟ್ಟಿದ್ದರೆ, ಖರ್ಚಾಗಿರುವುದು ೬೬೮ ಲಕ್ಷ ರೂಪಾಯಿಗಳು. ಮುಂದಿನ ವರ್ಷಕ್ಕೆ ೧೫೦ ಲಕ್ಷ ಮಾತ್ರ ಇಟ್ಟಿದ್ದೀರಿ. ಈ ಕೆಲಸ ಯಾವಾಗ ಸಂಪೂರ್ಣವಾಗಬಹುದು. ವಾಟರ್ ಸಪ್ಲೈ ಅಂಡ್ ಡ್ರೈನೇಜ್ ಸ್ಕೀಂಗಳ ಬಗ್ಗೆ ಮಾನ್ಯ ಬೈರೇಗೌಡರಿಗೆ ಬಹಳ ಉತ್ಸಾಹ ಇದೆ. ಮಾನ್ಯ ಸಚಿವರಿಗೂ ಉತ್ಸಾಹ ಇದೆ. ದಯವಿಟ್ಟು ತಮಿಳುನಾಡಿನಲ್ಲಿ ಯಾವ ವ್ಯವಸ್ಥೆ ಇದೆ ಅಂತಹ ಒಂದು ವ್ಯವಸ್ಥೆಯನ್ನು ಇಲ್ಲಿಯೂ ಅಳವಡಿಸಬೇಕೆಂದು ನಾನು ಹೇಳುತ್ತೇನೆ. ಸರ್ಕಾರ ಒಂದೂವರೆ ಕೋಟಿ ರೂಪಾಯಿಗಳನ್ನು ಇಟ್ಟಿರುವುದನ್ನು ಇನ್ನೂ ಹೆಚ್ಚು ಮಾಡಬೇಕು. ಇಲ್ಲದೇ ಹೋದರೆ ಹೆಚ್ಚೇ ಕೆಲಸ ಆಗುವುದಿಲ್ಲ. ಈ ದೃಷ್ಟಿಯಿಂದ ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಬೋರ್ಡಿಗೆ ಹೆಚ್ಚಿನ ಸಂಪನ್ಮೂಲವನ್ನು ಕೊಟ್ಟು ಹೆಚ್ಚು ಹೆಚ್ಚು ಕೆಲಸಗಳು ಆಗುವಂತೆ ಮಾಡಬೇಕು. ವಾಟರ್ ಸಪ್ಲೈ ಡಿಕೇಡ್ ಎಂದು ಹೇಳುವುದರಲ್ಲಿ, ಈ ಯೋಜನೆಗೆ ೧೬೭ ಕೋಟಿ ರೂಪಾಯಿಗಳು, ಆಮೇಲೆ ಡ್ರೈನೇಜ್ ಸ್ಕೀಂಗೆ ೨೯೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಮಾಸ್ಟರ್ ಪ್ಲಾನ್‌ನ್ನು ಹಾಕಿಕೊಂಡಿದ್ದೀರಿ. ಇದು ಪುಸ್ತಕದಲ್ಲಿಯೇ ಉಳಿಯುತ್ತದೆ. ೨೯೨ ಕೋಟಿ ರೂಪಾಯಿಗಳ ಯೋಜನೆ ಮಾಡಿ, ಇಡೀ ರಾಜ್ಯದಲ್ಲಿ ೨೪೨ ಟೌನ್‌ಗಳಿಗೆ ಈ ಕಾರ್ಯಕ್ರಮ ಹಾಕಿಕೊಂಡಿದ್ದೀರಿ. ಇದಕ್ಕೆ ಇನ್ನೂ ಹಣದ ಅವಶ್ಯಕತೆ ಇದೆ. ತಮಿಳುನಾಡಿನವರು ವಿಶ್ವಬ್ಯಾಂಕಿನಿಂದ ತೆಗೆದುಕೊಂಡ ರೀತಿಯಲ್ಲಿ ನಾವೂ ಕೂಡ ಹಣವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲದೇ ಹೋದರೆ ಕರ್ನಾಟಕ ವಾಟರ್ ಸಪ್ಲೈ ಅಂಡ್ ಡ್ರೈನೇಜ್ ಸ್ಕೀಂನಿಂದ ಜನರಿಗೆ ನಿರಾಶೆ ಮಾಡುತ್ತೀರಿ. ನಾವು ಇದರ ಬಗ್ಗೆ ನಿಯಮ ೩೩೪ರ ಕೆಳಗೆ ಪ್ರಶ್ನೆ ಕೇಳಿದರೆ ಡಿಮ್ಯಾಂಡ್ ಬಂದಾಗ ಮಾತನಾಡಿ ಎಂದು ಅಪ್ಪಣೆ ಕೊಡಿಸುತ್ತೀರಿ. ಡಿಮ್ಯಾಂಡಿನಲ್ಲಿ ಮಾತನಾಡುವಾಗ ಸಮಯ ಕಡಿಮೆ ಆಗುವಂದಾದ್ದು ಇರುತ್ತದೆ. ಹೀಗಾದರೆ ನಾವು ಯಾವಾಗ ಹೇಳುವುದು ? ಇದನ್ನು ಯೋಚನೆ ಮಾಡಬೇಕೆಂದು ನಾನು ಬಹಳ ಕಳಕಳಿಯಿಂದ ಸಭೆಯ ಮುಂದೆ ಹೇಳುತ್ತಿದ್ದೇನೆ. ನೀವು ಹಾಕಿಕೊಂಡಿರತಕ್ಕ ವಾಟರ್ ಸಪ್ಲೈ ಮತ್ತು ಡ್ರೈನೇಜ್ ಸ್ಕೀಂ ಬಗ್ಗೆ ಬಹಳ ಗಂಭೀರವಾಗಿ ನೀವು ಯೋಚನೆ ಮಾಡಬೇಕಾಗುತ್ತದೆ. ಇಲ್ಲದಿದ್ದರೆ, ನಮ್ಮ ರಾಜ್ಯದ ನಗರ ನಿವಾಸಿಗಳು ನೀರಿನ ವಿಚಾರದಲ್ಲಿ ಮತ್ತು ಆರೋಗ್ಯದ ವಿಚಾರದಲ್ಲಿ ಒಂದು ದೊಡ್ಡ ತೊಂದರೆಯನ್ನು ಅನುಭವಿಸಬೇಕಾಗಿ ಬರುತ್ತದೆ.

ಇನ್ನು ರೇಷ್ಮೆ ಇಲಾಖೆಯ ವಿಚಾರವನ್ನು ಒಂದು ವಿಚಾರವನ್ನು ಹೇಳಲಿಕ್ಕೆ ಬಯಸುತ್ತೇನೆ. ಕರ್ನಾಟಕ ಸಿಲ್ಕ್ ಮಾರ್ಕೆಟಿಂಗ್ ಬೋರ್ಡ್ ಇದೆ ಸಿಲ್ಕ್ ಎಕ್ಸ್‌ಚೇಂಜ್‌ನಲ್ಲಿ ಕಚ್ಚಾ ರೇಷ್ಮೆ ಮಾರುಕಟ್ಟೆಗೆ ಬರುತ್ತದೆ ಕಚ್ಚಾ ರೇಷ್ಮೆಗೆ ನಮ್ಮ ರಾಜ್ಯದಲ್ಲಿ ಸರಿಯಾದ ವ್ಯವಸ್ಥೆ ಮಾಡಬೇಕು. ಇದಕ್ಕೆ ಒಂದು ಎಕ್ಸಿಕ್ಯೂಟಿವ್ ಕಮಿಟಿ ಮಾಡಬೇಕು. ಮತ್ತು ನಮ್ಮ ರಾಜ್ಯದಲ್ಲಿ ರೇಷ್ಮೆ ವ್ಯವಸಾಯಗಾರರಿಗೆ ಇರುವ ತೊಂದರೆ ಪರಿಹಾರವಾಗತಕ್ಕ ಬಗ್ಗೆ ಅಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಸಮಾಜಕಲ್ಯಾಣ ಇಲಾಖೆಯ ಬಗ್ಗೆ ಅನೇಕ ಒಳ್ಳೆಯ ವಿಚಾರಗಳನ್ನು ಮುಂದಿಟ್ಟಿದ್ದಾರೆ. ಆದರೆ ದುಡ್ಡು ಖರ್ಚಾಗಿರುವುದು ಮತ್ತು ದುಡ್ಡು ಇಟ್ಟಿರುವುದು ಈ ಎರಡನ್ನೂ ಯೂನಿಟ್‌ವೈಸ್ ನೋಡುವಾಗ ಹೆಚ್ಚಿಗೆ ಕಾಣುತ್ತಾ ಇಲ್ಲ. ಈ ದೃಷ್ಟಿಯಿಂದ ಹೆಚ್ಚಿನ ಧನವಿನಿಯೋಗ ಆಗುವುದು ಮಾತ್ರವಲ್ಲ, ಧನ ವಿನಿಯೋಗ ಆಗಲಿಕ್ಕೆ ಬೇಕಾದಂಥ ಅಧಿಕಾರಿಗಳೂ ಕೂಡ ಹೆಚ್ಚು ದಕ್ಷತೆಯಿಂದ ಕೆಲಸ ಮಾಡಬೇಕು. ಇದರಲ್ಲಿ ಉಸ್ತುವಾರಿ ಕೊರತೆ ಇದೆ. ರಾಜ್ಯದಲ್ಲಿ ಹಿಂದುಳಿದ ವರ್ಗದ ಬಗ್ಗೆ ವಿಚಾರ ಮಾಡುವುದಾದರೆ ಮೊನ್ನೆ ನಮ್ಮ ಜಿಲ್ಲೆಗೆ ಸಂಬಂಧಪಟ್ಟಂತೆ ಶಾಸಕರಾದ ಶ್ರೀ ರಾಮಭಟ್‌ರು ಒಂದು ಪ್ರಶ್ನೆ ಕೇಳಿದ್ದರು. ತಾವು ಕೂಡ ಅದರ ಬಗ್ಗೆ ವಿಶ್ಲೇಷಣೆ ರೂಪದಲ್ಲಿ ಒಂದು ಮಾತು ಹೇಳಿದಿರಿ. ನಮ್ಮ

ರಾಜ್ಯದಲ್ಲಿ ಅತಿ ಹಿಂದುಳಿದ ಕೊರಗ ಜನಾಂಗ ಇದೆ, ಇದಕ್ಕಿಂತ ಹಿಂದುಳಿದವರು ಬೇರೆ ಯಾರೂ ಇಲ್ಲ. ಇವರು ಊರಿನ ಬೇರೆಯವರೊಂದಿಗೆ ಸೇರಲಿಕ್ಕೆ ಇಚ್ಛೆಪಡುತ್ತಿಲ್ಲ ಎಂದು ೧೯೮೨ನೇ ಇಸವಿ ಸೆಪ್ಟೆಂಬರ್‌ನಲ್ಲಿ ಒಂದು ಹೊರಡಿಸಿದ್ದೀರಿ. ಈ ಜನಾಂಗದವರಿಗೆ ಸರ್ಟಿಫಿಕೇಟ್ ಕೊಡಬೇಕಾದರೆ, ಕಾಡಿನಿಂದ ಬಂದ ಜನರು ಎಂದಿರಬೇಕೆಂದು ಆದೇಶದಲ್ಲಿ ನಮೂದಿಸಿದೆ. ಇದಕ್ಕೆ ಈ ಜನಕ್ಕೆ ಅನ್ಯಾಯವಾಗಿದೆ.

ಅಧ್ಯಕ್ಷರು.—ನಿಮಗೆ ೪೫ ನಿಮಿಷ ಕೊಡಲಾಯಿತು. ಒಬ್ಬ ಸದಸ್ಯರಿಗೆ ೨೭ ನಿಮಿಷ ಬರುತ್ತದೆ. ಆದರೂ ನೀವು ೪೫ ನಿಮಿಷ ತೆಗೆದುಕೊಂಡಿದ್ದೀರಿ.

ಡಾ॥ ವಿ. ಎಸ್. ಆಚಾರ್ಯ.—ಎಸ್.ಸಿ. ಮತ್ತು ಎಸ್. ಟಿ. ರಿಸರ್ವೇಷನ್ ಹೆಸರಿನಲ್ಲಿ ಇತರೆ ಯಾವರು ಪ್ರಯೋಜನ ಪಡೆದುಕೊಂಡಿರುವಾಗ ತೀರಾ ಹಿಂದುಳಿದವರಿಗೆ ಇನ್‌ಷೂರ್ ಮಾಡುವಂತಹ ವಿಧಾನ ಬೇಕು. ಇದೇ ರೀತಿ ಮುಕ್ರಿ ಜನಾಂಗವಿದೆ ಕುಮುಟ ತಾಲ್ಲೂಕಿನ ಈ ಮುಕ್ರಿ ಜನಾಂಗದ ಒಬ್ಬ ಹುಡುಗ ರಾಜ್ಯದಲ್ಲಿ ಪೋಲೀಸ್ ಪೇದೆ ಇತ್ಯಾದಿಗಳ ಹುದ್ದೆಗಳಿಗಾಗಿ ಸುಮಾರು ೨೬ ಸಂದರ್ಶನಗಳಿಗೆ ಹೋಗಿದ್ದರೂ ಕೆಲಸ ಸಿಕ್ಕಿಲ್ಲ. ತೀರಾ ಹಿಂದುಳಿದ ಜನರಿಗೆ ಕೆಲಸ ಸಿಗುವ ವ್ಯವಸ್ಥೆಯಾಗಬೇಕು. ಈ ಬಗ್ಗೆ ಇನ್ನೂ ಸುಧಾರಣೆಯಾಗಬೇಕು ಇನ್ನೂ ಅನೇಕ ವಿಚಾರಗಳನ್ನು ಹೇಳುವುದಿತ್ತು. ಆದರೆ ಸಮಯದ ಅಭಾವದಿಂದ ಹೇಳಲಿಕ್ಕೆ ಸಾಧ್ಯವಾಗುತ್ತಿಲ್ಲ. ಸಾಂಕೇತಿಕವಾಗಿ ಕೆಲವೊಂದು ವಿಚಾರಗಳನ್ನು ಹೇಳಿದ ಬಗ್ಗೆ ಮಾನ್ಯ ನಗರಾಭಿವೃದ್ಧಿ ಸಚಿವರು ಹೆಚ್ಚಿನ ಗಮನವನ್ನು ಕೊಟ್ಟು ಮುಂದಿನ ವರ್ಷದಲ್ಲಿ ತುಂಬಾ ಸುಧಾರಣೆ ಆಗುವಂಥಾದ್ದು ಕಾಣುವ ಹಾಗೆ ಮಾಡಲಿ ಎಂದು ಹೇಳಿ, ತಮ್ಮ ಬೇಡಿಕೆಗೆ ಬೆಂಬಲವನ್ನು ಕೊಟ್ಟು ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

೧೨—೦೦ ಮಧ್ಯಾಹ್ನ

ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ).—ಮಾನ್ಯ ಸಭಾಧ್ಯಕ್ಷರೇ, ನಾನು ಹೆಚ್ಚು ಹೊತ್ತು ತೆಗೆದುಕೊಳ್ಳದೆ, ಕೇವಲ ಐದು ನಿಮಿಷಗಳಲ್ಲಿ ನನ್ನ ಭಾಷಣವನ್ನು ಮುಗಿಸಿಬಿಡುತ್ತೇವೆ. ನಗರಾಭಿವೃದ್ಧಿ ಮತ್ತು ವಸತಿ ಇಲಾಖೆಯ ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ಹೆಚ್ಚಾಗಿ ಭಾಗವಹಿಸತಕ್ಕಂಥಾದ್ದು ನಗರದಿಂದ ಆರಿಸಿಬಂದಿರತಕ್ಕಂಥ ನನ್ನ ಕರ್ತವ್ಯ ಎಂದು ನಾನು ಕೇಳುತ್ತೇನೆ.

ಸಭಾಧ್ಯಕ್ಷರು.—ನಮಗೂ ಸಹ ನರಗಳು ಬರುತ್ತವೆ.

ಶ್ರೀ ಪಿ. ರಾಮದೇವ್.—ಇವತ್ತು ರಾಜ್ಯದಲ್ಲಿ ಶೇಕಡಾ ೨೨ರಷ್ಟು ಜನ ನಾಗರೀಕರು ನಗರಗಳಲ್ಲಿ ವಾಸ ಮಾಡುತ್ತಿದ್ದಾರೆ ರಾಜ್ಯ ಐದನೆಯ ಒಂದು ಭಾಗ ಜನ ಅಂದರೆ ಸುಮಾರು ಒಂದು ಕೋಟಿ ಜನ ನಗರಗಳಲ್ಲಿ ವಾಸ ಮಾಡುತ್ತಿದ್ದಾರೆ. ಈ ಒಂದು ಕೋಟಿ ಜನಗಳಿಗೆ ಕೊಡಬೇಕಾದ ಸೌಲಭ್ಯಗಳನ್ನು ಕೊಡತಕ್ಕಂಥ ಒಂದು ಪ್ರಯತ್ನವನ್ನು ಸರಕಾರ ಮಾಡಿಲ್ಲ ಎಂದು ನಾನು ಹೇಳಬೇಕಾಗಿದೆ. ಆದರೆ ತಾವು ಕೊಟ್ಟಿರುವ ಈ ಒಂದು ವರದಿಯನ್ನು ನೋಡಿದಾಗ, ಇದರಲ್ಲಿ ಒಂದು ಮಾತು ಮಾತ್ರ ಎದ್ದು ಕಾಣಿಸತಕ್ಕದ್ದು, ಎಂದರೆ 'ಹಣದ ಅಡಚಣೆಯಿಂದ ನಗರದ ಜನತೆಗೆ ಕೊಡಬೇಕಾದ ಸೌಲಭ್ಯಗಳನ್ನು ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ' ಎಂಬ ಮಾತು ಈ ವರದಿಯಲ್ಲಿ ಕಂಡು ಬರುತ್ತಿದೆ. ಇದು ಮಾನ್ಯ ಚಂದ್ರಶೇಖರ್ ವಹಿಸಿಕೊಂಡಿರತಕ್ಕಂಥಾದ್ದು, ದೊಡ್ಡ ಖಾತೆ. ಈ ಇಲಾಖೆಯಲ್ಲಿ ಬಹುಶಃ ಎಷ್ಟು ಮಾಡಿದರೂ ಮುಗಿಯದಿರತಕ್ಕ, ಎಷ್ಟು ಸೌಲಭ್ಯಗಳನ್ನು ಕೊಟ್ಟರೂ ಮುಗಿಯದಿರತಕ್ಕ ಪರಿಸ್ಥಿತಿ ಇದೆ. ಈ ಇಲಾಖೆಗೆ ಪ್ರಮುಖವಾಗಿ ಬೇಕಾಗಿರುವುದು, ಸರಕಾರದಿಂದ ಕೋಟ್ಯಾಂತರ ರೂಪಾಯಿಗಳ ಹಣ ಸಹಾಯ. ಈ ಹಣಸಹಾಯಕ್ಕೋಸ್ಕರ, ಸರಕಾರದವರು ಇದನ್ನು ಮನಗಂಡು, ಒಂದು ಸಮಿತಿಯನ್ನು ಮಾಡಿದ್ದಾರೆ. "ಸ್ಥಳೀಯ ಘಟಕಗಳಿಗೆ ವಹಿಸಲಾದ ಮತ್ತು ವಿಧಿಸಲಾದ ಕಾರ್ಯ ಭಾರಗಳಿಗೆ ಹಣಕಾಸಿನ ಪ್ರಮಾಣವನ್ನು ನಿರ್ಧರಿಸಲು ಮತ್ತು ರಾಜ್ಯ ಸರಕಾರ ಹಾಗೂ ಸ್ಥಳೀಯ ಘಟಕಗಳ ಆರ್ಥಿಕ ಸಂಬಂಧ ಸುಸೂತ್ರವಾಗಿ ನಡೆಯಲು ಸಾಧ್ಯವಾಗುವಂತೆ ಸ್ಥಳೀಯ ಹಣಕಾಸು ಆಯೋಗವೊಂದನ್ನು ರಚಿಸಿದೆ" ಸಂತೋಷ, ಇದನ್ನು ನಾವು ಸ್ವಾಗತ ಮಾಡಬೇಕಾಗಿದೆ. ಈ ಸ್ಥಳೀಯ ಹಣಕಾಸಿನ ಆಯೋಗ ಆದಷ್ಟು ಬೇಗ ತನ್ನ ವರದಿಯನ್ನು ಕೊಡಬೇಕೆಂದು ಹೇಳುತ್ತೇನೆ. ಇವತ್ತು ನಮ್ಮ ರಾಜ್ಯ ಸರಕಾರ ಹಾಗೂ ಎಲ್ಲಾ ರಾಜ್ಯ ಸರಕಾರಗಳು, ಕೇಂದ್ರ ಸರಕಾರದೊಂದಿಗೆ, ಹಣಕಾಸಿನ ವಿನಿಯೋಗದ ಬಗ್ಗೆ ಸಾಕಷ್ಟು ಮನವಿಗಳನ್ನು ಕೊಡುತ್ತಿದ್ದೇವೆ, ಚರ್ಚೆ ಮಾಡುತ್ತಿದ್ದೇವೆ. ಕೇಂದ್ರ ಸರಕಾರ ನಿಮಗೆ ಏನು ಇವತ್ತು ಹಣಕಾಸಿನ ಪಾಲನ್ನು, ಎಕ್ಸೈಸ್‌ನಲ್ಲಾಗಲೀ, ಸೇಲ್ಸ್

ಟ್ಯಾಕ್ಸ್‌ನಲ್ಲಾಗಲೀ, ಕೇಂದ್ರದ ತೆರಿಗೆಗಳು ಏನಿವೆ, ಆ ತೆರಿಗೆಯಲ್ಲಿ ಹೆಚ್ಚಿನ ಪಾಲನ್ನು ತಾವು ಕೇಳುತ್ತಿದ್ದೀರಿ. ಇದುವರೆಗೆ ಕೇಂದ್ರದವರು ಶೇಕಡಾ ೩೦ರಷ್ಟು ತೆರಿಗೆಯ ಪಾಲನ್ನು ಕೊಡುತ್ತಿದ್ದರು, ಈಗ ೪೦ರಷ್ಟಾದರೂ ಬರಬೇಕೆಂದು ಒಂದು ವಾದವನ್ನು ನೀವು ಕೇಂದ್ರ ಹಣಕಾಸಿನ ಆಯೋಗದ ಮುಂದೆ ಇಟ್ಟಿದ್ದೀರಿ. ನಾನಾದರೂ, ರಾಜ್ಯ ಸರಕಾರ ಇದೇ ನೀತಿಯನ್ನು ಸ್ಥಳೀಯ ಸಂಸ್ಥೆಗಳ ಬಗ್ಗೆ ಅನುಸರಿಸಬೇಕೆಂದು ಹೇಳುತ್ತೇನೆ. ಇವತ್ತು ಸ್ಥಳೀಯ ಸಂಸ್ಥೆಗಳ ಗತಿ ಏನಾಗಿದೆ ಎಂದರೆ, ಅವರು ಭಿಕ್ಷಾಪಾತ್ರೆಯನ್ನು ಹಿಡಿದುಕೊಂಡು ಸರಕಾರದ ಮುಂದೆ ಬರತಕ್ಕಂಥ ಪ್ರಯತ್ನ ಮಾಡುತ್ತಿದ್ದಾರೆ. ಇವತ್ತು ಅವರಲ್ಲಿ ಬೀದಿ ದೀಪಕ್ಕೆ ದುಡ್ಡಿಲ್ಲ. ಕಸಗುಡಿಸುವವರಿಗೆ ಸಂಬಳ ಕೊಡುವುದಕ್ಕೆ ದುಡ್ಡಿಲ್ಲ, ಒಂದಕ್ಕೂ ಕೂಡಾ ದುಡ್ಡಿಲ್ಲ. ಶಾಲೆಗಳನ್ನು, ಅದರಲ್ಲೂ ಪ್ರೈಮರಿ ಶಾಲೆಗಳನ್ನು ನಡೆಸುವುದಕ್ಕೂ ಕೂಡಾ ದುಡ್ಡಿಲ್ಲ. ಯಾವುದೇ ತೆಗೆದುಕೊಳ್ಳಿ, ಹಣವಿಲ್ಲ, ಹಣವಿಲ್ಲ ಎಂಬ ಕೊರತೆಯನ್ನು ನಮ್ಮ ಮುಂದಿಡುತ್ತಿದ್ದಾರೆ. ನಾನಾದರೂ ಈ ಸಂದರ್ಭದಲ್ಲಿ ಹೇಳುವುದು ಎಂದರೆ, ರಾಜ್ಯ ಸರಕಾರ ಇವತ್ತು ನಗರಗಳಿಂದ ಹೆಚ್ಚು ಹೆಚ್ಚು ಹಣವನ್ನು ತೆರಿಗೆಗಳ ಮುಖಾಂತರ ಪಡೆಯುತ್ತಿದೆ. ಸೇಲ್ಸ್ ಟ್ಯಾಕ್ಸ್, ಮೋಟಾರ್ ವೆಹಿಕಲ್ ಟ್ಯಾಕ್ಸ್, ಮನರಂಜನಾ ತೆರಿಗೆ, ಎಕ್ಸೈಸ್ ಇನ್ನೂ ಮುಂತಾದ ರೀತಿಯಲ್ಲಿ ಕೋಟ್ಯಾಂತರ ರೂಪಾಯಿಗಳ ಹಣವನ್ನು ರಾಜ್ಯ ಸರಕಾರ ಪಡೆಯುತ್ತಿದೆ. ಬಹುಶಃ ಇವತ್ತು ರಾಜ್ಯದ ಹೆಚ್ಚಿನ ಆದಾಯ ಈ ನಾಲ್ಕಾರು ತೆರಿಗೆಗಳ ಮೂಲಕ ಬರತಕ್ಕದ್ದು ಇದೆ. ಶೇಕಡಾ ೭೦ ರಿಂದ ೮೦ ರಷ್ಟು ಹಣ ಈ ಮೂಲಗಳಿಂದ ಸರಕಾರಕ್ಕೆ ಸೇರುತ್ತಿದೆ. ಆದುದರಿಂದ ಈಗ ಸ್ಥಳೀಯ ಸಂಸ್ಥೆಗಳಿಗೆ ಏನು ಒಂದು ಪಾಲು ಕೊಡುತ್ತಿದ್ದೀರಿ, ಅದು ಏನೇನೂ ಇಲ್ಲ ಎಂಬುದನ್ನು ತಮ್ಮ ಮುಂದೆ ಮಂಡಿಸುತ್ತಿದ್ದೇನೆ. ನೀವು ಕೊಟ್ಟಿರತಕ್ಕಂಥಾದ್ದು, ಆಕ್ಟ್ರಾಯ್ ಕಂಪೆನ್‌ಸೇಷನ್‌ನಲ್ಲಿ ಕೇವಲ ೩೧ ಕೋಟಿ ರೂಪಾಯಿಗಳು. ಬೇರೆ ಬಾಬುಗಳಲ್ಲಿ ಬಹಳ ಕಡಿಮೆ. ಈ ಸ್ಥಳೀಯ ಸಂಸ್ಥೆಗಳು ಅದರಲ್ಲೂ, ಮುನಿಸಿಪಾಲಿಟಿಗಳು, ಟೌನ್ ಮುನಿಸಿಪಾಲಿಟಿಗಳು, ಸಿಟಿ ಕಾರ್ಪೊರೇಷನ್ಸ್ ಇವೆಲ್ಲಾ, ಹೆಚ್ಚು ಕಡಿಮೆ ನಡೆಯತಕ್ಕದ್ದು, ಅವರಿಗೆ ಬರತಕ್ಕ ಮೇಜರ್ ಸೋರ್ಸ್ ಎಂದರೆ ಪ್ರಾಪರ್ಟಿ ಟ್ಯಾಕ್ಸ್, ಲೈಸೆನ್ಸ್ ಫೀ, ಮೋಟಾರ್‌ವೆಹಿಕಲ್ ಟ್ಯಾಕ್ಸ್ ಜಾಹೀರಾತು ತೆರಿಗೆ, ವರ್ಗಾವಣೆ ತೆರಿಗೆ, ಇವೇ ಮೇಜರ್ ಸೋರ್ಸ್ ನಾವು ನೋಡತಕ್ಕದ್ದು, ಇದರಿಂದ ಬರತಕ್ಕ ಹಣದಿಂದ ಯಾವ ಒಂದು ಉಪಯೋಗವನ್ನೂ, ಸೌಲಭ್ಯವನ್ನು ಪಟ್ಟಣದ ಜನತೆಗೆ ಕೊಡುವುದಕ್ಕೆ ಸಾಧ್ಯವಾಗುತ್ತದೆ? ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬುದನ್ನು ನಾವು ನೋಡುತ್ತಿದ್ದೇವೆ. ನಾನು ತೀವ್ರವಾಗಿ ಸರಕಾರದ ಮುಂದೆ ಒಂದು ಮನವಿ ಮಾಡಿಕೊಳ್ಳುವುದು ಎಂದರೆ, ತಾವು ಹೇಗೆ ಸೆಂಟರ್‌ನಿಂದ ಹೆಚ್ಚು ಹಣವನ್ನು, ಕೇಂದ್ರಕ್ಕೆ ಹೋಗತಕ್ಕಂಥ ತೆರಿಗೆಯ ಪಾಲಿನಲ್ಲಿ ಹೆಚ್ಚು ಹಣವನ್ನು ಕೊಡಬೇಕೆಂದು ಕೇಳುತ್ತಿದ್ದೀರೋ, ಅದೇರೀತಿ, ನಗರಗಳಿಂದ ನಿಮಗೆ ಸೇಲ್ಸ್‌ಟ್ಯಾಕ್ಸ್ ಬರುತ್ತಿದೆ, ಎಂಟ್ರಟೈನ್‌ಮೆಂಟ್ ಟ್ಯಾಕ್ಸ್ ಬರುತ್ತಿದೆ, ಎಕ್ಸೈಸ್ ಡ್ಯೂಟಿ ಬರುತ್ತಿದೆ, ಇದರಲ್ಲಿ ಹೆಚ್ಚಿನ ಪಾಲನ್ನು, ಕನಿಷ್ಠಪಕ್ಷ ೪೦ ರಿಂದ ೫೦ ರಷ್ಟನ್ನು ನಗರಗಳಿಗೆ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಈ ಟರ್ಫ್ ಕ್ಲಬ್, ರೇಸ್‌ಕೋರ್ಸ್‌ನಿಂದ ಕೋಟ್ಯಾಂತರ ರೂಪಾಯಿಗಳು ಬರುತ್ತಿದೆ, ಅದರಲ್ಲಿ ಶೇಕಡಾ ೫೦ ರಷ್ಟು ನಗರಗಳಿಗೆ ಕೊಡಬೇಕು. ಹಾಗೆ ಮಾಡಿದರೆ ಮಾತ್ರ ನಿಜವಾಗಿಯೂ ಸ್ಥಳೀಯ ಸಂಸ್ಥೆಗಳು, ಅಟಾನಮಸ್ ಬಾಡೀಸ್ ಎಂದು ಏನು ಹೇಳುತ್ತೇವೆ, ಅವುಗಳಿಗೆ ಜೀವಕೊಟ್ಟ ಹಾಗೆ ಆಗುತ್ತದೆ ಎಂಬ ಮಾತನ್ನು ಹೇಳುತ್ತೇನೆ. ಇನ್ನು ನೀವು ಆಕ್ಟ್ರಾಯ್ ತೆಗೆದುಹಾಕಿದಂಥ ಕಾಲದಲ್ಲಿ, ಇದನ್ನು ಸರಕಾರ ತೆಗೆದಿರತಕ್ಕಂಥಾದ್ದು ಸರಿಯಲ್ಲ ಎಂದು ವಾದವನ್ನು ನಾವು ಮಾಡಿದ್ದೇವೆ. ಈ ಆಕ್ಟ್ರಾಯ್‌ನಿಂದ ಸುಮಾರು ೧೦೦ ಕೋಟಿ ರೂಪಾಯಿಗಳು ಆದಾಯ ಈ ಸಂಸ್ಥೆಗಳಿಗೆ ಬರುತ್ತಿತ್ತು. ಆದರೆ ತಾವು ಕೇವಲ ೩೦ ಕೋಟಿ ರೂಪಾಯಿಗಳ ಪರಿಹಾರ ಕೊಡುತ್ತಿದ್ದೀರಿ. ಈ ನೂರು ಕೋಟಿ ರೂಪಾಯಿಗಳೂ ಅವರಿಗೇ ಬಂದಿದ್ದರೆ, ಅನೇಕ ಸ್ಥಳೀಯ ಸಂಸ್ಥೆಗಳಿಗೆ, ನಗರಸಭೆ, ಕಾರ್ಪೊರೇಷನ್‌ಗಳಿಗೆ ಬಹಳ ಅನುಕೂಲವಾಗುತ್ತಿತ್ತು. ಈ ಆಕ್ಟ್ರಾಯನ್ನು ಪುನಃ ತರತಕ್ಕಂಥ ಪ್ರಯತ್ನವನ್ನು ತಾವು ಮಾಡಲೇಬೇಕೆಂದು ನಾನು ಹೇಳುತ್ತೇನೆ. ಮಧ್ಯೆ ಇರತಕ್ಕ ಜನಗಳಿಗೆ ಅನುಕೂಲ ಆಗಲೀ ಎಂಬ ಉದ್ದೇಶದಿಂದ ಈ ಆಕ್ಟ್ರಾಯ್ ತೆಗೆದರೇ ಹೊರತು. ಇದರಿಂದ ಜನಸಾಮಾನ್ಯರಿಗೆ ಅನುಕೂಲ ಆಗತಕ್ಕ ದೃಷ್ಟಿಯಿಂದ ಇಲ್ಲ. ಇದನ್ನು ತಾವು ಪುನಃ ಜಾರಿಗೆತರತಕ್ಕ ಪ್ರಯತ್ನ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಕೊನೆಯದಾಗಿ, ನಮ್ಮ ಅಧಿಕಾರಿಗಳು ಪ್ರಪಂಚ ಹಣಕಾಸಿನ ಸಂಸ್ಥೆ ಹಾಗೂ ಕೇಂದ್ರ ಸರಕಾರದಿಂದ ಹಣ ಪಡೆಯುವುದರಲ್ಲಿ ಇವತ್ತು ಸಂಪೂರ್ಣವಾಗಿ ವಿಫಲರಾಗಿದ್ದಾರೆ ಎಂದು ನಾನು ಹೇಳುತ್ತೇನೆ. ಈಗ ಪೂನಾ ನಗರ ನೋಡಿ,

ಬೊಂಬಾಯಿ ನೋಡಿ, ಮದ್ರಾಸ್ ನೋಡಿ, ಈ ನಗರಗಳಿಗೆ ಎಲ್ಲಿವರೆಗೆ ಹಣಸಹಾಯ ಮಾಡಿದ್ದಾರೆ ಎಂದರೆ, ಬೀದಿದೀಪ ಹಾಕುವುದಕ್ಕೆ ಕೊಟ್ಟಿದ್ದಾರೆ ಟರ್ಮಿನಲ್ಸ್ ಕನ್‌ಸ್ಟ್ರಕ್ಷನ್ ಮಾಡುವುದಕ್ಕೆ ಕೊಟ್ಟಿದ್ದಾರೆ, ರಸ್ತೆ ಮಾಡುವುದಕ್ಕೆ ಕೊಟ್ಟಿದ್ದಾರೆ. ಇದನ್ನು ಪದೇಪದೇ ಅಧಿಕಾರಿಗಳ ಮುಂದೆ ಹೇಳಿದರೂ ಕೂಡಾ ಯಾವರೀತಿಯ ಪ್ರಯೋಜನವೂ ಆಗಿಲ್ಲ. ವರಲ್ಡ್ ಬ್ಯಾಂಕ್‌ನಲ್ಲಿ ನಮ್ಮ ಕರ್ನಾಟಕದವರು ಕೆಲವರು ಇದ್ದಾರೆ. ಅವರು ಹೇಳುತ್ತಾರೆ, ಬೇರೆ ರಾಜ್ಯಗಳಿಂದ ಪ್ರಪೋಸಲ್ಸ್ ಬರುತ್ತಿದೆ, ಆದರೆ ಕರ್ನಾಟಕದಿಂದ ಏನೂ ಬರುತ್ತಿಲ್ಲ ಎಂದು ಹೇಳುತ್ತಾರೆ. ಈ ಅಧಿಕಾರಿಗಳು ಸುಮ್ಮನೆ ಕುಳಿತುಕೊಂಡು ಸಂಬಳ ತೆಗೆದುಕೊಂಡು ಹೋಗುವುದಕ್ಕೆ ಅಧಿಕಾರಿಗಳೇ. ಜನಸಾಮಾನ್ಯರಿಗೆ ತೊಂದರೆಯಾಗುತ್ತಿದೆ, ಸಂಪನ್ಮೂಲಗಳನ್ನು ಎಲ್ಲಿಂದ ತರಬೇಕು, ಕೇಂದ್ರ ಸರಕಾರದಿಂದ ತರಬೇಕೇ, ಪ್ರಪಂಚ ಹಣಕಾಸಿನ ಸಂಸ್ಥೆಯಿಂದ ತರಬೇಕೇ, ಏನೂ ನೋಡುವುದಿಲ್ಲ. ಇದು ಬಹಳ ದುರಾದೃಷ್ಟ ಎಂದು ಹೇಳುತ್ತೇನೆ. ಬೆಂಗಳೂರು ನಗರಕ್ಕೆ ಮೆಟ್ರೋಪೋಲಿಟನ್ ಕೌನ್ಸಿಲ್ ಮಾಡುತ್ತೇವೆಂದು ಹೇಳಿದರು. ಎರಡು ವರ್ಷ ಆಯಿತು ಈ ರೀತಿ ಹೇಳಿ, ನಾವೂ ಇಷ್ಟೆಲ್ಲಾ ಒತ್ತಾಯ ಮಾಡಿದ್ದೇವೆ. ಇನ್ನೂ ಏನೂ ಆಗಿಲ್ಲ. ಮಾನ್ಯ ಧರ್ಮಸಿಂಗ್‌ರವರು ಮಂತ್ರಿಗಳಾಗಿದ್ದಾಗ ಪೂನಾ ನೋಡಿ, ಬೊಂಬಾಯಿ ನೋಡಿ, ಎಂದು ಎಲ್ಲಾ ತೋರಿಸಿಕೊಂಡು ಬಂದರು. ಇನ್ನೂ ಆಗಿಲ್ಲ, ಇದನ್ನು ಏತಕ್ಕೆ ನಿಧಾನ ಮಾಡುತ್ತಿದ್ದೀರಿ ಎಂದು ಕೇಳುತ್ತೇನೆ. ಇನ್ನು ಸ್ಲಮ್ ಬೋರ್ಡ್ ಇದೆ. ದಯವಿಟ್ಟು ಅವರಿಗೆ ಹೆಚ್ಚು ಅಧಿಕಾರ ಕೊಡಿ. ಇಲ್ಲ ಎಂದರೆ ಈ ಬೋರ್ಡ್ ನೋಡುವುದಕ್ಕೆ ಆಗುವುದಿಲ್ಲ. ಈ ಅಧಿಕಾರಿಗಳು ಯಾವ ರೀತಿಯ ಸಹಕಾರವನ್ನೂ ಕೊಡುತ್ತಿಲ್ಲ. ಇಲ್ಲಿ ಏನಾಗಿದೆ ಎಂದರೆ, ಈ ನಾನ್ ಅಫಿಷಿಯಲ್ಸ್ ಯಾರು ಚೇರ್ಮೆನ್ ಆಗುತ್ತಾರೆ, ಅಧಿಕಾರಿಗಳು ಅವರಿಗೆ ಯಾವ ರೀತಿಯ ಸಹಕಾರವನ್ನೂ ಕೊಡುವುದಿಲ್ಲ. ಏನೋ ತಾವು ಹೆವೆನ್‌ನಿಂದ ನೇರವಾಗಿ ಇಳಿದು ಬಂದಿರುವಹಾಗೆ ಆಡುತ್ತಾರೆ, ಈ ನಾನ್ ಅಫಿಷಿಯಲ್ಸ್ ಏನು, ಇವರಿಗೇನು ಗೊತ್ತಿದೆ, ಇವರ ಮಾತು ಏನು ಕೇಳುವುದು ಎಂಬ ಧೋರಣೆ ಅವರದು. ಇದರಿಂದಾಗಿ ಇವತ್ತು, ಸ್ಲಮ್ ಬೋರ್ಡ್ ಚೇರ್ಮೆನ್ ಇರಲಿ, ಬೇರೆ ಅನೇಕ ಬೋರ್ಡ್‌ಗಳ ಚೇರ್ಮೆನ್‌ಗಳಿರಲಿ, ಕಷ್ಟದಪರಿಸ್ಥಿತಿಗೆ ಸಿಕ್ಕಿಹಾಕಿಕೊಂಡಿದ್ದಾರೆ. ಇವರಿಗೆ ನಾನು ಒಂದು ವಾರ್ನಿಂಗ್ ಕೊಡುತ್ತಿದ್ದೇನೆ, ಅಧಿಕಾರಿಗಳು ಚೇರ್ಮೆನ್ ಅವರ ಮಾತನ್ನು ಕೇಳಬೇಕು, ಚೇರ್ಮೆನ್‌ರೇನೂ ಅವರ ಸ್ವಂತದ ಕೆಲಸಕ್ಕೆ ಹೇಳುವುದಿಲ್ಲ, ನಾವೂ ಸಾಕಷ್ಟು ಕೆಲಸ ಆಗಬೇಕೆಂದು ಅಧಿಕಾರಿಗಳಿಗೆ ಒತ್ತಾಯ ಮಾಡುತ್ತೇವೆ, ಅವರು ನಮ್ಮ ಮಾತು ಕೇಳದಿದ್ದರೆ, ನಾವು ಅಧಿಕಾರಿಗಳನ್ನು ಘೇರಾವೋ ಮಾಡುತ್ತೇವೆ. ಅವರು ಚೇರ್ಮೆನ್‌ಗಳನ್ನು ಧಿಕ್ಕರಿಸಿಕೊಂಡು, ಸಂಬಳ ತೆಗೆದುಕೊಂಡು ಮನೆಯಲ್ಲಿ ಇರುವುದಕ್ಕೆ ಬಂದಿದ್ದಾರೆಯೇ ? ಕಾನೂನು ಪ್ರಕಾರ ಅವರು ನಾನ್ ಅಫಿಷಿಯಲ್ ಮೆಂಬರ್ಸ್‌ಗೆ ಸಹಕಾರ ಮಾಡಬೇಕು, ಪ್ರಜಾಪ್ರಭುತ್ವ ಬಂದು ಇಷ್ಟು ವರ್ಷಗಳಾದರೂ ಸಹ ಈ ರೀತಿಯ ಒಂದು ಧೋರಣೆ ಅಧಿಕಾರಿಗಳಲ್ಲಿ ಕಂಡು ಬರುತ್ತಿದೆ. ನೀವೇ ಅಧಿಕಾರಿಗಳನ್ನು ಸರಿಪಡಿಸತಕ್ಕಂಥ ಅಮೆಂಡ್‌ಮೆಂಟ್ ಮಾಡಿ. ಇಲ್ಲದಿದ್ದರೆ ನಾವು ಅವರನ್ನು ಘೇರಾವೋ ಮಾಡುತ್ತೇವೆ.

ಮಾನ್ಯ ಅಧ್ಯಕ್ಷರೇ, ಇನ್ನೊಂದು ವಿಷಯ, ಅಂದರೆ ಬಿ.ಡಿ.ಎ. ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಅಲ್ಲಿ ಈಗ ಒಂದು ಪ್ರಾಮಾಣಿಕ ಪ್ರಯತ್ನ ನಡೆಯುತ್ತಿದೆ. ಅದಕ್ಕೆ ಎಲ್ಲರೂ ಸಹಕಾರ ಕೊಡಬೇಕು. ಇವೊತ್ತು ಅಲ್ಲಿರತಕ್ಕಂತಹ ಅಧ್ಯಕ್ಷರು ಮತ್ತು ಕಮಿಷನರುಗಳು ಹಿಂದೆ ಅಲ್ಲಿ ಕರಪ್ಷನ್‌ನ್ನು ಇದ್ದುದನ್ನು ಸರಿಮಾಡಲು ಪ್ರಯತ್ನಿಸುತ್ತಿದ್ದಾರೆ, ಆರ್ಥಿಕವಾಗಿ ಒಂದು ಸ್ವಯಂ ಯೋಜನೆಯನ್ನು ಆದಷ್ಟು ಬೇಗ ಜಾರಿಗೆ ತರಬೇಕು. ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಾಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಬಿ. ಶಾಣಪ್ಪ (ಶಹಬಾದ್).—ಮಾನ್ಯ ಅಧ್ಯಕ್ಷರೇ, ಈ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ ಬಗ್ಗೆ ಎರಡು ವಿಚಾರಗಳನ್ನು ಮಾತನಾಡುತ್ತೇನೆ. ಈಗಾಗಲೇ ಅನೇಕ ಮಾನ್ಯ ಸದಸ್ಯರು ಈ ವಿಚಾರವನ್ನು ತಮ್ಮ ಮುಂದಿಟ್ಟಿದ್ದಾರೆ. ಸ್ವಾಮಿ ಈ ೮೦–೮೧ರ ಪ್ರೋಗ್ರೆಸ್ ಪಟ್ಟಿಯನ್ನು ಪೂರ್ಣವಾಗಿ ಓದಲು ಆಗಲಿಲ್ಲ. ಅದು ನಿನ್ನೆ ರಾತ್ರಿ ನನ್ನ ಕೈ ಸೇರಿತು ಆದ್ದರಿಂದ ತಾವುಗಳು ಇನ್ನು ಮೇಲೆ ವರದಿಗಳನ್ನು ಕಳುಹಿಸುವಾಗ ೪–೫ ದಿವಸಗಳ ಮುಂಚಿತವಾಗಿ ನಮಗೆ ತಲುಪುವಂತೆ ಕಳುಹಿಸಿಕೊಡಬೇಕು.

ಅಧ್ಯಕ್ಷರು.—ಮೊಟ್ಟಮೊದಲನೆಯ ಬಾರಿಗೆ ಪೂರ್ಣ ಪ್ರಮಾಣದ ಬಜೆಟ್ ಈ ಸಭೆಯಲ್ಲಿ ಬರುತ್ತಿದೆ. ಆದುದರಿಂದ ಸ್ವಲ್ಪ ಸಹಕರಿಸಿ. ಮುಂಚಿತವಾಗಿ ಕಳುಹಿಸಿಕೊಡಲು ಇನ್ನು ಮುಂದೆ ಕ್ರಮ ತೆಗೆದುಕೊಳ್ಳುತ್ತೇವೆ. ಆದರೂ ಈ ವರದಿಯನ್ನು ೨–೩ ದಿನಗಳ ಮುಂಚೆಯೇ ಕಳುಹಿಸಿದ್ದೇವೆ.

ಶ್ರೀ ಕೆ. ಬಿ. ಶಾಣಪ್ಪ.—ಅರ್‌ಬನ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳಬೇಕಾದರೆ ಮಾನ್ಯ ಮಂತ್ರಿಗಳು ಮುಖ್ಯವಾಗಿ ಇದರ ಕಡೆ ಗಮನ ಹರಿಸಬೇಕು. ಒಂದು ಸಾರಿ ಮಾನ್ಯ ಮಂತ್ರಿಗಳು ಇದರ ಬಗ್ಗೆ ವಿಚಾರ ಮಾಡಲು ಒಂದು ಮೀಟಿಂಗ್‌ನ್ನು ಕರೆದಿದ್ದರು. ನಗರಗಳ ಅಭಿವೃದ್ಧಿಯಾಗ ಬೇಕಾದರೆ ಅದರಲ್ಲಿ ಇದ್ದ ಸಮಸ್ಯೆಗಳು ಎಂದರೆ ರಸ್ತೆಗಳು ಚರಂಡಿಗಳ ಬಗ್ಗೆ ವಿಚಾರ ಮಾಡಲು ಒಂದು ವಿಭಾಗೀಯ ಶಾಸಕರ ಮೀಟಿಂಗ್‌ನ್ನು ಕರೆದಾಗ ನಾವುಗಳು ಇನ್ನು ಮುಂದೆ ಈ ಸಮಸ್ಯೆಗಳು ಬಗೆಹರಿಯ ಬಹುದೆಂದು ತಿಳಿದುಕೊಂಡಿದ್ದೆವು. ಆದರೆ ಮೀಟಿಂಗ್ ಮುಗಿದು ಒಂದು ವರ್ಷವಾದರೂ ಈ ಸಮಸ್ಯೆ ಬಗೆಹರಿದಿಲ್ಲ. ಈ ೮೩-೮೪ರ ವರದಿಯನ್ನು ನೋಡಿದಾಗ ಇಲಾಖೆಗಳಿಗೆ ಲಕ್ಷಾವಧಿ ಮತ್ತು ಕೋಟ್ಯಾವಧಿಗಳಂತೆ ಹಣವನ್ನು ಖರ್ಚು ಮಾಡಿದ್ದೇವೆಂದು ಹೇಳಿದ್ದಾರೆ. ಸೈಟುಗಳ ಬಗ್ಗೆಯೂ ಹೇಳಿದ್ದಾರೆ. ಕಾರ್ಪೊರೇಷನ್‌ಗಳಿಗೆ ಎಷ್ಟು ಖರ್ಚು ಮಾಡಿದ್ದಾರೆಂದು ಹೇಳಿದ್ದಾರೆ. ಆದರೆ ಗುಲ್‌ಬರ್ಗ ಕಾರ್ಪೊರೇಷನ್‌ಗೆ ಎಷ್ಟು ಹಣವನ್ನು ಕೊಟ್ಟಿದ್ದಾರೆಂದು ನೋಡಿದರೆ ಕೇವಲ ೩೭ ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ, ಬೆಂಗಳೂರು ಕಾರ್ಪೊರೇಷನ್‌ಗೆ ೧೪ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ನಮ್ಮ ಕಾರ್ಪೊರೇಷನ್‌ಗೆ ಕೊಟ್ಟಿರುವ ೩೭ ಲಕ್ಷ ರೂಪಾಯಿಗಳಲ್ಲಿ ೫೦ ಪರ್ಸೆಂಟ್ ನಷ್ಟು ಹಣ ಬರೀ ಸ್ಟಾಫ್ ಎಕ್ಸ್‌ಪೆನ್ಸಸ್ ಆಗುತ್ತದೆ. ಈ ೫೦ ಪರ್ಸೆಂಟ್‌ನಷ್ಟು ಹಣವನ್ನು ಬರೀ ಸ್ಟಾಫ್ ಸ್ಯಾಲರಿಗೆ ಕೊಟ್ಟರೆ ಇನ್ನು ಉಳಿದ ಹಣದಲ್ಲಿ ಡೆವಲಪ್‌ಮೆಂಟ್ ಹೇಗೆ ಮಾಡುತ್ತೀರಿ ? ಇದರಲ್ಲಿ ದೊಡ್ಡ ರೋಡುಗಳು ಆಗಬೇಕು. ಒಳ ಚರಂಡಿಗಳು ಆಗಬೇಕು. ಅದು ಹೇಗೆ ಸಾಧ್ಯ ? ನಮ್ಮ ಕಾರ್ಪೊರೇಷನ್‌ಗೆ ನಾವೇನು ಕೋಟ್ಯಾವಧಿ ರೂಪಾಯಿಗಳನ್ನು ಕೇಳುವುದಿಲ್ಲ. ನಮ್ಮ ಡಿಪಾರ್ಟ್‌ಮೆಂಟಿನಿಂದ ಎಷ್ಟು ಖರ್ಚು ಆಗುತ್ತದೆಯೋ ಅಷ್ಟನ್ನಾದರೂ ಕೊಡಬೇಕು.

ಇನ್ನು ಸ್ಲಮ್ ಬೋರ್ಡ್ : ಇದರ ಬಗ್ಗೆ ಅಧ್ಯಕ್ಷರು ಹೇಳಿದ್ದಾರೆ. ನಮ್ಮ ಹೈದರಾಬಾದ್ ಕರ್ನಾಟಕದಲ್ಲಿ ಸ್ಲಮ್ ಬೋರ್ಡ್‌ಗಳನ್ನು ನೋಡಿಕೊಂಡು ಬಂದು ೮೦೮ ಸ್ಲಮ್ ಏರಿಯಾಗಳು ಇವೆ ಯೆಂದು ಪರಿಗಣಿಸಿದ್ದಾರೆ. ಅಲ್ಲಿ ಸ್ಲಮ್ ಬೋರ್ಡ್‌ನ ಯಾವುದೇ ಕೆಲಸ ಆಗಿಲ್ಲ, ನಮ್ಮ ಏರಿಯಾದಲ್ಲಿ ಜೋಪಡಿಗಳು ಇಲ್ಲ. ಆದರ ಬದಲಾಗಿ ಲೈಂ ಸ್ಟೋನ್ ಕಲ್ಲುಗಳಿಂದ ಕಟ್ಟಿದ ಮನೆಗಳು ಇವೆ. ಈ ಕಲ್ಲಿನಿಂದ ಕಟ್ಟಿದ ಮನೆಗಳು ಸ್ಲಮ್ ಬೋರ್ಡ್ ವ್ಯಾಪ್ತಿಗೆ ಬರುವುದಿಲ್ಲವೆಂದು ಹೇಳಿದ್ದಾರೆ. ಸನ್ಮಾನ್ಯ ಅಧ್ಯಕ್ಷರೇ ನಮ್ಮ ಏರಿಯಾದಲ್ಲಿ ಸ್ಲಮ್ ನೂರಾರು ಇವೆ. ದಯಮಾಡಿ ಆ ಏರಿಯಾಗಳನ್ನು ಖುದ್ದಾಗಿ ನೋಡಿಕೊಂಡು ಬಂದು ಯಾವುದು ಸ್ಲಮ್ ಎನ್ನತಕ್ಕ ವಿಷಯವನ್ನು ನಿರ್ಧರಿಸಬೇಕು. ಅವರು ಇರತಕ್ಕಂತಹ ಪರಿಸರ ಹೇಗಿದೆ ಎಂಬುದರ ಮೇಲೆ ಸ್ಲಮ್‌ಗಳನ್ನು ನಿರ್ಧರಿಸಬೇಕು. ಅವರು ಕಟ್ಟಿರುವ ಕಲ್ಲಿನ ಮನೆಗಳಿಂದಲ್ಲ. ಹೌಸಿಂಗ್ ಬೋರ್ಡ್ ಬಗ್ಗೆ ಹೇಳಬೇಕಾದರೆ, ನಮ್ಮ ಗುಲ್ಬರ್ಗ ಜಿಲ್ಲೆಗೆ ಯಾವುದೇ ರೀತಿಯಲ್ಲಿ ಹೌಸಿಂಗ್ ಬೋರ್ಡ್‌ನ ಅನುಕೂಲಗಳಿಲ್ಲ. ಶಹಬಾದ್ ಸುಮಾರು ೨೮ ಕೋಟಿ ಹಣವನ್ನು ಕರದ ರೂಪದಲ್ಲಿ ಕೊಡುವಂತಹ ಒಂದು ಊರು. ಈ ೨೮ ಕೋಟಿ ಹಣವನ್ನು ಕೊಡುವ ಊರಿಗೆ ನೀವು ಏನು ಕೊಟ್ಟಿದ್ದೀರಿ ? ನಾನು ಅನೇಕ ಸಲ ಮಾನ್ಯ ಮಂತ್ರಿಗಳವರಿಗೆ ಹೇಳಿದ್ದೇನೆ. ನಮ್ಮ ಗುಲ್ಬರ್ಗ ಜಿಲ್ಲೆಯ ಜನರಿಗೆ ಬೇಕಾಗುವ ಸವಲತ್ತುಗಳನ್ನು ಸ್ವಲ್ಪವಾದರೂ ಮಾಡಿಕೊಡಿ ಎಂದು ನಾವು ಕೇಳುತ್ತಿದ್ದೇವೆ. But in return, what you have given to us, That is the question I am asking. ೨೮ ಕೋಟಿ ರೂಪಾಯಿಗಳಲ್ಲಿ ಶಹಬಾದ್ ಹೌಸಿಂಗ್ ಬೋರ್ಡ್ ಅಭಿವೃದ್ಧಿಗೆ ೧ ಕೋಟಿ ರೂಪಾಯಿಗಳನ್ನು ಕೊಡುವುದಕ್ಕಾಗುವುದಿಲ್ಲವೇ ? ನಮಗೆ ಬೇಕಾದಂತಹ ಒಂದು ಒಳ್ಳೆಯ ಪರಿಸರ ನಿರ್ಮಾಣ ಮಾಡುವುದಕಾಗುವುದಿಲ್ಲವೇ ? ಸರ್ಕಾರಕ್ಕೆ ಈ ಸೌಲಭ್ಯಗಳನ್ನು ಒದಗಿಸಲು ಎಷ್ಟು ವರ್ಷ ಬೇಕು ? ೨೫-೩೦ ವರ್ಷಗಳಾದರೂ ಈ ಅರಬನ್ ಡೆವಲಪ್‌ಮೆಂಟ್ ಸ್ಕೀಮ್‌ನಲ್ಲಿ ಇನ್ನೂ ಏನು ಕೆಲಸ ಮಾಡಿಲ್ಲ. ಹಿಂದೆ ಬಿದ್ದಂತಹ ಏರಿಯಾಗಳಲ್ಲಿ ಎಲ್ಲೆಲ್ಲಿ ಏನೇನು ಕೆಲಸವಾಗಬೇಕು ಎನ್ನುವುದನ್ನು ನೋಡಿ ಮಾಡಬೇಕು. ಬೆಂಗಳೂರು ನಗರದಲ್ಲಿ ಅಭಿವೃದ್ಧಿ ನೋಡಿಕೊಳ್ಳಲು ಬಿ.ಡಿ.ಎ. ಇದೆ, ಆದರೆ ನಮ್ಮ ಕಡೆಯ ನಗರಗಳಿಗೆ ಯಾವ ಯಾವ ಸವಲತ್ತುಗಳು ಬೇಕು ಎನ್ನುವುದನ್ನು ತಿಳಿಸಲು ಟೌನ್ ಪ್ಲಾನಿಂಗ್‌ನ ಒಂದು ಕಮಿಟಿ ಇದೆ. ನಮ್ಮ ರಾಜ್ಯದಲ್ಲಿ ಟೌನ್ ಪ್ಲಾನಿಂಗ್ ಕಮಿಟಿಯು ಅಭಿವೃದ್ಧಿ ಮಾಡಬೇಕಾದ ಕೆಲಸಗಳ ಬಗ್ಗೆ ರಿಪೋರ್ಟ್‌ಗಳನ್ನು ಸಬ್‌ಮಿಟ್ ಮಾಡಿದ್ದಾರೆ. ಅಧ್ಯಕ್ಷರೇ ಈ ರಿಪೋರ್ಟ್ ಇದುವರೆವಿಗೂ ಏನಾದರೂ ಜಾರಿ ಮಾಡಿದ್ದೀರಾ ? We have submitted a beautiful report to them. ೩೭ ಲಕ್ಷ ರೂಪಾಯಿಗಳನ್ನು ಗುಲ್ಬರ್ಗ ಕಾರ್ಪೊರೇಷನ್‌ಗೆ ಕೊಟ್ಟಿದ್ದಾರೆ. ಮುನಿಸಿಪಾಲಿಟಿಗೆ ೮೩-೮೪ನೇ

ಸಾಲಿಗೆ ೫೦ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ ೫೦ ಸಾವಿರ ರೂಪಾಯಿಗಳು ಟೋಕನ್ ಗ್ರಾಂಟ್ ಎಂದು ಕೊಟ್ಟಿದ್ದಾರೆ. ಅಧ್ಯಕ್ಷರೇ ಈ ೫೦ ಸಾವಿರ ರೂಪಾಯಿಗಳ ಗ್ರಾಂಟ್‌ನಲ್ಲಿ ೪೫ ಸಾವಿರ ರೂಪಾಯಿಗಳನ್ನು ಸಿಬ್ಬಂದಿಯವರಿಗೆ ಪೇಮೆಂಟ್ ಕೊಡುವುದಕ್ಕೆ ಒಂದು ವರ್ಷಕ್ಕೆ ಬೇಕು. ಕೊಡುವ ೫೦ ಸಾವಿರ ರೂಪಾಯಿಗಳಲ್ಲಿ ೪೫ ಸಾವಿರ ರೂಪಾಯಿಗಳನ್ನು ಸಿಬ್ಬಂದಿ ವೆಚ್ಚಕ್ಕೆ ಖರ್ಚು ಮಾಡಿ ಇನ್ನುಳಿದ ೫ ಸಾವಿರ ರೂಪಾಯಿಗಳಲ್ಲಿ ಏನು ಡೆವಲಪ್‌ಮೆಂಟ್ ಮಾಡುತ್ತೀರಿ? ಇದನ್ನೆಲ್ಲಾ ವೈಜ್ಞಾನಿಕವಾಗಿ ವಿಮರ್ಶೆ ಮಾಡಬೇಕು. ಆದ್ದರಿಂದ ಅಭಿವೃದ್ಧಿ ಕೆಲಸಗಳಿಗೆ ಹಣವನ್ನು ಕೊಡುವಾಗ ಎಷ್ಟು ಖರ್ಚಾಗುತ್ತದೆ ಎಂಬುದನ್ನೆಲ್ಲಾ ತಿಳಿದುಕೊಳ್ಳಬೇಕು. ಇದು ನಿಮ್ಮ ಕರ್ತವ್ಯ. ಇಲ್ಲದಿದ್ದರೆ ಯಾವುದೇ ಒಂದು ನಗರ ಈ ದಿಕ್ಕಿನಲ್ಲಿ ತಾವು ಹೋದರೆ ನನಗೆ ತಿಳಿದಷ್ಟು ಮಟ್ಟಿಗೆ ಅಭಿವೃದ್ಧಿಯಾಗುವುದಿಲ್ಲ. ನಮ್ಮಲ್ಲಿ ಅನೇಕ ಕೈಗಾರಿಕೆಗಳಿವೆ. ತಾವು ಕೈಗಾರಿಕೆಗಳಿಗೆ ಅವರು ತಮ್ಮ ಲಾಭದ ಅಂಶದಲ್ಲಿ ಈ ಮುನಿಸಿಪಾಲಿಟಿಗಳಿಗೆ ಹಣವನ್ನು ಕೊಡಬೇಕು ಎಂದು ಕಂಪಲ್ಶನ್ ಮಾಡಬೇಕು.

ಅಧ್ಯಕ್ಷರು.—ತಾವು ಬೇಗ ಮುಗಿಸಬೇಕು,

ಶ್ರೀ ಕೆ. ಬಿ. ಶಾಣಪ್ಪ.—ನಾನು ಮೊದಲನೆ ಸಲ ಮಾತನಾಡುತ್ತಿರುವುದು ಆದುದರಿಂದ ನನಗೆ ಅವಕಾಶ ಕೊಡಬೇಕು.

ಅಧ್ಯಕ್ಷರು.—ಅದಕ್ಕೆ ನಾನೇನು ಮಾಡಲು ಸಾಧ್ಯವಿಲ್ಲ,

ಶ್ರೀ ಕೆ. ಬಿ. ಶಾಣಪ್ಪ.—ಇನ್ನು ಎಸ್.ಸಿ.ಗಳಿಗೆ ಏನು ಸೈಟುಗಳನ್ನು ಕೊಟ್ಟಿದ್ದೀರಿ ಅವುಗಳಲ್ಲಿ ತಿಪ್ಪಸಂದ್ರದಲ್ಲಿ ಜಯರಾಮರೆಡ್ಡಿ ಎನ್ನುವವರು ಅನ್ ಆಥರೈಸ್ಡ್ ಆಗಿ ಮನೆಯನ್ನು ಕನ್‌ಸ್ಟ್ರಕ್ಷನ್ ಮಾಡುತ್ತಿದ್ದಾರೆ. ಇದನ್ನು ತಾವು ತಡೆಗಟ್ಟಬೇಕು. ಇನ್ನು ಮಂಜುನಾಥನಗರ ಒಳಚರಂಡಿ ವ್ಯವಸ್ಥೆ ಬಗ್ಗೆ.—

ಅಲ್ಲಿ ಒಳಚರಂಡಿ ಸೌಲಭ್ಯ ಇಲ್ಲ. ಲೈಟು ಇಲ್ಲ, ಈ ಒಂದು ಹೊಲಸು ವ್ಯವಹಾರದಲ್ಲಿ ಕೊನೆಗೆ ಏನಾಗಿದೆ ಎಂದರೆ, ಏನೂ ಆಗಿಲ್ಲ. ಅದಕ್ಕಾಗಿ ಆ ಭಾಗದ ಶಾಸಕರೂ ಕೂಡಿ ೨೬ನೇ ತಾರೀಖು ಉಪವಾಸ ಸತ್ಯಾಗ್ರಹ ಮಾಡುವಂತಹ ನೋಟೀಸನ್ನು ಕೊಟ್ಟಿದ್ದಾರೆ. ತಾವು ದಯಮಾಡಿ ಅವರನ್ನು ಕರೆಯಿಸಿ ಮಾತನಾಡಿ ಸೂಕ್ತ ಪರಿಹಾರವನ್ನು ಕಂಡುಹಿಡಿಯಬೇಕೆಂದು ಸಲಹೆ ಮಾಡುತ್ತೇನೆ, ದುರ್ದೈವದಿಂದ ಮಾತನಾಡುವುದಕ್ಕೆ ತಮ್ಮನ್ನು ನೋಡಿದರೆ ನನಗೆ ಅಂಜಿಕೆಯಾಗುತ್ತದೆ. ಬಹಳ ಮಾತನಾಡಬೇಕಾಗಿತ್ತು, ಅನೇಕ ಸಮಸ್ಯೆಗಳು ಇವೆ. ಇನ್ನು ೫-೧೦ ನಿಮಿಷ ಹರಿಜನ—ಗಿರಿಜನರ ಇಲಾಖೆಯ ಬಗ್ಗೆ ಮಾತನಾಡುತ್ತೇನೆ. ಮಾನ್ಯ ಸದಸ್ಯರಾದ ಶ್ರೀಮಾನ್ ವೈ. ರಾಮಕೃಷ್ಣರವರು ಬಹಳ ಚೆನ್ನಾಗಿ ಇದರ ಬಗ್ಗೆ ಮಾತನಾಡಿದರು. ದೇವದಾಸಿ ಪದ್ಧತಿಯ ಬಗ್ಗೆ ಮಾತನಾಡುವಾಗ ಕೆಲವರು ಉತ್ತರ ಕೊಟ್ಟರು. ಈ ದೇವದಾಸಿ ಪದ್ಧತಿ ನಿರ್ಮೂಲನ ಮಾಡಬೇಕು. ಸಮಾಜದಲ್ಲಿ ಇದೊಂದು ಹೊಲಸು ವ್ಯಾಧಿ. ದೇವದಾಸಿ ಪದ್ಧತಿ ನೂರಾರು ವರ್ಷಗಳಿಂದ ಬಂದಿದೆ. ಆದರೆ ಈಗ ಬರುಬರುತ್ತಾ ವಿದ್ಯೆಯ ಜ್ಞಾನ ಬೆಳೆದ ಹಾಗೆಲ್ಲಾ ಅದು ಕಡಿಮೆಯಾಗುತ್ತಿದೆ, ಅವರು ಒಂದು ಸೋಷಿಯಲ್ ಬ್ಯಾಕ್‌ಗ್ರೌಂಡ್ ಹಾಗೂ ಅವರ ಒಂದು ಆರ್ಥಿಕ ಪರಿಸ್ಥಿತಿ ಹಾಗೂ ಆ ಒಂದು ವಾತಾವರಣ ಇದ್ದಾಗ ಸಮಾಜ ಆವರಿಗೆ ಯಾವುದೇ ರೀತಿಯ ಗೌರವ ಕೊಡದಿದ್ದಾಗ ಈ ದೇವದಾಸಿ ಪದ್ಧತಿ ಪ್ರಚಾರಕ್ಕೆ ಬಂತು ಇದನ್ನು ನಿರ್ಮೂಲನ ಮಾಡಬೇಕಾದರೆ ಸರ್ಕಾರದವರು ಆ ಹೆಣ್ಣು ಮಕ್ಕಳಿಗೆ ಕೆಲಸ ಕೊಡಬೇಕು. ಹಳ್ಳಿಗಳಲ್ಲಿ ಕೆಲವು ಕಡೆಗಳಲ್ಲಿ ಜಾತ್ರೆ ನಡೆಯುವಂತಹ ಸ್ಥಳಗಳಲ್ಲಿ ಆ ಒಂದು ಪದ್ಧತಿ ಪ್ರಕಾರ ಮಾಡುತ್ತಿದ್ದಾರೆ. ಆದರೆ ಅದು ಈಗ ಕಡಿಮೆಯಾಗುತ್ತಾ ಬಂದಿದೆ. ಆ ಹೆಣ್ಣು ಮಕ್ಕಳ ಬಗ್ಗೆ ಸರ್ಕಾರ ಸರಿಯಾದ ಸೋಷಿಯಲ್ ಗ್ಯಾರಂಟಿಯನ್ನು ಕೊಡಬೇಕು. ಮೈಯನ್ನು ಮಾರಿಕೊಂಡು ಜೀವನ ಮಾಡುವುದಕ್ಕೆ ಬದಲಾಗಿ ಸರ್ಕಾರದವರು ಅವರಿಗೆ ಕೆಲಸ ಕೊಡುತ್ತೇವೆಂದು ಹೇಳಬೇಕು. ದಯಮಾಡಿ ಇದರ ಬಗ್ಗೆ ಸರ್ಕಾರ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ಮಂತ್ರಿ ಶೇಕಡ ೧೮ ರಷ್ಟು ಹಣವನ್ನು ಖರ್ಚು ಮಾಡುವ ವಿಚಾರದಲ್ಲಿ ಹೇಳಬೇಕಾದರೆ ಅನೇಕ ಸಮಸ್ಯೆಗಳು ಇವೆ ಹಾಸ್ಟಲ್ ಬಗ್ಗೆ ಮಾತನಾಡುವುದಾದರೆ, ನಮಗೆ ಹಾಸ್ಟಲ್‌ಗಳು ಬೇಕು ಎಂದು ಕೇಳುತ್ತೇವೆ. ಹರಿಜನ-ಗಿರಿಜನ ಹಾಸ್ಟಲ್‌ಗಳು ನಮ್ಮ ಭಾಗದಲ್ಲಿ ಕೆಲವು ಇವೆ. ಇನ್ನೂ ಅನೇಕ ಹಾಸ್ಟಲ್‌ಗಳನ್ನು ತಾವು ಕೊಡಬೇಕು. ಅದಕ್ಕಾಗಿ ಬಡ್ಜೆಟ್‌ನಲ್ಲಿ ಸರಿಯಾದ ಪ್ರಯಾರಿಟಿ ಇಲ್ಲ. ಯಾವುದೇ ಒಂದು ಹಾಸ್ಟೆಲ್‌ಗೆ ಸರಿಯಾದ ಕಟ್ಟಡ ಇಲ್ಲ. ಅದಕ್ಕಾಗಿ ತಾವು

ದಯಮಾಡಿ ಇವನ್ನೆಲ್ಲಾ ಕೂಲಂಕಂಷವಾಗಿ ನೋಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತಾ, ಇಷ್ಟು ಸಮಯ ಮಾತನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿ ಕೊಟ್ಟಿದ್ದಕ್ಕಾಗಿ ತಮಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಸೂರ್ಯನಾರಾಯಣ ರಾವ್ (ವರ್ತೂರು ಕ್ಷೇತ್ರ)

ಸನ್ಮಾನ್ಯ ಅಧ್ಯಕ್ಷರೆ, ನಾನು ೩೦ ನೆಯ ಬೇಡಿಕೆಯ ಬಗ್ಗೆ ಮಾತ್ರ ಮಾತನಾಡುತ್ತೇನೆ. ಮಾನ್ಯ ಸದಸ್ಯರು ಈಗಾಗಲೇ ಏನು ಹೇಳಿದ್ದಾರೆ ಅದನ್ನೇ ಪುನ: ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಇಷ್ಟು ಮಾತ್ರ ಹೇಳುತ್ತೇನೆ. ನಮ್ಮ ಏರಿಯಾವನ್ನು ನೋಟಿಫೈಡ್ ಏರಿಯಾ ಎಂದು ಮಾಡಬೇಕು. ಅಲ್ಲಿ ಲಕ್ಷಾಂತರ ಜನ ಇದ್ದಾರೆ. ಅದಕ್ಕಾಗಿ ಸಮಿತಿಯೊಂದನ್ನೂ ಸಹ ರಚನೆ ಮಾಡಲಿಲ್ಲ. ಮೊನ್ನೆ ತಾನೆ ಐ.ಟಿ.ಐ. ಏರಿಯಾವನ್ನು ನೋಟಿಫೈ ಮಾಡಿದ್ದಾರೆ. ಅದಕ್ಕಾಗಿ ಒಂದು ಸಮಿತಿಯನ್ನೂ ಕೂಡ ರಚನೆ ಮಾಡಿದ್ದಾರೆ. ಆದ್ದರಿಂದ ಇವೊತ್ತು ಮೋಟಾರ್ ವೆಹಿಕಲ್ ಟ್ಯಾಕ್ಸ್ ಹಾಗೂ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಏನು ವಸೂಲಿಯಾಗುತ್ತಿದೆ ಅದರ ಶೇಕಡಾವಾರು ಸರಿಯಾಗಿ ನಮಗೆ ಸಿಕ್ಕುತ್ತಿಲ್ಲ. ಮೋಟಾರ್ ವೆಹಿಕಲ್ ಟ್ಯಾಕ್ಸ್‌ನಿಂದ ಶೇಕಡ ೦ರಷ್ಟು ಹಾಗೂ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್‌ನಿಂದ ಶೇಕಡ ೭೫ ಪರ್ಸೆಂಟ್ ಕೊಟ್ಟರೆ ಮಾತ್ರ ಈ ಪ್ರದೇಶಗಳು ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಾಗುತ್ತದೆ. ಅದರಿಂದ ಅನೇಕ ಸೌಲಭ್ಯಗಳನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ತಾವು ಆ ಒಂದು ಕೆಲಸವನ್ನು ಮಾಡಬೇಕು.

ಕಾರ್ಪೊರೇಷನ್ ಬಗ್ಗೆ ಹೇಳುವುದಾದರೆ, ಹೌಸ್ ಟ್ಯಾಕ್ಸ್‌ನ ವಿಚಾರದಲ್ಲಿ ಗ್ರೇಡ್ ಅಸಸ್‌ಮೆಂಟ್ ಇರಬೇಕು ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ತೆರಿಗೆಯನ್ನು ವಸೂಲಿ ಮಾಡುವುದರಲ್ಲೂ ಭ್ರಷ್ಟಾಚಾರವಾಗುತ್ತಿದೆ. ಬಡವರು ವಾಸಕ್ಕೆ ಮನೆಯನ್ನು ಕಟ್ಟಿಕೊಂಡಿದ್ದರೆ ಅವನಿಗೂ ಒಂದೇ. ಅದೇ ಶ್ರೀಮಂತ ಹತ್ತಾರು ಮನೆಗಳನ್ನು ಕಟ್ಟಿಕೊಂಡಿದ್ದರೂ ಅವರಿಗೂ ಒಂದೇ ಎನ್ನತಕ್ಕಂತಹ ರೀತಿಯಲ್ಲಿ ಆಗಬಾರದು. ಹೆಚ್ಚು ಅಧಿಕಾರ ವಿಕೇಂದ್ರೀಕರಣ ಆಗಬೇಕೆಂದು ಕಳಕಳಿಯಿಂದ ಕೇಳುತ್ತೇನೆ. ೧೯೮೦ರಲ್ಲಿ ಕಲ್ಕತ್ತದ ಮುನಿಸಿಪಲ್ ಆಕ್ಟ್‌ಗೆ ತಿದ್ದುಪಡಿ ಮಾಡಿದ್ದಾರೆ. ಅದರಲ್ಲಿ ಈ ರೀತಿ ಇದೆ,

Under this Act, Calcutta would become the first city in India to be administered by a full-time political executive which would be directly accountable....ಎಂದು ಹೇಳಿ ಆ ಒಂದು ಕಾನೂನನ್ನು ಮಾಡಿದ್ದಾರೆ. ಅಲ್ಲಿಯ ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟಿದ್ದಾರೆ ಯಾವ ಉದ್ದೇಶದಿಂದ ಈ ಮಾತನ್ನು ಹೇಳುತ್ತಿದ್ದೇನೆಂದರೆ ಹೆಚ್ಚಿನ ರೀತಿಯಲ್ಲಿ ಅಧಿಕಾರವನ್ನು ವಿಕೇಂದ್ರೀಕರಣ ಮಾಡಬೇಕು. ಪ್ರತಿಯೊಂದು ರಾಜ್ಯ ಸರ್ಕಾರ ಕೂಡ ಅವರ ಆದಾಯಕ್ಕನುಗುಣವಾಗಿ ಕಾಯಿದೆಯನ್ನು ತರುವುದಕ್ಕೆ ಪ್ರಯತ್ನ ಪಡಬೇಕೆಂದು ಹೇಳುತ್ತಿದ್ದೇನೆ.

ಬೆಂಗಳೂರಿನಲ್ಲಿ ಸೊಳ್ಳೆಕಾಟ ಜಾಸ್ತಿ. ಇದಕ್ಕಾಗಿ ಇಲ್ಲಿಂದ ದೆಹಲಿಗೆ ಹೋದಂತಹ ಒಂದು ಸಮಿತಿ ೧೯೭೨ರಲ್ಲೇ ಇದನ್ನು ಕಂಟ್ರೋಲ್ ಮಾಡುವ ಬಗ್ಗೆ ವರದಿಯನ್ನು ಕೊಟ್ಟಿದ್ದಾರೆ. ಅದರಲ್ಲಿ ಏನು ಹೇಳಿದ್ದಾರೆಂದರೆ ಡ್ರೈನೇಜ್ ಸಿಸ್ಟಂ ಹಾಗೂ ಸ್ಯೂವರೇಜನ್ನು ನೀರಾವರಿಗೆ ಉಪಯೋಗ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಅದರಂತೆ ಇಲ್ಲೂ ಮಾಡಿದರೆ, ಗ್ಯಾಸನ್ನು ತಯಾರು ಮಾಡಬಹುದು. ಜೊತೆಗೆ ಗೊಬ್ಬರ ಕೂಡ ಸಿಕ್ಕುತ್ತದೆ. ಮತ್ತೆ ಸೊಳ್ಳೆ ಕಾಟ ಕೂಡ ಹೋಗುತ್ತದೆ. ನೀರಾವರಿಯನ್ನು ಮಾಡುವುದಕ್ಕೆ ನೀರೂ ಕೂಡ ಸಿಕ್ಕುತ್ತದೆಂದು ಸಲಹೆ ಸೂಚಿಸಿದ್ದಾರೆ. ನಮ್ಮ ಕ್ಷೇತ್ರಕ್ಕೆ ಬೆಂಗಳೂರು ನಗರದ ಎಲ್ಲಾ ಕೊಳಚೆ ನೀರೂ ಬರುತ್ತದೆ. ಬೆಳಂದೂರು ಟ್ಯಾಂಕ್ ಹಾಗೂ ವರ್ತೂರು ಟ್ಯಾಂಕು ಇದರಿಂದ ಪೂರ್ಣವಾಗಿ ತುಂಬಿದೆ. ಆ ಪ್ರದೇಶದ ಜನರಿಗೆ ಸೊಳ್ಳೆ ಕಾಟ ಜಾಸ್ತಿ. ಮತ್ತೆ ಬೆಂಗಳೂರು ನಗರದ ಸೊಳ್ಳೆಗಳ ಬ್ರೀಡಿಂಗ್ ಸೆಂಟರ್ ಕೂಡ ಇದಾಗಿದೆ. ಇದನ್ನು ತಡೆಗಟ್ಟುವ ಸಲುವಾಗಿ ೨ ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ತಯಾರು ಮಾಡಿದ್ದಾರೆ. ಅಂದರೆ ಈ ನೀರನ್ನು ಪ್ಯೂರಿಫೈ ಮಾಡಿದರೆ ಗೊಬ್ಬರ ಸಿಕ್ಕುತ್ತದೆ. ಅಲ್ಲಿ ಇದರಿಂದ ಎಲೆಕ್ಟ್ರಿಸಿಟಿಯನ್ನು ಉತ್ಪಾದನೆ ಮಾಡಬಹುದು. ಜೊತೆಗೆ ಅಲ್ಲಿಯ ಅಕ್ಕಪಕ್ಕದ ಜಮೀನುಗಳಿಗೆ ವ್ಯವಸಾಯಕ್ಕೆ ನೀರನ್ನೂ ಕೊಡುವುದಕ್ಕೆ ಸಹಾಯಕವಾಗುತ್ತದೆ. ಇದನ್ನು ಮಾಡುವುದರಿಂದ ಎಷ್ಟೋ ಸೊಳ್ಳೆ ಕಾಟ ನಿಲ್ಲುತ್ತದೆ. ಜೊತೆಗೆ ಉತ್ಪಾದನೆ ಕೂಡ ಜಾಸ್ತಿಯಾಗುತ್ತದೆ; ಆ ಬಗ್ಗೆ ಸ್ಟ್ಯಾಂಡಿಂಗ್ ಕಮಿಟಿ ಕೊಟ್ಟಂತಹ ವರದಿಯನ್ನು ಜಾರಿಗೆ ತರುವುದಕ್ಕೆ ಮಹಾನಗರ ಪಾಲಿಕೆಯವರು ಈ ಎರಡು ಕೋಟಿ ರೂಪಾಯಿಗಳನ್ನು

ಡಿಚಾರ್ಜ್ ಮಾಡಿ, ಅಲ್ಲಿರತಕ್ಕ ಸೊಳ್ಳೆ ಕಾಟವನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೇ ಎಂಬುದನ್ನು ವಿಚಾರ ಮಾಡಬೇಕು. ಆ ವರದಿ ಪೇಜ್ ನಂ. ೪೨ರಲ್ಲಿದೆ. ನಾನು ಅದನ್ನು ಓದುವುದಕ್ಕೆ ವೇಳೆ, ಇಲ್ಲ. ಅನೇಕ ವಿಚಾರಗಳನ್ನು ಹೇಳಬೇಕಾಗಿರುವುದರಿಂದ, ಅದನ್ನು ನಾನು ಓದುವುದಕ್ಕೆ ಹೋಗುವುದಿಲ್ಲ. ಅದರಲ್ಲಿರತಕ್ಕ ವರದಿಯನ್ನು ಶ್ರೀಮಾನ್ ಟಿ. ಆರ್ ಶಾಮಣ್ಣನವರು ಅಧ್ಯಕ್ಷರಾಗಿ ಕೊಟ್ಟಿದ್ದಾರೆ. ಇದನ್ನು ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಬೆಂಗಳೂರಿನಲ್ಲಿರತಕ್ಕಂತಹ ರಸ್ತೆಗಳನ್ನು ರಿಪೇರಿ ಮಾಡುವಾಗ ಇರತಕ್ಕಂತಹ ಮ್ಯಾನ್‌ಹೋಲ್‌ನಿಂದ ಅನೇಕ ಜನಗಳಿಗೆ ತೊಂದರೆಯಾಗುತ್ತಿದೆ, ಕೆಲವು ಸಾರಿ ಮಳೆ ಬಂದಾಗ, ಆ ಮ್ಯಾನ್‌ಹೋಲ್ ಎಲ್ಲಿದೆ ಎಂಬುದೇ ಗೊತ್ತಾಗುವುದಿಲ್ಲ. ಅನೇಕ ಕಡೆ ಜನರು ಅದರೊಳಗೆ ಬಿದ್ದು ಸತ್ತಿರುವಂತಹ ಪ್ರಸಂಗಗಳೂ ಕೂಡ ಉಂಟು. ಇದರ ಬಗ್ಗೆ ವಿಚಾರ ಮಾಡಬೇಕು. ಮತ್ತೆ ಕಾರ್ಪೊರೇಷನ್‌ನಲ್ಲಿರುವಂತಹ ಭ್ರಷ್ಟಾಚಾರವನ್ನು ಕಡಿಮೆ ಮಾಡುವುದಕ್ಕೆ ತಾವು ಪ್ರಯತ್ನ ಮಾಡಬೇಕು. ಇಲ್ಲದಿದ್ದರೆ ಬಡ ಜನಗಳಿಗೆ ಹೆಚ್ಚು ವಾಲ್ಯುವೇಷನ್ ಅನ್ನು ನಿಗದಿ ಮಾಡುತ್ತಿದ್ದಾರೆ. ಶ್ರೀಮಂತರಿಗೆ ಕಡಿಮೆ ವಾಲ್ಯುವೇಷನ್ ಅನ್ನು ನಿಗದಿ ಮಾಡುತ್ತಿರತಕ್ಕಂತಹ ಸಂದರ್ಭಗಳು ಇವೆ.

ಮಡಿವಾಳವನ್ನು ಮಾನ್ಯ ಮಂತ್ರಿಗಳು ತಮ್ಮ ಪ್ರದೇಶವೆಂದು ತಿಳಿದು ಅದನ್ನು ಕಾರ್ಪೊರೇಷನ್‌ಗೆ ಸೇರಿಸಿದ್ದೀರಿ. ಅದೇ ಆಧಾರದ ಮೇಲೆ ನಮ್ಮ ಕ್ಷೇತ್ರದಲ್ಲಿರತಕ್ಕಂತಹ ಮೋಟಪ್ಪನಪಾಳ್ಯವನ್ನು ಸೇರಿಸಿಲ್ಲ. ಅಲ್ಲಿ ಯಾವುದೇ ನಗರ ಸೌಲಭ್ಯ ಇಲ್ಲ. ನೀರು ಇಲ್ಲ. ಒಳಚರಂಡಿ ವ್ಯವಸ್ಥೆ ಇಲ್ಲ. ಮಡಿವಾಳವನ್ನೇ ಕಾರ್ಪೊರೇಷನ್‌ಗೆ ಸೇರಿಸಿರಬೇಕಾದರೆ ಮೋಟಪ್ಪನ ಪಾಳ್ಯವನ್ನೂ ಕೂಡ ಏಕೆ ಕಾರ್ಪೊರೇಷನ್‌ಗೆ ತೆಗೆದುಕೊಳ್ಳುವುದಿಲ್ಲ ?

ಶ್ರೀ ಎಂ. ಚಂದ್ರಶೇಖರ್—ಮಡಿವಾಳವನ್ನು ೧೯೬೧ರಲ್ಲಿ ಕಾರ್ಪೊರೇಷನ್‌ಗೆ ತೆಗೆದುಕೊಂಡಿದ್ದಾರೆ. ಇಲ್ಲಿಗೆ ಅದು ೨೦ ವರ್ಷಗಳಾಗಿವೆ.

ಶ್ರೀ ಎಸ್. ಸೂರ್ಯನಾರಾಯಣ ರಾವ್—ಅಲ್ಲೊಂದು ಹೈಲ್ಯಾಂಡ್ ರೀತಿ ಇದೆ. ಸುತ್ತಲೂ ಮನೆಗಳು ಬಂದಿವೆ. ಸೆಂಟರ್‌ನಲ್ಲಿರತಕ್ಕ ಪ್ರದೇಶವನ್ನು ಕಾರ್ಪೊರೇಷನ್‌ಗಾಗಲೀ ಅಥವಾ ಬಿ.ಡಿ.ಎ. ಗಾಗಲಿ ಸೇರಿಸಿಕೊಂಡಿಲ್ಲ. ಅಲ್ಲಿ ಯಾವುದೇ ವಿಧವಾದ ಸೌಲಭ್ಯಗಳನ್ನು ಕೊಟ್ಟಿಲ್ಲ. ಮಲಮೂತ್ರ, ಮಾಡುವುದಕ್ಕಾದರೂ ದೂರ ಹೋಗಬೇಕು. ಇದನ್ನು ತಾವು ದಯಮಾಡಿ ವಿಚಾರ ಮಾಡಬೇಕು. ಅದೇ ರೀತಿ ನನ್ನ ಕ್ಷೇತ್ರದಲ್ಲಿ ಮತ್ತೊಂದು ಕಡೆ ಬಿ.ಡಿ.ಎ.ನವರು ಮನೆಗಳನ್ನು ಕಟ್ಟಿಸುವುದಕ್ಕೆ ಬಹಳಷ್ಟು ಪ್ರಯತ್ನ ಮಾಡಿದ್ದಾರೆ. ಅವರೂ ಕೂಡ ಅಲ್ಲಿಗೆ ಬಂದು ನೋಡಿದ್ದಾರೆ. ಅದನ್ನೂ ಕಾರ್ಪೊರೇಶನ್‌ಗೆ ಸೇರಿಸಿ ಅವರಿಗೆ ರೆಗ್ಯುಲರೈಸ್ ಮಾಡಬೇಕು. ಮನೆಗಳನ್ನು ಒಡೆಯುವುದಕ್ಕೆ ಹೋದರೆ ದೊಡ್ಡ ಗಂಡಾಂತರವಾದೀತು. ಮಾನ್ಯ ಸಚಿವರೂ ಸಹ ಹೋಗಿ ನೋಡಿಕೊಂಡು ಬಂದಿದ್ದಾರೆ. ಮೊದಲು ಅದನ್ನು ನೋಟಿಫೈ ಏರಿಯಾ ಎಂದು ಮಾಡಿದರು ನಂತರ ಅದನ್ನು ಡಿ-ನೋಟಿಫೈಡ್ ಮಾಡಿದರು. ಮತ್ತೆ ಈಗ ಅದನ್ನು ನೋಟಿಫೈಡ್ ಏರಿಯಾ ಎಂದು ಏಕೆ ಮಾಡಿದ್ದಾರೆಂಬುದು ನಮಗೆ ಅರ್ಥವಾಗುವುದಿಲ್ಲ. ತಾವು ಏನೇನು ಅಕ್ವೈರ್ ಜಮೀನನ್ನು ಅಲ್ಲಿ ಮಾಡಿಕೊಂಡಿದ್ದೀರಿ ಅವರಿಗೆ ಸರಿಯಾದ ಪರಿಹಾರವನ್ನು ಕೊಡಬೇಕು. ಪರಿಹಾರವನ್ನು ಕೊಡುವುದರಲ್ಲೂ ಲಂಚರು ಷುವತ್ತನ್ನು ತೆಗೆದುಕೊಂಡು ಅನೇಕ ಅನ್ಯಾಯವನ್ನು ಮಾಡಿದ್ದಾರೆ. ಯಾರಿಂದ ತಾವು ಜಮೀನನ್ನು ತೆಗೆದುಕೊಂಡಿದ್ದೀರೋ, ಅವರಿಗೆ ಕನಿಷ್ಠ ಒಂದು ನಿವೇಶನವನ್ನಾದರೂ ಕೊಡಬೇಕು. ಮನೆಗಳನ್ನು ಮಾತ್ರ ಹೊಡೆಯಬಾರದು. ಕಾಚರ್ಯನ ಹಳ್ಳಿ, ಹಾಗೂ ಸುಬ್ಬಯ್ಯನ ಪಾಳ್ಯಕ್ಕೆ ಸಂಬಂಧಪಟ್ಟಂತೆ, ಯೋಜನಾ ಬದ್ಧವಾಗಿ ರಸ್ತೆಗಳನ್ನು ಮಾಡುವುದಕ್ಕಾಗಿ ನಾವೇ ಒಂದು ಯೋಜನೆಯನ್ನು ತಯಾರು ಮಾಡಿದ್ದೇವೆ. ನಿಮಗೂ ಸಹ ಅದನ್ನು ಭೇಟಿ ಮಾಡಿಕೊಡುತ್ತೇವೆ. ಅದನ್ನು ಮಂಜೂರು ಮಾಡುವುದಕ್ಕೆ ಸೂಕ್ತ ಆದೇಶವನ್ನು ಅಧಿಕಾರಿಗಳಿಗೆ ಕೊಡಬೇಕೆಂದು ಸಲಹೆ ಮಾಡುತ್ತೇನೆ.

೧೨-೩೦ ಪಿ. ಎಂ.

ಇನ್ನು ಮಾನ್ಯ ಸಚಿವರು ಲಂಚ ಇವತ್ತು ಕಡಿಮೆಯಾಗಿದೆಯೆಂದು ಹೇಳುತ್ತಾರೆ. ಮೊನ್ನೆ ಒಂದು ಸಮಾರಂಭಕ್ಕೆ ಮಂತ್ರಿಗಳವರನ್ನು ಕರೆಯಿಸಿದಾಗ, ಅವರ ಎದುರಿನಲ್ಲಿಯೇ ಈ ರೀತಿಯಾಗಿ ಬರ್ತ್ ಮತ್ತು ಡೆತ್ ಸರ್ಟಿಫಿಕೇಟನ್ನು ಕೇಳುವುದಕ್ಕೆ ಲಂಚ ತೆಗೆದುಕೊಳ್ಳುತ್ತಾರೆಂದು ಹೇಳಿದ್ದಕ್ಕೆ, ಬೇರೆ ಯಾರಾದರೂ ಡೆತ್ ಅಥವಾ ಬರ್ತ್ ಸರ್ಟಿಫಿಕೇಟನ್ನು ಕೇಳಲು ಹೋದರೆ, ಹೋಗಯ್ಯ ಮಂತ್ರಿ

ಗಳಿಗೇ ಹೇಳಿ ಹೋಗಂ, ಶಾಸಕರಿಗೆ ಹೇಳಿ ಹೋಗಂ, ಏನೂ ಮಾಡಿಕೊಳ್ಳುತ್ತೀರೋ ಮಾಡಿಕೊಳ್ಳಿ ಎಂದು ಹೇಳುತ್ತಿದ್ದಾರೆ, ಇಂಥಾ ಭ್ರಷ್ಟ ಅಧಿಕಾರಿಗಳು ನಿಮ್ಮಲ್ಲಿ ಇನ್ನೂ ಇದ್ದಾರೆ. ಅಂಥವರ ಬಗ್ಗೆ ತಾವು ಕೂಡಲೇ ಕ್ರಮವನ್ನು ಕೈಗೊಳ್ಳಬೇಕೆಂದು ಹೇಳಬಯಸುತ್ತೇನೆ.

ಇನ್ನು ಹೆಚ್. ಎ. ಎಲ್. ಗೆ ಏನೊಂದು ಸ್ಯಾನಿಟರಿ ಬೋರ್ಡ್ ಎಂದು ಮಾಡಿದ್ದೀರಿ ಅದೇ ರೀತಿಯಾಗಿ ಐ. ಟಿ. ಐ ಗೂ ಒಂದು ಬೋರ್ಡ್‌ನ್ನು ಕಾನ್‌ಸ್ಟಿಟ್ಯೂಟ್ ಮಾಡಿ ಎಂದು ಹೇಳಿ, ಇನ್ನು ಹೆಚ್ಚಿನ ವಿಷಯಗಳನ್ನು ಹೇಳಬೇಕಾಗಿತ್ತು, ಆದರೆ ಸಮಯದ ಅವಕಾಶವಿಲ್ಲದೇ ಇರುವುದರಿಂದ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† SRI R.S. MANE (Belgaum).—Mr. Speaker Sir, while speaking over the demand of the Urban Development Department, I must make it clear first that I wish to focus only on the Belgaum Corporation, When I say Belgaum Corporatiou, the minds of so many members here might become alert because, recently the Corporation has passed some disputable resolutions. When I was a members of the municipality in the year 1969-73, we passed resolutions congratulating the Indian Cricket team for having won the test series against the West Indies. Similarly, we passed so many resolutions mourning the deaths of leaders, and national leaders etc. But nobody cared to question the authority of the municipality in passing those resolutions. But recently when the Belgaum Corporation passed some resolutions regarding its linguistic convenience, cultural convenience political convenience and also administrative convensiences, so many persons came forward asking or challenging the Corporation's authority to pass such resolutions. I believe that the Corporation was within its limits to pass such resolutions because there is a Section in the Corporation Act giving the Corporation authority to pass any resolutions regarding its conveniences. It may be linguistic, administrative, cultural or otherwise.

Mr. Speaker Sir, the municipalities and corporations had one major source of income and that was 'Octroi', and it was abolished from 1-4-1979. It is stated in the Karnataka Taxation Review Commitee Report released in February, 83 that the loss sustained by the Corporations on account of the abolition of octroi is being compensated to the Corporations by the Government and it is also stated that the basis on which the compensation should be made had not been settled as yet. So for as Belgaum Corporation is concerned the compensation given by the Government on account of abolition of octroi is very meagre and it is not proportionate. That question is still pending before the Government for decision and it should be settled as early as possible. It is also stated in this report about the Entertainment Tax. Out of it 90% is being given to local bodies. But I believe, this is not a correct

statement and according to me not even 50 or 60% of the Entertainment Tax is given to the locial bodies. According to my friend Dr. V. S. Acharya it is just 45%. Even the surcharge levied on entertainment tax by the Government, the entire amount is appropriated by the Government for its use. Nothing out of that is transferred to the corporations. It is undisputable that because of the bolition octroi, than municipalities are facing financial difficulties and therefore, it is now high time for the Government to come forward to give generous financial assistance to the corporations for enabling them to meet their developmental works. For this, I suggest that the entire entertainment tax as well as the surcharge collected on it should be transferred to the corporations. So also the tax on sale-deeds, Presently, only sale-deeds are being taxed by the corporations. Other documents such as lease-deeds; mortgage deeds pertaining to the urban property should also be brought under this taxing so that some more tax could be collected by the corporation. So also I have another suggestion to make. The Karnataka Rent Control Act applies only to cities where there is shortage of premises. The Court Fee collected under this Act should be transferred to the local bodies. Through out petitions are being filed under the Karnataka Rent Control Act for taking possession of the premises from the tenants by the landlords. Only a paltry court fee of Rs. 10 is levied on these petitions. I Suggest to increase this court fee to at least Rs. 100% per petition and transfer court fee amount obtained under this to the concerned local bodies.

Saving of expensis should also be considered and one of theimportant measures for enabling the corporations to function satisfactorily. There is corruption in two departments viz., Revenue and PWD. Most of the officials from both these department are deputed to work in corporations. Naturally, pending decisions, the General Administration as well as PWD have become rampant with corruption. Moreover, these officials because of their degrees and tenure of service are to be paid in lightsums. In a year, as per the Taxation Committee report, so far as the Belgaum Corporation is conceined, it is observed out of the total income, 34% of the expenditure is incurred on salaries and wages of these officials.

My suggestion is that these officials should be withdrawn immediately from the corporation and the corporation should be allowed to appoint their own officers, if necessary by making a separate cadre ie., Municipal cadre. There are several suggestions to be made,

particularly about the condition of the school buildings. Some of the school buildings are owned by the Belgaum Corporation and some of the school buildings are in private buildings taken on high rent. The condition vf these school buildings has become so precarious-if one were to inspect them I believe that a notice for demolition of these buildings will have to follow. The corporation is collecting tax i.e., education cess. Out of this education cess nothing is spent on repairing and construction of school buildings. Therefore, the people are generally dissatisfied with the condition of the school buildings. It is necessary to make repairs to the school buildings.

Mr. Speaker Sir, I have also to say something about Social Welfare. In the Annual Report pertaining to this Department saveral schemes have been referred to. But, I am afraid, because of inadequate publicity these schemes are not being availed of by the people to their satisfaction. When a new scheme is introduced wide publicity should be given in local newspapers. That is not being done. I have observed from the Annual Report that the Belgaum Corporation and the citizens of Belgaum, so also the taluks of Belgaum are not aware of many schemes referred to in this Annual Report. As a result I feel that proper share has not come to Belgaum area. For example. On page 28 there is a project i.e., mentally handicapped. There is no informations such about project made available to the Belgaum people. On page 29 also during 1983-84 Belgaum is having only 3 projects to its lot.

MR. SPEAKER.—Sri Mane, please conclude. We have one more demand stated for the day.

SRI R. S. MANE.—I am concluding with this demand. I find on page 31 there is a project by name 'Progress under Functional Literacy for Adult Women'. Here also Raibagh in Belgaum District has been given one project. But, no such project is made available to tbe other parts of the district. This is the result of not giving wide publicity to the schemes introduced by the Government. Regarding release of funds on page 48 there is an Annexure-13 i.e., Expenditure statement and the number of beneficiaries in respect of maintenance to disabled persons for the year 1983-84, I do not know whether the figures given in the column Expenditure incurred' are correct or not. In Belgaum 7,258 beneficiaries were sanctioned for disabled pensions at the rate of Rs. 40 and with effect from 1-4-1983 at the rate of Rs. 50. Even calculating the amount increased at the rate of Rs. 50 for 7,258 beneficiaries the figure would come to Rs. 3,62 900. Bnt, here the actual amount spent seems to be very low. I do not know why this disparity is there. Again in Bidar 947

beneficiaries are given Rs. 15 lakhs. It should be less than Rs. 48,000. I am at a loss to know how these figures are arrived at. Similarly, on page 45 under Care, Protection and Maintenance of Destitute and Orphan Children in Belgaum District St. Joseph Orphanage, Santhebastwadi has been sanctioned 3 cottages with 75 beneficiaries. The amount spent over this is stated to be Rs. 1,04,086 But, in regard to other institute i.e., on page 41 St. Mary's Orphanage St. Mary's Town, Bangalore having the same capacity i.e., 3 cottages with 75 beneficiaries the emout spent is less i.e., Rs. 37,000. Why particularly the institute having the same capacity is paid Rs. 1 lakh and 4 thousand ? If you see the first entry in Annexure-VI, for 5 cottages with the capacity of 125 beneficiaries, grants given is Rs. 60,000 as against the St Joseph's orahanage having less capacity the grant given is Rs. 1 lakh and 4 thousand. This should be clarified by th Hon. Minister for Social Welfare. With this I thank the Chair for having given me the time to speak and conclude.

ಶ್ರೀ ಜೆ. ಎಂ. ಕಾನಡೆ (ಶಿರಸಿ),—ಸನ್ಮಾನ್ಯ ಅಧ್ಯಕ್ಷರೆ, ಈ ದಿವಸ ನಮ್ಮ ಮುಂದೆ ಇರತಕ್ಕಂತಹ ಬೇಡಿಕೆಗಳಿಗೆ ವಿರೋಧ ಮಾಡುತ್ತಾ ಕೆಲವು ವಿಷಯುಗಳನ್ನು ತಮ್ಮ ಮೂಲಕ ಮಾನ್ಯ ಮಂತ್ರಿಗಳ ಗಮನಕ್ಕೆ ತರಬೇಕೆಂದಿದ್ದೇನೆ. ಪ್ರತಿಯೊಂದು ವಿಚಾರದಲ್ಲೂ ಹರಿಜನ-ಗಿರಿಜನರು, ಅಲ್ಪಸಂಖ್ಯಾತರು ಇವರ ಹೆಸರುಗಳನ್ನು ಮೊದಲು ತೆಗೆದುಕೊಳ್ಳುತ್ತಾರೆ. ಅವರ ಹೆಸರುಗಳನ್ನು ಮೊದಲು ತೆಗೆದು ಕೊಳ್ಳುತ್ತಿರುವ ಬಗೆಯೂ ಪತ್ರಿಕೆಯಲ್ಲೂ ಬರುತ್ತಿದೆ. ಆದರೆ ಆ ಬಗ್ಗೆ ಮಾಡಬೇಕಾಗಿರುವ ಸಹಾಯದ ಬಗ್ಗೆ ಪುಸ್ತಕದಲ್ಲಿ ಇರುವುದು ಮಾತ್ರ ಪ್ರಚಾರಕ್ಕೆ ಬರುವುದಿಲ್ಲ. ನಾನು ಅನುಸೂಚಿತ ಜಾತಿ ಮತ್ತು ಪಂಗಡದ ಕಲ್ಯಾಣ ಸಮಿತಿಯ ಸಮಿತಿಯಲ್ಲಿ ಒಬ್ಬ ಸದಸ್ಯನಾಗಿದ್ದೇನೆ. ಈ ಸದಸ್ಯರಿಗೆ ಎಂದರೆ ಶಾಸಕರಿಗೆ ಲಂಚವನ್ನು ನೇರವಾಗಿ ಕೊಡುವುದಕ್ಕಾಗುವುದಿಲ್ಲವೆಂದು ಸಮಿತಿಯ ಮುಖಾಂತರ ಲಂಚವನ್ನು ಕೊಡುತ್ತಿದ್ದಾರೆ. ನಾನು ಆ ಸಮಿತಿ ಸಭೆಗೆ ಬೆಂಗಳೂರಿಗೆ ಬಂದರೆ, ನನಗೆ ಟಿ. ಎ., ಡಿ. ಎ. ಅಂತ ೭೪೪-೫೦ ರೂಪಾಯಿಗಳನ್ನು ಒಂದು ಸಾರಿಗೆ ಕೊಡುತ್ತಾರೆ. ಈ ಸಮಿತಿ ರಚನೆಯಾಗಿ ಒಂದು ವರ್ಷವಾಯಿತು. ಆ ಸಮಿತಿಯಲ್ಲಿ ೧೨ ಜನ ಸದಸ್ಯರಿದ್ದೇವೆ. ಆ ಸಮಿತಿಯ ಅಧ್ಯಕ್ಷರು ಮಾನ್ಯ ಸದಸ್ಯರಾದ ಶ್ರೀಮಾನ್ ಪಿ. ಪಿ. ಹೆಗ್ಗರೆಯವರು. ಅದೇ ರೀತಿ ಹಿರಿಯ ಶಾಸಕರಾದ ಶ್ರೀಮಾನ್ ವೈ. ರಾಮಕೃಷ್ಣರವರೂ ಕೂಡ ಒಬ್ಬ ಸದಸ್ಯರಾಗಿದ್ದಾರೆ. ಒಂದು ಸಾರಿ ಈ ಸಮಿತಿಯ ಸಭೆ ಸೇರಬೇಕಾದರೆ ೮,೦೦೦ ರೂಪಾಯಿಗಳು ಖರ್ಚಾಗುತ್ತವೆ. ಒಂದು ತಿಂಗಳಿಗೆ ಇಂತಹ ೩-೪ ಸಭೆಗಳು ಸೇರುತ್ತವೆ. ಇದಕ್ಕೆ ಎಷ್ಟು ಹಣ ಖರ್ಚಾಗುತ್ತದೆಂಬುದನ್ನು ತಾವು ಯೋಚನೆ ಮಾಡಬೇಕು. ಇಷ್ಟೊಂದು ಹಣವನ್ನು ಖರ್ಚು ಮಾಡಿ, ಒಂದು ನಯಾಪೈಸೆಯಷ್ಟು ಅನುಕೂಲವಾಗಿದ್ದರೆ, ನಾನು ಸಂತೋಷಪಟ್ಟುಕೊಳ್ಳುತಿದ್ದೆ. ಏಕೆಂದರೆ ನಾನೂ ಒಬ್ಬ ಹರಿಜನ. ದುಡ್ಡನ್ನು ತಿನ್ನುವುದಕ್ಕೋಸ್ಕರ ಸಮಿತಿ ಸಭೆಯನ್ನು ಮಾಡುವುದು ಸರಿಯಾದುದಲ್ಲ. ಒಬ್ಬ ಹರಿಜನನನ್ನು ಮೇಲಕ್ಕೆ ಎತ್ತಿದ್ದರೆ ಸಂತೋಷಪಡಬಹುದಾಗಿತ್ತು. ಮತ್ತೆ ಬೇರೆ ರಾಜ್ಯಗಳಲ್ಲಿ ಈ ಹರಿಜನ-ಗಿರಿಜನರ ಅಭಿವೃದ್ಧಿಯನ್ನು ಯಾವ ರೀತಿ ಮಾಡಿದ್ದಾರೆಂಬುದನ್ನು ನೋಡಿಕೊಂಡು ಬರುವುದಕ್ಕೆ ಎಂದು ಟೂರನ್ನು ಇಟ್ಟರು. ಆ ಟೂರಿನಲ್ಲಿ ಹೋಗಿಬರಬೇಕಾದರೆ ಒಬ್ಬೊಬ್ಬರಿಗೂ ೪ ಸಾವಿರ ಏರೋಪ್ಲೇನಿನ ಖರ್ಚು ಮತ್ತೆ ಸ್ವಂತ ಖರ್ಚು ೨,೦೦೦ ರೂಪಾಯಿಗಳು ಬರುತ್ತದೆ.

(ಶ್ರೀ ಪಿ. ರಾಮದೇವ್.—ಅಧ್ಯಕ್ಷರ ಸ್ಥಾನವನ್ನಲಂಕರಿಸಿದರು)

ಈ ಹರಿಜನ-ಗಿರಿಜನ ಕಲ್ಯಾಣ ಸಮಿತಿಗೆ ಒಂದು ವರ್ಷಕ್ಕೆ ಏನಿಲ್ಲ ಎಂದಾದರೂ ೨-೩ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಒಂದೇ ಒಂದು ಪೈಸೆಯಷ್ಟು, ಒಬ್ಬ ಹರಿಜನರನ್ನು ಉದ್ಧಾರ ಮಾಡುವುದಕ್ಕೆ ಇದರಿಂದ ಸಾಧ್ಯವಿಲ್ಲ. ಶ್ರೀಮಾನ್ ದೇವರಾಜ ಅರಸ್‌ರವರು ಸದುದ್ದೇಶದಿಂದ ಈ

ಒಂದು ಸಮಿತಿಯನ್ನು ಮಾಡಿದರು. ಯಾರಾದರೊಬ್ಬ ಅಧಿಕಾರಿ ತಪ್ಪು ಮಾಡಿದ ಎಂದರೆ ಅವನಿಗೆ ಶಿಕ್ಷೆಯನ್ನು ಮಾಡುತ್ತಾರೆ. ಆದರೆ ಶಾಸಕರು ಲಂಚ ತೆಗೆದುಕೊಂಡಿದ್ದಾರೆಂದು ಅವರ ಮೇಲೆ ಕ್ರಮ ತೆಗೆದು ಕೊಳ್ಳುವುದಕ್ಕಾಗುವುದಿಲ್ಲವೆಂದು ತಿಳಿದು ಸಮಿತಿಯು ಮುಖಾಂತರ ಶಾಸಕರಿಗೆ ಲಂಚವನ್ನು ಕೊಡುತ್ತಿದ್ದಾರೆ. ಇದರಿಂದ ಒಬ್ಬ ಹರಿಜನರನ್ನೂ ಉದ್ಧಾರ ಮಾಡುದಕ್ಕೆ ಆಗಿಲ್ಲ. ಕಳೆದ ೨-೩ ವರ್ಷಗಳಿಂದ ಹರಿಜನರೆಂದು ಸುಳ್ಳು ಸರ್ಟಿಫಿಕೇಟ್‌ನ್ನು ತೆಗೆದುಕೊಂಡಿರುವವರು, ೧೫೦೦ ಜನ ಇದ್ದಾರೆ. ಆ ರೀತಿ ಸುಳ್ಳು ಜಾತಿ ಸರ್ಟಿಫಿಕೇಟ್‌ನ್ನು ತೆಗೆದುಕೊಂಡಿರುವವರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳಿದ್ದಕ್ಕೆ, ಹಿಂದೆ ಆಗಿರುವಂತಹದ್ದನ್ನು ಮರೆತುಬಿಡಿ, ಮುಂದೆ ಆಗದಂತೆ ನೋಡಿಕೊಳ್ಳಲಾಗುವುದು ಎಂದು ಸರ್ಕಾರದಿಂದ ಆರ್ಡರ್ ಬಂದಿದೆ ಎಂದು ಹೇಳಿದರು. ಈ ಬಗ್ಗೆ ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ಹಿಂದೆ ಮಾಡಿರತಕ್ಕಂತಹ ತಪ್ಪನ್ನು ಮರೆತು ಬಿಡಿ ಎಂದರೆ ಹೇಗೆ ? ಅಂದರೆ ಇವತ್ತು ಯಾರಾದರೊಬ್ಬ ಮರ್ಡರ್ ಮಾಡಿದ್ದರೆ, ಸುಳ್ಳು ಜಾತಿ ಸರ್ಟಿಫಿಕೇಟ್ ತೆಗೆದುಕೊಂಡವರನ್ನು ಯಾವ ರೀತಿ ಬಿಟ್ಟುಬಿಡಿ ಎಂದು ಹೇಳುತ್ತಾರೋ, ಅದೇ ರೀತಿ ಬಿಡುತ್ತೀರಾ ? ಇದರಿಂದ ಹರಿಜನರಿಗೆ ಮೋಸ ಮಾಡಿದಂತಾಗುದಿಲ್ಲವೇನು ?

ಶ್ರೀ ಪಿ.ಪಿ. ಹೆಗ್ಗರೆ.—ಮಾನ್ಯ ಕಾನಡೆಯವರು ಹಿಂದಿನದನ್ನು ಮರೆತುಬಿಡಿ, ಮುಂದೆ ಆಗದಂತೆ ನೋಡಿಕೊಳ್ಳಲಾಗುವುದು ಎಂದು ನಾನು ಹೇಳಿದೆ ಅಂತ ಏನು ಹೇಳಿದರು, ಅದು ಸುಳ್ಳು, ನಾನು ಆ ರೀತಿ ಹೇಳಿದ್ದಿಲ್ಲ.

ಶ್ರೀ ಜಿ.ಎಂ. ಕಾನಡೆ.—ಈ ಸುಳ್ಳು ಜಾತಿಯ ಪ್ರಮಾಣಪತ್ರವನ್ನು ತೆಗೆದುಕೊಂಡಿರತಕ್ಕಂತಹ ಜನರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಕೇಳಿದಾಗ ಆ ವಿಚಾರವನ್ನು ಹೇಳಿದರು. ಒಂದು ವರ್ಷದಲ್ಲಿ ೨-೩ ಲಕ್ಷ ರೂಪಾಯಿಗಳನ್ನು ಈ ಸಮಿತಿಗಾಗಿ ಖರ್ಚು ಮಾಡುತ್ತಿದ್ದಾರೆ. ಇಂತಹ ಕಮಿಟಿಗಳ ಖರ್ಚಿನಲ್ಲೇ ಎಷ್ಟೋ ಹರಿಜನ-ಗಿರಿಜನರಿಗೆ ಧನಸಹಾಯವನ್ನು ಮಾಡಬಹುದಾಗಿತ್ತು. ಇನ್ನು ಬಡ್ಜೆಟ್ಟಿನಲ್ಲಿ ಶೇಕಡ ೧೮ ರಷ್ಟು ಹಣವನ್ನು ಹರಿಜನ-ಗಿರಿಜನರ ಏಳಿಗೆಗಾಗಿ ಖರ್ಚು ಮಾಡ ಬೇಕೆಂದು ಸರ್ಕಾರದ ಆದೇಶ ಇದೆ. ಆ ರೀತಿ ಹಣವನ್ನು ಎಲ್ಲಿ ಖರ್ಚು ಮಾಡಿದ್ದಾರೆ? ಉದಾಹರಣೆಗೆ ನನ್ನ ಕ್ಷೇತ್ರವನ್ನು ತೆಗೆದುಕೊಂಡು ಹೇಳುವುದಾದರೆ, ೪ ಲಕ್ಷ ರೂಪಾಯಿಗಳನ್ನು ಈ ಜನರ ಏಳಿಗೆಗಾಗಿ ಖರ್ಚು ಮಾಡುವಂತಹದ್ದು ಇದೆ. ಅದನ್ನು ಖರ್ಚು ಮಾಡಿ ಎಂದು ನಮ್ಮ ಜಿಲ್ಲೆಯಲ್ಲಿರತಕ್ಕ ಜಿಲ್ಲಾ ಸಮಾಜಕಲ್ಯಾಣ ಅಧಿಕಾರಿಯನ್ನು ಕೇಳಿದರೆ, ಅದನ್ನು ಹೇಗೆ ಖರ್ಚು ಮಾಡಬೇಕೆಂಬುದು ಗೊತ್ತಿಲ್ಲ ಎಂದು ಅವರು ಹೇಳುತ್ತಿದ್ದಾರೆ. ಅವರ ಹೆಸರು. ಎಂ.ಎ. ನಾಯಕ್ ಎಂದು. ಈ ರೀತಿ ಅಧಿಕಾರಿ ಗಳೂ ಮಾಡಿದರೆ ಹರಿಜನರ ಉದ್ಧಾರ ಹೇಗೆ ಆಗುತ್ತದೆಂಬುದನ್ನು ತಾವು ಯೋಜನೆ ಮಾಡಬೇಕು. ಹರಿಜನ-ಗಿರಿಜನರು ಪ್ರಾರಂಭ ಮಾಡಿರತಕ್ಕ ಉದ್ದಿಮೆಗಳ ಮೇಲೆ ತೆರಿಗೆಯನ್ನು ಸರ್ಕಾರ ಹಾಕಿದೆ. ಅದು ಯಾವುದೆಂದರೆ ಚಪ್ಪಲಿ ಈ ಚಪ್ಪಲಿಗಳನ್ನು ಹರಿಜನರು ಮಾಡುತ್ತಾರೆ. ಚಪ್ಪಲಿಗಳು ಬಡವ ರಿಗೂ ಬೇಕು, ಶ್ರೀಮಂತರಿಗೂ ಬೇಕು. ಎಲ್ಲರಿಗೂ ಬೇಕು. ಆದರೆ ಚಪ್ಪಲಿಗಳನ್ನು ಮಾಡುವುದು ಕಷ್ಟವಾಗುತ್ತಿದೆ. ೩೦ ರೂಪಾಯಿಗಳ ಒಳಗಿನ ಬೆಲೆಯ ಚಪ್ಪಲಿಗಳಿಗೆ ತೆರಿಗೆ ಇಲ್ಲ ಎಂದು ಹೇಳಿದ್ದಾರೆ. ಆ ರೀತಿ ೩೦ ರೂಪಾಯಿಗಳ ಒಳಗೆ ಬೆಲೆ ಇರತಕ್ಕಂತಹ ಚಪ್ಪಲಿಗಳನ್ನು ಮಾಡಿ ನಿಮಗೆ ಕೊಟ್ಟರೆ ಮೂರು ದಿವಸ ಬರುವುದಿಲ್ಲ. ಈ ರೀತಿಯಾದರೆ ಮುಂದೆ ಅವರ ಹತ್ತಿರ ಯಾರೂ ಗಿರಾಕಿಗಳೇ ಬರುವುದಿಲ್ಲ. ಚರ್ಮವನ್ನು ತೆಗೆದುಕೊಂಡು ಬಂದು, ಅದನ್ನು ಹದ ಮಾಡಿ ಅದರಿಂದ ೩೦ ರೂಪಾಯಿ ಗಳ ಬೆಲೆಯಲ್ಲಿ ಜಾಸ್ತಿದಿವಸ ಬಾಳಿಕೆ ಬರುವಂತಹ ಚಪ್ಪಲಿಗಳನ್ನು ಮಾಡುವುದಕ್ಕಾಗುವುದಿಲ್ಲ. ಆದ್ದ ರಿಂದ ೫೦ ರೂಪಾಯಿಗಳ ವರೆಗೆ ಈ ಒಂದು ರಿಯಾಯಿತಿಯನ್ನು ಏಕೆ ಕೊಡಬಾರದು ? ಈ ರೀತಿಯ ಒಂದು ರಿಯಾಯಿತಿಯನ್ನು ತಾವು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಹಾಸ್ಟಲ್‌ಗಳ ವಿಚಾರವನ್ನು ಹೇಳುವುದಾದರೆ, ಕೆಲವು ಕಡೆಗಳಲ್ಲಿ ಒ. ಬಿ. ಸಿ. ಹಾಸ್ಟಲ್ಸ್ ಎಂದು ನಡೆಸುತ್ತಿದ್ದಾರೆ. ಅಲ್ಲಿ ಏನಾಗುತ್ತಿದೆ ಎಂದರೆ, ಹಾಸ್ಟಲ್‌ನಲ್ಲಿರತಕ್ಕಂತಹ ಮಕ್ಕಳಿಗೆ ಅನ್ನವನ್ನು ಕೊಡುತ್ತಾರೆ. ಆ ಅನ್ನವನ್ನು ಶ್ರೀಮಂತರ ಮನೆಯಲ್ಲಿರುವ ನಾಯಿಯೂ ತಿನ್ನುವುದಿಲ್ಲ ಅಂತಹ ಅನ್ನವನ್ನು ಅವರು ಮಕ್ಕಳಿಗೆ ಕೊಡುತ್ತಾರೆ. ಸಾರು ಸುರಿಯುತ್ತಿರುತ್ತದೆ. ಪ್ಲೇಟುಗಳಲ್ಲಿ ತೆಗೆದು ಕೊಂಡು ಹೋಗುತ್ತಿದ್ದರೆ. ಅದು ಸೋರುತ್ತಿರುತ್ತದೆ. ನಾಯಿಯು ತಿನ್ನಬಾರದಂತಹ ವಸ್ತುಗಳನ್ನು ಮಕ್ಕಳಿಗೆ ತಿನ್ನಿಸುತ್ತಿದ್ದಾರೆ. ಇದು ಹರಿಜನರ ಉದ್ಧಾರ, ಬಡವರ ಉದ್ಧಾರ. ಸಾಮಾನ್ಯವಾಗಿ ಬಡವರು ಎಂದರೆ ಹರಿಜನರು. ಅವರಿಗೆ ಪ್ಲೇಟು ಇರುವುದಿಲ್ಲ. ಲೋಟ ಇರುವುದಿಲ್ಲ, ಮಲಗ

ಕೊಳ್ಳುವುದಕ್ಕೆ ಸರಿಯಾದಂತಹ ಜಾಗ ಇರುವುದಿಲ್ಲ. ಪ್ರತಿಯೊಂದು ಕಡೆಯಲ್ಲಿಯೂ ಕೂಲಿ ಮಾಡ ತಕ್ಕಂತಹವರು ಹರಿಜನರು. ತಮ್ಮ ಗಮನಕ್ಕೆ ಮತ್ತೊಂದು ವಿಷಯವನ್ನು ತರುತ್ತಿದ್ದೇನೆ. ಅದೇನೆಂದರೆ ಬೆಂಗಳೂರು ನಗರದಲ್ಲಿ ಅಥವಾ ಇನ್ನಿತರೆ ಯಾವುದೇ ನಗರಗಳಲ್ಲಿ ನಮ್ಮ ಮಲ ಮೂತ್ರವನ್ನು ಎತ್ತುವಂತಹವರು ಹರಿಜನರು. ಬೆಳಗ್ಗೆ ಎದ್ದ ತಕ್ಷಣ ಬಂದು ಆ ಕೆಲಸವನ್ನು ಅವರು ಮಾಡುತ್ತಾರೆ. ಅವರು ಬೆಳ್ಳಿಗೆ ೬ ಗಂಟೆಯಿಂದ ೧೦ ಗಂಟೆಯಿಂದ ಕೆಲಸವನ್ನು ಮಾಡಬೇಕು. ಮತ್ತೆ ಸಂಜೆ ೭ ಗಂಟೆಯಲ್ಲಿ ಆ ಕೆಲಸವನ್ನು ಮಾಡಬೇಕಾಗಿರುತ್ತದೆ. ನಮಗೆ ಏನಾದರೂ ಸ್ವಲ್ಪ ಕೊಳಕು ಆಯಿತೆಂದರೆ ತಕ್ಷಣ ಸ್ನಾನ ಮಾಡುತ್ತೇವೆ. ಆದರೆ ಈ ಮಲ ಮೂತ್ರವನ್ನು ತೆಗೆಯುವಂತಹ ಜನ ಅವರ ಬಟ್ಟೆಗಳನ್ನು ಬದಲಾವಣೆ ಮಾಡಿಕೊಳ್ಳುವುದಕ್ಕೂ ಅವಕಾಶ ಇಲ್ಲ. ಅವರು ಏನಾದರೂ ಒಂದು ದಿವಸ ಆ ಕೆಲಸವನ್ನು ಮಾಡದಿದ್ದರೆ, ನಾವು ಯಾರೂ ತಿರುಗಾಡುವುದಕ್ಕೆ ಬರುವುದಿಲ್ಲ, ನಮ್ಮ ತಾಲ್ಲೂಕಿನ ಪುರಸಭೆಯಲ್ಲಿ ಹಾಗೂ ಟಿ. ಡಿ ಬಿ.ಯಲ್ಲಿ ಶೇಕಡ ೧೮ ರಷ್ಟು ಹರಿಜನರ ಉದ್ಧಾರಕ್ಕಾಗಿ ಖರ್ಚು ಮಾಡಬೇಕಾಗಿರುವಂತಹ ಹಣ ೪೦ ಲಕ್ಷ ಇದೆ. ಅದನ್ನು ಖರ್ಚು ಮಾಡಿ ಎಂದು ನಮ್ಮ ಜಿಲ್ಲೆಯಲ್ಲಿರತಕ್ಕಂತಹ ಜಿಲ್ಲಾ ಸಮಾಜಕಲ್ಯಾಣ ಅಧಿಕಾರಿಗೆ ಹೇಳಿದರೆ, ಅದನ್ನು ಹೇಗೆ ಖರ್ಚು ಮಾಡಬೇಕೆಂಬುದೇ ಗೊತ್ತಿಲ್ಲವೆಂದು ಹೇಳುತ್ತಾರೆ. ಈ ರೀತಿ ಕರ್ನಾಟಕ ರಾಜ್ಯದಲ್ಲಿ ಎಷ್ಟು ಹಣ ಖರ್ಚಾಗದೇ ಉಳಿದಿರಬಹುದು ಎಂಬುದನ್ನು ತಾವು ಯೋಚನೆ ಮಾಡಬೇಕು. ಹರಿಜನ ಉದ್ಧಾರಕ್ಕಾಗಿ ಖರ್ಚು ಮಾಡಬೇಕೆಂದಿರುವ ಹಣವನ್ನು ಏಕೆ ಅಧಿಕಾರಿಗಳು ಖರ್ಚು ಮಾಡುತ್ತಿಲ್ಲ ಇದು ಹರಿಜನರಿಗೆ ಮಾಡತಕ್ಕಂತಹ ಅನ್ಯಾಯ ಅಲ್ಲವೇ?

ಕೆಲವು ತಿಂಗಳುಗಳ ಹಿಂದೆ, ನಮ್ಮ ಹರಿಜನ-ಗಿರಿಜನ ಕಲ್ಯಾಣ ಸಮಿತಿ ಎಂದು ಏನು ಇದೆ. ಆ ಸಮಿತಿ ಬೆಂಗಳೂರು ನಗರದಲ್ಲಿರುವ ಸಾಬೂನು ಕಾರ್ಖಾನೆಗೆ ಭೇಟಿ ಕೊಟ್ಟಿತ್ತು. ಹಿಂದೆ ಇದ್ದಂತಹ ಹರಿಜನ-ಗಿರಿಜನ ಕಲ್ಯಾಣ ಸಮಿತಿಯೂ ಕೂಡ ಈ ಸಾಬೂನು ಭೇಟಿ ಕೊಟ್ಟಿದ್ದಾಗ ಅಲ್ಲಿರತಕ್ಕಂತಹ ಹರಿಜನ-ಗಿರಿಜನ ಕಾರ್ಮಿಕರು ಕೆಲವಾರು ದೂರುಗಳನ್ನು ಅಲ್ಲಿರತಕ್ಕಂತಹ ಮ್ಯಾನೆಜಿಂಗ್ ಡೈರೆಕ್ಟರ್‌ರವರು ಮಾಡಿರತಕ್ಕಂತಹ ಅನ್ಯಾಯದ ಬಗ್ಗೆ ದೂರನ್ನು ಕೊಟ್ಟಿದ್ದರು. ಆ ರೀತಿ ದೂರನ್ನು ಕೊಟ್ಟಿದ್ದವರನ್ನು ಸಸ್‌ಪೆಂಡ್ ಏಕೆ ಮಾಡಬಾರದೆಂದು ಷೋಕಾಸ್ ನೋಟೀಸ್ ಕೊಟ್ಟಿದ್ದರು. ಈಗ ಇರತಕ್ಕಂತಹ ಹರಿಜನ-ಗಿರಿಜನ ಕಲ್ಯಾಣ ಸಮಿತಿಯು ಭೇಟಿ ಕೊಟ್ಟಿದ್ದಾಗ ಹಿಂದೆ ಏಕೆ ಈ ಕಾರ್ಮಿಕರಿಗೆ ಷೋಕಾಸ್ ನೋಟೀಸ್ ಕೊಟ್ಟಿದ್ದೀರೆಂದು ಕೇಳಿದೆವು, ಆ ಬಗ್ಗೆ ವಿಚಾರ ಮಾಡಿ, ಸಮಿತಿ ವಾಪಸ್ಸು ಬಂದ ಮೇಲೆ ೬ ಮಂದಿ ಹರಿಜನ-ಗಿರಿಜನ ನೌಕರರನ್ನು ಡಿಸ್‌ಮಿಸ್ ಮಾಡಿದ್ದಾರೆ. ಈ ಸರ್ಕಾರ ಬಂದ ಮೇಲೆ ಎಷ್ಟು ಮಂದಿ ಹರಿಜನರನ್ನು ಡಿಸ್‌ಮಿಸ್ ಮಾಡಿದ್ದಾರೆ? ಎಂಬುದನ್ನು ತಿಳಿಸಬೇಕು. ಮತ್ತೆ ಬೆಂಗಳೂರು ನಗರದಲ್ಲಿ ತಾವು ತಿರುಗಾಡುತ್ತೀರೋ ಅಥವಾ ಇಲ್ಲವೋ ಗೊತ್ತಿಲ್ಲ. ನಾನಂತೂ ತಿರುಗಾಡುತ್ತಿರುತ್ತೇನೆ. ನಾವು ತಿಂದು ಹೊರಗೆ ಬಿಸಾಕಿದ ಎಂಜಲನ್ನು ನಾಯಿಗಳ ರೀತಿಯಲ್ಲಿ ಈ ಜನರು ತಿನ್ನುತ್ತಿದ್ದಾರೆ. ಅವರ ಬಗ್ಗೆ ತಾವು ಏನು ಕಾರ್ಯಕ್ರಮವನ್ನು ಹಾಕಿದ್ದೀರಿ ? ಮಾತೆತ್ತಿದರೆ ಬಡವರು. ಹೆಸರಿನಲ್ಲಿ ಮಾತ್ರ ಬಡವರು. ಈಗ ನನಗೊಂದು ಗಾದೆ ನೆನಪಿಗೆ ಬರುತ್ತದೆ. ಅದೇನೆಂದರೆ, ಬಗಲಲ್ಲಿ ಚೂರಿ ಬಾಯಲ್ಲಿ ಅಮೃತ ಎಂದು. ಈಗಿರತಕ್ಕ ಸರ್ಕಾರ ಅದರ ಹಿಂದೆ ಇದ್ದಂತಹ ಸರ್ಕಾರದ ಮೇಲೆ ಹೇಳುತ್ತಾರೆ. ಅವರನ್ನು ಕೇಳಿದಾಗ ಅವರ ಹಿಂದೆ ಇದ್ದಂತಹ ಸರ್ಕಾರದ ಮೇಲೆ ಹೇಳುವುದು. ಇದೇ ನಡೆಯುತ್ತಿದೆ. ಆದರೆ ನಿಮ್ಮಲ್ಲಿ ಸರ್ಕಾರದ ಮೇಲೆ ಎಷ್ಟು ಹರಿಜನರ ಉದ್ಧಾರ ಮಾಡಿದ್ದಾರೆಂಬುದನ್ನು ಹೇಳಬೇಕು. ಕರ್ನಾಟಕದಲ್ಲಿ ಹರಿಜನರ ಉದ್ಧಾರವನ್ನು ಬಾಯಲ್ಲಿ ಮಾತ್ರ ಮಾಡಿದ್ದಾರೆ. ಹೋದ ವರ್ಷ ಈ ಜನರ ಅಭಿವೃದ್ಧಿಗೆ ಏನು ಹಣವನ್ನು ಖರ್ಚು ಮಾಡಿದ್ದೇವೆಂದು ಹೇಳಿದ್ದಾರೆ. ಅದನ್ನು ಅದು ವರದಿಯಲ್ಲಿ ಮಾತ್ರ ಖರ್ಚು ಮಾಡಿದ್ದಾರೆ. ಸುಮಾರು ಕೋಟ್ಯಾಂತರ ರೂಪಾಯಿಗಳ ಹಣವನ್ನೇ ಖರ್ಚು ಮಾಡುವುದಿಲ್ಲ. ಈ ರೀತಿ ಈ ಜನರ ಉದ್ಧಾರಕ್ಕಾಗಿ ಯಾವ ಕೆಲಸ ಮಾಡದಿರುವ ಅಧಿಕಾರಿಗಳು ಯಾರು ಇದ್ದಾರೋ ಅವರನ್ನು ವರ್ಗ ಮಾಡಿ ಎಂದು ಹೇಳಿದರೆ, ವರ್ಗ ಮಾಡುವುದಿಲ್ಲ. ಉದಾಹರಣೆಗೆ ಸಾಬೂನು ಕಾರ್ಖಾನೆಯಲ್ಲಿರತಕ್ಕಂತಹ ಮ್ಯಾನೇಜಿಂಗ್ ಡೈರೆಕ್ಟರ್ ಜಯಪ್ಪನವನ್ನು ೨೦ ವರ್ಷಗಳಿಂದ ಅಲ್ಲೇ ಇಟ್ಟಿದ್ದಾರೆ. ಅವರನ್ನು ಆ ಜಾಗದಿಂದ ವರ್ಗವನ್ನೆ ಮಾಡುವುದಿಲ್ಲ. ಇದನ್ನು ಪತ್ರಿಕೆಯವರೂ ಕೂಡ ಬರೆಯುವುದಿಲ್ಲ. ಸತ್ಯವನ್ನು ಹೇಳಿದಾಗ ಅದನ್ನು ಜನರಿಗೆ ತಿಳಿಯುವ ಹಾಗೆ ಬರೆಯಬೇಕು.

೧-೦೦ ಪಿ. ಎಂ.

ನಾವೇನು ಹೊಟ್ಟೆಕಿಚ್ಚಿಗೆ ಹೇಳುತ್ತೇವೆಯೋ ? ಮೊನ್ನೆ ದಿವಸ ಕಾಲು ಕಡಿಸಿದ್ದಾರೆ. ಈ ವಿಚಾರವನ್ನು ನಾನು ಬೊಮ್ಮಾಯಿಯವರ ಹತ್ತಿರ ಹೇಳಿದ್ದೇನೆ. ಹರಿಜನ ಗಿರಿಜನರ ಕೊಲೆ ಆದರೂ ಕೇಳುವುದಿಲ್ಲ. ಈ ರೀತಿಯಾಗಿ ಹರಿಜನರಿಗೆ ಅನ್ಯಾಯ ಮಾಡುತ್ತಿದ್ದಾರೆ. ನಮ್ಮ ಸಿದ್ದಾಪುರ ಕ್ಷೇತ್ರದಲ್ಲಿ......

ಶ್ರೀ ಬಿ. ಜಿ. ಬಣಕಾರ್.— ನಾನು ಕ್ರಿಯಾಲೋಪ ಎತ್ತುತ್ತೇನೆ. ಮಾನ್ಯ ಸದಸ್ಯರು ಮಾತನಾಡುವಾಗ......

ಶ್ರೀ ಜಿ. ಪಿ. ಖಾನಡೆ.— ನಾನು ಮಾತನಾಡುವಾಗ ಸ್ವಲ್ಪ ಅವಕಾಶ ಕೊಡಬೇಕು. ಹರಿಜನರ ವಿಚಾರ ಮಾತನಾಡುತ್ತಿದ್ದೇನೆ. ಹರಿಜನರ ವಿಚಾರ ಮಾತನಾಡಿದರೆ ಕ್ರಿಯಾಲೋಪ ಎಂದು ಹೇಳುತ್ತಾರೆ. ನಾನು ಸರ್ಕಾರದ ಹತ್ತಿರ ಮಾತನಾಡುತ್ತಿದ್ದೇನೆ.

ಛೇರ್ಮನ್.— ಹತ್ತು ನಿಮಿಷ ಆಯಿತು, ತಾವು ಬೇಗ ಮುಗಿಸಿ.

ಶ್ರೀ ಜಿ. ಪಿ. ಖಾನಡೆ.— ಇಷ್ಟು ದಿನ ಗಲಾಟೆ ಮಾಡುವುದರಲ್ಲೇ ಆಯಿತು. ಪ್ರತಿ ದಿವಸವೂ ನೀವೂ ಕೂಡ ಗಲಾಟೆ ಎಂದು ಆಕ್ಷೇಪಣೆ ಮಾಡುತ್ತಿದ್ದೀರಿ.

ಒಬ್ಬ ಮಾನ್ಯ ಸದಸ್ಯರೂ.— ಮಾನ್ಯ ಖಾನಡೆಯವರು ಮಾತನಾಡಿದರೆ ಗಲಾಟೆ ಇದ್ದ ಹಾಗೆ ಇರುತ್ತದೆ.

ಶ್ರೀ ಜಿ. ಪಿ. ಖಾನಡೆ.— ಹರಿಜನರು ಮಾತನಾಡಿದರೆ ಗಲಾಟೆ ಇದ್ದ ಹಾಗೆ ಇರುತ್ತದೆ. ಹರಿಜನರ ಸಂದಿಗ್ಧ ಹೇಳಿದರೆ ಇವರಿಗೆ ಹೊಟ್ಟೆ ನೋಯುತ್ತದೆ.

ಛೇರ್ಮನ್.— ಅದನ್ನು ಬಿಟ್ಟು ಮಾತನಾಡಿ.

ಶ್ರೀ ಜಿ. ಪಿ. ಖಾನಡೆ.— ಅವರು ಸುಮ್ಮನೆ ಇದ್ದರೆ ಒಳ್ಳೆಯದು. ಮಧ್ಯೆ ಎದ್ದರೆ ಮಾತನಾಡ ವುದು ತಪ್ಪುತ್ತದೆ. ಬಳ್ಳಾರಿಯ ಮುನಿಸಿಪಾಲಿಟಿ ವತಿಯಿಂದ ಒಬ್ಬೊಬ್ಬರಿಗೆ ೪-೫ ಎಕರೆ ಜಮೀನು ಕೊಡಿಸುತ್ತೇವೆಂದು ನಗರಾಭಿವೃದ್ಧಿ ಸಚಿವರು ಹೇಳಿದ್ದರು. ಆದರೆ ಅಲ್ಲಿ ಒಬ್ಬರಿಗೆ ಬೆಣ್ಣೆ ಒಬ್ಬರಿಗೆ ಸುಣ್ಣ ಮಾಡಿದ್ದಾರೆ. ಈ ರೀತಿ ಮಾಡುವುದು ಸರಿಯಲ್ಲ. ಸರ್ಕಾರ ಕೆಲಸ ಮಾಡುವಾಗ ಎಲ್ಲರಿಗೂ ಒಂದೇ ರೀತಿ ಮಾಡಬೇಕು. ಒಬ್ಬರಿಗೆ ಬಾಳೆಹಣ್ಣು ಒಬ್ಬರಿಗೆ ಸಿಪ್ಪೆ ಕೊಡುತ್ತಾರೆ. ಅಲ್ಲಿ ಲಂಚದ ಹಾವಳಿ ಹೆಚ್ಚಾಗಿದೆ. ಇದು ಮಂತ್ರಿಗಳ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಸರ್ಕಾರೀ ಸಾಬೂನು ಕಾರ್ಖಾನೆಯ ಬಗ್ಗೆ ಹತ್ತು ಸಾರಿ ಹೇಳಿದ್ದೇನೆ.

ಛೇರ್ಮನ್.— ಆ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ ಬಿಡಿ.

ಶ್ರೀ ಜಿ. ಪಿ. ಖಾನಡೆ.— ಸಾಮಾನ್ಯವಾಗಿ ಮಂತ್ರಿಗಳು ಸೂಕ್ತ ಕ್ರಮ ತೆಗೆದುಕೊಳ್ಳು ತ್ತೇವೆಂದು ಹೇಳುತ್ತಾರೆ ಮತ್ತು ಬರೆಯುವಾಗಲೂ ಅದೇ ರೀತಿ ಬರೆಯುತ್ತಾರೆ. ಇದರಿಂದ ಏನೂ ಪ್ರಯೋಜನವಾಗುವುದಿಲ್ಲ.

ಛೇರ್ಮನ್.— ಕೈಗಾರಿಕಾ ಇಲಾಖಾ ಬೇಡಿಕೆಗಳು ಬಂದಾಗ ಚರ್ಚೆಯಾಗಿ ಅದರ ಬಗ್ಗೆ ಉತ್ತರಿಸಿ ದ್ದಾರೆ. ತಾವು ಮತ್ತೇ ಅದನ್ನೇ ಪುನರಾವರ್ತನೆ ಮಾಡುವುದರಿಂದ ಬೇರೆ ವಿಚಾರಗಳನ್ನು ಹೇಳುವುದ ಕ್ಕಾಗುವುದಿಲ್ಲ.

ಶ್ರೀ ಜಿ. ಪಿ. ಖಾನಡೆ.— ಸಾಬೂನು ಕಾರ್ಖಾನೆಯ ವಿಷಯ ಅಂದರೆ ಬೇರೆ ಅಲ್ಲ. ಅಲ್ಲಿ ಹರಿಜನಗಿರಿಜನರಿಗೆ ಅನ್ಯಾಯವಾಗಿರುವ ಬಗ್ಗೆ ಹೇಳುತ್ತೇನೆ. ಉಳಿದ ವಿಚಾರಗಳನ್ನೇನು ಹೇಳುವುದಿಲ್ಲ. ಅಲ್ಲಿ ಜಯಪ್ಪ ಎಂಬುವವರೇನಿದ್ದಾರೆ ಅವರು ಸುಮಾರು ೨೦ ವರ್ಷಗಳಿಂದ ಇದ್ದಾರೆ. ಅವರು ಏನು ಬೇಕಾದರೂ ಮಾಡಬಹುದಾಗಿದೆ. ಸರ್ಕಾರಕ್ಕೆ ಅವರು ಹೊಂದಿಕೊಂಡಿರುವುದರಿಂದ ಅವರಿಗೆ ಈಗಿನ ಜನತಾ ಸರ್ಕಾರ ಹೆದರಬೇಕಾಗಿದೆ. ಹರಿಜನರಿಗೆ ಆಗುತ್ತಿರುವ ಕಿರುಕುಳದ ಬಗ್ಗೆ ಬೊಮ್ಮಾಯಿ ಯವರಿಗೆ ಹೇಳಿದಾಗ ಸರಿಪಡಿಸುತ್ತೇವೆಂದು ಹೇಳಿದರು. ಆದರೆ ಇನ್ನೂ ಮಾಡಿಲ್ಲ. ಸರಿ ಮಾಡು ತ್ತೇವೆಂದು ಹೇಳಿ ಇಷ್ಟು ದಿವಸವಾದರೂ ಮಾಡದಿರುವುದು ಈ ಸರ್ಕಾರ ಹರಿಜನರಿಗೆ ಮಾಡುತ್ತಿರುವ ದ್ರೋಹ ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಮಹಾದೇವ್.— ಅಧ್ಯಕ್ಷರೇ, ನನಗೆ ಮಾತನಾಡಲು...

ಛೇರ್ಮನ್.— ಇಂತಿಂಥ ಪಕ್ಷಕ್ಕೆ ಇಷ್ಟಿಷ್ಟು ವೇಳೆ ಎಂದು ಗೊತ್ತು ಮಾಡಿದ್ದೇವೆ. ಅದರಲ್ಲಿ ನಿಮ್ಮ ನಾಯಕರೇ ಎರಡು ಗಂಟೆ ತೆಗೆದು ಕೊಂಡಿದ್ದಾರೆ.

ಶ್ರೀ ಎಂ. ಮಹಾದೇವ್.— ಇಲ್ಲಿದ್ದಾಗ ಚೆನ್ನಾಗಿದ್ದೀರಿ, ಅಲ್ಲಿಗೆ ಹೋದಮೇಲೆ ಏಕೆ ಹೀಗಾದಿರಿ ?

ಶ್ರೀ ಆರ್. ಎ. ನಾಯಕ್.— ಅವರಿಗೆ ಅವಕಾಶವನ್ನು ಕೊಟ್ಟರೆ ನಮಗೂ ಕೊಡಬೇಕು.

ಶ್ರೀ ಎಂ. ಎಲ್. ಮುತ್ತಣ್ಣನವರ್ (ಗೋಕಾಕ್).— ಮಾನ್ಯ ಅಧ್ಯಕ್ಷರೇ, ಈಗಾಗಲೇ ಈ ಸಮಾಜ ಕಲ್ಯಾಣ ಇಲಾಖೆಯ ಬಗ್ಗೆ ಅನೇಕ ಹಿರಿಯರು ಮತ್ತು ಮಿತ್ರರು ಮಾತನಾಡಿದ್ದಾರೆ. ಆದ್ದರಿಂದ, ನಾನು ಕೆಲವೊಂದು ವಿಚಾರಗಳನ್ನು ಮಾತ್ರ ಪ್ರಸ್ತಾಪಿಸುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ನಮ್ಮ ನಾಯಕ ಜನಾಂಗದ ಬಗ್ಗೆ ಸಾಕಷ್ಟು ಅನುಭವದ ಮಾತುಗಳನ್ನು ಕೇಳಿದ್ದೇವೆ. ಆದರೂ ಕೂಡ ದೇವರಾಜ ಅರಸುರವರ ಸರಕಾರದಲ್ಲಿ ಯಾವ ತೊಂದರೆಯೂ ಆಗಿರಲಿಲ್ಲ. ವಾಲ್ಮೀಕಿ, ತಳವಾರ, ಬೇಡ ಎಲ್ಲರಿಗೂ ನ್ಯಾಯ ಸಿಗುತ್ತಿತ್ತು. ಆದರೆ ಹಿಂದಿನ ಸರ್ಕಾರದಲ್ಲಿ ಕೆಲವು ದುಷ್ಟ ಶಕ್ತಿಗಳು ಸೇರಿಕೊಂಡು ನಾಯಕ ಜನಾಂಗವನ್ನು ತುಳಿಯಲು ಪ್ರಯತ್ನ ಮಾಡಿದವು. ಆದರೂ ಕೂಡ ಹಿಂದಿನವರು ಮಾಡಿದ ತಪ್ಪನ್ನು ಮನ್ನಿಸಿ ನಾವು ಜನತಾ ಸರ್ಕಾರಕ್ಕೆ ಬೆಂಬಲ ಕೊಟ್ಟರೂ ಕೂಡ ಜನತಾ ಸರ್ಕಾರ ಅದೇ ತಪ್ಪನ್ನು ಮುಂದುವರಿಸಿಕೊಂಡು ಬರುತ್ತಿರುವುದು ವಿಷಾದನೀಯ. ಕರ್ನಾಟಕ ರಾಜ್ಯದಲ್ಲಿ ಸುಮಾರು ೬೦ ಲಕ್ಷ ಜನ ದಲಿತರಿಗೆ ಆಗುತ್ತಿರುವ ಅನ್ಯಾಯವನ್ನು ಮುಖ್ಯಮಂತ್ರಿಗಳು ಮತ್ತು ಸಮಾಜಕಲ್ಯಾಣ ಇಲಾಖೆಯ ಸಚಿವರು ತಕ್ಷಣ ನಿಲ್ಲಿಸಬೇಕು. ೧೯೭೭ರಲ್ಲಿ ಆಗಿನ ಸರ್ಕಾರ ಲಂಬಾಣಿ, ಬೋವಿ, ಒಡ್ಡರು, ಕಲ್ಲುಒಡ್ಡರು, ಕೊರಚ, ಕೊರಮ ಇತ್ಯಾದಿ ವರ್ಗದವರೆಲ್ಲ ಒಂದೇ ಎಂದು ಒಂದು ಆಜ್ಞೆ ಮಾಡಿತು. ಆದರೆ ನಾಯಕ ಜನಾಂಗದ ಬಗ್ಗೆ ಯಾವ ಆಜ್ಞೆಯನ್ನೂ ಕೊಡಲಿಲ್ಲ. ಹಿಂದಿನ ಸರ್ಕಾರ ಕೂಡ ಕಣ್ಣು, ಕಿವಿ ಮುಚ್ಚಿಕೊಂಡು ಕುಳಿತಿತ್ತು. ಜನತಾ ಸರ್ಕಾರ ಕೂಡ ಯಾವುದೇ ಆಜ್ಞೆ ಮಾಡದೆ ಇರುವುದರಿಂದ ನಾಯಕ ಜನಾಂಗದ ವಿದ್ಯಾರ್ಥಿಗಳು, ಮೆಡಿಕಲ್, ಇಂಜಿನಿಯರಿಂಗ್ ಇತ್ಯಾದಿಗಳನ್ನು ಓದುವವರು ಬಹಳ ತೊಂದರೆಗೊಳಗಾಗಿದ್ದಾರೆ. ಹೀಗಾಗಿ ನಾಯಕ ಜನಾಂಗದ ೪೦ ಲಕ್ಷ ಜನರು ಚಿತ್ರಹಿಂಸೆಗೆ ಒಳಗಾಗಿದ್ದಾರೆ. ನಾಯಕ ಜನಾಂಗದವರೆಲ್ಲರಿಗೂ ಸರಿಯಾದ ನ್ಯಾಯ ಸಿಗುವಂತಹ ವ್ಯವಸ್ಥೆ ಕೂಡಲೆ ಆಗಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಮುಖ್ಯಮಂತ್ರಿಗಳಾದ ಹೆಗಡೆಯವರಿಗೆ ಈ ಎಲ್ಲಾ ವಿಷಯಗಳು ಗೊತ್ತಿವೆ, ಮತ್ತು ಈ ಕಷ್ಟವನ್ನು ಪರಿಹರಿಸುವುದಾಗಿ ವಚನ ಕೊಟ್ಟಿದ್ದಾರೆ. ಆದರೆ ಇವತ್ತಿಗೂ ಅದರ ಬಗ್ಗೆ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಅತೀ ಹೆಚ್ಚು ಜನಸಂಖ್ಯೆ ಇರುವ ಈ ಜನಾಂಗದ ಬಗ್ಗೆ ಸರ್ಕಾರ ಕೇವಲ ಹುಸಿ ಆಶ್ವಾಸನೆಗಳನ್ನು ಕೊಡುವುದನ್ನು ನಿಲ್ಲಿಸಬೇಕು. ೧೯೭೭ರಲ್ಲಿ ಬೋವಿ ಒಡ್ಡರು ಮುಂತಾದವರ ಬಗ್ಗೆ ಸರ್ಕಾರ ತೆಗೆದುಕೊಂಡ ನಿಲುವಿನಂತೆ ನಾಯಕರ ಬಗ್ಗೆಯೂ ತೆಗೆದುಕೊಳ್ಳಬೇಕು. ವಿದ್ಯಾರ್ಥಿಗಳು ಶಾಲೆಗೆ ಸೇರಿಕೊಳ್ಳುವ ಸಲುವಾಗಿ ವಾಲ್ಮೀಕಿ ಇರಲಿ, ಬೇಡ ಇರಲಿ, ನಾಯಕ ಇರಲಿ ಅವರಿಗೆ ಎಸ್. ಟಿ. ಸರ್ಟಿಫಿಕೇಟನ್ನು ಕೊಡುವಂತೆ ಸರ್ಕಾರ ಆಜ್ಞೆ ಮಾಡಬೇಕು. ನಲವತ್ತು ಲಕ್ಷ ಜನಸಂಖ್ಯೆಯನ್ನು ಹೊಂದಿರತಕ್ಕ ನಾಯಕ ಜನಾಂಗದ ಬಗ್ಗೆ ನಾನು ಆಗಲೇ ಹೇಳಿದಂತೆ ಅನುಕೂಲಕರವಾದ ರೀತಿಯಲ್ಲಿ ಸರ್ಕಾರ ಆಜ್ಞೆಯನ್ನು ಹೊರಡಿಸದೆ ಇದ್ದರೆ ಹಿಂದಿನ ಸರ್ಕಾರದಂತೆ ಈ ಸರ್ಕಾರವನ್ನೂ ನಾವು ವಿರೋಧಿಸಬೇಕಾಗುತ್ತದೆ, ಇಂಥ ಕಠಿಣ ದಿನಗಳನ್ನು ನೋಡುವುದಕ್ಕೆ ಅವಕಾಶ ಮಾಡಬೇಡಿ. ಬೋವಿ, ಬೇಡರ, ವಾಲ್ಮೀಕಿ ಇತ್ಯಾದಿ ವರ್ಗದವರ ಬಗ್ಗೆ ಶಾಲಾ ರಿಜಿಸ್ಟರ್‌ನಲ್ಲಿ ಶಾಲಾ ಶಿಕ್ಷಕರು ಬರೆದುಕೊಳ್ಳುವ ತಪ್ಪು ಪದ್ಧತಿಯಿಂದ ಯಾರಿಗೂ ಸಿಗುವಂತಹ ವ್ಯವಸ್ಥೆ ಆಗುತ್ತಿಲ್ಲ. ಇದರ ಬಗ್ಗೆ ಸರ್ಕಾರ ಗಮನ ಹರಿಸಬೇಕು. ಇವತ್ತಿನ ದಿವಸ ಗೋಕಾಕ್, ಹುಕ್ಕೇರಿ, ಬೆಳಗಾಂ ತಾಲ್ಲೂಕುಗಳಲ್ಲಿ ಪರಿಶಿಷ್ಟ ಜನಾಂಗದ ಸಾಕಷ್ಟು ಜನರು ಬಹಳ ಹೀನ ಪರಿಸ್ಥಿತಿಯಲ್ಲಿದ್ದಾರೆ. ಅವರಿಗೆ ರಸ್ತೆ ಸೌಕರ್ಯವಾಗಲಿ, ನೀರಾವರಿ ಸೌಕರ್ಯವಾಗಲಿ ಇರುವುದಿಲ್ಲ ಹಾಗೂ ಪ್ರಾಥಮಿಕ ಶಾಲೆಯಾಗಲಿ ಬಾಲವಾಡಿಯಾಗಲಿ ಯಾವ ಸೌಕರ್ಯಗಳು ಇಲ್ಲದೆ ಅವರು ಕಳ್ಳಬಟ್ಟಿ ಮಾರಿಕೊಂಡು ತಂಡುಗಿನ ಜೀವನ ನಡೆಸುತ್ತಿದ್ದಾರೆ, ಆದ್ದರಿಂದ, ಸರ್ಕಾರ ಅವರಿಗೆ ಬಾಲವಾಡಿ, ಶಾಲೆ, ರಸ್ತೆ, ಗುಡಿಸಲು ನೀರು ಇತ್ಯಾದಿ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.— ಅವರು ಮಾತನಾಡಿದ ಮಾತುಗಳು ದಾಖಲೆಗೆ ಹೋಗಬಾರದು. ಇದರಿಂದ ಎಲ್ಲರಿಗೂ ಅವಮಾನವಾಗುತ್ತದೆ. ಏಕೆಂದರೆ ಎಲ್ಲರೂ ಆ ಕೃತಿ ಮಾಡುವುದಿಲ್ಲ.

ಇಡೀ ಜನಾಂಗವೇ ಆ ರೀತಿ ಮಾಡುತ್ತದೆಂದು ಇವರು ಪ್ರಸ್ತಾವನೆ ಮಾಡುವುದು ಸರಿಯಲ್ಲ. ನಾಳೆ ದಿವಸ ಇದರ ಮೇಲೆ ಟೀಕೆಗಳು ಪ್ರಾರಂಭವಾಗುತ್ತವೆ. ಆದ್ದರಿಂದ ಆ ರೀತಿ ಮಾತನಾಡಬಾರದು ಮತ್ತು ಮಾತನಾಡಿದ್ದು ದಾಖಲೆಗೂ ಹೋಗಬಾರದು ಎಂದು ಹೇಳುತ್ತೇನೆ.

ಶ್ರೀ ಎಂ. ಎಲ್. ಮುತ್ತಣ್ಣನವರ್.— ನಾನು ಮಾತನಾಡಿದರೆ ನಿಮಗೇನು ತೊಂದರೆ ? ಈಗಾಗಲೇ ಪರಿಶಿಷ್ಟ ಜಾತಿಯ ಹಾಸ್ಟೆಲುಗಳು ಇದ್ದರೂ ಕೂಡ ಅವುಗಳಿಗೆ ಕಟ್ಟಡಗಳು ಇರುವುದಿಲ್ಲ. ಅಲ್ಲದೇ ಅವು ಸರಿಯಾದ ವಾತಾವರಣದಲ್ಲಿ ಇರುವುದಿಲ್ಲ. ಎನ್. ಆರ್. ಇ. ಪಿ. ಕೆಲಸಗಳನ್ನು ತೆಗೆದುಕೊಂಡರೂ ಅವು ಸರಿಯಾದ ರೀತಿಯಲ್ಲಿ ಇನ್ನೂ ಕಾರ್ಯಗತವಾಗಿಲ್ಲ. ಅಲ್ಲದೆ ಸಾಲ ಕೊಡುವ ಯೋಜನೆಯಲ್ಲಿ ನಮ್ಮ ನಾಯಕ ಜನಾಂಗಕ್ಕೆ ಕೂಡ ಹೆಚ್ಚಿನ ಸಾಲ ಸೌಲಭ್ಯ ಕೊಟ್ಟಿಲ್ಲ. ಸಬ್‌ಪ್ಲಾನ್‌ನಲ್ಲಿ ನಾಯಕ ಜನಾಂಗಕ್ಕೆ ಬೇಕಾದ ನೀರಿನ ಸೌಕರ್ಯ, ಪಶುಪಾಲನಾ ವ್ಯವಸ್ಥೆ, ಶಾಲೆಗಳನ್ನು ತೆರೆಯುವುದು ಇತ್ಯಾದಿ ವ್ಯವಸ್ಥೆಗಳನ್ನು ಸರ್ಕಾರ ಮಾಡಿಕೊಡಬೇಕು. ಮುನಿಸಿಪಾಲಿಟಿಗಳಲ್ಲಿ, ಕಾರ್ಪೊರೇಷನ್‌ಗಳಲ್ಲಿ ಮತ್ತು ಟಿ. ಡಿ. ಬಿ. ಗಳಲ್ಲಿ ಶೇಕಡ ೧೨ರಷ್ಟು ಹಣ ನಿಜವಾಗಿ ಹರಿಜನಗಿರಿಜನರಿಗೆ ಮುಟ್ಟಿಲ್ಲವೆಂದು ಹೇಳಬಹುದು. ಇದರ ಬಗ್ಗೆ ಮಂತ್ರಿಗಳು ಹೆಚ್ಚಿನ ಗಮನಕೊಟ್ಟು ಹೆಚ್ಚಿನ ಕೆಲಸಗಳನ್ನು ಈ ಜನಾಂಗದ ಸಲುವಾಗಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಅವರಿಗೆ ಇನ್ನೂ ಕೆಲವೊಂದು ವಿಷಯಗಳನ್ನು ಹೇಳಬೇಕಾಗುತ್ತದೆ. ಎನ್. ಆರ್. ಇ. ಪಿ. ಯೋಜನೆಯಲ್ಲಿ ೬೯ ಹಾಸ್ಟೆಲ್ ಬಿಲ್ಡಿಂಗ್ ಕೆಲಸಗಳನ್ನು ತೆಗೆದುಕೊಂಡಿದ್ದೇವೆಂದು ಹೇಳಿದ್ದಾರೆ. ಮತ್ತು ಅದರ ಸಲುವಾಗಿ ೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ಹೇಳಿದ್ದಾರೆ. ಮಾನ್ಯ ರಾಮಕೃಷ್ಣ ಅವರು ಮಾತನಾಡುತ್ತಾ ಕೆಲವು ಅಂಕಿ ಅಂಶಗಳನ್ನು ಕೇಳಿದರು. ಯಾವಯಾವ ಜಾತಿಯ ಜನಸಂಖ್ಯೆ ಎಷ್ಟೆಷ್ಟಿದೆ ಎಂದು ಕೇಳಿದರು. ಶ್ರೀ ವೆಂಕಟಸ್ವಾಮಿ ಆಯೋಗದವರು ಸೋಷಿಯೋ ಎಕನಾಮಿಕ್ ಮತ್ತು ಎಜುಕೇಷನ್ ಸರ್ವೆ ಮಾಡುವ ಕಾರ್ಯಕ್ರಮ ಇಟ್ಟುಕೊಂಡಿದ್ದಾರೆ. ಆ ಪ್ರಕಾರ ಆ ಕಮಿಷನ್ನಿನವರು ಕೆಲಸ ಮಾಡುತ್ತಾರೆ. ಅದರಂತೆ ಯಾವಯಾವ ಕಮ್ಯೂನಿಟಿಯವರಿಗೆ ಸೌಲಭ್ಯ ಒದಗಿಸಿಕೊಡಬೇಕೋ ಅದನ್ನು ಸರ್ವೆ ಮಾಡಿ ಒದಗಿಸಿಕೊಡಲಾಗುತ್ತದೆ. ಇಷ್ಟು ಹೇಳಿ ಕೆಲವೊಂದು ಸೂಚನೆಗಳನ್ನು ಮಂತ್ರಿಗಳ ಗಮನಕ್ಕೆ ತಂದು ಹೆಚ್ಚಿನ ಕಾರ್ಯಕ್ರಮಗಳನ್ನು ಮಾಡಲಿ ಎಂದು ಹೇಳಿ ಈ ಬೇಡಿಕೆಯನ್ನು ಸಮರ್ಥಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಎಸ್. ಮುತ್ತಿನ ಪೆಂಡಿಮಠ್ (ಗದಗ್).—ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ನಗರಾಡಳಿತ ಮಂತ್ರಿಗಳು ಮಂಡಿಸಿರುವ ಬೇಡಿಕೆಗಳನ್ನು ವಿರೋಧಿಸುತ್ತಾ ಎರಡು ಮಾತುಗಳನ್ನು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಗರಸಭೆಗಳು ಈಗ ತೀರಾ ಬಡವಾಗಿ ಆರ್ಥಿಕವಾಗಿ ಹಿಂದುಳಿದಿವೆ. ನಗರಸಭೆಗಳ ಆರ್ಥಿಕ ಸಂಪನ್ಮೂಲವನ್ನು ಬೆಳೆಸಿಕೊಳ್ಳುವ ಬಗ್ಗೆ ಮಾನ್ಯ ಸದಸ್ಯರಾದ ವೈ. ರಾಮಕೃಷ್ಣ ಅವರು ಮತ್ತು ಆಚಾರ್ಯ ಅವರು ಹೇಳಿದಂಥ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಂಡು ಆರ್ಥಿಕ ಪರಿಸ್ಥಿತಿಯನ್ನು ಸುಧಾರಣೆ ಮಾಡಬೇಕೆಂದು ಸೂಚನೆ ಕೊಡುತ್ತೇನೆ. ಸರ್ಕಾರದವರು ನಗರಸಭೆಗಳಿಗೆ ಕೊಡುವ ಆಕ್ಟ್ರಾಯ್ ಗ್ರಾಂಟ್ ತೀರ ಕಡಿಮೆ. ಇದರಿಂದ ನಗರಸಭೆಗಳಿಗೆ ಯಾವ ಕೆಲಸವನ್ನು ಮಾಡಬೇಕೋ ಅದನ್ನು ಮಾಡುವುದಕ್ಕಾಗುತ್ತಿಲ್ಲ. ಆದ್ದರಿಂದ ಈ ಗ್ರಾಂಟನ್ನು ಹೆಚ್ಚು ಮಾಡಬೇಕೆಂದು ಹೇಳುತ್ತೇನೆ. ನಾನು ಮುಖ್ಯವಾಗಿ ಪ್ರಸ್ತಾಪಿಸುವ ವಿಷಯ ಗದಗ್-ಬೆಟಗೇರಿ ಕುಡಿಯುವ ನೀರಿನ ಸಮಸ್ಯೆಯ ವಿಷಯ. ಗದಗ್-ಬೆಟಗೇರಿ ನಗರಸಭೆಯ ಜನಸಂಖ್ಯೆ ೧ ಲಕ್ಷ ೨೦ ಸಾವಿರ ಇದೆ. ಈ ಜನಸಂಖ್ಯೆಗೆ ಅನುಗುಣವಾಗಿ ಪ್ರೊಟೆಕ್ಟೆಡ್ ವಾಟರ್ ಸಪ್ಲೈ ಸ್ಕೀಮ್ ಇಲ್ಲದೇ ಇರುವುದು ವಿಷಾದನೀಯವಾದುದು. ಇಡೀ ರಾಷ್ಟ್ರದಲ್ಲಿಯೇ ಕುಡಿಯುವ ನೀರಿನ ಸೌಕರ್ಯವಿಲ್ಲದ ದೊಡ್ಡ ನಗರ ಇದು ಎಂದರೆ ತಪ್ಪಾಗಲಾರದು. ೧೯೬೫ನೇ ಇಸವಿಯಲ್ಲಿ ಮಲಪ್ರಭ ಯೋಜನೆಯನ್ನು ಅಂದಿನ ಸರ್ಕಾರ ಕೈಗೊಂಡಿತು. ಆದರೆ ೧೯೭೮ನೇ ಇಸವಿಯಲ್ಲಿ ಆಗಿನ ಸರ್ಕಾರ ಪ್ರಭಾವಿ ಮಂತ್ರಿಗಳ ಪ್ರಭಾವಕ್ಕೆ ಒಳಪಟ್ಟು ಈ ಯೋಜನೆಯನ್ನು ಕೈ ಬಿಟ್ಟಿದ್ದರಿಂದ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದೆ ಅಲ್ಲಿನ ಜನರು ಕಷ್ಟಪಡುವ ಸ್ಥಿತಿ ಬಂದಿದೆ. ಮುಂದೆ ತುಂಗಭದ್ರ ಯೋಜನೆಯನ್ನು ತೆಗೆದುಕೊಳ್ಳಬೇಕೆಂದು ಮಾಡಿದರು. ಮಲಪ್ರಭ ಯೋಜನೆಗೆ ಖರ್ಚು ಮಾಡಿದ ಹಣಕ್ಕೆ ಎಲ್. ಐ. ಸಿ. ಯವರಿಗೆ ಬಡ್ಡಿ ರೂಪದಲ್ಲಿ ಅದನ್ನು ವಾಪಸ್ ಕೊಡಬೇಕಾಗಿದೆ. ಇದರ ಜವಾಬ್ದಾರಿ ಗದಗ್-ಬೆಟಗೇರಿ ಜನತೆಯ ಮೇಲೆ ಬಿದ್ದಿದೆ. ಸರ್ಕಾರ ಮಾಡಿದ ತಪ್ಪಿಗೆ ಗದಗ್-ಬೆಟಗೇರಿಯ ಜನತೆ ಯಾವರೀತಿ ಜವಾಬ್ದಾರಿಯಾಗುತ್ತಾರೆ. ಆದ್ದರಿಂದ ಎಲ್. ಐ. ಸಿ. ಯಿಂದ ಈ ಯೋಜನೆಗೆ ತಂದ ಹಣವನ್ನು

ಸರ್ಕಾರದವರೇ ವಹಿಸಿಕೊಳ್ಳಬೇಕು. ೧೯೬೫ನೇ ಇಸವಿಯಲ್ಲಿ ತೆಗೆದುಕೊಂಡ ಮಲಪ್ರಭ ಯೋಜನೆಯನ್ನು ಕೈಬಿಟ್ಟು ೧೯೬೪ರಲ್ಲಿ ತೆಗೆದುಕೊಂಡ ತುಂಗಭದ್ರ ಯೋಜನೆಯನ್ನು ಸರ್ಕಾರ ಕೈಗೊಂಡಿದೆ. ತುಂಗಭದ್ರ ಯೋಜನೆಯಲ್ಲಿ ೬೦-೭೦ ಲಕ್ಷ ರೂಪಾಯಿಗಳು ಖರ್ಚು ಆಗಿದ್ದು ಕೆಲಸ ಸ್ಥಗಿತವಾಗಿದೆ. ೧೯೬೨ನೆಯ ಇಸವಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆಂದು ಒತ್ತಾಯಿಸಿ ಗದಗ್-ಬೆಟಗೇರಿಯಲ್ಲಿ ಉಪವಾಸ ಸತ್ಯಾಗ್ರಹವನ್ನು ಸಹ ಮಾಡಿದ್ದರು. ಆಗ ಇದ್ದ ನಮ್ಮ ಸರ್ಕಾರ ಹಣ ಒದಗಿಸುತ್ತೇವೆ ಎಂದು ಹೇಳಿ ಅಧಿಕಾರಿಗಳನ್ನು ಕರೆದು ಕೂಲಂಕಷವಾಗಿ ಚರ್ಚೆ ಮಾಡಿ ಬಳ್ಳಾರಿ, ಗದಗ್, ಬೆಟಗೇರಿ ನಗರಕ್ಕೆ ನೀರು ಪೂರೈಕೆ ಮಾಡುವ ಕೆಲಸ ತೆಗೆದುಕೊಳ್ಳಲು ನಿರ್ಧರಿಸಿ ಪ್ರತಿವರ್ಷ ಅದಕ್ಕೆ ಒಂದು ಕೋಟಿ ರೂಪಾಯಿಗಳನ್ನು ಕೊಡುವುದಾಗಿ ಆಶ್ವಾಸನೆ ಕೊಟ್ಟಿತ್ತು. ಆ ಬಗ್ಗೆ ಪತ್ರಿಕಾ ಹೇಳಿಕೆಯನ್ನು ಕೊಟ್ಟಿರಲ್ಲದೆ ಆಲ್ ಇಂಡಿಯಾ ರೇಡಿಯೋದಲ್ಲಿಯೂ ಅದನ್ನು ಬಿತ್ತರಿಸಿದರು. ಆದರೆ ಒಂದು ನಯಾಪೈಸೆ ಹಣವನ್ನೂ ಈ ಯೋಜನೆಗೆ ಕೊಟ್ಟಿಲ್ಲದಿರುವುದು ವಿಷಾದನೀಯ. ಈ ಸರ್ಕಾರ ನಡೆಸುತ್ತಿರುವ ಪಕ್ಷದವರು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಕೂಡ ಗದಗ್-ಬೆಟಗೇರಿ ನಾಗರೀಕರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದಾರೆ ಆದರೆ ಇವರೂ ಇವತ್ತಿನವರೆಗೆ ಒಂದು ನಯಾಪೈಸೆ ಕೂಡ ತುಂಗಭದ್ರ ಯೋಜನೆಗೆ ಕೊಟ್ಟಿಲ್ಲದಿರುವುದು ವಿಷಾದಕರವಾದುದು. ಮಾನ್ಯ ಮಂತ್ರಿಗಳಾದ ಚಂದ್ರಶೇಖರ್ ಅವರು ಈ ಬಗ್ಗೆ ಪ್ರಯತ್ನ ಮಾಡುತ್ತಿದ್ದರೂ ನನ್ನ ಕೈಯಲ್ಲಿ ಏನೂ ಮಾಡುವುದಕ್ಕಾಗುತ್ತಿಲ್ಲ ಎಂದು ತಮ್ಮ ಅಸಹಾಯಕತೆಯನ್ನು ವ್ಯಕ್ತ ಪಡಿಸುತ್ತಿದ್ದಾರೆ. ಜವಾಬ್ದಾರಿ ಖಾತೆಯನ್ನು ಹೊತ್ತ ಮಂತ್ರಿಗಳು ಗದಗ್-ಬೆಟಗೇರಿ ನಗರಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವ ಜವಾಬ್ದಾರಿಯನ್ನೂ ಹೊತ್ತು ಕೊಳ್ಳಬೇಕು. ಈ ದಿಸೆಯಲ್ಲಿ ಕಾರ್ಯಕ್ರಮ ಹಾಕಿಕೊಳ್ಳಬೇಕು. ಈ ಬಜೆಟ್ ಅಧಿವೇಶನ ಮುಗಿಯುವುದರೊಳಗಾಗಿ ಕುಡಿಯುವ ನೀರಿನ ಯೋಜನೆಗೆ ಒಂದು ಕೋಟಿ ರೂಪಾಯಿಗಳ ಹಣವನ್ನು ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಆಚಾರ್ಯ.—ಸನ್ಮಾನ್ಯ ಅಧ್ಯಕ್ಷರೆ, ಇದೇರೀತಿ ೫ ಸ್ಕೀಮ್‌ಗಳ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಸಿದಂಥ ಮುಂಗಡಪತ್ರದಲ್ಲಿ ಕಾಣಿಸಿದ್ದಾರೆ. ಆದರೆ ಪರ್‌ಫಾರ್ಮೆನ್ಸ್ ಬಜೆಟ್‌ನಲ್ಲಿ ಈ ಬಗ್ಗೆ ಏನೂ ಹೇಳಿಲ್ಲ. ಬೈಲ್ಯಾಟರಲ್ ಅಸಿಸ್ಟೆನ್ಸ್‌ಗೆ ಕೇಂದ್ರಸರ್ಕಾರಕ್ಕೆ ಕಳುಹಿಸಿದ್ದೇವೆ ಎಂದು ಆಯವ್ಯಯಪತ್ರದಲ್ಲಿ ಹೇಳಿ ಕೇಂದ್ರದಿಂದ ಬರುವವರೆಗೆ ಕಾಯುವುದಿಲ್ಲ, ನಾವು ಬೇರೆ ವ್ಯವಸ್ಥೆ ಮಾಡುತ್ತೇವೆ ಎಂಬ ವಾಕ್ಯವನ್ನೂ ಹೇಳಿದ್ದಾರೆ. ಆದರೆ ಪರ್‌ಫಾರ್ಮೆನ್ಸ್ ಬಜೆಟ್‌ನಲ್ಲಿ ಹುಡುಕಿದರೆ ಅದಕ್ಕೆ ಹಣ ಕಾಣುತ್ತಿಲ್ಲ. ಆದ್ದರಿಂದ ಮಂತ್ತಿನಪೆಂಡಿಮಠ್ ಅವರು ಏನು ಕೇಳಿದ್ದಾರೆ ಅದಕ್ಕೆ ಕನಿಷ್ಠ ಒಂದು ಕೋಟಿ ರೂಪಾಯಿಗಳನ್ನು ಕೊಡಬೇಕು. ಅದೇರೀತಿ ಎಲ್ಲಾ ೫ ಯೋಜನೆಗಳಿಗೂ ಒಂದೊಂದು ಕೋಟಿ ರೂಪಾಯಿಗಳನ್ನು ಪ್ರತ್ಯೇಕವಾಗಿ ಇಟ್ಟು ಕೆಲಸವನ್ನು ಭರದಿಂದ ಮಾಡಬೇಕು. ಕೇಂದ್ರದಿಂದ ದುಡ್ಡು ಯಾವಕಾಲ್ಪದರೂ ಬರಲಿ. ನಂತರ ಅದನ್ನು ಅಡ್ಜಸ್ಟ್ ಮಾಡಬಹುದು.

ಶ್ರೀ ಸಿ. ಎಸ್. ಮಂತ್ತಿನಪೆಂಡಿಮಠ್.—ಮಾನ್ಯ ಮಂತ್ರಿಗಳು ಈ ಯೋಜನೆಯನ್ನು ಕರ್ನಾಟಕ ವಾಟರ್‌ಸಪ್ಲೈ ಬೋರ್ಡಿನ ವ್ಯಾಪ್ತಿಗೆ ಕೊಡುತ್ತೇವೆಂದು ಹೇಳಿದ್ದರೂ ೧೯೭೪-೭೫ರ ಪರ್‌ಫಾರ್ಮೆನ್ಸ್ ಬಜೆಟ್‌ನಲ್ಲಿ ಏನೂ ಹೇಳಿಲ್ಲ. ಆದ್ದರಿಂದ ಇದರ ಬಗ್ಗೆ ತೀವ್ರ ಕ್ರಮ ಕೈಗೊಳ್ಳಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಸ್ಲಂ ಕ್ಲಿಯರೆನ್ಸ್ ಬಗ್ಗೆ ಹೇಳಬೇಕೆಂದರೆ ನಮ್ಮಲ್ಲಿ ೧೨-೧೩ ಸ್ಲಂಗಳನ್ನು ಸೆಕ್ಷನ್ ೩ರ ಕೆಳಗೆ ಡಿಕ್ಲೇರ್ ಮಾಡಿದ್ದಾರೆ. ಆದರೆ ಅಲ್ಲಿ ಪ್ರಗತಿಪರವಾದ ಯಾವ ಕಾರ್ಯಕ್ರಮವನ್ನೂ ಹಾಕಿಕೊಂಡಿಲ್ಲ. ಅದಕ್ಕೆ ತಾಂತ್ರಿಕ ತೊಂದರೆಗಳಿವೆ ಎಂದು ಹೇಳುತ್ತಿದ್ದಾರೆ. ಸೆಕ್ಷನ್ ೧೧ರ ಪ್ರಕಾರ ಅದನ್ನು ಸರ್ಕಾರದವರು ಡಿಕ್ಲೇರ್ ಮಾಡಬೇಕಂತೆ. ನಂತರ ಅವರು ಕಾರ್ಯಕ್ರಮ ಹಾಕುತ್ತಾರೆ. ಆದ್ದರಿಂದ ಸದನದ ಮೂಲಕ ಸರ್ಕಾರವನ್ನು ಕೇಳುತ್ತಿದ್ದೇನೆ ಸೆಕ್ಷನ್ ೧೧ರ ಪ್ರಕಾರ ಡಿಕ್ಲೇರ್ ಮಾಡಿ ಸ್ಲಂ ಬೋರ್ಡಿಗೆ ಕೆಲಸ ಮಾಡಲು ಅಧಿಕಾರ ಕೊಡಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಸಮಾಜ ಕಲ್ಯಾಣ ಮಂತ್ರಿಗಳಿಗೆ ಸಂಬಂಧ ಪಟ್ಟಂತೆ ಒಂದೇ ಒಂದು ವಿಚಾರ ಹೇಳುತ್ತೇನೆ. ಗದಗ್-ಬೆಟಗೇರಿ ನಗರದ ಜನತೆ ಡೊನೇಷನ್ ಕೊಟ್ಟು ಎರಡು ಲಕ್ಷ ರೂಪಾಯಿಗಳ ಖರ್ಚು ಮಾಡಿ ರಿಮ್ಯಾಂಡ್ ಹೋಂ ಬಿಲ್ಡಿಂಗ್ ಕಟ್ಟಿಸಿದ್ದಾರೆ. ಆದರೆ ರಿಮ್ಯಾಂಡ್ ಹೋಂ ಅಬಾಲಿಷ್ ಆದನಂತರ ಅದನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡು ಸದುಪಯೋಗ ಮಾಡಿಕೊಳ್ಳದೆ ಕೇವಲ ಹುಲಕೋಟಿ ಎಜುಕೇಷನ್ ಸೊಸೈಟಿಗೆ ಕಡಿಮೆ ಬಾಡಿಗೆಯಲ್ಲಿ ಕೊಟ್ಟಿದ್ದಾರೆ. ಅದನ್ನು ವಾಪಸ್ ತೆಗೆದುಕೊಳ್ಳುತ್ತೇವೆಂದು ಹೇಳಿದರೂ ಇವತ್ತಿನವರೆಗೆ ಅದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಆದ್ದರಿಂದ ರಿಮ್ಯಾಂಡ್ ಹೋಂ

ಕಟ್ಟಡವನ್ನು ಹುಲಕೋಟಿ ಎಜುಕೇಷನ್ ಸೊಸೈಟಿಯುವರಿಂದ ಬಿಡಿಸಿಕೊಂಡು ಸರ್ಕಾರದವರು ಯಾವುದೇ ರೂಪದಲ್ಲಿ ಉಪಯೋಗ ಮಾಡಿಕೊಳ್ಳಬೇಕೆಂದು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಚೇರ್ಮನ್.—ತಿಮ್ಮೇಗೌಡರೆ, ಮಾತನಾಡಿ.

ಶ್ರೀ ಎಂ. ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ನಾನು ಕಳಕಳಿಯಿಂದ ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ನಾವು ವಿಪ್ ಆಗಿ ಸದಸ್ಯರ ಹೆಸರನ್ನು ಲಿಸ್ಟ್ ಮಾಡಿ ಕಳುಹಿಸುತ್ತೇವೆ. ಆದರೆ ತಾವು ಆ ಪ್ರಕಾರ ಮಾತನಾಡಲು ಅವಕಾಶ ಕೊಡದೇ ಹೋದರೆ ನಮ್ಮ ಸದಸ್ಯರಿಗೆ ಏನು ಭಾವನೆ ಬರುತ್ತದೆ? ದಯಮಾಡಿ ತಾವು ಇದನ್ನು ಗಮನಿಸಬೇಕು. ಯಾರಿಗೂ ಮಾತನಾಡುವುದಕ್ಕೆ ಅವಕಾಶ ಕೊಡದೇ ಹೋದರೆ ನಾವು ಇಲ್ಲಿ ಏತಕ್ಕೆ ಕುಳಿತುಕೊಳ್ಳಬೇಕು ? ತಾವು ಇದನ್ನು ಗಮನಿಸಿ ನಮಗೆ ಅವಕಾಶ ಕೊಡದೇಹೋದರೆ ನಾವು ಹೊರಗೆ ಹೋಗಬೇಕಾಗುತ್ತದೆ.

ಚೇರ್ಮನ್.—ತಮ್ಮ ಪಕ್ಷದ ಒಬ್ಬ ಸದಸ್ಯರು ೧೨೦ ನಿಮಿಷ ಕಾಲ ತೆಗೆದುಕೊಂಡಿದ್ದಾರೆ.

ಶ್ರೀ ಎಂ. ಎಸ್. ಪಾಟೀಲ್.—ನಮಗೆ ಅವಕಾಶ ಕೊಡದಿದ್ದರೆ ನಮಗೇನು ಕೆಲಸ ಇದೆ ?

ಶ್ರೀ ಎಂ. ಮಹದೇವ್.—ಮೊದಲಿನಿಂದಲೂ ನಮ್ಮನ್ನು ಓವರ್‌ಲುಕ್ ಮಾಡಿದ್ದಾರೆ.

ಶ್ರೀ ಎನ್. ಜಿ. ನಾಯಕ್.—ವಿರೋಧಪಕ್ಷದವರಿಗೆ ಮೊದಲು ಅವಕಾಶ ಮಾಡಿಕೊಡಬೇಕು. ನಮಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ ನೀವು ಸುಖವಾಗಿರುವವರು.

ಚೇರ್ಮನ್.—ಎಲ್ಲರೂ ಮಾತನಾಡಬೇಕಾಗಿದ್ದರೆ ಟೈಮ್ ಅಡ್ಜಸ್ಟ್ ಮಾಡಿಕೊಳ್ಳಬೇಕು. ಪ್ರತಿಯೊಂದು ಪಕ್ಷಕ್ಕೂ ಕಾಲ ನಿಗದಿ ಮಾಡಿದೆ.

ಶ್ರೀ ಎನ್. ಜಿ. ನಾಯಕ್.—ನಾವು ಮಾತನಾಡಬೇಕು.

ಶ್ರೀ ಎಂ. ಮಹದೇವ್.—ನಮಗೂ ಅವಕಾಶ ಕೊಡಿ.

ಚೇರ್ಮನ್.—ಟೈಮ್ ಕಂಟ್ರೋಲ್ ಮಾಡಬೇಕಾದುದು ಎಲ್ಲರ ಕರ್ತವ್ಯ. ಪ್ರತಿಪಕ್ಷದವರಿಗೂ ಟೈಮ್ ಕೊಟ್ಟಿದೆ. ನೀವು ಕಂಟ್ರೋಲ್ ಮಾಡಿಕೊಳ್ಳಬೇಕು. ೧೩೪ ನಿಮಿಷ ಜನತಾ ಪಕ್ಷಕ್ಕೆ ಕೊಟ್ಟಿದೆ. ಅವರು ೨೫ ನಿಮಿಷ ತೆಗೆದುಕೊಂಡಿದ್ದಾರೆ, ತಮ್ಮ ಪಕ್ಷದಲ್ಲಿ ಒಬ್ಬರೇ ಸ್ಪೀಕರ್ ೧೨೦ ನಿಮಿಷ ತೆಗೆದುಕೊಂಡಿದ್ದಾರೆ. ನಿಮ್ಮ ಸಮಯವನ್ನು ಹೇಗೆ ಹಂಚಿಕೊಳ್ಳಬೇಕು ಎಂಬ ಬಗ್ಗೆ ನೀವೇ ತೀರ್ಮಾನ ಮಾಡಿಕೊಳ್ಳಬೇಕು.

ಶ್ರೀ ಎಂ. ಎಸ್. ಪಾಟೀಲ್.—ಇದು ಸಾಮಾನ್ಯ ಜನರಿಗೆ ಸಂಬಂಧಪಟ್ಟಬೇಡಿಕೆ.

ಶ್ರೀ ಎನ್. ಜಿ. ನಾಯಕ್.—ನಮ್ಮ ಕಡೆ ೧೨೦ ನಿಮಿಷ ಒಬ್ಬರೇ ಮಾತನಾಡಿದ್ದಾರೆ ಎಂದರೆ ಅದು ಅಧ್ಯಕ್ಷರ ತಪ್ಪು. ನಮ್ಮದೇನು ತಪ್ಪು ?

ಶ್ರೀ ಜಿ. ಡಿ. ಸೋಮಪ್ಪ. ಬೇಡಿಕೆಗಳು ಒಂದೊಂದೇ ದಿನದಲ್ಲಿ ಮುಗಿಯಬೇಕು, ಅದಕ್ಕೆ ಸಹಕಾರ ಕೊಡಬೇಕು ಎಂದು ಹೇಳುತ್ತೀರಿ.

ಚೇರ್ಮನ್.—ಇದನ್ನು ನಾವು ನೀವು ಮಾಡಿಲ್ಲ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನಿಮ್ಮ ನಾಯಕರೂ ಸೇರಿ ಇದನ್ನು ತೀರ್ಮಾನ ಮಾಡಿದ್ದಾರೆ. ನಿಮ್ಮ ನಾಯಕರನ್ನು ಕೇಳಿ.

ಶ್ರೀ ಜಿ. ಡಿ. ಸೋಮಪ್ಪ.—೧೬ನೇ ತಾರೀಖಿನೊಳಗೆ ಎಲ್ಲಾ ಬೇಡಿಕೆಗಳೂ ಮುಗಿಯಬೇಕು ಎಂದು ಹೇಳುತ್ತಿದ್ದಾರೆ.

ಶ್ರೀ ಗಚ್ಚಿನಮಠ್ ಚಂದ್ರಶೇಖರ್.—ನಮ್ಮವರು ೧೫ ನಿಮಿಷ ಮಾತನಾಡಿದ್ದಾರೆ. ೨ ಗಂಟೆಗೆ ಚರ್ಚೆ ಮುಗಿಯಬೇಕು ಎಂದು ಹೇಳುತ್ತೀರಿ. ಈಗಾಗಲೇ ೧-೨೦ ಆಗಿದೆ. ನಮಗೆ ಯಾವಾಗ ಅವಕಾಶ ಸಿಗುತ್ತದೆ ?

ಶ್ರೀ ವಿ. ಎಸ್. ಆಚಾರ್ಯ.—ಇನಿಷಿಯೇಟ್ ಮಾಡುವವರು ಎಲ್ಲಾ ಸಮಯವನ್ನು ಉಪಯೋಗ ಮಾಡುತ್ತಾರೆ. ಅವರು ಮೂರು ಮೂರು ದಿವಸ ಐದೈದು ದಿವಸ ತೆಗೆದುಕೊಂಡರೆ ನಮಗೆ ಅವಕಾಶ ಎಲ್ಲಿದೆ ?

ಶ್ರೀ ವೈ. ರಾಮಕೃಷ್ಣ.—ತಪ್ಪೆಲ್ಲಾ ಸರ್ಕಾರ ಮಾಡಿದ್ದುದು. ನಾವು ಇಲ್ಲಿ ಸಮ್ಮಾನ ಕುಳಿತು ಕೊಳ್ಳುವುದಕ್ಕಲ್ಲ ಬರುವುದು. ನಮಗೆ ಮತ ಕೊಟ್ಟಿರುವ ಜನರ ಕಷ್ಟವನ್ನು ಇಲ್ಲಿ ನಾವು ನಿವೇದಿಸಿ ಕೊಳ್ಳಬೇಕಾಗುತ್ತದೆ. ಇವೊತ್ತು ಚರ್ಚೆಯನ್ನು ೧ ಗಂಟೆ ಎಕ್ಸ್‌ಟೆಂಡ್ ಮಾಡಿ ಎಲ್ಲರಿಗೂ ೧೦-೧೦ ನಿಮಿಷ ಅವಕಾಶ ಮಾಡಿಕೊಡಿ. ಇದು ಬಹಳ ಪ್ರಾಮುಖ್ಯವಾದ ಡಿಮ್ಯಾಂಡ್ ಇದೆ.

ಛೇರ್ಮನ್.—ಈ ದಿನ ೧-೩೦ಕ್ಕೆ ಚರ್ಚೆ ಮುಕ್ತಾಯವಾಗಬೇಕಾಗಿದೆ. ಈ ಬಗ್ಗೆ ಬಿ.ಎ.ಸಿ.ನಲ್ಲಿ ತೀರ್ಮಾನವಾಗಿದೆ.

ಶ್ರೀ ಜೆ. ಡಿ. ಸೋಮಪ್ಪ.—ಬಿಸ್‌ನೆಸ್ ಅಡ್ವೈಸರಿ ಕಮಿಟಿಗಿಂತಲೂ ಈ ಹೌಸ್ ಸುಪ್ರೀಮ್.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಈ ಬೇಡಿಕೆಯ ಮೇಲೆ ಮಾತನಾಡಲು ನನಗೆ ಅವಕಾಶ ಮಾಡಿಕೊಡಿ.

ಛೇರ್ಮನ್.—ತಾವೂ ಕೂಡಾ ಹಿಂದೆ ಮಂತ್ರಿಗಳಾಗಿದ್ದವರು. ಈ ದಿನ ೧-೩೦ಕ್ಕೆ ಚರ್ಚೆ ಮುಕ್ತಾಯವಾಗಬೇಕಾಗಿದೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ತಾವು ನಿಗದಿ ಮಾಡಿದ ಕಾಲಕ್ಕೆ ನಾವು ಎಲ್ಲಾ ಬೇಡಿಕೆಗಳನ್ನು ಪಾಸ್ ಮಾಡಿಕೊಡುವುದರಲ್ಲಿ ಅಭ್ಯಂತರ ಇಲ್ಲ. ನಮಗೆ ಇರುವ ತೊಂದರೆ ಏನೆಂದರೆ, ನಾವು ಇಲ್ಲಿ ಬಹಳ ವಿಚಾರಗಳನ್ನು ಹೇಳಬೇಕೆಂದು ಬಂದಿರುತ್ತೇವೆ. ಅವನ್ನು ಪ್ರಸ್ತಾಪ ಮಾಡಬೇಕಾಗುತ್ತದೆ. ಈಗ ನಾನು ಈ ಬಗ್ಗೆ ಒಂದು ಸಲಹೆ ಮಾಡುವುದು ಏನೆಂದರೆ, ಈಗ ಎಲ್ಲಾ ಡಿಮ್ಯಾಂಡ್‌ಗಳೂ ಪಾಸ್ ಆದ ಮೇಲೆ ನಂತರ ಒಂದೊಂದೇ ಇಲಾಖೆಗಳ ಮೇಲೆ ನಿಧಾನವಾಗಿ ಚರ್ಚೆ ಮಾಡೋಣ. ಆಗ ನಾವು ಎಲ್ಲಾ ಇಲಾಖೆಗಳ ಮೇಲೆ ಚರ್ಚೆ ಮಾಡಬಹುದು. ಈಗ ಒಂದೇ ದಿನ ನಾಲ್ಕಾರು ಡಿಮಾಂಡ್‌ಗಳು ಪಾಸ್ ಆಗಬೇಕು ಎಂದರೆ ಹೇಗೆ ?

ಶ್ರೀ ಚಂದ್ರಶೇಖರ ಗಚ್ಚಿನಮಠ್.—ನಾನೂ ಸಹಾ ಈ ಬೇಡಿಕೆಯ ಬಗ್ಗೆ ಚರ್ಚೆ ಮಾಡಬೇಕಾಗಿದೆ ಅವಕಾಶ ಕಲ್ಪಿಸಿಕೊಡಿ.

ಶ್ರೀ ಜೆ. ಡಿ. ಸೋಮಪ್ಪ.—ಹೀಗೆ ಹೇಳುವುದಾದರೆ ನಾವು ಇಲ್ಲಿ ಬಂದು ಏಕೆ ಚರ್ಚೆಮಾಡಬೇಕು. ಹೇಗಿದ್ದರೂ ಇಲಾಖೆಗಳ ಬಗ್ಗೆ ರೂಮ್‌ಗೆ ಪುಸ್ತಕಗಳನ್ನು ಕಳುಹಿಸಿಕೊಟ್ಟಿರುತ್ತೀರಿ. ಅವನ್ನು ನಾವು ಅಲ್ಲೇ ಓದಿಕೊಂಡರೆ ಆಯಿತು.

ಛೇರ್ಮನ್.—ತಾವು ಹಿರಿಯ ಶಾಸಕರಿದ್ದೀರಿ. ತಾವು ಈ ರೀತಿ ಮಾತನಾಡಿದರೆ ಹೇಗೆ ?

ಶ್ರೀ ಜೆ. ಡಿ. ಸೋಮಪ್ಪ.—ಹಿರಿಯರು ಕಿರಿಯರು ಇಲ್ಲಿ ಯಾರೂ ಇಲ್ಲ ಸ್ವಾಮಿ. ಎಲ್ಲಾ ಒಂದೇ.

ಶ್ರೀ ಚಂದ್ರಶೇಖರ ಗಚ್ಚಿನಮಠ್.—ಇವೊತ್ತು ನನಗೂ ಮಾತನಾಡಲು ಅವಕಾಶ ಮಾಡಿಕೊಡಿ ಸ್ವಾಮಿ.

ಛೇರ್ಮನ್.—ಆಗಬಹುದು.

ಡಾ. ಎಚ್. ಎಲ್. ತಿಮ್ಮೇಗೌಡ (ಬಸವನಗುಡಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಏನು ಬೇಡಿಕೆಗಳನ್ನು ಮಂಡಿಸಿದ್ದಾರೆ ಅವುಗಳಲ್ಲಿ ನಾನು ನಗರಾಭಿವೃದ್ಧಿ ವಿಚಾರವಾಗಿ ಒಂದೆರಡು ಸಲಹೆಗಳನ್ನು ಮಾತ್ರ ಕೊಟ್ಟು ನನ್ನ ಭಾಷಣವನ್ನು ಮುಗಿಸುತ್ತೇನೆ. ಈ ಬೆಂಗಳೂರು ನಗರವನ್ನು ಮೆಟ್ರೋಪಾಲಿಟನ್ ಬೋರ್ಡ್ ಮಾಡಬೇಕೆಂದು ಹಿಂದಿನ ಸರ್ಕಾರ ತೀರ್ಮಾನ ಮಾಡಿತ್ತು, ಆದರೆ ಅದು ಕಾರ್ಯಗತವಾಗಲಿಲ್ಲ ಆದ್ದರಿಂದ ಈ ನಗರವನ್ನು ಮೆಟ್ರೋಪಾಲಿಟನ್ ಬೋರ್ಡ್ ಮಾಡಿ ವಿಶ್ವಬ್ಯಾಂಕಿನಿಂದ ಏನೇನು ಸೌಲಭ್ಯಗಳು ಬರುತ್ತವೆ ಅವುಗಳನ್ನು ತೆಗೆದುಕೊಂಡು ಅಭಿವೃದ್ಧಿ ಮಾಡ ಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಹಿಂದಿನ ದಶಕಗಳಿಗೆ ಹೋಲಿಸಿ ನೋಡಿದರೆ ಬೆಂಗಳೂರು ನಗರದಲ್ಲಿ ಇತ್ತೀಚೆಗೆ ಜನಸಂಖ್ಯೆ ಜಾಸ್ತಿಯಾಗುತ್ತಿದೆ. ಇದನ್ನು ಗಮನದಲ್ಲಿ ಇಟ್ಟುಕೊಂಡು ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೋ ಅದನ್ನೆಲ್ಲಾ ಹಾಕಿಕೊಳ್ಳಬೇಕಾಗಿದೆ. ಬೆಂಗಳೂರು ನಗರಕ್ಕೆ ವಾಹನ ತೆರಿಗೆಯಿಂದ ಕೇವಲ ೪-೫ ಲಕ್ಷ ರೂಪಾಯಿಗಳ ಕಾಂಪೆನ್‌ಸೇಷನ್ ಬರುತ್ತಿದೆ. ಹಾಗೂ ರಾಜ್ಯದ ಇತರ ಎಲ್ಲಾ ಪುರಸಭೆಗಳಿಗೂ ಕೇವಲ ೧೫ ಲಕ್ಷ ರೂಪಾಯಿಗಳು ಸಿಗುತ್ತಿದೆ. ಇವೊತ್ತು ಏನು

ಈ ಬಾಬಿನಿಂದ ಕನಿಷ್ಟ ೮೨ ಕೋಟಿ ರೂಪಾಯಿಗಳ ವರಮಾನ ಬರುತ್ತಿದೆ ಅದರ ೨೦ ಪರ್ಸೆಂಟ್‌ನಷ್ಟಾದರೂ ಪಾಲನ್ನು ನಗರಸಭೆಗಳಿಗೆ ನಗರಪಾಲಿಕೆಗಳಿಗೆ ಕೊಟ್ಟರೆ ಈ ನಗರಗಳನ್ನು ಅಭಿವೃದ್ಧಿ ಪಡಿಸಬಹುದು. ಹಾಗೂ ಬೆಂಗಳೂರು ನಗರಕ್ಕೂ ಇದರಿಂದ ೬-೭ ಲಕ್ಷ ರೂಪಾಯಿಗಳು ಬರಬಹುದು. ಮಾನ್ಯ ಚಂದ್ರಶೇಖರ್ ಅವರೂ ಸಹ ಬೆಂಗಳೂರು ನಗರದಿಂದ ಚುನಾಯಿತರಾಗಿದ್ದಾರೆ. ಬೆಂಗಳೂರು ನಗರದಲ್ಲಿ ರೆವಿನ್ಯೂ ಸೈಟ್ ಮಾಲೀಕರು ಸುಮಾರು ೫೦ ಸಾವಿರ ಜನ ಇದ್ದಾರೆ. ಇವರೆಲ್ಲರಿಗೂ ಇವೊತ್ತು ಪೌರಸೌಲಭ್ಯಗಳನ್ನು ಒದಗಿಸಿಕೊಡಬೇಕಾಗಿದೆ. ಈ ಬಗ್ಗೆ ಅವರಿಂದ ಸರಿಯಾದ ರೀತಿಯಲ್ಲಿ ಡೆವಲಪ್‌ಮೆಂಟಲ್ ಛಾರ್ಜಸ್‌ನ್ನು ಕಲೆಕ್ಟ್ ಮಾಡಿದರೆ ಸುಮಾರು ೨೦ ಕೋಟಿ ರೂಪಾಯಿಗಳು ಬರುತ್ತದೆ. ಈ ಒಂದು ಹಣವನ್ನು ಅವರಿಂದ ಕಲೆಕ್ಟ್ ಮಾಡಿ ಅವರಿಗೆ ನೀರು, ಒಳಚರಂಡಿ ವ್ಯವಸ್ಥೆ ಮಾಡಿಕೊಡಬೇಕು. ಅವರಿಂದ ಇವೊತ್ತು ಹಣ ಬಂದಿಲ್ಲವೆಂದರೆ ಅವರಿಗೆ ಸರಿಯಾಗಿ ನೋಟೀಸ್ ಕೊಟ್ಟು ಹಣವನ್ನು ಪಡೆದಿರುವುದಿಲ್ಲ. ಇನ್ನು ೨-೩ ವರ್ಷಗಳಲ್ಲಿಯಾದರೂ ಈ ಬಗ್ಗೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಬಿ.ಡಿ.ಎ.ನಲ್ಲಿ ಇವೊತ್ತು ಹೆಚ್ಚು ಕೆಲಸಗಳು ಆಗಬೇಕೆಂದು ಹೇಳುತ್ತೇನೆ. ಇನ್ನು ಮಾನ್ಯ ರಾಮಕೃಷ್ಣ ಅವರು ಹರಿಜನ ಗಿರಿಜನರಿಗೆ ಎಷ್ಟು ಸೌಕರ್ಯ ಸಿಗಬೇಕೋ ಅಷ್ಟು ಸೌಕರ್ಯ ಸಿಕ್ಕಿಲ್ಲ ಎಂದು ಹೇಳಿದರು. ಈ ಬಗ್ಗೆ ನಾನು ವಿರೋಧ ಪಕ್ಷದಲ್ಲಿ ಇದ್ದಾಗ ಒಂದು ಸಲಹೆ ಮಾಡಿದ್ದೆ. ಇವೊತ್ತು ಏನು ಇವರಿಗೆ ೧೮ ಪರ್ಸೆಂಟ್ ರಿಸರ್ವೇಷನ್ ಮಾಡಿದ್ದಾರೆ ಅದು ಕೆಲಸ ಕೊಡುವ ವಿಚಾರದಲ್ಲಿ ಆಗಿರಬಹುದು, ಭಡ್ತಿ ಕೊಡುವ ವಿಚಾರದಲ್ಲಿ ಆಗಿರಬಹುದು ಅಥವಾ ಟೆಕ್ನಿಕಲ್ ಕಾಲೇಜಿನಲ್ಲಿ ರಿಸರ್ವೇಷನ್ ಕೊಡುವ ವಿಚಾರದಲ್ಲಿ ಆಗಿರಬಹುದು, ಇದನ್ನೆಲ್ಲಾ ಯಾರಿಗೆ ಕೊಡಬೇಕು ? ನನ್ನ ಸಲಹೆ ಏನೆಂದರೆ ಯಾರು ಹೆಚ್ಚಿನ ವರಮಾನವನ್ನು ಪಡೆಯುತ್ತಿದ್ದಾರೆ ಅಂತಹವರ ಮಕ್ಕಳಿಗೆ ಈ ಸೌಲಭ್ಯ ಸಿಗದೆ, ಯಾರು ಕಡುಬಡವರು ಇದ್ದಾರೆ ಅಂತಹವರ ಮಕ್ಕಳಿಗೆ ಅನುಕೂಲ ಆಗಬೇಕು ಎಂದಾಗ ಅದನ್ನು ಮಾನ್ಯ ರಾಮಕೃಷ್ಣ ಅವರು ಒಪ್ಪಲಿಲ್ಲ. ಅದನ್ನೇ ಈಗಲೂ ನಾನು ಸಲಹೆ ಮಾಡುತ್ತಿದ್ದೇನೆ. ಯಾರಿಗೆ ೫ ಸಾವಿರಕ್ಕಿಂತ ವರಮಾನ ಕಡಿಮೆ ಇರುತ್ತದೆ ಅಂತವರಿಗೆ ಈ ಒಂದು ಸೌಲಭ್ಯವನ್ನು ಕೊಡಿ, ಆ ನಂತರವೂ ಸೌಲಭ್ಯಗಳು ಇದ್ದರೆ ಮಿಕ್ಕವರಿಗೂ ಕೊಡಿ ಎಂದು ಹೇಳುತ್ತಿದ್ದೇನೆ. ಇದನ್ನು ಮಾನ್ಯ ರಾಮಕೃಷ್ಣ ಅವರ ಆದಿಯಾಗಿ ಎಲ್ಲರೂ ಒಪ್ಪಿಕೊಳ್ಳುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಬ್ಯಾಕ್‌ವರ್ಡ್ ಕ್ಲಾಸ್ ಹಾಗೂ ಬ್ಯಾಕ್‌ವರ್ಡ್ ಕ್ಲಾಸ್‌ಗಳಲ್ಲಿಯೂ ಕೂಡಾ ಒಂದು ಆದಾಯದ ಮಿತಿ ಇದೆ. ಆ ಪ್ರಕಾರ ಇಲ್ಲಿಯೂ ಮಾಡಬೇಕೆಂದು ನಾನು ಹೇಳುತ್ತೇನೆ. ಯಾರು ದೊಡ್ಡ ದೊಡ್ಡ ಅಧಿಕಾರಿಗಳು ಇದ್ದಾರೆ, ಶಾಸಕರು ಇದ್ದಾರೆ, ಹೆಚ್ಚು ವರಮಾನ ಇರುವವರು ಇದನ್ನು ತ್ಯಾಗ ಮಾಡಿದರೆ ಬಡವರ ಮಕ್ಕಳೂ ಸಹ ಮುಂದೆ ಬರುವುದಕ್ಕೆ ಅನುಕೂಲವಾಗುತ್ತದೆಂದು ಮಾನ್ಯ ಸಚಿವರಿಗೆ ತಿಳಿಸುತ್ತೇನೆ.

ಶ್ರೀ ವೈ. ರಾಮಕೃಷ್ಣ.—ಆ ಬಗ್ಗೆ ರಾಜ್ಯಾಂಗದಲ್ಲಿ ತಿದ್ದುಪಡಿ ಆಗಬೇಕಾಗುತ್ತದೆ. ಅಲ್ಲಿ ಆದರೆ ನಾವೂ ಒಪ್ಪಿಕೊಳ್ಳುತ್ತೇವೆ.

ಡಾ. ಎಚ್. ಎಲ್. ತಿಮ್ಮೇಗೌಡ.—ಇವೊತ್ತು ೫ ಸಾವಿರಕ್ಕಿಂತ ಕಡಿಮೆ ವರಮಾನ ಇರುವವರಿಗೆ ಮೊದಲು ಪ್ರಾಶಸ್ತ್ಯ ಕೊಟ್ಟು ಮಿಕ್ಕರೆ ಮಿಕ್ಕ ಜನರಿಗೂ ಆ ಅನುಕೂಲಗಳನ್ನು ಒದಗಿಸಬಹುದೆಂದು ನಾನು ಹೇಳುತ್ತೇನೆ. ಈ ರೀತಿ ಮಾಡಿದರೆ ನಿಜವಾಗಿಯೂ ಹರಿಜನ ಗಿರಿಜನರು ಉದ್ಧಾರವಾಗುತ್ತಾರೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಚಂದ್ರಶೇಖರ ಗಚ್ಚಿನಮಠ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳನ್ನು ಸ್ವಾಗತಿಸುತ್ತಾ ಒಂದೆರಡು ವಿಷಯಗಳ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಪ್ರಥಮವಾಗಿ ಕರ್ನಾಟಕ ಜನತೆ ಹಿಂದಿನ ಸರ್ಕಾರ ಬೇಡ ಬೇರೆ ಸರ್ಕಾರ ಬೇಕು ಎಂದು ಹೇಳಿ ಪ್ರಥಮ ಬಾರಿಗೆ ಕರ್ನಾಟಕದಲ್ಲಿ ಈ ಒಂದು ಪಕ್ಷವನ್ನು ಆರಿಸಿತು. ಹಾಗೂ ಈ ಒಂದು ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಪುರಸಭೆಗಳ ಹಾಗೂ ನಗರಸಭೆಗಳ ಚುನಾವಣೆಯನ್ನು ನಡೆಸಿತು. ನಾವು ಚುನಾವಣೆ ಮಾಡುವುದು ಅಷ್ಟೇ ಅಲ್ಲ, ಇವೊತ್ತು ಏನು ಚುನಾಯಿತ ಸದಸ್ಯರು ಇದ್ದಾರೆ ಅವರಿಗೆ ಎಷ್ಟು ಅಧಿಕಾರ ಇದೆ ಎಂಬುದನ್ನು ಸಹಾ ನಾವು ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಆರಿಸಿಬಂದಿರತಕ್ಕ ಎಲ್ಲಾ ಸದಸ್ಯರಿಗೂ ಏನು ಅಧಿಕಾರಗಳು ಇವೆ ಎಂಬುದರ ಬಗ್ಗೆ ಗಮನ ಕೊಡಬೇಕಾಗಿದೆ. ಏಕೆಂದರೆ, ಕೆಲವು ದಿವಸಗಳ ಹಿಂದೆ ಹುಕ್ಕೇರಿಯಲ್ಲಿ ಒಂದು ಘಟನೆ ನಡೆಯಿತು. ಅಲ್ಲಿರತಕ್ಕ ಚೀಫ್

ಆಫೀಸರ್ ಏನಿದ್ದಾರೆ ಅವರು ಒಬ್ಬ ಕೆಟ್ಟ ಭ್ರಷ್ಟಾಚಾರಿಯಾಗಿರುವುದರಿಂದ ಅಲ್ಲಿರತಕ್ಕ ೧೯ ಜನ ಸದಸ್ಯರೂ ಕೂಡಾ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಅವರು ಒಳ್ಳೆಯವರಲ್ಲ, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರದ ಗಮನಕ್ಕೂ ತರಲಾಗಿದೆ. ಈ ಬಗ್ಗೆ ಸಂಬಂಧಪಟ್ಟ ಮಂತ್ರಿಯವರಿಗೂ ನಾನು ತಿಳಿಸಿದ್ದೇನೆ. ನಗರಸಭೆಯ ಚುನಾಯಿತ ಪ್ರತಿನಿಧಿಗಳ ಪರಿಸ್ಥಿತಿ ಈ ರೀತಿ ಇದೆ. ಮತ್ತು ವಿಧಾನಸಭೆಗೆ ಆರಿಸಿ ಬಂದ ಸದಸ್ಯರ ಅವಧಿ ೫ ವರ್ಷ, ಪಂಚಾಯಿತಿಗಳಿಗೆ ಆರಿಸಿ ಬಂದವರ ಅವಧಿ ೫ ವರ್ಷ, ಟಿ. ಡಿ. ಬಿ. ಸದಸ್ಯರ ಅವಧಿ ೫ ವರ್ಷ ಇದ್ದು ನಗರಸಭೆಗಳಿಗೆ ಆರಿಸಿ ಬರುವ ಸದಸ್ಯರ ಅವಧಿ ಕೇವಲ ೪ ವರ್ಷ ಮಾತ್ರ ಇದೆ. ಆದ್ದರಿಂದ ಇದನ್ನು ಹೆಚ್ಚು ಮಾಡುವ ಬಗ್ಗೆ ಸರ್ಕಾರ ಗಮನ ಕೊಡಬೇಕು ಎಂದು ಹೇಳಿ ಹಿಂದೆ ಏನು ಬಾಂಬೆ ಸರ್ಕಾರದಲ್ಲಿ ಇವರಿಗೆ ನಗರಸಭೆಗಳಲ್ಲಿ ಏನೇನು ಸೌಲಭ್ಯಗಳನ್ನು ಕೊಡುತ್ತಿದ್ದರೋ ಅಂತಹ ಸೌಲಭ್ಯವನ್ನು ಇವರಿಗೆ ಒದಗಿಸುವುದರಿಂದ ಇವರನ್ನು ಉನ್ನತ ಮಟ್ಟಕ್ಕೆ ತರುವುದಕ್ಕಾಗುತ್ತದೆಂದು ನಾನು ಹೇಳುತ್ತೇನೆ. ಇನ್ನು ಎರಡನೆಯದಾಗಿ, ನಗರಸಭೆಗಳ ಪರಿಸ್ಥಿತಿ ಹೇಗೆ ಆಗಿದೆ ಎಂದರೆ, ಅಲ್ಲಿ ಬರುತ್ತಿದ್ದ ಆಕ್ಟ್ರಾಯ್ ಅನ್ನು ತೆಗೆದ ಮೇಲೆ ಅಲ್ಲಿರತಕ್ಕ ನೌಕರವರ್ಗದವರಿಗೆ ಪಗಾರವನ್ನು ಕೊಡುವುದೂ ಸಹಾ ಕಷ್ಟವಾಗಿದೆ. ಆದ್ದರಿಂದ ಇನ್ನು ಮುಂದೆ ಆಕ್ಟ್ರಾಯ್ ಅನ್ನು ಮತ್ತೆ ತರುವ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆಂದು ನಾನು ಅಪೇಕ್ಷೆ ಪಡುತ್ತೇನೆ.

೧–೩೦ ಪಿ. ಎಂ.

ಅಧ್ಯಕ್ಷರೆ, ಇನ್ನು ವಿಜಾಪುರ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ, ಇದುವರೆಗೂ ನಾಲ್ಕಾರು ಜನರು ಮಾತನಾಡಿದ್ದುದನ್ನು ಕೇಳಿದ್ದೇನೆ. ಬೆಂಗಳೂರು ನಗರದ ವಿಚಾರ ಬಿಟ್ಟು ಬೇರೆ ನಗರಗಳ ಬಗ್ಗೆ ಯಾರೂ ಮಾತನಾಡಲಿಲ್ಲ. ಈ ದೇಶದಲ್ಲಿಯೇ ಅಲ್ಲ, ಪರದೇಶಗಳಲ್ಲಿಯೂ ವಿಜಾಪುರ ನಗರ ಎನ್ನುವ ಶಬ್ದ ಇದೆ. ವಿಜಾಪುರ ನಗರವೇ ಅಥವಾ ಗ್ರಾಮವೇ ಎನ್ನುವುದನ್ನು ಕಾಣಬೇಕಾದರೆ ಆ ಸ್ಥಳಕ್ಕೆ ಭೇಟಿಕೊಟ್ಟು ನೋಡಿದರೆ ಗೊತ್ತಾಗುತ್ತದೆ. ಹೆಣ್ಣುಮಕ್ಕಳು ಗರ್ಭಿಣಿ ಆದರೆ, ಅವರನ್ನು ದವಾಖಾನೆಗೆ ಕಳುಹಿಸುವ ಅವಶ್ಯಕತೆ ಅಲ್ಲಿ ಇಲ್ಲ. ಅವರನ್ನು ಒಂದು ಟಾಂಗದಲ್ಲಿ ಕೂಡಿಸಿ ಅಲ್ಲಿರತಕ್ಕ ರಸ್ತೆಯಲ್ಲಿ ಒಂದು ಸುತ್ತು ಹಾಕಿಸಿದರೆ ಅವರು ಹಡೆಯುವ ಪ್ರಸಂಗ ಇದೆ. ವಿಜಾಪುರ ಐತಿಹಾಸಿಕ ಸ್ಥಳವಾಗಿರುವುದರಿಂದ, ಅಲ್ಲಿಗೆ ಹೆಚ್ಚಿನ ಲಕ್ಷ್ಯ ಕೊಡಬೇಕೆಂದು ನಾನು ಹೇಳುತ್ತೇನೆ. ೧೯೬೫ ರಿಂದ ೧೯೮೩ರ ವರೆಗೆ ನಾನು ಒಬ್ಬ ನಗರಸಭಾ ಸದಸ್ಯನಾಗಿದ್ದೆ. ವಿಜಾಪುರ ನಗದ ಜನಸಂಖ್ಯೆ ಪ್ರಮಾಣವನ್ನು ತೆಗೆದುಕೊಂಡರೆ ೧ ಲಕ್ಷದ ೪೮ ಸಾವಿರ ಇದೆ. ಹಿಂದೆ ೨೦ ಸಾವಿರ ಜನಸಂಖ್ಯೆ ಇದ್ದಾಗ ಯಾವ ಒಂದು ನೀರಿನ ಟ್ಯಾಂಕಿಯನ್ನು ಕಟ್ಟಿದ್ದರು, ಅದೇ ನೀರಿನ ಟ್ಯಾಂಕಿಯನ್ನು ಇವೊತ್ತು ಉಪಯೋಗಿಸುತ್ತಿದ್ದಾರೆ. ಅದರಿಂದ, ಜನರಿಗೆ ನೀರು ಸಾಕಾಗುತ್ತದೆಯೇ ಎಂದು ತಾವೇ ಯೋಚನೆ ಮಾಡಬೇಕು. ಇವೊತ್ತು ಒಂದು ಸಂಸಾರದಲ್ಲಿ ೧೦ ಜನ ಇದ್ದರೆ ಒಂದು ಹಂಡೆ ಇದ್ದರೆ ಅದರ ತುಂಬಾ ನೀರನ್ನು ತುಂಬಿಕೊಂಡರೆ ಕುಡಿಯಲಿಕ್ಕೆ ಸಾಕಾಗುತ್ತದೆ. ಅದೇ ಹಂಡೆಯನ್ನು ಲಗ್ನದಲ್ಲಿ ಉಪಯೋಗ ಮಾಡುತ್ತೇವೆಂದರೆ ಸಾಧ್ಯವಾಗುವುದಿಲ್ಲ. ಈ ನಗರದ ಕುಡಿಯುವ ನೀರಿನ ವಿಚಾರದಲ್ಲಿ ಅನೇಕ ಸಾರಿ ನಾನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ವಿಜಾಪುರ ನಗರಕ್ಕೆ ಮೂರು ಓವರ್ ಹೆಡ್ ಟ್ಯಾಂಕ್ ಕಟ್ಟಬೇಕೆಂದು ಜನರಲ್ ಬಾಡಿ ಮೀಟಿಂಗ್‌ನಲ್ಲಿ ಠರಾವೂ ಮಾಡಿ ಕಳುಹಿಸಿದ್ದೇವೆ. ಮಾನ್ಯ ಧರ್ಮಸಿಂಗ್ ಅವರು ಆಗ ಒಪನಿಂಗ್ ಸ್ಟೇಜ್‌ನಲ್ಲಿ ೪೮ ಲಕ್ಷ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿದ್ದೇವೆ ಎಂದು ಹೇಳಿದರು. ಅದು ನಿಜವೋ, ಸುಳ್ಳೋ ಅದು ಇನ್ನು ಕಲ್ಪನೆ ಬಂದಿಲ್ಲ. ಇವೊತ್ತು ಎಲ್ಲಿ ನಗರ ಅಭಿವೃದ್ಧಿ ಮಾಡುತ್ತೀರಿ ಅಲ್ಲಿ ಟ್ಯಾಕ್ಸ್ ವಸೂಲಿ ಮಾಡಿದರೆ ಅವರಿಗೂ ಕೊಡಲಿಕ್ಕೂ ಹುಮ್ಮಸ್ಸು ಬರುತ್ತದೆ ನಮ್ಮ ಜಿಲ್ಲೆಯ ದೊಡ್ಡ ನಗರ ಬಾಗಲಕೋಟೆ ಇದೆ ಅಲ್ಲಿಯ ಜನರು ನಾವು ಬದುಕುತ್ತೇವೆಯೋ ಸಾಯುತ್ತೇವೆಯೋ ಎನ್ನುವ ಪರಿಸ್ಥಿತಿಯಲ್ಲಿದ್ದಾರೆ ಅವರಿಂದ ೧೯೬೮ರಕ್ಕಿಂತಲೂ ಮುಂಚೆ ಏನು ಕರಿಗೆ ವಿಧಿಸುತ್ತಿದ್ದರು ಅಷ್ಟು ಮಾತ್ರ ವಸೂಲು ಮಾಡಬೇಕು. ೧೯೬೮ರ ನಂತರ ಅಜ್ಞೆ ಏನು ಮಾಡಿದ್ದೀರಿ ಅದರ ಪ್ರಕಾರ ವಸೂಲು ಮಾಡಬಾರದು ಆ ರೀತಿ ವಸೂಲಿ ಮಾಡಲಿಕ್ಕೆ ಹೋದರೆ ಅಹಿತಕರ ಘಟನೆಯಾಗುವ ಸಂದರ್ಭ ಇದೆ. ಇವೊತ್ತು ನಗರದ ಅಭಿವೃದ್ಧಿ ಎಂದು ಹೇಳುತ್ತೀರಿ, ಆದರೆ ಅಲ್ಲಿ ಯಾವುದೇ ಅಭಿವೃದ್ಧಿ ಇಲ್ಲ. ಆದ್ದರಿಂದ ಬಾಗಲಕೋಟೆ ನಗರದಲ್ಲಿ ಹೌಸ್ ಟ್ಯಾಕ್ಸ್‌ನ್ನು ತೆಗೆದುಕೊಳ್ಳಬಾರದು ಬಾಗಲಕೋಟೆ ಪುರಸಭೆ ಅವಧಿ ನಾಲ್ಕು ತಿಂಗಳ ಮುಂಚೆಯೇ ಮುಗಿದುಹೋಗಿ ಈಗ ಅಲ್ಲಿ ಚುನಾಯಿತ ಸದಸ್ಯರು ಇಲ್ಲ. ಆದ್ದರಿಂದ, ಶೀಘ್ರಗತಿಯಲ್ಲಿ ಅಲ್ಲಿಗೆ ಚುನಾವಣೆ ನಡೆಸಬೇಕು. ಹುಕ್ಕೇರಿ

ಪರಿಸ್ಥಿಯ ಬಗ್ಗೆ ಅಲ್ಲಿಯೇ ಚೀಫ್ ಆಫೀಸರ್ ವಿಚಾರ ತಮಗೆ ತಿಳಿದುಬಂದಿದೆ. ಅಲ್ಲಿ ೧೯ ಜನ ಸದಸ್ಯರು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಅವರ ಜೊತೆ ಜನತೆಯೂ ಸಹ ಭಾಗ ವಹಿಸಿದ್ದಾರೆ. ಆದ್ದರಿಂದ ಇದನ್ನು ತಾವು ತೀವ್ರ ಗತಿಯಲ್ಲಿ ಲಕ್ಷ್ಯಕ್ಕೆ ತೆಗೆದುಕೊಂಡು ಒಂದು ನಿರ್ಣಯ ವನ್ನು ಟೆಲಿಗ್ರಾಮ್ ಮುಖಾಂತರ ಕಳುಹಿಸಿ, ಅಲ್ಲಿ ಶಾಂತಿ ವಾತಾವರಣ ನೆಲೆಸುವಂತೆ ಮಾಡಬೇಕೆಂದು ಕೇಳಿಕೊಂಡು ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್. ಜಿ. ನಾಯಕ್ (ಮೊಳಕಾಲ್ಮೂರು).—ಸನ್ಮಾನ್ಯ ಅಧ್ಯಕ್ಷರೆ. ಇದುವರೆಗೂ ನನ್ನ ಮಿತ್ರರು ಅನೇಕರು ಮಾತನಾಡಿದ್ದಾರೆ. ಅದರಲ್ಲಿ ಹೆಚ್ಚು ತಿಳಿದಿರತಕ್ಕ ಹಾಗೂ ಅನುಭವಶಾಲಿಗಳು ಆಗಿರತಕ್ಕ ಮಾನ್ಯ ವೈ. ರಾಮಕೃಷ್ಣ ಅವರು ವಿಷದವಾಗಿ ತಿಳಿಸಿದ್ದಾರೆ. ಆದ್ದರಿಂದ ನಾನು ಹೆಚ್ಚು ಮಾತನಾಡಲಿಕ್ಕೆ ಇಷ್ಟಪಡುವುದಿಲ್ಲ. ಈಗ ನನ್ನ ಮನಸ್ಸಿನಲ್ಲಿರತಕ್ಕ ಒಂದೆರಡು ವಿಷಯಗಳನ್ನು ಹೇಳಲಿಕ್ಕೆ ಮಾತ್ರ ಇಷ್ಟಪಡುತ್ತೇನೆ. ನಮ್ಮ ಬಳ್ಳಾರಿ ಕಡೆ ದೇವದಾಸಿ ಪದ್ಧತಿ ಇದೆ. ಇವರು ಕೊಟ್ಟಿರತಕ್ಕ ರಿಪೋರ್ಟ್‌ನಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಇದಕ್ಕೆ ಒಂದು ಶಾಲೆಯನ್ನು ತೆರೆದಿದ್ದೇವೆಂದು ಹೇಳಿದ್ದಾರೆ. ಅದನ್ನು ಬಳ್ಳಾರಿ ಜಿಲ್ಲೆಯಲ್ಲಿ ಮಾಡಿಲ್ಲ. ಬೆಳಗಾವಿ ಜಿಲ್ಲೆಯಲ್ಲಿ ಶಾಲೆಯನ್ನು ತೆರೆದಂತೆ ಬಳ್ಳಾರಿ ಜಿಲ್ಲೆಯಲ್ಲಿಯೂ ಇಂತಹ ಶಾಲೆಯನ್ನು ತೆರೆಯಬೇಕೆಂದು ಮಾನ್ಯ ಮಂತ್ರಿಗಳಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ವರದಕ್ಷಿಣೆ ಬಗ್ಗೆ ಹೇಳಬೇಕೆಂದರೆ ಎಲ್ಲಾ ಕಡೆ ವರದಕ್ಷಿಣೆ ಜಾಸ್ತಿ ಇದೆ. ಇವೊತ್ತು ವರದಕ್ಷಿಣೆ ಯಾರು ತೆಗೆದುಕೊಳ್ಳುವವರು ಇದ್ದಾರೆ, ಮತ್ತು ಯಾರು ಕೊಡುವವರು ಇದ್ದಾರೆ ಅವರಿಗೆ ಉಗ್ರ ಶಿಕ್ಷೆಯನ್ನು ಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥಿಸಿ ಕೊಳ್ಳುತ್ತೇನೆ. ಇನ್ನು ನಮ್ಮ ಜನಾಂಗದ ವಿಷಯವನ್ನು ಮಾತನಾಡಬೇಕೆಂದರೆ, ನಾಯಕ್ ಜನಾಂಗ ಗುಡ್ಡುಗಾಡಿನಲ್ಲಿ ವಾಸ ಮಾಡತಕ್ಕ ಜನ. ಈ ಜನಾಂಗದಲ್ಲಿ ಉಪ ಪಂಗಡಗಳು ಬಹಳಷ್ಟು (ಪರಿಯಾಯ ಪದಗಳು) ಇವೆ. ಉದಾಹರಣೆಗೆ ಬೇಡ, ವಾಲ್ಮೀಕಿ, ತಳವಾರ್, ಪಾಳೇಗಾರ್, ರಾಜ್ ಪರಿವಾರ, ಬರ್ಕಿ, ಬೇಡರ್, ಬೇಂದರ್, ಬೋಯ, ನಾಯಕ್, ಬೇರದ್, ನಾಯಕಮಕ್ಕಳು, ನಾಯಕವಾಡಿ, ವಾಲ್ಮೀಕಿ ಮಕ್ಕಳು, ವೇಡಮ್, ಮ್ಯಾಸ, ಈ ತರಹ ನಾಯಕ ಜನಾಂಗದಲ್ಲಿ ೧೬ ಪಂಗಡಗಳು ಇವೆ. ಅದೇ ರೀತಿ ಮುಸ್ಲಿಮ್ ಜನಾಂಗದಲ್ಲೂ ಶೇಖ್, ಸೈಯದ್, ಸುನ್ನಿ, ಪಠಾಣ್ ಎಂದು ಕೆಲವು ಉಪ ಪಂಗಡಗಳು (ಪರಿಯಾಯ ಪದಗಳು) ಉಂಟು. ಅದೇ ರೀತಿ ಲಿಂಗಾಯಿತರಲ್ಲೂ ಕೂಡ ಗಾಣಿಗ, ಬಣಜಿಗ, ನೊಣಬರು, ಅಯನೋರು, ಎಂದು ಕೆಲವು ಉಪ ಪಂಗಡಗಳು (ಪರಿಯಾಯ ಪದಗಳು) ಇವೆ. ನಮ್ಮಲ್ಲಿ ೧೬ ಉಪ ಪಂಗಡಗಳು ಇವೆ. ಇನ್ನು ವಡ್ಡರಲ್ಲಿ ತಮಗೆ ಹೇಳಬೇಕೆಂದರೆ, ಕಲ್ಲುವಡ್ಡರು, ಮಣ್ಣುವಡ್ಡರು, ಬೋವಿಗಳ ವಡ್ಡರು ಇದ್ದಾರೆ. ಇನ್ನು ಬಂಜಾರ ಪಂಗಡದಲ್ಲಿ ಲಂಬಾಣಿ ಉಪ ಪಂಗಡ ಬರುತ್ತದೆ. ಇವುಗಳೆಲ್ಲಾ ಶ್ರೀನಿವಾಸ್ ನೇಮ್ಸ್. ಹಿಂದೆ ಮುಖ್ಯ ಮಂತ್ರಿಗಳಾದ ಗಂಡುಗಲಿ ದೇವರಾಜ್‌ಅರಸ್ ಅವರು ಇದ್ದಾಗ ನಮಗೆ ಎಲ್ಲಾ ಸವಲತ್ತು ಕೊಟ್ಟಿದ್ದರು. ಅವರು ಇರುವವರೆಗೆ ನಾವು ಎಲ್ಲಾ ಸವಲತ್ತುಗಳನ್ನು ಅನುಭವಿಸಿದ್ದೇವೆ. ನಮ್ಮ ಮಕ್ಕಳು ಅದರ ಪ್ರಯೋಜನವನ್ನು ಪಡೆದಿದ್ದಾರೆ. ಈಗ ನಿಮ್ಮ ಸರ್ಕಾರ ಬಂದಮೇಲೆ ನಮಗೆ ತೊಂದರೆ ಕೊಟ್ಟಿದ್ದೀರಿ. ತಾವು ಹಿಂದುಳಿದ ಜನಾಂಗಗಳಿಗೆ ಉದ್ಧಾರ ಮಾಡುತ್ತೇವೆಂದು ಹೇಳುತ್ತೀರಿ, ಏನು ಉದ್ಧಾರ ಮಾಡುತ್ತಿದ್ದೀರಿ ಎಂದು ನೋಡಿದರೆ ಎಲ್ಲರನ್ನೂ ತುಳಿಯುತ್ತಿದ್ದೀರಿ. ಬರೀ ಬಾಯಲ್ಲಿ ಹರಿಜನ ಗಿರಿಜನರನ್ನು ಉದ್ಧಾರ ಮಾಡುತ್ತೇವೆಂದು ಹೇಳುತ್ತಿದ್ದೀರಿ. ನಾನು ಗುಲ್ಬರ್ಗಕ್ಕೆ ಹೋಗಿ ಅಲ್ಲಿ ಹರಿಜನ ಗಿರಿಜನರ ಮೇಲೆ ಯಾವರೀತಿಯಲ್ಲಿ ಹಲ್ಲೆಗಳು ನಡೆದಿವೆ ಎನ್ನುವುದನ್ನು ನೋಡಿಕೊಂಡು ಬಂದಿದ್ದೇನೆ. ಅಲ್ಲಿ ಹರಿಜನ ಗಿರಿಜನರನ್ನು ಪೋಲೀಸರು ರಟ್ಟೆ ಹಿಡಿದು ಎಳೆದಾಡಿದ್ದಾರೆ. ಇವರು ಹರಿಜನರು ಉದ್ಧಾರ ಮಾಡುತ್ತಿಲ್ಲ, ಹರಿಜನರಿಗೆ ಕೊಡಲಿ ಹಾಕುತ್ತಿದ್ದಾರೆ. ಈಗ ನಿಮ್ಮ ಸರ್ಕಾರ ಬಂದಮೇಲೆ ನಮ್ಮ ಉಪ ಪಂಗಡಗಳು ಯಾವುದು ಯಾವುದು ಇದ್ದವು, ಅವರುಗಳ ಮೇಲೆ ಕೇಸ್ ಹಾಕಿದ್ದಾರೆ. ಈ ಉಪ ಪಂಗಡಗಳಲ್ಲಿ (ಪರಿಯಾಯ ಪದಗಳಲ್ಲಿ) ಬರುವವರಿಗೆ ಮೆಡಿಕಲ್ ಸೀಟುಗಳನ್ನು ಇಂಜಿನಿಯರ್ ಸೀಟುಗಳನ್ನು ಕೊಡಿಸಿದ್ದೇವೆ. ಈಗ ಅವರುಗಳ ಮೇಲೆ ಕೇಸುಗಳನ್ನು ಹಾಕಿದ್ದಾರೆ. ಇದರ ಬಗ್ಗೆ ವಿಚಾರಣೆ ನಡೆಯುತ್ತಿದೆ. ಈಗ ತಾವು (ಈ ಸರ್ಕಾರ) ಹಿಂದುಳಿದ ವರ್ಗದವರನ್ನು ಉದ್ಧಾರ ಮಾಡುವುದಾದರೆ ಹಾಕಿರತಕ್ಕ ಕೇಸುಗಳನ್ನು ವಾಪಸ್ಸು ತೆಗೆದುಕೊಳ್ಳಬೇಕು. ನಾನು ಒಂದು ವರ್ಷ ದಿಂದಲೂ ಮಾನ್ಯ ಮುಖ್ಯ ಮಂತ್ರಿಗಳಿಗೆ ಎಷ್ಟೋ ಸಾರಿ ಅರ್ಜಿ ಕೊಟ್ಟಿದ್ದೇನೆ. ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳಿಗೂ ಸಹ ಅರ್ಜಿಕೊಟ್ಟು ಕೇಳಿಕೊಂಡಿದ್ದೇನೆ.

ಅವರುಗಳ ಮೇಲೆಲ್ಲಾ ಕೇಸ್‌ಗಳನ್ನು ಹಾಕಿಸಿದ್ದೀರಿ. ಉಪ ಪಂಗಡಗಳವರಿಗೆ ಮೆಡಿಕಲ್ ಸೀಟು ಆಮೇಲೆ ಎಂಜಿನೀಯರುಗಳ ಸೀಟುಗಳನ್ನು ಕೊಡಿಸಿದ್ದೇವೆ. ಆದರೆ ಅವರುಗಳ ಮೇಲೆ ವಿಚಾರಣೆ ನಡೆಯುತ್ತಿದೆ. ದಯವಿಟ್ಟು ನೀವು ಅವರನ್ನು ಉದ್ಧಾರ ಮಾಡುವುದಾದರೆ ಹಿಂದುಳಿದ ಜನಗಳಿಗೆ ಅನುಕೂಲ ಮಾಡಿದಂತಾಗುತ್ತದೆ. ನಾನು ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳಲ್ಲಿಯೂ, ಸಮಾಜ ಕಲ್ಯಾಣ ಮಂತ್ರಿಗಳಲ್ಲಿಯೂ ಹೇಳಿದ್ದೇನೆ. ಹಿಂದೆ ಶ್ರೀ ದೇವರಾಜ ಅರಸರು ಏನು ಮಾಡಿದ್ದರು ಅದೇ ರೀತಿ ನೀವು ಅಧಿಕಾರ ಹೊಂದಿರುವವರು ಮಾಡಬಹುದು. ನೀವು ಹೆದರುತ್ತೀದ್ದೀರಿ. ದಯವಿಟ್ಟು ನಮ್ಮ ಜನಗಳಿಗೆ ಒಳ್ಳೆಯ ಕೆಲಸಗಳನ್ನು ಮಾಡಿಕೊಡಿ. ಇವೊತ್ತಿನ ದಿವಸ ನಮ್ಮ ಜನ ರಾಜ್ಯದಲ್ಲಿ ೪೦ ಲಕ್ಷದಷ್ಟು ಇದ್ದಾರೆ. ಅವರಿಗೆ ನೀವು ಒಳ್ಳೆಯದನ್ನು ಮಾಡದಿದ್ದರೆ ಖಂಡಿತ ನಿಮಗೆ ಅವರಿಂದ ಕೆಟ್ಟದಾಗುತ್ತದೆಯೆಂದು ನಾನು ಘಂಟಾಘೋಷವಾಗಿ ಹೇಳುತ್ತಿದ್ದೇನೆ. ಶ್ರೀ ದೇವರಾಜ ಅರಸರುವರು ಗಂಡುಗಲಿಯಾಗಿದ್ದರು ಅವರು ನಮ್ಮ ಜನಗಳಿಗೆ ಏನು ಮಾಡಿದ್ದರು ಅದೇ ರೀತಿ ನೀವು ಅನುಕೂಲ ಮಾಡಿಕೊಡಿರೆಂದು ಅಲ್ಲಿ ಕುಳಿತಿರುವ ಅವರ ಪುತ್ರಿಯವರನ್ನು ಕೇಳುತ್ತಿದ್ದೇನೆ. ಅವರ ಹೆಸರನ್ನು ಹೇಳಿಕೊಂಡು ಎಷ್ಟೋ ಜನವರು ಮಂತ್ರಿಗಳಾಗಿದ್ದಾರೆ ಎನ್ನುವುದು ನನಗೆ ಗೊತ್ತು. ನಮ್ಮ ಹರಿಜನ ಗಿರಿಜನರಿಗೆ ಬೇಕಾದ ಅನುಕೂಲಗಳನ್ನು ಒದಗಿಸಿಕೊಡಿ ಎಂದು ಹೇಳಿ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ತಮಗೆ ನನ್ನ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಮಾನ್ಯ ಅಧ್ಯಕ್ಷರು.—ಮಾನ್ಯ ದೊಡ್ಡ ಮೇಟಿಯವರೇ. ತಾವು ೫ ನಿಮಿಷಗಳು ಮಾತ್ರ ಮಾತನಾಡಿ.

ಶ್ರೀ ಎಂ. ಮಹದೇವ್ (ನಂಜನಗೂಡು).—ನಾನು ಬೆಳಿಗ್ಗೆಯಿಂದ ಕಾಯುತ್ತಿದ್ದೇನೆ. ಹಾಗೂ ಈ ಡಿಮ್ಯಾಂಡ್ ಬಗ್ಗೆ ಮಾತನಾಡಲು ನನ್ನ ಹೆಸರನ್ನೂ ಸಹ ಕೊಟ್ಟಿದ್ದೇನೆ. ಆದರೂ ತಾವು ಇದು ವರೆಗೂ ನನ್ನನ್ನು ಕರೆಯಲಿಲ್ಲ. I don't tolarate this type of attitude ನಾನು ಈ ಡಿಮ್ಯಾಂಡ್‌ಗಳನ್ನು ಹರಿದು ಹಾಕಿ ಸಭಾತ್ಯಾಗ ಮಾಡುತ್ತೇನೆ.

(ಶ್ರೀ ಎಂ. ಮಹದೇವ್‌ರವರು ಡಿಮ್ಯಾಂಡ್‌ನ ಕಾಗದ ಪತ್ರಗಳನ್ನು ಸಭೆಯಲ್ಲಿ ಹರಿದು ಹಾಕಿ ಸಭಾತ್ಯಾಗ ಮಾಡಿದರು.)

ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ (ರೋಣ).—ಮಾನ್ಯ ಅಧ್ಯಕ್ಷರೇ ಇಲ್ಲಿ ತಂದಿರತಕ್ಕ ಸಮಾಜ ಕಲ್ಯಾಣ ಇಲಾಖೆಯ ಬೇಡಿಕೆಗಳನ್ನು ಅನುಮೋದಿಸುತ್ತಾ ಕೆಲವು ಮಾತುಗಳನ್ನು ಹೇಳುತ್ತಿದ್ದೇನೆ. ಸಮಾಜ ಕಲ್ಯಾಣ ವಿಷಯದ ಬಗ್ಗೆ ಮಾತನಾಡಬೇಕಾದರೆ, ದೇವದಾಸಿ ಪದ್ಧತಿ, ಬಾಲ್ಯ ವಿವಾಹ ಮತ್ತು ವರದಕ್ಷಿಣೆ ವಿಷಯಗಳು ಇದೆ. ಇವುಗಳ ಅನೈತಿಕವಾದ ವ್ಯವಹಾರಗಳು. ಒಂದು ವಿಷಯ, ಏನು ಎಂದು ಹೇಳಿದರೆ ಈ ಪರಂಪರೆಯು ಸಾಮಾಜಿಕವಾಗಿ ಬೆಳೆದು ಬಂದ ಒಂದು ಪಿಡುಗು. ಅಧಿಕಾರಿಗಳಿಂದಾಗಲೀ ಕಾನೂನಿಂದಾಗಲೀ ಈ ವ್ಯವಹಾರವನ್ನು ನಿಲ್ಲಿಸಲು ಮಾತ್ರ ಸಾಧ್ಯವಿಲ್ಲ. ಜನರಲ್ಲಿ ಸಾಮಾಜಿಕ ಪ್ರಜ್ಞೆ ಬೆಳೆಯಬೇಕು ಆಗ ಮಾತ್ರ ಇದನ್ನು ತಡೆಗಟ್ಟಲು ಸಾಧ್ಯ. ಸವದತ್ತಿಯಲ್ಲಿ ಏನು ಒಂದು ಈ ಪದ್ಧತಿಯ ನಿರ್ಮೂಲನೆ ಮಾಡಲು ಒಂದು ಕೇಂದ್ರವನ್ನು ತೆರೆದಿದ್ದಾರೆ ಇದು ಸ್ತುತ್ಯವಾಗಿದೆ. ಸವದತ್ತಿಯಲ್ಲಿ ದೇವದಾಸಿಯರ ವಿವಾಹವನ್ನು ಏನು ಮಾಡಿದ್ದಾರೆ ಇದು ಒಳ್ಳೆಯ ಕೆಲಸ.

ವರದಕ್ಷಿಣೆ ವಿಷಯ ಹೇಳಬೇಕಾದರೆ, ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ನಮ್ಮನ್ನು ನಾವು ಇಣುಕಿ ನೋಡಿಕೊಳ್ಳಬೇಕು ಅಷ್ಟೇ. ವರದಕ್ಷಿಣೆ ಇದು ಒಂದು ವಿಷ ವರ್ತುಲ. ಮುಖ್ಯವಾಗಿ ಹೇಳಬೇಕಾದರೆ ಶಾಸಕರಾಗಲೀ, ಮಂತ್ರಿಗಳಾಗಲೀ ತಮ್ಮ ತಮ್ಮ ಮಕ್ಕಳಿಗೆ ವರದಕ್ಷಿಣೆ ತೆಗೆದುಕೊಂಡಿದ್ದಾರೋ ಇಲ್ಲವೋ ಎಂಬುದನ್ನು ನಾವು ವಿಚಾರ ಮಾಡಬೇಕು. ನಮ್ಮನ್ನು ನಾವೇ ಆತ್ಮ ನಿರೀಕ್ಷಣೆಯನ್ನು ಮಾಡಿಕೊಂಡರೆ ಒಳ್ಳೆಯದು. ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿದೆಯೋ ಇಲ್ಲವೋ, ಮದುವೆ ಎನ್ನುವುದು ಏನಾಗಿದೆ ಎಂದರೆ ಗಂಡು ಹೆಣ್ಣುಗಳನ್ನು ಕೊಂಡುಕೊಳ್ಳುವ ಒಂದು ಮಾರಾಟ ಕೇಂದ್ರವಾಗಿದೆ. ಮಾರಾಟ ಕೇಂದ್ರ ಎಂದಮೇಲೆ ಅಲ್ಲಿ ಒಬ್ಬ ದಳ್ಳಾಳಿ ಇರುತ್ತಾನೆ. ಹೀಗೆ ಹೆಣ್ಣುಮಕ್ಕಳ ಸ್ಥಿತಿ ಶೋಚನೀಯವಾಗಿದೆ. ಈ ಪದ್ಧತಿಯನ್ನು ಮೊದಲು ನಾವು ಹೋಗಲಾಡಿಸಬೇಕು.

ಹಾಸ್ಟೆಲ್‌ಗಳ ಬಗ್ಗೆ ಹೇಳಬೇಕೆಂದರೆ ನಮ್ಮ ಕಡೆಗೂ ಇಲಾಖೆಯು ಮುಖಾಂತರ ಹಾಸ್ಟೆಲ್‌ಗಳ ಸೌಲಭ್ಯವನ್ನು ಕೊಟ್ಟಿದ್ದಾರೆ ಅದಕ್ಕಾಗಿ ನಮ್ಮ ಸಮಾಜ ಕಲ್ಯಾಣ ಸಚಿವರನ್ನು ಅಭಿನಂದಿಸುತ್ತೇನೆ. ಹಾಸ್ಟೆಲ್ ಏನು ಕೊಟ್ಟಿದ್ದಾರೆ ಅಲ್ಲಿ ಪದಾರ್ಥಗಳು ಉತ್ತಮ ಮಟ್ಟದಲ್ಲಿರಬೇಕು ಮತ್ತು ಆಡಳಿತ

ಇನ್ನೂ ಚುರುಕು ಆಗಬೇಕು ಎಂದು ನಾನು ಹೇಳುತ್ತೇನೆ. ಆಮೇಲೆ ಇನ್ನು ಒಂದು ವಿಷಯ. ಹರಿಜನ ಗಿರಿಜನರಿಗೆ ಏನು ೧೮ ಪರ್‌ಸೆಂಟ್ ಹಣವನ್ನು ಇಟ್ಟಿದ್ದಾರೆ ಆ ಹಣದ ಬಳಕೆಯು ಸರಿಯಾಗಿ ಆಗಬೇಕು: ಹರಿಜನರ ಕಲ್ಯಾಣ ಆಗಬೇಕು. ಸಾಧಾರಣವಾಗಿ ಎಲ್ಲಾ ಪಕ್ಷಗಳು ಕೂಡ ಹರಿಜನರನ್ನು ತಮ್ಮ ರಾಜಕೀಯ ಬಳಕೆಗೆ ಮಾತ್ರ ಉಪಯೋಗ ಮಾಡಿಕೊಳ್ಳುತ್ತಿದ್ದಾರೆನ್ನುವುದು ಎಲ್ಲರೂ ಒಪ್ಪತಕ್ಕಂತಹ ಮಾತು. ಇದು ಕಟು ಸತ್ಯವೆಂದು ಹೇಳಬಹುದು. ಹರಿಜನರು ಮೊದಲಿನಿಂದಲೂ ಕೂಡ ಒಂದು ತುಳಿತಕ್ಕೆ ಸಿಕ್ಕ ವರ್ಗ. ಮಾನ್ಯ ಅಧ್ಯಕ್ಷರೇ, ಒಬ್ಬ ಮಾಜಿ ಹರಿಜನ ಶಾಸಕರ ಮನೆಗೆ ಹೋದರೆ ಅಲ್ಲಿ ಇತರ ಹರಿಜನರನ್ನು ಮೇಲೆ ಮಾಡಿಸಿದಂತಹ ಉದಾಹರಣೆಯೂ ನನಗೆ ಗೊತ್ತಿದೆ. ಮತ್ತು ಅಷ್ಟೇ ಅಲ್ಲ ಅವರಲ್ಲಿ ಮೊದಲು ಇವರು ನಮ್ಮವರು ಎಂಬ ಕಳಕಳಿಯನ್ನು ಉಂಟುಮಾಡಬೇಕು. ಇದು ಮೊದಲು ಆಗಬೇಕು ಇದರಲ್ಲಿ ಕೂಡ ರಾಜಕೀಯವನ್ನು ಬೆರೆಸದೆ ಪೂರ್ಣವಾಗಿ ಇವರನ್ನು ಮಾನವೀಯ ದೃಷ್ಟಿಯಿಂದ ನೋಡಬೇಕು.

ಇನ್ನೊಂದು ವಿಷಯವನ್ನು ನಮ್ಮ ಕಾನಡೆಯವರು ಹೇಳಿದರು. ಅದೇನೆಂದರೆ ಈ ಒಂದು ಅನುಸೂಚಿತ ಜಾತಿ ಮತ್ತು ಪಂಗಡದ ಶಾಸಕರ ಕಲ್ಯಾಣ ಸಮಿತಿ ಬಗ್ಗೆ ಮಾತನಾಡಿದ್ದು ನನಗೆ ಬಹಳ ನೋವು ಎನ್ನಿಸುತ್ತದೆ. ಅವರು ಇದರ ಬಗ್ಗೆ ಬಹಳ ಹಗುರವಾಗಿ ಮಾತನಾಡಿದರು. ಈ ವರದಿಗಳು ಮತ್ತು ಸಂಧಾರಣೆ ಕ್ರಮಗಳು ಸಂವಿಧಾನಾತ್ಮಕವಾಗಿದೆ. ಇವುಗಳ ಅನುಷ್ಠಾನವನ್ನು ಪರಿಶೀಲನೆ ಮಾಡುವುದಕ್ಕೆ ಒಂದು ಸಮಿತಿ ಇರುತ್ತದೆಯೇ ಹೊರತಾಗಿ ಕೇವಲ ಹಣವನ್ನು ಖರ್ಚು ಮಾಡಿ ಅದರಿಂದ ವಿಲಾಸ ಭೋಗ ತಮಗೆ ಸಿಕ್ಕಬೇಕು ಎನ್ನುವ ದೃಷ್ಟಿಯಿಂದ ಇದನ್ನು ಮಾಡಿಲ್ಲ, ಆ ಸಮಿತಿಗೆ ಹರಿಜನರ ಕಲ್ಯಾಣ ಮಾಡುವುದಕ್ಕೆ ಒಳ್ಳೆಯ ಉದ್ದೇಶವಿದೆಯೇ ಹೊರತು ಅನ್ಯಾಯ ಮಾಡಲಿಕ್ಕಲ್ಲ.

ಶ್ರೀ ಎಂ. ರಾಮಪ್ಪ.—ಅವರು ಹೇಳಿರುವ ಮಾತು ಇವರಿಗೆ ಸರಿಯಾಗಿ ಅರ್ಥವಾಗಿಲ್ಲವೆಂದು ಕಾಣುತ್ತದೆ. ಆ ಸಮಿತಿಯವರು ಏನು ಮಾಡಿದ್ದಾರೆ ಎಂಬುದು ಇವರಿಗೆ ಗೊತ್ತಿಲ್ಲವೆಂದು ಕಾಣುತ್ತದೆ.

ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ.—ಇನ್ನು "ಮೂರ್ತಿ" ಸ್ಥಾಪನೆ ಮಾಡುವ ಬಗ್ಗೆ ಹೇಳಬೇಕಾದರೆ, ಮಾನ್ಯ ಅಧ್ಯಕ್ಷರೇ ನನಗನ್ನಿಸುತ್ತದೆ ಯಾವುದೇ ಮೂರ್ತಿಯನ್ನು ಇಲ್ಲಿ ನಿಲ್ಲಿಸುವುದು ಬೇಡ. ಅದರ ಬದಲಾಗಿ ಅವರು ಅನುಸರಿಸುತ್ತಿದ್ದ ಮೌಲ್ಯಗಳು ಹಾಗೂ ತತ್ವಗಳ ಅಭ್ಯಾಸ ಕೇಂದ್ರಗಳನ್ನು ತೆರೆದರೆ ಅವು ಶಾಶ್ವತವಾಗಿ ಉಳಿಯುತ್ತವೆ. ಉದಾಹರಣೆಗೆ ಶ್ರೀ ಡಿ. ದೇವರಾಜ ಅರಸು ರವರ ಮೂರ್ತಿ ನಿಲ್ಲಿಸುವ ಬದಲಾಗಿ ಅವರು ಅನುಸರಿಸುತ್ತಿದ್ದ ಮೌಲ್ಯ ಹಾಗೂ ತತ್ವಗಳು ಹರಡುವಂತೆ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸಿರುವುದು ಒಳ್ಳೆಯ ಸ್ತುತ್ಯಾರ್ಹ ಕೆಲಸವಾಗಿದೆ. ಅದು ಬಿಟ್ಟು ಮೂರ್ತಿಗಳನ್ನು ನಿಲ್ಲಿಸಿ ಅವುಗಳಿಗೆ ಕುಂಕುಮಗಳನ್ನು ಹಚ್ಚಿ, ಪೂಜೆಗಳನ್ನು ಮಾಡಿ ಅವುಗಳನ್ನು ಒಂದು ರೀತಿಯ ಗುಡಿಗಳ ಹಾಗೆ ಮಾಡುತ್ತೀರಿ ಮತ್ತು ಮೂಢ ನಂಬಿಕೆಗಳನ್ನು ಜನರಲ್ಲಿ ಬೆಳೆಸುತ್ತಿದ್ದೀರಿ. ಇನ್ನೂ ಹೇಳಬೇಕಾದರೆ ಗಾಂಧೀಜಿ ಅವರನ್ನು ನವಿಲಿನ ಮೇಲೂ ಕೂಡಿಸಿಬಿಡುತ್ತಾರೆ. ಅಲ್ಲದೆ ಅವರ ಮೂರ್ತಿ ಇರುವ ಕಡೆಗಳಲ್ಲಿ ಗಂಡಿಗಳನ್ನು ಕಟ್ಟಿಬಿಡುತ್ತಾರೆ. ಆದುದರಿಂದ ಇಂತಹ ಮೂಢ ನಂಬಿಕೆಗಳು ಬೆಳೆಯದ ಹಾಗೆ ನಾವು ನೋಡಿಕೊಳ್ಳಬೇಕು. ಇಷ್ಟು ಮಾತನಾಡಲು ನನಗೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಮಲ್ಲಾರಿಗೌಡ ಪಾಟೀಲ್ (ಸಂಕೇಶ್ವರ).—ಸನ್ಮಾನ್ಯ ಅಧ್ಯಕ್ಷರೇ, ಇವತ್ತು ನಗರಾಭಿವೃದ್ಧಿ ಸಚಿವರು ಹಾಗು ಉಳಿದ ಇಲಾಖೆಗಳ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವೊಂದು ಸೂಚನೆಗಳನ್ನು ಮಾತ್ರ ಕೊಡಲಿಕ್ಕೆ ಇಚ್ಛೆಪಡುತ್ತೇನೆ. ಈಗಾಗಲೇ ತಾವು ಮುನಿಸಿಪಾಲಿಟಿಗೆ ಏನು ಅನುದಾನ ಕೊಡುತ್ತಿದ್ದೀರಿ ನನಗೆ ತಿಳಿದಮಟ್ಟಿಗೆ ಅದು ಸಾಲದು ಅಲ್ಲದೆ ಇದರ ಬಗ್ಗೆ ಕೆಲವು ಮಾನ್ಯ ಸದಸ್ಯರು ಈಗಾಗಲೇ ತಮ್ಮ ಗಮನವನ್ನು ಇದರ ಕಡೆ ಸೆಳೆದಿದ್ದಾರೆ. ತಾವು ಅನುದಾನ ಕೊಡುವ ಮುನಿಸಿಪಾಲಿಟಿಗೆ ಸರಿಯಾದ ಸಮಯದಲ್ಲಿ ಕೊಡದಿದ್ದರೆ ಏನೂ ಸಾರ್ಥಕವಾಗುವುದಿಲ್ಲ. ನಿರ್ದಿಷ್ಟವಾಗಿ ಒಂದು ಅನುದಾನವನ್ನು ಕೊಡುವುದಕ್ಕೆ ತಾವು ಪ್ರಯತ್ನ ಪಡಬೇಕು ಎಂದು ಹೇಳುತ್ತೇನೆ. ಆಮೇಲೆ ಹಳ್ಳಿಗಾಡಿನಲ್ಲಿ ನಲ್ಲಿರತಕ್ಕಂತಹ ದಾರಿ ದೀಪಗಳ ಬಿಲ್ಲನ್ನು ಹಿಂದೆ ನಮ್ಮ ಸರ್ಕಾರವೇ ಪಾವತಿ ಮಾಡುತ್ತಿತ್ತು. ಅದೇ ರೀತಿ ಈಗಲೂ ದಾರಿದೀಪದ ಬಿಲ್ಲನ್ನು ಪಾವತಿ ಮಾಡಲು ಸರಿಯಾದ ವ್ಯವಸ್ಥೆಯನ್ನು ಮಾಡಬೇಕು.

ಕೆಲವು ಹಳ್ಳಿಗಳು ಮುನಿಸಿಪಾಲಿಟಿ ಕ್ಷೇತ್ರದಲ್ಲಿಯೇ ಬರುತ್ತವೆ. ಅವುಗಳನ್ನು ಕೂಡ ತಮ್ಮ ವಶಕ್ಕೆ ತೆಗೆದುಕೊಂಡು ಹಣದ ಮರುಪಾವತಿಯನ್ನು ಕಡ್ಡಾಯವಾಗಿ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಹಲವಾರು ಮುನಿಸಿಪಾಲಿಟಿಗಳಲ್ಲಿ ಇನ್ನೂ ವರೆಗೆ ನೀರಿನ ವ್ಯವಸ್ಥೆಯನ್ನು ಮಾಡಲಿಕ್ಕೆ ಆಗುತ್ತಿಲ್ಲ. ಈಗಾಗಲೇ ಅದರ ಬಗ್ಗೆ ಒಂದು ಕಮಿಟಿಯನ್ನು ಮಾಡಿದ್ದೇವೆ ಎಂದು ಹೇಳುತ್ತಿದ್ದೀರಿ ಇಂಥ ಮುನಿಸಿಪಾಲಿಟಿಗಳನ್ನು ಕೂಡ ಅರ್ಬನ್‌ವಾಟರ್ ಸಪ್ಲೈ ಮಂಡಲಿಗೆ ವಹಿಸಿಕೊಡಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಏತಕ್ಕೆಂದರೆ ತಾವು ಕೊಡತಕ್ಕಂಥ ಅನುದಾನ ಮುನಿಸಿಪಾಲಿಟಿಗಳಿಗೆ ಸಾಕಾಗುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಬಿಲ್‌ಗಳನ್ನು ಕಟ್ಟಲಿಕ್ಕೆ ಹಣ ಇರುವುದಿಲ್ಲ. ಅಂಥ ಸಂದರ್ಭಗಳಲ್ಲಿ ಕೆ. ಇ. ಬಿ. ಅಧಿಕಾರಿಗಳು ಎಲೆಕ್ಟ್ರಿಸಿಟಿಯನ್ನು ಕಟ್ ಮಾಡತಕ್ಕದು ಇರುತ್ತದೆ. ಆದ್ದರಿಂದ ಇವುಗಳನ್ನು ಕೂಡ ತಮ್ಮ ಕ್ಷೇತ್ರಕ್ಕೆ ವಹಿಸಿಕೊಳ್ಳಬೇಕು. ತಮ್ಮ ಡಿಮ್ಯಾಂಡನ್ನು ನೋಡಿದರೆ ಇದರಲ್ಲಿ ಅರ್ಬನ್ ವಾಟರ್ ಸಪ್ಲೈ ಇದು ಕಾಣುತ್ತಿಲ್ಲ. ಕಳೆದ ಸಾರಿ ಈ ಪ್ರಶ್ನೆ ಬಂದಾಗ ಒಂದು ನೇಮಕಾತಿ ಸಮಿತಿಯನ್ನು ಮಾಡುತ್ತೇವೆಂದು ತಾವು ಆಶ್ವಾಸನೆಯನ್ನು ಕೊಟ್ಟಿದ್ದೀರಿ. ಇಲ್ಲಿ ಮುಖ್ಯವಾದ ಬೇಡಿಕೆಯ ಬಗ್ಗೆ ಚರ್ಚೆ ನಡೆಯುವಾಗ ಮಾನ್ಯ ಸಚಿವರು ಇಲ್ಲ. ಅವರು ಇರಬೇಕಾಗಿತ್ತು. ಹಲವಾರು ಬೇಡಿಕೆಗಳ ಬಗ್ಗೆ ಅವರು ತುಂಬ ಗಮನಹರಿಸಬೇಕಾದ್ದು ಇತ್ತು. ದಯುವಿಟ್ಟು ಕಳಕಳಿಯಿಂದ ನಾನು ಕೇಳಿಕೊಳ್ಳುತ್ತೇನೆ. ಮಾನ್ಯ ನಗರಾಭಿವೃದ್ಧಿ ಸಚಿವರು ಇದ್ದು ಸಮಂಜಸವಾದ ಉತ್ತರವನ್ನು ಕೊಡತಕ್ಕಂಥ ಒಂದು ಸಂಪ್ರದಾಯವನ್ನು ಹಾಕಿಕೊಂಡರೆ ಬಹಳ ಒಳ್ಳೆಯದು.

ಇನ್ನು ಮುನಿಸಿಪಾಲಿಟಿ ಏರಿಯಾದಲ್ಲಿ ಬರತಕ್ಕಂಥ ಬಡಜನರು ಏನು ಇದ್ದಾರೆ ಅವರಿಗೂ ಕೂಡ ಹೌಸಿಂಗ್ ಟ್ಯಾಕ್ಸನ್ನು ಹಾಕುತ್ತಿರತಕ್ಕಂಥದ್ದು ಇರುತ್ತದೆ. ಅವರಿಗೆ ಈ ಹೌಸಿಂಗ್ ಟ್ಯಾಕ್ಸ್‌ನಿಂದ ವಿನಾಯಿತಿ ಮಾಡಬೇಕೆಂದು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಈ ಬಗ್ಗೆ ಮಾನ್ಯ ಮಂತ್ರಿಗಳು ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಮನೆಗಳ ನಿರ್ಮಾಣ ಕಾರ್ಯವನ್ನು ತೆಗೆದುಕೊಳ್ಳುವಾಗ ಯಾರೇ ಸಚಿವರು ಇರಲಿ ಅವರನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ ಪರಿಗಣಿತ ಕ್ಷೇತ್ರದಲ್ಲಿ ಭಾಗ್ಯ ಮಂದಿರ ಸ್ಕೀಮ್‌ನ್ನು ಅಳವಡಿಸಿಕೊಡರೆ ಅವರಿಗೆ ಒಳ್ಳೆಯ ಹೆಸರು ಬರುತ್ತದೆ. ಯಾರ ಕಡೆಗೆ ಹೋದರೂ ನನ್ನ ಕಡೆ ಹಣವಿಲ್ಲವೆಂದು ಹೇಳುತ್ತಾರೆ. ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಅವರ ಕಡೆ ಹೋದರೆ ಅವರು ನಮ್ಮಲ್ಲಿ ದುಡ್ಡಿಲ್ಲವೆಂದು ಹೇಳುತ್ತಾರೆ. ನಮ್ಮ ಕಂದಾಯ ಮಂತ್ರಿಗಳ ಕಡೆ ಹೋದರೆ ಅವರು ನಮ್ಮ ಕಡೆ ಹಣವಿಲ್ಲವೆಂದು ಹೇಳುತ್ತಾರೆ. ಮತ್ತೆ ಹಣ ಯಾರ ಕಡೆ ಬೇಡುವುದು. ನಮ್ಮ ಅಧ್ಯಕ್ಷರಿಗೆ ಅಧಿಕಾರವನ್ನು ಕೊಡಿ. ಅವರು ನಮಗೆ ಹಣವನ್ನು ಕೊಡುತ್ತಾರೆ.

ಮತ್ತೆ ನಮ್ಮದು ಹಲವಾರು ವರ್ಷಗಳಿಂದ ಒಂದು ಬೇಡಿಕೆ ಇದೆ. ಮಾನ್ಯ ಮುಖ್ಯಮಂತ್ರಿಗಳು ಈ ವರ್ಷ ಸಂಕೇಶ್ವರಕ್ಕೆ ನೀರನ್ನು ಕೊಡುವ ಸಲುವಾಗಿ ವಾಟರ್ ಸಪ್ಲೈಗೆ ಬೋರ್ಡಿಗೆ ಇದನ್ನು ಅಳವಡಿಸಿದ್ದಾರೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಕೇವಲ ಅಳವಡಿಸಿದರೆ ಈ ಕೆಲಸ ಆಗುವುದಿಲ್ಲ ಕಾರ್ಯಗತಗೊಳಿಸುವತ್ತ ಹೆಚ್ಚಿನ ಗಮನಹರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಏತಕ್ಕೆಂದರೆ ೨೦ ವರ್ಷಗಳಿಂದ ೨೫ ಪರ್ಸೆಂಟ್ ಟ್ಯಾಕ್ಸನ್ನು ಅವರು ಕೊಟ್ಟುಕೊಂಡು ಬರುತ್ತಿದ್ದಾರೆ. ೧೯೫೭ನೇ ಇಸವಿಯಿಂದ ನಮ್ಮ ಭಾಗದ ಕಬ್ಬು ಬೆಳೆಗಾರರ ಪರವಾಗಿ ಷುಗರ್ ಫ್ಯಾಕ್ಟರಿಯವರು ಕೋಟ್ಯಾಂತರ ರೂಪಾಯಿಗಳ ಟ್ಯಾಕ್ಸ್ ಕೊಟ್ಟಿದ್ದಾರೆ. ೧೨ ಹಳ್ಳಿಗಳಿಗೆ ಮತ್ತು ೨ ಪಟ್ಟಣ ಪ್ರದೇಶಗಳಿಗೆ ವಾಟರ್‌ಸಪ್ಲೈ ಸ್ಕೀಮ್‌ನ್ನು ಒತ್ತಾಯ ಪಡಿಸುತ್ತಿದ್ದೇವೆ. ತಮ್ಮ ಸರ್ಕಾರವಾದರೂ ಅನುದಾನವನ್ನು ಕೊಟ್ಟು ಇದನ್ನು ಪ್ರಾರಂಭ ಮಾಡಬೇಕು. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನಾ ಪತ್ರವನ್ನು ಕಳುಹಿಸಿಕೊಟ್ಟಿದ್ದೇನೆ. ಒಂದು ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿ ಮುಂದೆ ಬರತಕ್ಕಂಥ ಹೊಸ ವರ್ಷದಲ್ಲಿ ಈ ಯೋಜನೆಯನ್ನು ಪ್ರಾರಂಭ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇದನ್ನು ಸೆಂಟ್ರಲ್ ಅಸಿಸ್ಟೆನ್ಸ್ ಬರುತ್ತದೆಂದು ಕಾಯಿದೆ ನಮ್ಮ ಬಹುದಿನಗಳ ನಮ್ಮ ಬೇಡಿಕೆ ಏನು ಇದೆ ಅದನ್ನು ಬಗೆಹರಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಸಮಾಜಕಲ್ಯಾಣ ಇಲಾಖೆಯ ಬಗ್ಗೆ ಹೇಳುವುದಾದರೆ, ಬಹಳ ದುಃಖದಿಂದ ಇದರ ಬಗ್ಗೆ ಹೇಳಬೇಕಾಗುತ್ತದೆ. ಮಹಿಳಾ ಮಂಡಲಿಗಳು ಯಾರ ಕ್ಷೇತ್ರದಲ್ಲಿ ಬಂದರೂ, ಯಾರ ಕೈಯಲ್ಲಿ ಬಂದರೂ ಕೂಡ, ಅವರು ಮಹಿಳೆಯರೇ ಇದ್ದರೂ ಕೂಡ ಅವರು ಸರಿಯಾಗಿ ಕೆಲಸ ಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಹಳ್ಳಿಗಾಡಿನಲ್ಲಿ ಇರತಕ್ಕಂಥ ಮಹಿಳಾ ಮಂಡಲಿಗಳು ಏನು ಇರುತ್ತವೆ, ಅವುಗಳಿಗೆ ಅನುದಾನವನ್ನು ಕೊಡುತ್ತಿರತಕ್ಕಂಥದ್ದು ಏನೇನು ಸಾಲದಾಗಿರುತ್ತದೆ. ಮಾನ್ಯ ವೈ. ರಾಮಕೃಷ್ಣರವರು ಹಿರಿಯ ಸದಸ್ಯರಾದಂಥ ಅವರು ಹೇಳಿದರು. ಈ ಒಂದು ಖಾತೆ ಏನು ಇದೆ ಇದು ಸುಮಾರು ೧೨–೧೩ ವರ್ಷಗಳಿಂದ ಮಹಿಳೆಯರಿಗೆ ವಹಿಸಿ ಕೊಡಲಾಗುತ್ತಿದೆ ಹೀಗಿದ್ದರೂ ಬಹಳ ದುಃಖದಿಂದ ಹೇಳಬೇಕಾಗಿದೆ. ಒಂದು ಹೊಸ ವೈಶಿಷ್ಟ್ಯವನ್ನು, ಒಂದು ಹೊಸ ರೂಪವನ್ನು ನಿರ್ಮಾಣ ಮಾಡಲಿಕ್ಕೆ ಅಲ್ಲಿ ಆಗಲಿಲ್ಲ. ಈಗ ಈ ಖಾತೆಗೆ ದಿವಂಗತ ದೇವರಾಜಅರಸ್‌ರವರ ಸುಪುತ್ರಿ ಶ್ರೀಮತಿ ಚಂದ್ರಪ್ರಭಾ ಅರಸ್‌ರವರು ಬಂದಿರುತ್ತಾರೆ. ದಿವಂಗತ ದೇವರಾಜ ಅರಸ್‌ರವರನ್ನು ಈ ಸಂದರ್ಭದಲ್ಲಿ ಯಾವರೀತಿ ನೆನಸಿಕೊಳ್ಳುತ್ತೇವೆಯೋ ಹಾಗೆಯೇ ಮಹಿಳಾ ಕ್ಷೇತ್ರದಲ್ಲಿ ತಮ್ಮ ಹೆಸರೂ ಕೂಡ ವಿಶಿಷ್ಟ ಮರ್ಯಾದೆಯಿಂದ ನೆನಸಿಕೊಳ್ಳಬೇಕಾದರೆ ವಿಶಿಷ್ಟ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ದೇವದಾಸಿ ಪದ್ಧತಿಯೆಂದು ಏನು ಇರುತ್ತದೆ ಈ ಪದ್ಧತಿಯ ಬಗ್ಗೆ ನಾವು ಪದೇ ಪದೇ ಹೇಳುತ್ತಲೇ ಇದ್ದೇವೆ. ಇದನ್ನು ತೊಡೆದು ಹಾಕುವುದಕ್ಕೆ ಸೂಕ್ತ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಯಾರೋ ಅವರಿಗೆ ಮದುವೆ ಮಾಡಿಸಿದರು ಎಂದರೆ ೫೦-೬೦ ವರ್ಷದವರಿಗೆ ಮದುವೆ ಮಾಡಿಸಿದರೆ ಅದರಿಂದ ಏನು ಸಾಧಿಸಿದಂತಾಗುವುದಿಲ್ಲ ಹದಿನೆಂಟು ವರ್ಷ ಮೀರದಂಥ ಮಕ್ಕಳಿಗೆ ಮದುವೆ ಮಾಡಿದರೆ ಒಂದು ಮಹತ್ ಕಾರ್ಯವನ್ನು ಮಾಡಿದಂತಾಗುತ್ತದೆ.

ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಕೃಷಿ ಕಾರ್ಮಿಕ ಗರ್ಭಿಣಿಯರಿಗೆ ತಿಂಗಳಿಗೆ ೫೦ ರೂಪಾಯಿಗಳ ಮಾಶಾಸನವನ್ನು ಕೊಡತಕ್ಕಂಥ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿರುತ್ತೀರಿ. ಹದಿನೆಂಟು ವರ್ಷ ವಯಸ್ಸು ಮೀರಿದಂತವರಿಗೆ ಕೊಡುವಂಥ ಒಂದು ವ್ಯವಸ್ಥೆಯಾಗಬೇಕು. ಏತಕ್ಕೆಂದರೆ ಜನರು ಏನು ವಿಚಾರ ಮಾಡುತ್ತಾರೆಂದರೆ ಮಾಸಾಶನ ದೊರೆಯುತ್ತದೆ ಎಂಬ ಕಾರಣಕ್ಕಾಗಿ ೧೮ ವರ್ಷದ ಒಳಗೆ ಮದುವೆ ಮಾಡಿದರೆ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನೂ ಕೂಡ ಯೋಚನೆ ಮಾಡಬೇಕಾಗುತ್ತದೆ ಇದರಿಂದ ಸಮಾಜದಲ್ಲಿ ಇರತಕ್ಕಂಥ ಲೋಪದೋಷಗಳನ್ನು ಸರಿಪಡಿಸಲು ಸಾಧ್ಯವೇ ಆಗುವುದಿಲ್ಲ. ಇವೊತ್ತಿನ ದಿವಸ ಬೆಂಗಳೂರಿನಲ್ಲಿ ಒಂದು ಪಾಕಶಾಸ್ತ್ರ ಶಾಲೆಯನ್ನು ತೆಗೆಯತಕ್ಕಂಥ ಯೋಜನೆಯನ್ನು ಇಟ್ಟುಕೊಂಡಿರುತ್ತೀರಿ. ಇದನ್ನು ಬೆಳಗಾಂ ರಾಯಚೂರು ಅಥವಾ ಗುಲ್ಬರ್ಗಾ ಜಿಲ್ಲೆಯಲ್ಲಿ ಹಾಕಬೇಕೆಂದು ಹೇಳುತ್ತೇನೆ. ಏತಕ್ಕೆಂದರೆ ಎಲ್ಲಾ ಇನ್‌ಸ್ಟಿಟ್ಯೂಟ್‌ಗಳನ್ನು ಬೆಂಗಳೂರು ನಗರದಲ್ಲಿಯೇ ತೆರೆಯುತ್ತಿರಬೇಕಾದರೆ ಮತ್ತೊಂದು ಇನ್‌ಸ್ಟಿಟ್ಯೂಷನ್‌ನ್ನು ಇಲ್ಲೇ ತೆರೆದರೆ ರೂರಲ್ ಏರಿಯಾವನ್ನು ಕಡೆಗಣಿಸಿದಂತಾಗುತ್ತದೆ. ಈ ವಿಷಯವನ್ನು ಪದೇ ಪದೇ ಅಸೆಂಬ್ಲಿಯಲ್ಲಿ ಪ್ರಸ್ತಾಪ ಮಾಡುತ್ತಲೇ ಇರುತ್ತೇವೆ. ಆದ್ದರಿಂದ ವಿಶೇಷವಾಗಿ ಹೆಣ್ಣು ಮಕ್ಕಳ ಬಗ್ಗೆ ಪ್ರತಿಯೊಂದು ಹಂತದಲ್ಲಿಯೂ ನಿರ್ದಿಷ್ಟವಾದ ಏನಾದರೂ ಒಂದು ಸೇವಾ ಉದ್ದೇಶಕ್ಕೆ ಕಾರ್ಯಕ್ರಮವನ್ನು ರೂಪಿಸಿ, ಇದರ ಬಗ್ಗೆ ಒಂದು ಮಾಸ್ಟರ್ ಪ್ಲಾನ್‌ನ್ನೇ ಮಾಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. ರಾಮಚಂದ್ರ ರಾವ್ (ಉಲ್ಲಾಳ್).— ಮಾನ್ಯ ಅಧ್ಯಕ್ಷರೇ ಇವೊತ್ತು ಮಾನ್ಯ ವೈ. ರಾಮಕೃಷ್ಣರವರು ಭಾಷಣ ಮಾಡಿದ್ದನ್ನು ಕೇಳಿದಾಗ ನನಗೆ ಅವರು ಈ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರ ಸಮಸ್ಯೆ ಇನ್ನೇನು ಸಂಪೂರ್ಣವಾಗಿ ಬಗೆಹರಿದು ಹೋಗುತ್ತದೆ ಎನ್ನುವ ಮಟ್ಟಕ್ಕೆ ಮಾತನಾಡಿದರು. ನಾನು ಇವೊತ್ತು ಚಾಲೆಂಜ್ ಮಾಡಿ ಹೇಳುತ್ತೇನೆ. ಎಷ್ಟು ಜನ ಇವರಲ್ಲಿ ಮ್ಯಾಜಿಸ್ಟ್ರೇಟರು ಇದ್ದಾರೆ. ಎಷ್ಟು ಜನ ಮುನಸೀಫ್‌ಗಳು ಇದ್ದಾರೆ. ಎಷ್ಟು ಜನ ಜಡ್ಜಸ್ ಇದ್ದಾರೆ. ಜಾತಿ ಜಾತಿ ಎಂದು ಹೇಳತಕ್ಕಂಥ ಅಪ್ರೋಚ್ ಸರಿಯಲ್ಲ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಉದ್ಧಾರವಾಗಬೇಕು. ಅದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಇಡೀ ಸಮಾಜದಲ್ಲಿ ಒಂದು ಸಾವಿರ ವರ್ಷಗಳಿಂದ ಬಂದಿರತಕ್ಕಂಥ ಮಡಿವಂಥ ಅವಶೇಷವನ್ನು ಹೋಗಲಾಡಿಸಬೇಕಾದರೆ ಅಪ್ರೋಚ್ ಏನು ಇದೆ ಅದು, It must be a collective approach ಆಗಿರಬೇಕೆಂದು ನನಗನಿಸುತ್ತದೆ. ಇದನ್ನು ಸರಿಯಾಗಿ ಅರ್ಥಮಾಡಿಕೊಂಡು ಜನತಾ

ಸರ್ಕಾರ ಹಿಂದಿನದನ್ನು ಅನುಸರಿಸಿ ಮಾಡಿದಂಥ ದಾರಿಯನ್ನು ಬಿಟ್ಟು, ಹೊಸದಾರಿಯನ್ನು ಅನುಸರಿಸಬೇಕು. ೧೯೭೧ರ ಸೆನ್ಸಸ್ ಪ್ರಕಾರ

"The percerntage of literacy of Schiduled Caste is 13,89 and Scheduled Tribe is 14.85 as against the General literacy percentage of 31,52 as per 1971 Census."

೧೯೭೧ರ ಸೆನ್ಸಸ್ ತೆಗೆದುಕೊಂಡು ಕಂಪೇರ್ ಮಾಡಿದರೆ ಇವರ ಲಿಟ್ರೆಸಿ ಕೆಳಗೆ ಮಟ್ಟ ಎಷ್ಟು ಇದೆ ಎನ್ನುವುದು ಅರ್ಥವಾಗುತ್ತದೆ. ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಏನು ಹೇಳಿರುತ್ತಾರೆಂದ

"During the year under report, out of a sum of Rs. 2169.81 lakhs, a sum of Rs.1469.89 lakhs has been ear marked for implementing Educaticnal Schemes only"

I say, spend much of the amount to Education and only then I think, the community can benefit. ಸಾವಿರಾರು ವರ್ಷಗಳಿಂದ ಬಂದಿರತಕ್ಕಂಥ ದ್ದನ್ನು ಹೋಗಲಾಡಿಸಲು ಒಂದು ಹೊಸ ಅಪ್ರೋಚ್‌ನ್ನು ನಾನು ಸ್ವಾಗತಮಾಡುತ್ತೇನೆ.

೨-೦೦ ಪಿ. ಎಂ.

ಮೊದಲಿನಿಂದಲೂ ಏನು ಒಂದು ತರಬೇತಿ ಕೊಡುತ್ತಿದ್ದಾರೆ, ಇದಕ್ಕೆ ಹೆಚ್ಚಿನ ಒಂದು ಪ್ರಾಮುಖ್ಯತೆಯನ್ನು ಕೊಟ್ಟಂತೆ ಕಾಣುವುದಿಲ್ಲ. ಈಗಿರುವ ಕ್ರಾಫ್ಟ್ ಸೆಂಟರ್‌ಗಳಲ್ಲಿ carpentrary, weaving, tailoring, printing, chappal making ಮುಂತಾದವುಗಳ ಬಗ್ಗೆ ತರಬೇತಿ ಕೊಡಲಾಗುತ್ತಿದೆ. turning and fitting ಬಗ್ಗೆಯೂ ಸಹ ತರಬೇತಿ ಕೊಡಬಹು ದೆಂಬುದು ಅಧಿಕಾರಿಗಳ ತಲೆಯಲ್ಲಿ ಇನ್ನೂ ಬಂದಿಲ್ಲವೆಂದು ಕಾಣುತ್ತದೆ. ನಮ್ಮಲ್ಲಿ ಹೊಸ ಒಂದು ಆಧುನಿಕ ಕೈಗಾರಿಕೆಗಳು ಸ್ಥಾಪನೆಗೊಳ್ಳುತ್ತಿರುವಾಗ ಈ ಜನರಿಗೆ ಹೊಸ ಹೊಸ ಕೆಲಸಗಳನ್ನು ಕಲಿಸು ವುದಕ್ಕೆ ಅವಕಾಶವಿದೆ. ಸಾವಿರಾರು ಕೆಲಸಗಳನ್ನು ಕಲಿಸಲು ಅವಕಾಶವಿದ್ದರೂ ಸಹ ಕೇವಲ carpentary, weaving, tailoring, chappal making ಬಗ್ಗೆಯೇ ಈಗ ತರಬೇತಿ ಕೊಡಲಾಗುತ್ತಿದೆ. ಇದು ಸರಿಯಲ್ಲ. ಈಗಿರುವ ಕ್ರಾಫ್ಟ್ ಸೆಂಟರ್‌ಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಟ್ರೈನಿಂಗ್ ಕೊಡಲು ಪ್ರಾರಂಭ ಮಾಡಿದಾಗ ಮಾತ್ರ ಈ ಒಂದು ಸಮಸ್ಯೆಯನ್ನು ಬಗೆಹರಿಸು ವುದಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ.

ಇನ್ನು ಟೈಲರಿಂಗ್ ಯೂನಿಟ್‌ಗಳು ರಾಜ್ಯದ ಬೇರೆ ಬೇರೆ ಕಡೆ ಇವೆ. ಮಂಗಳೂರಿನಲ್ಲಿ ಒಂದು ಯುನಿಟ್ ಇದೆ ಗುಲ್ಬರ್ಗದಲ್ಲಿ ಒಂದು ಯೂನಿಟ್ ಇದೆ. ಈ ಟೈಲರಿಂಗ್ ಯೂನಿಟ್ ಗಳಿಂದ ಈ ಜನರಿಗೆ ಎಷ್ಟು ಅನುಕೂಲವಾಗಬೇಕಾಗಿತ್ತೋ ಅಷ್ಟು ಆಗಿಲ್ಲವೆಂದು ಹೇಳಬಹುದು. ಇಲ್ಲಿ ತರಬೇತಿ ಪಡೆಯುವವರು ಗುಲಾಮರು ಎಂಬ ಭಾವನೆಯಿಂದಲಾಗಲೀ ಅಥವಾ ಅವರು ಹರಿಜನರು ಎಂಬ ದೃಷ್ಟಿಯಿಂದಾಗಲೀ ನೋಡಬಾರದು. ಈ ದೃಷ್ಟಿ ಇಟ್ಟುಕೊಂಡು ಈ ಯೂನಿಟ್ ಗಳನ್ನು ನಡೆಸಬಾರದು. ಈ ಟೈಲರಿಂಗ್ ಯೂನಿಟ್‌ಗಳನ್ನು ನಡೆಸಲು ಆಸಕ್ತಿ ಇರುವಂತಹ ಅಧಿಕಾರಿಗಳನ್ನೇ ನೇಮಕ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಈಗ ಹಾಸ್ಟಲ್‌ಗಳನ್ನು ನಡೆಸುತ್ತಿರುವ ರೀತಿಯನ್ನು ನೋಡಿದರೂ ಸಹ ನಮಗೆ ನಿಜವಾಗಿಯೂ ಜಿಗುಪ್ಸೆಯಾಗುತ್ತದೆ. ಆತ್ಮ ವಿಶ್ವಾಸವಿರುವ ಯಾರೂ ಸಹ ಈ ಹಾಸ್ಟಲ್‌ಗಳಲ್ಲಿರುವುದಕ್ಕೆ ಸಾಧ್ಯವಿಲ್ಲ. "These tribal people are mainly concentrated in the Districts of Mysore, Kodagu Dakshina Kannada and Chikamaglur." ಎಂದು ಇಲ್ಲಿ ಹೇಳಿದ್ದಾರೆ. ಇದರಲ್ಲಿ ಬಳ್ಳಾರಿಯನ್ನು ಏತಕ್ಕೆ ಸೇರಿಸಿಲ್ಲ. ಏಕೆಂದರೆ, ಇಲ್ಲಿಯೂ ಸಹ ದೊಡ್ಡ ಪ್ರಮಾಣದಲ್ಲಿ ಲಂಬಾಣಿ ಜನರಿದ್ದಾರೆ. ಆದ್ದರಿಂದ ಇವರಿಗಾಗಿ ನಾಲ್ಕೈದು ಸೆಂಟರ್‌ಗಳನ್ನು ತೆರೆಯುವುದಕ್ಕೆ ಬದಲು, ಇನ್ನೂ ಹೆಚ್ಚಿನ ಸೆಂಟರ್‌ಗಳನ್ನು ಪ್ರಾರಂಭ ಮಾಡಬೇಕು. ಹತ್ತು ಜನರು ಇರಲಿ, ನೂರು ಜನರು ಇರಲಿ, ಸಾವಿರ ಜನರು ಇರಲಿ, ಒಟ್ಟಿನಲ್ಲಿ ಈ ಜನರು ಇರುವ ಕಡೆಗಳಲ್ಲಿ ಒಂದೊಂದು ಸೆಂಟರ್‌ನ್ನು ಪ್ರಾರಂಭ ಮಾಡಬೇಕು. ಕೆಲವೇ ಜಿಲ್ಲೆಗಳಲ್ಲಿ ಮಾತ್ರ ಈ ಸೆಂಟರ್‌ಗಳಿವೆ ಎಂಬ ಭಾವನೆ ಜನರಲ್ಲಿ ಬರದಂತೆ ತಾವು ನೋಡಿಕೊಳ್ಳಬೇಕು. ಇನ್ನು ಪೇಜ್ ೮ ರಲ್ಲಿ ಈ ರೀತಿ ಹೇಳಿದ್ದಾರೆ.

"A sum of .55 lakhs under plan is provided for supply of agricultural inputs to 110 ST farmers who have been sanctioned lands."

This is a very very good scheme. ಈ ಬಗ್ಗೆ ನಾನು ಹೇಳುವುದೇನೆಂದರೆ, ಈ ಜನರಿಗೆ ಕೇವಲ ಇನ್_ಪುಟ್ಸ್ ಕೊಟ್ಟರೆ ಸಾಲದು, ಇವರು ಸಾಮೂಹಿಕವಾಗಿ ವ್ಯವಸಾಯ ಮಾಡಲು ಎಲ್ಲಾ ಅನುಕೂಲಗಳನ್ನು ಮಾಡಿಕೊಳ್ಳಬೇಕು. ಒಳ್ಳೆಯ ಅಧಿಕಾರಿಗಳ ಸಹಾಯವನ್ನು ಒದಗಿಸಬೇಕು. ಈ ರೀತಿ ಮಾಡಿದಾಗ ಮಾತ್ರ ಈ ಜನರು ಬೈರೆಯವರ ಜೊತೆ ಕಾಂಪೀಟ್ ಮಾಡಲು ಸಾಧ್ಯವಾಗುತ್ತದೆ. ಅಷ್ಟೆ ಅಲ್ಲ, ಇವರು ಒಳ್ಳೆಯ ರೀತಿಯಿಂದ ಜೀವನ ನಡೆಸಲು ಸಾಧ್ಯವಾಗುತ್ತದೆ. ಈಗ ಹರಪನಹಳ್ಳಿ ಹಾಗೂ ಹೂವಿನಹಿಪ್ಪರಗಿಯಲ್ಲಿ ವ್ಯವಸಾಯದ ಫಾರಂಗಳಿವೆ. ಈ ಸರ್ಕಾರಿ ಫಾರಂಗಳಲ್ಲಿ ಕೆಲಸ ಮಾಡುತ್ತಿರುವವರು ಒಂದಕ್ಕೆ ಹತ್ತರಷ್ಟು ಹೆಚ್ಚು ಬೆಳೆಯುತ್ತಿದ್ದಾರೆ ಮತ್ತು ಉತ್ತಮ ರೀತಿಯಲ್ಲಿ ವ್ಯವಸಾಯ ಮಾಡುತ್ತಿದ್ದಾರೆ. ಆದ್ದರಿಂದ ಟ್ರೈಬಲ್ ಪೀಪಲ್‌ಗೆ ಹೆಚ್ಚು ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಹಾಗೂ ಹೆಚ್ಚಿನ ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ಇಂತಹ ಫಾರಂಗಳನ್ನು ರಾಜ್ಯದ ಬೇರೆ ಕಡೆಗಳಲ್ಲಿಯೂ ಜಾರಿಗೆ ತರಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ (ತುಮಕೂರು),—ಮಾನ್ಯ ಅಧ್ಯಕ್ಷರೇ, ನಾನು ಎರಡು ವಿಷಯಗಳನ್ನು ಮಾತ್ರ ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ. ತುಮಕೂರಿನ ಜನಸಂಖ್ಯೆ ಈ ಮೊದಲು ೭೦–೮೦ ಲಕ್ಷ ಇದ್ದದ್ದು ಕಳೆದ ೨–೩ ವರ್ಷಗಳಲ್ಲಿ ಒಂದು ಲಕ್ಷದ ೩೦ ಸಾವಿರಕ್ಕೆ ಹೆಚ್ಚಿದೆ. ಇದರಿಂದ ಅಲ್ಲಿನ ಜನರಿಗೆ ಸಾಕಷ್ಟು ಪ್ರಮಾಣದಲ್ಲಿ ಕುಡಿಯುವ ನೀರನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಒಬ್ಬರಿಗೆ ೫ ಗ್ಯಾಲನ್ ನೀರು ಕೊಡುತ್ತೇವೆಂದು ಹೇಳಿದರೂ ಸಹ ನಾಲ್ಕೈದು ದಿವಸಗಳಿಗೆ ಒಂದು ಸಲ ಕೂಡ ನೀರನ್ನು ಸರಬರಾಜು ಮಾಡಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಇದರ ಬಗ್ಗೆ ಯೋಚನೆ ಮಾಡಿ, ಬೆಂಗಳೂರಿಗೆ ೩ನೇ ಹಂತದ ಕಾವೇರಿ ಯೋಜನೆ ನೀರು ಬಂದಾಗ ಹೆಸರಘಟ್ಟದ ನೀರನ್ನು ನಮ್ಮ ನಗರಕ್ಕೆ ಬಿಟ್ಟುಕೊಡುವ ಬಗ್ಗೆ ಉನ್ನತಮಟ್ಟದ ಸಭೆ ಒಂದರಲ್ಲಿ ಉನ್ನತ ಅಧಿಕಾರಿಗಳು ಮತ್ತು ಮಾನ್ಯ ಮಂತ್ರಿಗಳು ವಿಚಾರ ಮಾಡಿದರು ಮತ್ತು ಹೆಸರುಘಟ್ಟದ ನೀರನ್ನು ಕೊಡುವುದಕ್ಕೆ ಸಾಧ್ಯತೆ ಇದೆ ಎಂದು ಹೇಳಿದ್ದಾರೆ. ಈಗ ೩ ೪ ಮಿಲಿಯನ್‌ಗ್ಯಾಲನ್ ನೀರನ್ನು ಮಾತ್ರ ಸರಬರಾಜು ಮಾಡಲಾಗುತ್ತಿದೆ ಇದು ಸಾಲುವುದಿಲ್ಲ. ಆದ್ದರಿಂದ ಈ ಬಗ್ಗೆ ಏನಾದರೂ ಒಂದು ವ್ಯವಸ್ಥೆಯನ್ನು ಜಾಗ್ರತೆ ಮಾಡಬೇಕೆಂದು ಬೇಡಿಕೊಳ್ಳುತ್ತೇನೆ.

ಇನ್ನು ನಮ್ಮ ನಗರಸಭೆಗಳ ಆರ್ಥಿಕ ಪರಿಸ್ಥಿತಿ ಅಷ್ಟು ಚೆನ್ನಾಗಿಲ್ಲವೆಂಬುದು ಎಲ್ಲರಿಗೂ ಗೊತ್ತಿದೆ. ಆದ್ದರಿಂದ ನಗರ ನೀರು ಸರಬರಾಜು ಮಂಡಲಿಯವರೇ ನಮ್ಮ ನಗರದ ನೀರು ಸರಬರಾಜು ಕೆಲಸವನ್ನು ವಹಿಸಿಕೊಂಡು ದಿನವೂ ನೀರು ಸರಬರಾಜು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ೫–೬ ದಿವಸಗಳಿಗೆ ಒಂದು ಸಲ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಇದನ್ನು ಆದಷ್ಟೂ ಉತ್ತಮಪಡಿಸಬೇಕೆಂದು ಕೇಳಿಕೊಳ್ಳುತ್ತೇವೆ.

ಇನ್ನು ಸಿ.ಐ.ಟಿ.ಬಿ. ಯನ್ನು ತಾ ೨೦–೩–೧೯೮೩ ರಂದು ನಮ್ಮ ತುಮಕೂರು ನಗರಕ್ಕೆ ಅಳವಡಿಸಿದ್ದಾರೆ. ಆದರೆ ಇಲ್ಲಿಯವರೆಗೂ ಇದಕ್ಕೆ ಸಿಬ್ಬಂದಿ ವರ್ಗವನ್ನು ನೇಮಕ ಮಾಡಿಲ್ಲ. ಇದರಿಂದ ಅಲ್ಲಿನ ಕೆಲಸ ಕಾರ್ಯಗಳೆಲ್ಲಾ ಸ್ಥಗಿತಗೊಂಡಿದೆ. ಆದ್ದರಿಂದ ಕೂಡಲೇ ಸಿಬ್ಬಂದಿ ವರ್ಗವನ್ನು ರಚನೆ ಮಾಡಿ ಎನ್.ಓ.ಸಿ. ಪಡೆಯಲು ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಗರಸಭೆಯ ಆದಾಯವನ್ನು ಜಾಸ್ತಿ ಮಾಡುವ ಬಗ್ಗೆ ಯಾರು ಯಾರು ಅನುಮತಿ ಇಲ್ಲದೆ ಮನೆಗಳನ್ನು ಕಟ್ಟಿಸಿಕೊಂಡಿದ್ದಾರೋ ಅಂತಹ ಮನೆಗಳನ್ನೆಲ್ಲಾ ರೆಗ್ಯುಲರೈಸ್ ಮಾಡಿ, ಮನೆ ಗಂದಾಯವನ್ನು ನಿಗದಿ ಮಾಡಲು ಮತ್ತು ಅಭಿವೃದ್ಧಿ ವೆಚ್ಚವನ್ನು ಸಂಬಂಧಪಟ್ಟವರಿಂದ ವಸೂಲಿ ಮಾಡಲು ನಗರಸಭೆಯವರಿಗೆ ಅವಕಾಶ ಮಾಡಿಕೊಡಬೇಕು. ಈ ರೀತಿ ಮಾಡಿದಾಗ ಮಾತ್ರ ನಗರಸಭೆಯವರ ಆರ್ಥಿಕ ಪರಿಸ್ಥಿತಿ ಸುಧಾರಿಸುವುದಕ್ಕೆ ಅವಕಾಶವಾಗುತ್ತದೆ.

ಇನ್ನು ಹರಿಜನ ಮತ್ತು ಗಿರಿಜನರ ಅಭಿವೃದ್ಧಿಗೋಸ್ಕರ ಮಾನ್ಯ ಮಂತ್ರಿಗಳು ಮುಖ್ಯವಾಗಿ ಗಮನ ಕೊಡಬೇಕು. ಇದರ ಏಳಿಗೆ ಬಗ್ಗೆ ಆಸಕ್ತಿ ಇರುವಂತಹ ಅಧಿಕಾರಿಗಳನ್ನು ನೇಮಕಮಾಡಬೇಕೆಂದು ಮಾನ್ಯ

ರಾಮಚಂದ್ರರಾವ್ ಅವರು ಬಹಳ ಚೆನ್ನಾಗಿ ಹೇಳಿದರು. ಅವರುಹೇಳಿದಂತೆ ಒಳ್ಳೆಯ ಆಸಕ್ತಿ ಇರುವ ಅಧಿಕಾರಿಗಳನ್ನು ನೀವು ನೇಮಕ ಮಾಡಿದರೆ ಏನಾದರೂ ಒಳ್ಳೆಯ ಕೆಲಸಗಳಾಗುತ್ತವೆ. ಇಲ್ಲದಿದ್ದರೆ ಆಗು ವುದಿಲ್ಲ. ಸೆಲ್ಫ್ ಎಂಪ್ಲಾಯ್‌ಮೆಂಟ್ ಸ್ಕೀಮಿನ ಕೆಳಗೆ ಸಹಾಯ ಪಡೆಯುವವರು ಬಹಳ ತೊಂದರೆ ಪಡು ತ್ತಿದ್ದಾರೆ. ಇಂತಹ ಎರಡು ಮೂರು ಕೇಸ್‌ಗಳು ನನ್ನ ಬಳಿ ಬಂದಿತ್ತು. ಇವರು ಮ್ಯಾಚಿಂಗ್ ಗ್ರ್ಯಾಂಟ್ ಪಡೆಯಲು ಬೆಂಗಳೂರಿಗೆ ಬರಬೇಕಾಗಿದೆ. ಕೆಲವರು ಬೆಂಗಳೂರಿಗೆ ನಾಲ್ಕೈದು ಸಲ ಬಂದರೂ ಸಹ ಸಂಬಂಧಪಟ್ಟ ಅಧಿಕಾರಿಗಳು ಅವರನ್ನು ಸತಾಯಿಸಿ ವಾಪಸ್ ಕಳುಹಿಸುತ್ತಿದ್ದಾರೆ. ಇದು ತಪ್ಪಬೇಕು. ಈ ಅಧಿಕಾರಿಗಳು ಯಾರು ಎಂಬುದನ್ನು ಮಾನ್ಯ ಮಂತ್ರಿಗಳು ಸುಲಭವಾಗಿ ಕಂಡುಹಿಡಿಯಬಹುದು. ಆದ್ದರಿಂದ ಈ ಯೋಜನೆಯ ಬಗ್ಗೆ ಆಸಕ್ತಿ ಇರುವವರನ್ನೇ ನೇಮಕ ಮಾಡಬೇಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿಯೇ ಈ ಒಂದು ಯೋಜನೆಯ ಸಹಾಯ ಪಡೆದುಕೊಳ್ಳುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮುಖ್ಯವಾಗಿ ನಮ್ಮ ತುಮಕೂರು ನೀರು ಸರಬರಾಜು ಯೋಜನೆ ಕೆಲಸವನ್ನು ನಗರ ನೀರು ಸರಬರಾಜು ಮಂಡಲಿಯವರೇ ವಹಿಸಿಕೊಳ್ಳಬೇಕೆಂದು ಕೇಳಿ ಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎ. ಬನ್ನಿ (ಗುಳೇದಗುಡ್ಡ).—ಸನ್ಮಾನ್ಯ ಅಧ್ಯಕ್ಷರೇ ಸಮಾಜಕಲ್ಯಾಣ ಮತ್ತು ಹಿಂದುಳಿದವರ್ಗಗಳ ಇಲಾಖೆಯ ಬೇಡಿಕೆಗಳನ್ನು ಮಾನ್ಯಮಂತ್ರಿಗಳು ಈಸದನದಲ್ಲಿ ಮಂಡಿಸಿದ್ದಾರೆಅವರ ಬೇಡಿಕೆಗಳಿಗೆ ನನ್ನ ಸಂಪೂರ್ಣ ಬೆಂಬಲವನ್ನು ಕೊಟ್ಟು ಕೆಲವಾರು ಸೂಚನೆಗಳನ್ನು ಕೊಡಬಯಸುತ್ತೇನೆ. ಮೊದಲನೆಯದಾಗಿ, ಸಮಾಜ ಕಲ್ಯಾಣ ಮತ್ತು ಮಕ್ಕಳ ಕಲ್ಯಾಣದ ಬಗ್ಗೆ ಹಾಗೂ ಮಹಿಳಾ ಕಲ್ಯಾಣದ ಬಗ್ಗೆ ನಾನು ಪ್ರಸ್ತಾಪ ಮಾಡಬಯಸುತ್ತೇನೆ. ನಾವು ಇವತ್ತಿನ ದಿವಸ ಅನೇಕ ಕಾನೂನು ಮತ್ತು ಕಾಯ್ದೆಗಳ ಚೌಕಟ್ಟಿನಲ್ಲಿ ಕೆಲಸ ಮಾಡಬೇಕಾಗುತ್ತದೆ. ನಾವು ಎಷ್ಟೇ ಕಾನೂನು ಮತ್ತು ಕಾಯ್ದೆಗಳನ್ನು ಮಾಡಿದರೆ ಮನುಷ್ಯರ ಮನಸ್ಸು ಮಾತ್ರ ಬದಲಾವಣೆಯಾಗಬೇಕು ಇಲ್ಲದಿದ್ದರೆ ಆ ಕಾನೂನಿನಿಂದ ಏನೂ ಸಾಧ್ಯವಾಗುವುದಿಲ್ಲ. ಇವೊತ್ತು ನಮ್ಮ ರಾಜ್ಯದಲ್ಲಿ ಮಹಿಳಾ ಕಲ್ಯಾಣವಾಗಬೇಕು. ಆಕಲ್ಯಾಣವನ್ನು ಮಾತ್ರನಾವು ಸಾಧನೆಮಾಡುವುದಕ್ಕೆ ಆಗಿಲ್ಲನಾವುಪ್ರತಿನಿತ್ಯ ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ ಮಹಿಳೆಯರ ಅತ್ಯಾಚಾರ ಒಂದಲ್ಲ ಒಂದು ರೀತಿಯಲ್ಲಿ ನಡೆಯುತ್ತಲೇ ಇರುತ್ತದೆ. ಇವೊತ್ತು ನಮ್ಮ ರಾಜ್ಯದಲ್ಲಿ ಸುಮಾರು ೫೦ ಲಕ್ಷ ಸ್ತ್ರೀ ವರ್ಗ ಇದೆ. ಆದರೆ ಆ ವರ್ಗದ ಹಿತರಕ್ಷಣೆಯನ್ನು ನಮ್ಮ ಸರ್ಕಾರದವರು ಸರಿಯಾಗಿ ಮಾಡುತ್ತಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದಕ್ಕೆ ಪುರುಷರು ಸಹ ಸ್ವಲ್ಪ ಮನಸ್ಸು ಮಾಡಬೇಕೆಂದು ನಾವು ಹೇಳುತ್ತೇನೆ.

ಮಕ್ಕಳ ಬಗ್ಗೆ ನಾನು ಎರಡು ಮಾತುಗಳನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುವುದಾದರೆ ನಮ್ಮ ಮಕ್ಕಳನ್ನು ರಿಮ್ಯಾಂಡ್ ಹೋಂನಲ್ಲಿ ಇಟ್ಟಿರುತ್ತಾರೆ. ಅಲ್ಲಿ ಮಕ್ಕಳ ಮನಸ್ಸು ಪರಿವರ್ತನೆ ಗೊಂಡು ಅವರ ಮನಸ್ಸಿನ ಮೇಲೆ ಒಂದು ಆಘಾತವನ್ನುಂಟುಮಾಡುತ್ತದೆ ಆದ್ದರಿಂದ ನಾನು ಮಾನ್ಯ ಮಂತ್ರಿಗಳಿಗೆ ಒಂದು ಸಲಹೆಯನ್ನು ಕೊಡಬಯಸುತ್ತೇನೆ. ಆ ಸಲಹೆಯಾದರೂ ಏನೆಂದರೆ ರಿಮ್ಯಾಂಡ್ ಹೋಂನಲ್ಲಿರತಕ್ಕಂಥ ಮಕ್ಕಳಿಗೆ ಒಳ್ಳೆಯ ಶಿಕ್ಷಣವನ್ನು ಕೊಡಬೇಕು. ಅವರು ಈ ನಾಡಿನ ಮುಂದಿನ ಪ್ರಜೆಗಳು. ಆದ್ದರಿಂದ ಅವರ ಮನಸ್ಸಿನ ಮೇಲೆ ಒಳ್ಳೆಯ ಪರಿಣಾಮವನ್ನುಂಟು ಮಾಡುವಂಥ ಪರಿಸರವನ್ನು ಸೃಷ್ಟಿಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈ ರಿಮ್ಯಾಂಡ್ ಹೋಂಗಳಿಗೆ ಏನೇನು ಸೌಲಭ್ಯಗಳು ಬೇಕೋ ಆ ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಡಬೇಕು. ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ವಾಸ ಮಾಡತಕ್ಕಂಥ ಹರಿಜನ ಮತ್ತು ಗಿರಿಜನರಿಗೆ ಸರ್ಕಾರದವರು ಲೋನ್ ಕೊಡು ತ್ತಾರೆ. ಸರ್ಕಾರದವರು ಕೊಡತಕ್ಕಂಥ ಲೋನ್ ಕಾಲಕ್ಕೆ ಸರಿಯಾಗಿ ಕೊಡುವುದಿಲ್ಲ ನಾನು ಅನೇಕ ಸಾರಿ ಡಿಸಿಸಿ ಮೀಟಿಂಗ್‌ನಲ್ಲಿ ಕೂಡ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ಆದರೂ ಕೂಡ ಅವರು ಇದುವರೆಗೂ ಯಾವುದೇ ಕ್ರಮವನ್ನು ಸಹ ತೆಗೆದುಕೊಂಡಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಇತ್ತಕಡೆ ಸ್ವಲ್ಪ ಗಮನವನ್ನು ಹರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮತ್ತೆ ಮಾನ್ಯ ಮಂತ್ರಿಗಳು ತಮ್ಮ ವರದಿಯ ಅನುಬಂಧ ದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅದು ಏನೆಂದರೆ ಈ ಯೋಜನೆ ಯಲ್ಲಿ ೩೫೩೭ ಫಲಾನುಭವಿಗಳು ಇದ್ದಾರೆಂದು ಇದು ಏನೇನು ಸಾಲದು. ಇನ್ನು ಹೆಚ್ಚು ಫಲಾನುಭವಿ ಗಳಿಗೆ ಇದನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಮಾನ್ಯ ಹಾವನೂರು ಆಯೋಗ ವನ್ನು ಸರ್ಕಾರದವರು ನೇಮಕ ಮಾಡಿದ್ದರು. ಅವರ ನೇತೃತ್ವದಲ್ಲಿ ಕೆಲವಾರು ಜಾತಿಗಳನ್ನು ಹಿಂದುಳಿದವರ್ಗಗಳಿಗೆ ಸೇರಿಸಬೇಕೆಂದು ಅವರು ಸಲಹೆ ಮಾಡಿದ್ದಾರೆ. ಆ ವರದಿಯನ್ನು ಸರ್ಕಾರ

ದವರು ಯಾವಾಗ ಕಾರ್ಯರೂಪಕ್ಕೆ ತರುತ್ತೀರಿ ? ಮತ್ತು ಹಿಂದುಳಿದಿರತಕ್ಕಂಥ ವರ್ಗದಲ್ಲಿ ಅನೇಕ ಜನರು ಸೇರಬೇಕಾಗಿದೆ. ಆ ಬಗ್ಗೆ ಹೈಕೋರ್ಟಿನಲ್ಲಿ ಕೂಡ ಒಂದು ತೀರ್ಮಾನ ಆಗಿದೆ. ಅದರ ನಕಲನ್ನು ನಾನು ಮಾನ್ಯ ಮಂತ್ರಿಗಳಿಗೆ ಕಳುಹಿಸಿಕೊಡುತ್ತೇನೆ. ಬೇಕಾದರೆ ಅವರೂ ಕೂಡ ಇದನ್ನು ಪರಿಶೀಲನೆ ಮಾಡಬಹುದು. ಇನ್ನು ರೇಷ್ಮೆ ಇಲಾಖೆಯ ಬಗ್ಗೆ ಚರ್ಚೆ ಮಾಡಬೇಕೆಂದು ನಾನು ೩೭೨ ನಿಯಮದ ಪ್ರಕಾರ ಒಂದು ನೋಟೀಸ್ ಕಳುಹಿಸಿಕೊಟ್ಟಿದ್ದೆ. ಆಗ ಕೂಡ ನಾನು ಮಾನ್ಯಮಂತ್ರಿಗಳಲ್ಲಿ ಆ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ಈ ರೇಷ್ಮೆ ಇಲಾಖೆಯಲ್ಲಿ ಸಾಕಷ್ಟು ಭ್ರಷ್ಟಾಚಾರ ನಡೆಯುತ್ತಿದೆ. ರೇಷ್ಮೆಗೆ ತಾವು ಕನಿಷ್ಠ ಮತ್ತು ಗರಿಷ್ಠ ಬೆಲೆಯನ್ನು ನಿಗದಿ ಮಾಡಬೇಕು. ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಕೆ. ಕಾಂತ. — ಮಾನ್ಯ ಅಧ್ಯಕ್ಷರೇ ಇವೊತ್ತಿನ ದಿವಸ ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಯನ್ನು ನಾನು ಸ್ವಾಗತಿಸುತ್ತಾ ಕೆಲವಾರು ಸಲಹೆಗಳನ್ನು ಕೊಡಬಯಸುತ್ತೇನೆ. ಮೊಟ್ಟಮೊದಲನೆಯದಾಗಿ, ನಾನು ನನ್ನ ಕ್ಷೇತ್ರದ ವಿಷಯಕ್ಕೆ ಬರುತ್ತೇನೆ. ಸ್ವಾಮಿ ಇವೊತ್ತು ನಮ್ಮ ರಾಜ್ಯದಲ್ಲಿ ಒಟ್ಟು ಆರು ಮಹಾ ನಗರಸಭೆಗಳು ಇವೆ. ಆ ಮಹಾ ನಗರಸಭೆಗಳಲ್ಲಿ ನಮ್ಮ ಕ್ಷೇತ್ರದ ಮಹಾನಗರಸಭೆ ಕೂಡ ಒಂದಾಗಿದೆ. ನಮ್ಮ ಮಹಾನಗರಸಭೆಯ ಆದಾಯ ಬಹಳ ಕಡಿಮೆ ಬರುತ್ತಿದೆ. ಇವೊತ್ತು ನಗರಸಭೆಗಳಿಗೆ ಆಕ್ಟ್ರಾಯ್ ವರಮಾನ ಕೂಡ ಬರುತ್ತಿಲ್ಲ. ನಮ್ಮ ಮಹಾನಗರಸಭೆಗೆ ಸರ್ಕಾರದವರು ಸುಮಾರು ೩೭ ಲಕ್ಷರೂಪಾಯಿಗಳನ್ನು ಕೊಟ್ಟಿದ್ದರು. ನಮ್ಮ ಕಲ್ಬುರ್ಗಿ ಮಹಾನಗರಸಭೆಯಲ್ಲಿ ಬರತಕ್ಕಂಥ ಆದಾಯದಲ್ಲಿ ಅರ್ಧದಷ್ಟು ಹಣವನ್ನು ಅಲ್ಲಿನ ಅಧಿಕಾರಿಗಳು ಪೋಲು ಮಾಡುತ್ತಾರೆ. ಇದಕ್ಕೆ ಸರ್ಕಾರದವರು ಸೂಕ್ತ ಕ್ರಮವನ್ನು ಕೈಗೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಈ ವರ್ಷ ೬೦ ಲಕ್ಷ ರೂಪಾಯಿಗಳು ನಮ್ಮ ನಗರಸಭೆಗೆ ಬರಬಹುದು. ಬರತಕ್ಕ ಎಲ್ಲಾ ಆದಾಯವನ್ನು ಒಟ್ಟುಗೂಡಿಸಿದರೆ ಎಷ್ಟು ಹಣ ಆಗುತ್ತದೆ ಅದರಲ್ಲಿ ಅರ್ಧಭಾಗ ಅಲ್ಲಿ ಕೆಲಸಮಾಡತಕ್ಕ ನೌಕರರಿಗೆ ಸಂಬಳ ಕೊಡುವುದಕ್ಕೆ ಆಗುತ್ತದೆ. ಗುಲ್ಬರ್ಗ ನಗರಸಭೆಯ ಕಕ್ಷೆಯಲ್ಲಿ ೪ ಲಕ್ಷಕ್ಕಿಂತ ಹೆಚ್ಚು ಜನ ವಾಸವಾಗಿದ್ದಾರೆ. ರಸ್ತೆಗಳು ಹಾಳಾಗಿವೆ, ಬೀದಿ ದೀಪಗಳು ಇಲ್ಲ, ಮೂತ್ರಾಲಯಗಳು ಇಲ್ಲ. ನಗರದಲ್ಲಿ ಮೂತ್ರಾಲಯ ಒಂದು ಕಡೆ ಕೂಡ ಇಲ್ಲ. ಇಂತಹ ಒಂದು ಪರಿಸ್ಥಿತಿ ಗುಲ್ಬರ್ಗ ಮಹಾ ನಗರಸಭೆಯಲ್ಲಿದೆ. ನಗರಸಭೆಗಳಲ್ಲಿ ಒಬ್ಬ ನಾಗರೀಕನಿಗೆ ೨೦ ಗ್ಯಾಲನ್ ನೀರು ಬರುತ್ತದೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಒಬ್ಬ ನಾಗರೀಕನಿಗೆ ಗುಲ್ಬರ್ಗ ನಗರಸಭೆಯಲ್ಲಿ ೨೦ ಗ್ಯಾಲನ್ ನೀರು ಸಿಗುವುದಿಲ್ಲ. ಈಗ ನೀರು ಸರಬರಾಜು ಮಾಡತಕ್ಕ ಪೈಪುಗಳು ತುಂಬಾ ಹಳೆಯ ಪೈಪುಗಳು, ಮಹಾ ನಗರಸಭೆ ಆ ಹಳೆಯ ಪೈಪುಗಳನ್ನು ಬದಲಾವಣೆ ಮಾಡತಕ್ಕ ಸ್ಥಿತಿಯಲ್ಲಿಲ್ಲ. ಹಳೆಯ ಪೈಪುಗಳನ್ನು ಬದಲಾವಣೆ ಮಾಡುವ ಹಾಗೆ ಕಾಣುತ್ತಿಲ್ಲ. ಸರ್ಕಾರ ಕುಡಿಯುವ ನೀರಿನ ಸಲುವಾಗಿ ಜಾಸ್ತಿ ಹಣವನ್ನು ಕೊಡಬೇಕು. ನಾನು ಮಾನ್ಯಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ ಕುಡಿಯುವ ನೀರಿನ ಸಲುವಾಗಿ, ದೀಪದ ಸಲುವಾಗಿ ರಸ್ತೆ ರಿಪೇರಿ ಮಾಡುವ ಸಲುವಾಗಿ ಹೆಚ್ಚು ಹಣವನ್ನು ಒದಗಿಸಬೇಕು. ಗುಲ್ಬರ್ಗ ನಗರಸಭೆಯನ್ನು ಬೇರೆ ಮಹಾನಗರ ಸಭೆಗಳಿಗೆ ಹೋಲಿಸಿದರೆ ಬಹಳ ಕೆಟ್ಟ ಪರಿಸ್ಥಿತಿ ಇದೆ. ಈಗ ಕೆಲವು ಅಭಿವೃದ್ಧಿ ಕಾರ್ಯಗಳ ಬಗ್ಗೆ ಸೂಚನೆಗಳನ್ನು ಕೊಟ್ಟಿದ್ದಾರೆ. ೭೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಮಾರ್ಕೆಟ್ ಮಾಡಬೇಕೆಂದು ಹೇಳಿದ್ದಾರೆ. ಮಾರ್ಕೆಟ್ ಮಾಡತಕ್ಕಂಥ ಜಾಗವನ್ನು ಮುನಿಸಿಪಾಲಿಟಿ ಅಧಿಕಾರಿಗಳು ಬೇರೆಯವರಿಗೆ ಕೊಟ್ಟಿದ್ದಾರೆ. ಇವರು ಮಾರ್ಕೆಟ್ ಕಟ್ಟಬೇಕಾದರೆ ಈಗ ಜಾಗ ತೆಗೆದುಕೊಂಡಿರುವವರು ೧೫–೨೦ ವರ್ಷಗಳಾದರೂ ಜಾಗವನ್ನು ಬಿಡುವುದಿಲ್ಲ. ತಾವು ಒಳ್ಳೆಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಗುಲ್ಬರ್ಗ ನಗರ ಯಾವುದೇ ಅಭಿವೃದ್ಧಿ ಇಲ್ಲದೆ ಬಹಳ ಕೆಟ್ಟು ಹೋಗಿದೆ. ಗುಲ್ಬರ್ಗ ಮಹಾನಗರಸಭೆಗೆ ಸರ್ಕಾರ ಹೆಚ್ಚಿನ ಗ್ರಾಂಟ್ ಕೊಡಬೇಕು. ವಿಶ್ವ ಬ್ಯಾಂಕಿನಿಂದ ಯಾವುದಾದರೂ ಹಣ ಸಿಗುವುದಾದರೆ ಒಂದು ಮಾಸ್ಟರ್ ಪ್ಲಾನ್ ಮಾಡಿಕೊಂಡು ಗುಲ್ಬರ್ಗ ನಗರಾಭಿವೃದ್ಧಿಯನ್ನು ಮಾಡಲಿಕ್ಕೆ ಒಂದು ಸಮಿತಿಯನ್ನು ನೇಮಕ ಮಾಡಬೇಕೆಂದು ನಾನು ಸೂಚನೆ ಕೊಡುತ್ತೇನೆ.

ಗುಲ್ಬರ್ಗ ನಗರದಲ್ಲಿ ೧೫–೨೦ ಕೊಳಚೆ ಪ್ರದೇಶಗಳಿವೆ, ಕೊಳಚೆ ನಿರ್ಮೂಲನ ಮಂಡಲಿಗೆ ಯಾವುದೇ ರೀತಿಯ ಅಧಿಕಾರವಿಲ್ಲ. ಯಾವುದಾದರೂ ಕೆಲಸ ಮಾಡಬೇಕಾದರೆ ಯಾವುದಾದರೂ ಟೆಂಡರ್ ಕರೆದರೆ ಅದರ ಮಂಜೂರಾತಿಗಾಗಿ ಹುಬ್ಬಳ್ಳಿಗೆ ಹೋಗಬೇಕು ಅಥವಾ ಬೆಂಗಳೂರಿಗೆ ಬರ

ಬೇಕು. ಕೊಳಚೆ ನಿರ್ಮೂಲನಾ ಮಂಡಳಿಗೆ ಕೊಟ್ಟಿರತಕ್ಕ ಹಣ ಲ್ಯಾಪ್ಸ್ ಆಗಿ ಹೋಗುತ್ತಿದೆ. ಒಂದು ಕೆಲಸ ಕೂಡ ಆಗಿಲ್ಲ. ಥಾರ್‌ಬೈಲ್ ಎಂಬಲ್ಲಿ ಹಿಂದೆ ಮಂತ್ರಿಗಳು ಬಂದು ಶಂಕುಸ್ಥಾಪನೆ ಮಾಡಿದ್ದಾರೆ, ಇದುವರೆಗೂ ಯಾವುದೇ ಕೆಲಸಕಾರ್ಯಗಳು ಅಲ್ಲಿ ಆಗಿಲ್ಲ. ಮುಖ್ಯಮಂತ್ರಿಗಳು ಅಲ್ಲಿಗೆ ಹೋಗಿ ಬಂದರು, ಕೊಳಚೆ ನಿರ್ಮೂಲನ ಮಂಡಳಿಯ ಅಧ್ಯಕ್ಷರು ಅಲ್ಲಿಗೆ ಹೋಗಿ ಬಂದರು. ಥಾರ್‌ಬೈಲ್‌ನಲ್ಲಿರತಕ್ಕ ಜನಗಳ ಪರಿಸ್ಥಿತಿ ಹಾಗೆಯೇ ಇದೆ. ಅಲ್ಲಿ ಅಭಿವೃದ್ಧಿ ಮಾಡಲಿಕ್ಕೋಸ್ಕರ ೨೦ ಲಕ್ಷ ರೂಪಾಯಿಗಳು ಮಂಜೂರಾತಿಯಾಗಿದೆ, ಟೆಂಡರ್ ಕರೆದರೆ ಯಾರೂ ಕೂಡ ಟೆಂಡರ್ ಹಾಕುವುದಿಲ್ಲ, ಇದುವರೆಗೆ ಅಲ್ಲಿರತಕ್ಕವರಿಗೆ ಮನೆಗಳನ್ನು ಕೊಡುವುದಕ್ಕೆ ಆಗಿಲ್ಲ, ಕುಡಿಯುವ ನೀರಿನ ಅವ್ಯವಸ್ಥೆ ಏನೋ ಇದೆ. ಆದರೆ ಶೌಚಾಲಯ ಇಲ್ಲ. ಅಲ್ಲಿ ಹರಿಜನರೇ ಹೆಚ್ಚಾಗಿ ವಾಸವಾಗಿದ್ದಾರೆ. ಹರಿಜನರ ಬಗ್ಗೆ ಬಹಳಷ್ಟು ಎಲ್ಲರೂ ಮಾತನಾಡುತ್ತಾರೆ. ಆದರೆ ಅಲ್ಲಿ ಅವರಿಗೆ ಶೌಚಾಲಯ ವ್ಯವಸ್ಥೆ ಇಲ್ಲ. ಸಮಾಜ ವಿಕಾಸ ಮಂದಿರ ಇಲ್ಲ. ಇನ್ನು ಹೇಳತಕ್ಕ ವಿಚಾರಗಳು ಬಹಳಷ್ಟು ಇವೆ. ಒಂದು ವಿಚಾರದ ಬಗ್ಗೆ ನಾನು ನೋಟೀಸ್ ಕಳುಹಿಸಿದ್ದೇನೆ. ದಿನಗೂಲಿ ಆಧಾರದ ಮೇಲೆ ಏಳೆಂಟು ವರ್ಷಗಳಿಂದ ಕೆಲವರು ನಗರ ಸಭೆಗಳಲ್ಲಿ ಕೆಲಸಮಾಡುತ್ತಿದ್ದಾರೆ. ಈಗ ಕೆಲಸ ಮಾಡುತ್ತಿರುವವರನ್ನು ಬಿಟ್ಟು ಬೇರೆ ಯಾರನ್ನೋ ತೆಗೆದುಕೊಂಡು ಕೆಲಸ ಕೊಡುತ್ತಿದ್ದಾರೆ. ದಯಮಾಡಿ ಈ ರೀತಿ ಮಾಡುವುದನ್ನು ನಿಲ್ಲಿಸ ಬೇಕು. ಬಹಳ ವರ್ಷಗಳಿಂದ ಕೆಲಸ ಮಾಡತಕ್ಕ ಜನ ಎಲ್ಲಿಗೆ ಹೋಗಬೇಕು ? ದಯವಿಟ್ಟು ಈಗ ಕೆಲಸಮಾಡತಕ್ಕವರನ್ನು ತೆಗೆಯಬಾರದೆಂದು ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ತಾವು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ. ತಿಪ್ಪಯ್ಯ (ಮೂಡಿಗೆರೆ).—ಸನ್ಮಾನ್ಯ ಉಪಾಧ್ಯಕ್ಷರೇ, ನಾನು ಜಾಸ್ತಿ ಮಾತನಾಡಬೇಕೆಂದು ಇದ್ದೆ ; ಆದರೆ ಸಮಯದ ಅಭಾವ ಇರುವುದರಿಂದ ಜಾಸ್ತಿ ಮಾತನಾಡುವುದಕ್ಕೆ ಹೋಗುವುದಿಲ್ಲ, ಮಾನ್ಯ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ಸ್ವಾಗತ ಮಾಡುತ್ತಾ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಸದಸ್ಯರಾದ ರಾಮಕೃಷ್ಣರವರು ಮಾತನಾಡುತ್ತಾ ಹರಿಜನ ಗಿರಿಜನ ಅಭಿವೃದ್ಧಿಯ ಬಗ್ಗೆ ಸಾಕಷ್ಟು ಸಲಹೆಗಳನ್ನು ಕೊಟ್ಟಿದ್ದಾರೆ, ಶಾಸಕರ ಹರಿಜನ ಗಿರಿಜನ ಕ್ಷೇಮಾಭಿವೃದ್ಧಿ ಸಮಿತಿ ಏನೂ ಕೆಲಸ ಮಾಡಿಲ್ಲವೆಂದು ಮಾನ್ಯ ಸದಸ್ಯರಾದ ಜಿ. ಎಂ. ಕಾನಡೆಯವರು ಹೇಳಿದರು. ಸಮಿತಿಯ ಉದ್ದೇಶವನ್ನು ಜಾರಿಯಲ್ಲಿ ಕೊಡತಕ್ಕ ವಿಷಯದಲ್ಲಿ ಸರ್ಕಾರ ಮತ್ತು ಜನತೆಯ ಮಧ್ಯೆ ಯಾವ ತೊಂದರೆಯಿದೆ ಎಂಬುದನ್ನು ನಾವು ಮೊದಲು ಗಮನಿಸಬೇಕು. ಉತ್ತಮ ಯೋಜನೆಗಳನ್ನು ಹರಿಜನ ಗಿರಿಜನ ಅಭಿವೃದ್ಧಿಗಾಗಿ ಹಾಕಿದರೂ ಅಧಿಕಾರಿಗಳ ನಿರ್ಲಕ್ಷ್ಯ ಮನೋಭಾವದಿಂದ ಯಾವುದೇ ಯೋಜನೆಗಳು ಕಲ್ಯಾಣವಾಗುವುದಿಲ್ಲ, ನಾವು ಒಟ್ಟಿನಲ್ಲಿ ಹೇಳುವುದಾದರೆ, ಹರಿಜನ ಗಿರಿಜನರ ಅಭಿವೃದ್ಧಿಯ ಬಗ್ಗೆ ಆಸಕ್ತಿ, ಅಭಿಮಾನವಿರತಕ್ಕ ಅನೇಕ ನೌಕರರು ಇದ್ದಾರೆ. ಯೋಜನೆಗಳನ್ನು ಜಾರಿಯಲ್ಲಿ ಕೊಡತಕ್ಕ ನೌಕರರಿಗೆ ಯಾವರೀತಿಯ ಸವಲತ್ತುಗಳನ್ನು ಕೊಟ್ಟಿದ್ದಾರೆಂಬುದು, ಸಮಾಜ ಕಲ್ಯಾಣದ ಅಧಿಕಾರ ವ್ಯಾಪ್ತಿ ಯಾವ ರೀತಿ ಇದೆಯೆಂಬುದನ್ನು ನಾನು ಮೊದಲು ನೋಡಬೇಕಾಗುತ್ತದೆ. ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿರತಕ್ಕ ಸಮಾಜ ಕಲ್ಯಾಣ ಅಧಿಕಾರಿಗಳಿಗೆ ಸ್ವಯಂ ಆಡಳಿತ ಮಾಡತಕ್ಕ ಅಧಿಕಾರವಿಲ್ಲ. ಸಮಾಜ ಕಲ್ಯಾಣ ಅಧಿಕಾರಿಗಳು ಜಿಲ್ಲಾಧಿಕಾರಿಗಳ ನೆರಳಿನಲ್ಲಿ ಬದುಕಬೇಕಾಗುತ್ತದೆ. ಸಮಾಜ ಕಲ್ಯಾಣ ಅಧಿಕಾರಿಗಳಿಗೆ ವಾಹನ ಸೌಲಭ್ಯ ಪಡೆದುಕೊಳ್ಳುವ ಅಧಿಕಾರವಿಲ್ಲ. ಯಾವುದೇ ಅಧಿಕಾರ ಇವರಿಗೆ ಇಲ್ಲದೇ ಇರುವುದರಿಂದ ಹಾಕಿದಂತಹ ಯೋಜನೆಗಳು ಕಾರ್ಯಗತವಾಗುವುದಿಲ್ಲ. ಹರಿಜನ ಗಿರಿಜನರ ಅಭಿವೃದ್ಧಿ ಯೋಜನೆಗಳು ಎಲ್ಲಾ ಇಲಾಖೆಗಳಿಗೂ ಒಳಪಡುವಂತೆ ಈಗ ಮಾಡುತ್ತಿದ್ದಾರೆ. ಈ ಇಲಾಖೆಗೆ ಸ್ವಯಂ ಆಡಳಿತ ವ್ಯವಸ್ಥೆಯಾಗಬೇಕು. ಸ್ವಯಂ ಆಡಳಿತವನ್ನು ಕೊಟ್ಟರೆ ಮಾತ್ರ ಹಾಕಿದಂತಹ ಯೋಜನೆಗಳನ್ನು ಕಾರ್ಯಗತ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಯೋಜನೆಗಳು ಯೋಜನೆಗಳಾಗಿಯೇ ಉಳಿಯುತ್ತವೆ. ಸರ್ಕಾರ ಹರಿಜನರಿಗಾಗಿ ಹಾಕಿದಂತಹ ಯೋಜನೆಗಳು ಕಾರ್ಯಗತವಾಗಬೇಕಾದರೆ, ನಿರ್ದಿಷ್ಟವಾದ ಗುರಿ ಮುಟ್ಟಬೇಕಾದರೆ ಈ ಒಂದು ಇಲಾಖೆಗೆ ಸ್ವಯಂ ಆಡಳಿತವನ್ನು ಕೊಟ್ಟರೆ ಅದು ನಡೆಯುತ್ತದೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಹಾವನೂರ್ ಕಮಿಷನ್ ತನ್ನ ವರದಿಯನ್ನು ಕೊಡುವಾಗ ೭೦–೮೦ ಇದ್ದಂತಹ ಜಾತಿಯ ಪಟ್ಟಿಗೆ ಇನ್ನಷ್ಟು ಸೇರಿಸಿ ೧೧೪ ಜಾತಿಗಳನ್ನು ಸೇರಿಸಿ ಅವರೆಲ್ಲರನ್ನೂ ಪರಿಶಿಷ್ಟ ಜಾತಿಯೆಂದು ಮಾಡಿದ್ದಾರೆ. ಈ ತರಹ ಮಾಡುವುದರಿಂದ ಜಾತಿಯ ಮೊಟ್ಟೆಗಳು ಹುಟ್ಟುತ್ತವೆ. ಕೇಂದ್ರ ಸರ್ಕಾರ ೧೯೫೧ನೇ ಇಸವಿಯಲ್ಲಿ ಕಾಕೋಡಕರ ಸಮಿತಿಯನ್ನು

ಮಾಡಿ ಆ ಸಮಿತಿ ಯಾರೂ ಆರ್ಥಿಕವಾಗಿ ಹಿಂದುಳಿದಿದ್ದಾರೆ. ಅದರಲ್ಲಿ ಹರಿಜನರ ಮತ್ತು ಗಿರಿಜನರ ಒಂದು ಪಟ್ಟಿ ಮತ್ತೊಂದು ಪಟ್ಟಿಯನ್ನು ಮಾಡಿದ್ದಾರೆ. ನೆಹರೂರವರು ಮತ್ತು ಅನೇಕರು ಅದನ್ನು ಜಾರಿಗೆ ಕೊಡಬೇಕೆಂದಿದ್ದರು, ಅಧಿವೇಶನ ನಡೆಯುವಾಗ ಆ ಒಂದು ವರದಿಯನ್ನು ಹೊರಗೆ ತರಲಿಕ್ಕೆ ಮಹಾನಾಯಕರಾದ ಡಾ. ಅಂಬೇಡ್ಕರ್‌ರವರು ಪ್ರಯತ್ನಪಟ್ಟರು, ಆದರೆ ಆ ವರದಿ ಜಾರಿಗೆ ಬರಲಿಲ್ಲ. ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿರತಕ್ಕ ೧೧೪ ಜಾತಿಗಳು ಒಂದಾಗುವುದು ನಡೆಯುವುದಿಲ್ಲ. ಪಟ್ಟಿಯಲ್ಲಿರತಕ್ಕ ಎಲ್ಲಾ ಜಾತಿಗಳು ಒಂದಾಗುವುದಕ್ಕೆ ಸಾಧ್ಯವಿಲ್ಲವೆಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಉದಾಹರಣೆಗೆ ಹೇಳುವುದಾದರೆ ಲಿಂಗಾಯಿತರಲ್ಲಿ ಉಪಪಂಗಡಗಳಿವೆ, ಒಕ್ಕಲಿಗರಲ್ಲಿ ಉಪ ಪಂಗಡಗಳಿವೆ, ಬ್ರಾಹ್ಮಣರಲ್ಲಿ ಉಪ ಪಂಗಡಗಳಿವೆ, ದೇವಾಂಗದವರಲ್ಲಿ ಉಪ ಪಂಗಡಗಳಿವೆ, ಈ ಎಲ್ಲಾ ಉಪ ಪಂಗಡಗಳು ಆಯಾ ಜಾತಿಗಳಲ್ಲಿ ಒಂದಾಗುವುದಕ್ಕೆ ಸಾಧ್ಯವಿಲ್ಲ. ಅದೇ ರೀತಿ ನೀವು ಬೇರೆ ಜಾತಿಯವರನ್ನು ತಂದು ಹರಿಜನ ಗಿರಿಜನರ ಪಟ್ಟಿಯಲ್ಲಿ ಸೇರಿಸಿದರೆ ಆ ಜಾತಿಗಳು ಒಂದಾಗುವುದಕ್ಕೆ ಸಾಧ್ಯವಿದೆಯೇ ? ನೀವು ಹಾಕತಕ್ಕ ಯೋಜನೆಗಳು ಕಾರ್ಯಗತವಾಗುತ್ತವೆಯೆ ? ನೀವು ಹರಿಜನ ಗಿರಿಜನರಿಗಾಗಿಯೇ ಕೆಲವೊಂದು ಯೋಜನೆಗಳನ್ನು ಹಾಕಬೇಕು. ಹರಿಜನ ಗಿರಿಜನರ ಜೊತೆಯಲ್ಲಿ ಬೇರೆಯವರನ್ನು ಸೇರಿಸಿ ನೀವು ಯೋಜನೆಗಳನ್ನು ಕಾರ್ಯಗತ ಮಾಡುತ್ತೇವೆಂದು ಹೇಳಿದರೆ ನಿಜವಾದ ಜನರಿಗೆ ನಿಮ್ಮ ಯೋಜನೆಗಳು ಮುಟ್ಟುವುದಿಲ್ಲ. ಈಗ ೧೧೪ ಜಾತಿಗಳನ್ನು ಸೇರಿಸಿ ಷೆಡ್ಯೂಲ್ಡ್ ಕ್ಯಾಸ್ಟ್ ಎಂದು ಕರೆದು ಶೇಕಡ ೧೮ರಷ್ಟು ಮೀಸಲಾತಿ ಇಟ್ಟರೆ ಅವರ ಉದ್ಧಾರವಾಗುತ್ತದೆಯೆ ? ಪರ್ಸೆಂಟೇಜ್ ಜಾಸ್ತಿ ಕೊಟ್ಟರೆ ಅದು ಸಾಧ್ಯವಾಗುತ್ತದೆ,

೨.೩೦ ಪಿ. ಎಂ.

ಇನ್ನು ಇವರಿಗೆ ಕೊಟ್ಟಿರುವ ಸೌಲಭ್ಯಗಳ ಬಗ್ಗೆ ಹೇಳುವುದಾದರೆ ರೆಸಿಡೆನ್‌ಸಿಯಲ್ ಸ್ಕೂಲ್‌ಗಳಿಗೆ ಹಾಸ್ಟೆಲ್‌ಗಳನ್ನು ಕೊಟ್ಟಿದ್ದೀರಿ. ಪ್ರೈವೇಟ್ ಹಾಸ್ಟೆಲ್‌ಗಳೂ ಇವೆ. ಕಾಲೇಜುಗಳು ನಡೆಸತಕ್ಕ ಹಾಸ್ಟೆಲ್‌ಗಳೂ ಇವೆ, ನೀವು ಕೊಡತಕ್ಕ ೨೦೦ ರೂಪಾಯಿಗಳು ಏನಿದೆ ಇದರಲ್ಲಿ ಹಾಸ್ಟೆಲ್ ಫೀಸ್ ಇದನ್ನೆಲ್ಲಾ ಕೊಡುವುದಕ್ಕೆ ಸಾಲುವುದಿಲ್ಲವೆಂದು ಮಕ್ಕಳು ಗಲಾಟೆ ಮಾಡುತ್ತಿರುವುದು ತಿಳಿದುಬಂದಿದೆ. ಆದ್ದರಿಂದ ಸರ್ಕಾರದವರು ಪ್ರತಿಯೊಂದು ವಿದ್ಯಾರ್ಥಿಗೆ ಏನು ಹಣವನ್ನು ಕೊಡುತ್ತಿದ್ದಾರೆ ಅದನ್ನು ಇನ್ನೂ ಜಾಸ್ತಿ ಮಾಡಬೇಕೆಂದು ಹೇಳಬಯಸುತ್ತೇನೆ.

ಹರಿಜನ ಗಿರಿಜನರಿಗೋಸ್ಕರ ಅನೇಕ ಯೋಜನೆಗಳನ್ನು ಹಾಕಿಕೊಳ್ಳುವುದಕ್ಕೆ ಬದಲಾಗಿ ಉತ್ತಮವಾದ ಒಂದೊಂದು ಯೋಜನೆಯನ್ನು ಹಾಕಿಕೊಳ್ಳಬೇಕು. ಡಾ : ಅಂಬೇಡ್ಕರ್‌ರವರು ಇ.ಎ.ಎ ಎಂದು ಹೇಳಿದ್ದಾರೆ. ಅಂದರೆ ಎಜುಕೇಟ್, ಅಚೀವ್ ಮತ್ತು ಆ್ಯಕ್ಟ್ ಎಂದು. ಅಂದರೆ ಈ ಸಮಾಜದಲ್ಲಿ ಜನರನ್ನು ವಿದ್ಯಾವಂತರನ್ನಾಗಿ ಮಾಡಿದರೆ ಮಾತ್ರ ನೀವು ಹಾಕಿಕೊಳ್ಳುವ ಯೋಜನೆಗಳೆಲ್ಲವೂ ಸಾರ್ಥಕವಾಗುತ್ತವೆ ಎಂದು. ಏಕೆಂದರೆ ನೀವು ಅವರಿಗೆ ಎತ್ತು, ಎಮ್ಮೆ ಕುರಿಗಳನ್ನು ಕೊಟ್ಟು ಉದ್ಧಾರ ಮಾಡುತ್ತೇವೆಂದು ಹೇಳಿದರೆ ಅದರಿಂದ ಏನು ಪ್ರಯೋಜನವಾಗುವುದಿಲ್ಲ. ನೀವು ಇವರನ್ನು ವಿದ್ಯಾವಂತರನ್ನಾಗಿ ಮಾಡದೆ ಏನು ಸೌಲಭ್ಯಗಳನ್ನು ಕೊಟ್ಟರೂ ಅವರು ಅದನ್ನು ಉಳಿಸಿಕೊಳ್ಳುವುದಿಲ್ಲ.

ಮಾನ್ಯ ಅಧ್ಯಕ್ಷರೆ, ಹರಿಜನಗಿರಿಜನರಲ್ಲಿ ಅತ್ಯಂತ ಹೆಚ್ಚು ಅಂಕಗಳನ್ನು ತೆಗೆದುಕೊಳ್ಳುವಂಥ ವಿದ್ಯಾರ್ಥಿಗಳನ್ನು ಹುದ್ದೆಗಳಿಗೆ ನೇರವಾಗಿ ನೇಮಕ ಮಾಡುವುದಾಗಿ ಹೇಳುತ್ತಿದ್ದೀರಿ. ಇದರ ಬಗ್ಗೆ ಸರ್ಕಾರೀ ಆಜ್ಞೆ ಆಗಿದೆಯೋ? ಹೇಗೆ? ಈಗ ಕೆಲವು ಹುದ್ದೆಗಳಿಗೆ ಅರ್ಜಿಗಳನ್ನು ಕರೆದಿರುವುದಾಗಿ ಹೇಳಿದ್ದೀರಿ. ಇದನ್ನು ದಯವಿಟ್ಟು ಗಮನದಲ್ಲಿಟ್ಟುಕೊಂಡು ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮನೆಗಳನ್ನು ಕಟ್ಟುವ ವಿಚಾರದಲ್ಲಿ ಹೇಳುವುದಾದರೆ, ಲಂಬಾಣಿ ತಾಂಡ ಹರಿಜನ ಕಾಲೋನಿ, ಎ.ಕೆ. ಕಾಲೋನಿ ಎಂದು ನಿರ್ಮಾಣ ಮಾಡುತ್ತಿದ್ದಾರೆ. ಈ ರೀತಿ ಮಾಡುವುದು ಸರಿಯಲ್ಲ. ಇದು ಜಾತೀಯತೆಯನ್ನು ಎತ್ತಿ ತೋರಿಸುತ್ತದೆ. ಅಲ್ಲದೆ ತಾವು ಇವರಿಗೆ ಮನೆಗಳನ್ನು ಕಟ್ಟಿ ಕೊಳ್ಳಲು ಕೊಡತಕ್ಕ ಹಣ ಏನಿದೆ ಇದು ಏನೇನೂ ಸಾಲದು. ಆದ್ದರಿಂದ ಇನ್ನು ಮುಂದಾದರೂ ಈ ಜನರಿಗೆ ಮನೆಗಳನ್ನು ಕಟ್ಟಿಸಿಕೊಡುವುದನ್ನು ಹುಡ್ಕೋದವರಿಗಾಗಲಿ ಅಥವಾ ಮುನಿಸಿಪಾಲಿಟಿಯವರಿಗಾಗಲಿ ವಹಿಸಿಕೊಟ್ಟು ನೇರವಾಗಿ ಅವರಿಗೆ ಮನೆಗಳು ಸಿಕ್ಕುವಂತೆ ಮಾಡಬೇಕು. ತಾವೂ ಕೂಡ ಈ ರೀತಿ ವಹಿಸುವಾಗ ಇಂತಿಷ್ಟು ವರ್ಷದಲ್ಲಿ ಇಂತಿಷ್ಟು ಮನೆಗಳನ್ನು ಕಟ್ಟಿ ಕೊಡಬೇಕೆಂದು ಹೇಳಬೇಕು.

ಇನ್ನೊಂದು ವಿಚಾರವನ್ನು ಹೇಳುವುದಾದರೆ, ಮನೆಗಳು ಸಿಕ್ಕದೇ ಇರುವಂಥ ಪ್ರದೇಶಗಳಿಗೆ ಹರಿಜನಗಿರಿಜನ ಸರ್ಕಾರೀ ನೌಕರರನ್ನು ವರ್ಗ ಮಾಡುತ್ತೀರಿ. ಅನೇಕ ಸಂದರ್ಭಗಳಲ್ಲಿ ಅವರಿಗೆ ಮನೆಗಳು ವಾಸಕ್ಕೆ ಸಿಕ್ಕದೆ ಬಹಳಷ್ಟು ತೊಂದರೆ ಹುಟ್ಟಿರುವುದನ್ನು ನಾವು ನೋಡಿದ್ದೇವೆ. ಆದ್ದರಿಂದ ನಾನಾದರೂ ಹೇಳುವುದೇನೆಂದರೆ. ನೀವು ಎಷ್ಟು ಜನ ಹರಿಜನ ನೌಕರರನ್ನು ನೇಮಕ ಮಾಡುತ್ತೀರಿ ಅವರಿಗೆ ತಕ್ಕಷ್ಟು ಮನೆಗಳನ್ನು ಕಟ್ಟಿಸಿಕೊಟ್ಟಿದ್ದೀರಾ ಎಂಬುದನ್ನು ಲೆಕ್ಕಹಾಕಿಸಿ ನೋಡಿದರೆ ಗೊತ್ತಾಗುತ್ತದೆ. ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಶ್ರೀಮತಿ ಚಂದ್ರಪ್ರಭಾ ಅರಸುರವರು ಈ ಸಮಾಜ ಕಲ್ಯಾಣ ಖಾತೆಯನ್ನು ವಹಿಸಿಕೊಂಡಿದ್ದಾರೆ. ಇವರು ದಿವಂಗತ ದೇವರಾಜ ಅರಸ್‌ರವರ ಪುತ್ರಿ, ಇವರು ಈ ಖಾತೆಯನ್ನು ಚೆನ್ನಾಗಿ ನಿರ್ವಹಿಸಿಕೊಂಡು ಹೋಗುತ್ತಾರೆಂಬ ಭರವಸೆ ನನಗಿದೆ. ಕೇಂದ್ರ ಸರ್ಕಾರದವರು ಅನೇಕ ಯೋಜನೆಗಳನ್ನು ಹರಿಜನರಿಗೋಸ್ಕರ ಹಾಕಿಕೊಂಡಿದ್ದಾರೆ. ಅವರು ಇದಕ್ಕಾಗಿ ಸಾಕಷ್ಟು ಹಣವನ್ನು ಕೊಡಬೇಕಾಗಿದೆ. ಒಂದು ವೇಳೆ ಅವರು ಕೊಡದಿದ್ದರೂ ನೀವೇ ಇದಕ್ಕೆ ಹಣವನ್ನೊದಗಿಸಿಕೊಳ್ಳಲು ಪ್ರಯತ್ನ ಮಾಡಬೇಕು. ಶಾಲಾವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಏನು ಕೊಡುತ್ತಿದ್ದೀರಿ ಅದನ್ನು ಶಾಲೆಗಳು ಪ್ರಾರಂಭವಾದ ೬ ತಿಂಗಳೊಳಗೆ ಕೊಡಿಸುವ ವ್ಯವಸ್ಥೆ ಮಾಡಬೇಕು. ಅದೇರೀತಿ ಈ ಶಾಲಾಮಕ್ಕಳಿಗೆ ಉಡುಪುಗಳನ್ನು ಒದಗಿಸುವಾಗ ಉತ್ತಮವಾದುದನ್ನು ಒದಗಿಸಬೇಕು. ಸರ್ಕಾರವೇ ಈ ಮಕ್ಕಳಿಗೆ ತಂದೆತಾಯಿಗಳು ಎನ್ನುವ ರೀತಿಯಲ್ಲಿ ಇರಬೇಕೆಂದು ಹೇಳಬಯಸುತ್ತೇನೆ. ಹರಿಜನರಿಗೋಸ್ಕರ ಮನೆಗಳನ್ನು ಕಟ್ಟುವಾಗ ವಾಸಕ್ಕೆ ಯೋಗ್ಯವಾದ ರೀತಿಯಲ್ಲಿ ಕಟ್ಟಿಸಿಕೊಡಬೇಕು. ಭಾಗ್ಯಜ್ಯೋತಿ ಮನೆಗಳನ್ನು ಹೆಚ್ಚು ಮಾಡುವುದಕ್ಕೆ ಕ್ರಮ ಕೈಗೊಳ್ಳಬೇಕು. ಸರ್ಕಾರದ ಇಲಾಖೆಯ ಹಾಗೂ ಬ್ಯಾಂಕ್‌ಗಳಲ್ಲಿ ಇವರಿಗೆ ಸೂಕ್ತ ರೀತಿಯಲ್ಲಿ ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಡಬೇಕು. ಸಮಾಜಕಲ್ಯಾಣ ಇಲಾಖೆಯಲ್ಲಿ ಏನೇನು ಉತ್ತಮ ಹಾಗೂ ವೈಶಿಷ್ಟ್ಯಪೂರ್ಣ ಯೋಜನೆಗಳಿವೆ ಅವುಗಳನ್ನೆಲ್ಲಾ ಈ ವರ್ಗದವರಿಗೆ ಪೂರ್ತಿ ಸಿಕ್ಕುವಂತೆ ಮಾಡಬೇಕು. ಜನಸಂಖ್ಯೆಯ ಆಧಾರದ ಮೇಲೆ ದಾಮಾಷಾ ಪ್ರಕಾರ ಸೌಲಭ್ಯಗಳನ್ನು ಒದಗಿಸಿಕೊಡಬೇಕು. ಇನ್ನು ಜನಗಣತಿಯ ಸಂದರ್ಭದಲ್ಲಿ ಕೊರಚ, ಕೊರವ, ಮಾದಿಗ ಎಂದು ಮುಂತಾಗಿ ಬರೆಸುತ್ತಾರೆ. ಇದರಿಂದ ಕೋಮು ಭಾವನೆ ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಇದನ್ನು ಆದಷ್ಟು ತಡೆಗಟ್ಟಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಂಗಮೇಶ್ವರ ಸರದಾರ್ (ರಾಯಚೂರು).—ಮಾನ್ಯ ಅಧ್ಯಕ್ಷರೇ, ಮಾನ್ಯ ನಗರಾಡಳಿತ ಮಂತ್ರಿಗಳು ಸಭೆಯ ಮುಂದಿಟ್ಟಿರತಕ್ಕ ಬೇಡಿಕೆಗಳನ್ನು ಸ್ವಾಗತಿಸಿ ಒಂದೆರಡು ಸಲಹೆಗಳನ್ನು ಕೊಡಬಯಸುತ್ತೇನೆ.

ಮೊದಲನೆಯದಾಗಿ, ಯಾವುದೇ ನಗರಸಭೆಯ ಕಮಿಷನರ್‌ರವರು ಇಂಜನಿಯರ್ ಆಗಿರಬೇಕು. ಕಾರಣ ದೀಪದ ವ್ಯವಸ್ಥೆಯಲ್ಲಾಗಲಿ, ನೀರು ಸರಬರಾಜು ವ್ಯವಸ್ಥೆಯಲ್ಲಾಗಲಿ, ಕಟ್ಟಡಗಳ ವಿಚಾರದಲ್ಲಾಗಲಿ, ಅಥವಾ ಬೇರೆ ಯಾವುದೇ ವಿಚಾರದಲ್ಲಾಗಲಿ ತಾಂತ್ರಿಕ ಜ್ಞಾನ ಇರುವವರು ಇದ್ದರೆ ಒಳ್ಳೆಯದಾಗುತ್ತದೆ. ಅವರು ಸಿವಿಲ್ ಇಂಜನಿಯರ್ ಆಗಿರಬಹುದು, ಮೆಕ್ಯಾನಿಕಲ್ ಇಂಜನಿಯರ್ ಆಗಿರಬಹುದು. ನಾನು ಏತಕ್ಕೆ ಇದನ್ನು ಹೇಳುತ್ತಿದ್ದೇನೆ ಎಂದರೆ. ನಮ್ಮ ಗದಗ್‌ನಲ್ಲಿ ಹಿರೇಮಠ್ ಎನ್ನುವವರು ಇಂಜನಿಯರ್ ಪದವೀಧರರಾಗಿದ್ದವರು ನಗರ ಸಭೆಯ ಅಧ್ಯಕ್ಷರಾಗಿ ಬಂದರು. ನಾನೂ ಕೂಡ ಅಲ್ಲಿ ಸುಮಾರು ೨೫ ವರ್ಷಕಾಲ ಕೆಲಸ ಮಾಡಿದ್ದೇನೆ. ಈ ಅಧ್ಯಕ್ಷರು ಹೆಚ್ಚು ದಕ್ಷತೆಯಿಂದ, ಸೇವಾ ಮನೋಭಾವನೆಯಿಂದ ಕೆಲಸಮಾಡಿದ್ದರಿಂದ ಇವೊತ್ತು ನಮ್ಮ ನಗರ ಸಭೆಯು ಮೊದಲನೇ ದರ್ಜೆ ನಗರಸಭೆ ಆಗುವುದಕ್ಕೆ ಕಾರಣವಾಯಿತು. ಅಡ್ಮಿನಿಸ್ಟ್ರೇಟೀವ್ ಸರ್ವೀಸಸ್ ಇರಬೇಕೆಂದು ಮಾನ್ಯ ಆರ್. ಎಸ್. ಪಾಟೀಲರು ಪ್ರಯತ್ನಮಾಡಿದರು. ಆದರೆ ಇದನ ಇವೊತ್ತಿನವರೆಗೂ ಆಗಲಿಲ್ಲ. ನಗರ ಸಭೆಗೆ ಲೋಕೋಪಯೋಗಿ ಇಲಾಖೆಯಿಂದ ಅಥವಾ ಕಂದಾಯ ಇಲಾಖೆಯಿಂದ ನೌಕರರನ್ನು ಎರವಲು ತೆಗೆದುಕೊಳ್ಳಬಾರದು. ನನ್ನ ಅನುಭವದಲ್ಲಿ ಹೇಳುವುದಾದರೆ ಹಿಂದೆ ಬ್ರಿಟಿಷರ ಕಾಲದಲ್ಲಿ ಬೊಂಬಾಯಿ, ಮದ್ರಾಸ್ ಮುಂತಾದ ಪ್ರದೇಶಗಳಲ್ಲಿ ನಗರಸಭೆಯಲ್ಲಿ ಕೆಲಸ ಮಾಡತಕ್ಕ ಅಧ್ಯಕ್ಷರಿಗೆ ರಾವ್ ಬಹದ್ದೂರ್, ದಿವಾನ್ ಬಹದ್ದೂರ್ ಎನ್ನುವ ಬಿರುದುಗಳನ್ನು ಕೊಡುತ್ತಿದ್ದರು. ಅವೊತ್ತು ನಗರ ಸಭೆಯ ಕೆಲಸ ಕಾರ್ಯಗಳು ಚೆನ್ನಾಗಿ ನಡೆಯುತ್ತಿದ್ದುವು. ಆದರೆ ಇವೆಲ್ಲಾ ಸ್ವಾಯತ್ತ ಸಂಸ್ಥೆಗಳಾಗಿದ್ದು ಹೆಚ್ಚಿನ ರೀತಿಯಲ್ಲಿ ಭ್ರಷ್ಟಾಚಾರ ಎಂಬುದು ತುಂಬಿತುಳುಕುತಿದೆ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಬಯಸುತ್ತೇನೆ. ಪ್ರಾಮಾಣಿಕತೆಯಿಂದ ಕೆಲಸ ಮಾಡತಕ್ಕ ಜನರಿಗೆ

ಏನು ಗೌರವವನ್ನು ಕೊಡಬೇಕೋ ಅದನ್ನು ಕೊಟ್ಟು ಅವರು ಪ್ರಾಮಾಣಿಕತೆಯಿಂದ ಕೆಲಸಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ನಗರಸಭೆ, ಪುರಸಭೆಗಳಿಗೆ ಚುನಾವಣೆಗಳನ್ನು ಮಾಡಿದೆವು. ಈ ಚುನಾವಣೆಗಳಲ್ಲಿ ಮತವನ್ನು ಚಲಾಯಿಸುವ ಅಧಿಕಾರವನ್ನು ೧೮ ವರ್ಷಗಳಿಗೆ ಇಳಿಸಿದ್ದೇವೆ. ಸ್ಥಳೀಯ ಸಂಸ್ಥೆಗಳಿಗೆ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಲು ಹಲವಾರು ಸಲಹೆಗಳನ್ನು ಕೊಟ್ಟಿದ್ದೇವೆ. ಅದೇ ರೀತಿ ಇವತ್ತೂ ಕೂಡ ಅನೇಕ ಮಾನ್ಯ ಸದಸ್ಯರು ತಮ್ಮ ಅಮೂಲ್ಯವಾದ ಸಲಹೆಗಳನ್ನು ಏನು ಕೊಟ್ಟಿದ್ದಾರೆ ಅವುಗಳ ಕಡೆ ಸರ್ಕಾರ ಗಮನಹರಿಸಿ ಅದರಲ್ಲಿ ಏನಾದರೂ ಮಾರ್ಪಾಡು ಮಾಡುವುದಾದರೆ ಮಾಡಿ ಅದನ್ನು ಈ ಸಭೆಯ ಮುಂದಿಡಬೇಕು. ನನ್ನ ಅನುಭವದಲ್ಲಿ ಹೇಳುವುದಾದರೆ ಆಕ್ಟ್ರಾಯ್‌ನ್ನು ತೆಗೆದದ್ದು ಒಳ್ಳೆಯದು. ಏಕೆಂದರೆ, ವ್ಯಾಪಾರಸ್ಥರು ಲಾರಿಗಳಲ್ಲಿ ಏನಾದರೂ ಸಾಮಾನುಗಳನ್ನು ತಂದರೆ ತಾಸುಗಟ್ಟಲೆ ನಿಲ್ಲಬೇಕಾಗಿದ್ದುದು ಈಗ ತಪ್ಪಿದೆ. ಮನರಂಜನಾ ತೆರಿಗೆ ಏನು ಬರುತ್ತದೆ ಅದರಲ್ಲಿ ಇಂತಿಷ್ಟು ಭಾಗ ಎಂದು ಸಂಬಂಧಪಟ್ಟ ಪುರಸಭೆ ಮತ್ತು ನಗರಸಭೆಗಳಿಗೆ ಕೊಡುವ ವ್ಯವಸ್ಥೆ ಮಾಡಬೇಕು. ಅಂದರೆ ಈಗ ಏನು ಕಡಿಮೆ ಪ್ರಮಾಣದಲ್ಲಿ ಕೊಡುತ್ತಿದೆ ಇದನ್ನು ಹೆಚ್ಚು ಮಾಡಬೇಕೆಂದು ನಾನು ಹೇಳಬಯಸುತ್ತೇನೆ.

ಉಪಾಧ್ಯಕ್ಷರು.—ಸರ್ದಾರ್‌ರೇ ಎಲ್ಲಾ ಮುಗಿದುಹೋಗಿದೆ. ಹೊಸದಾಗಿ ನೀವು ಹೇಳಬೇಕಾದದ್ದು ಏನೂ ಇಲ್ಲ.

ಶ್ರೀ ಸಂಗಮೇಶ್ವರ ಸರ್ದಾರ್.—ಇನ್ನು ಪ್ರಾಪರ್ಟಿ ಟ್ಯಾಕ್ಸ್ ಏನು ಇದೆ, ಇದನ್ನು ಯಾವ ರೀತಿಯಲ್ಲಿ ವಸೂಲು ಮಾಡಬೇಕೆಂಬ ಬಗ್ಗೆ ಸರಿಯಾಗಿ ಇಲ್ಲ. ಯಾವ ರೀತಿಯಲ್ಲಿ ಪ್ರಾಪರ್ಟಿ ಟ್ಯಾಕ್ಸ್ ಹಾಕಬೇಕೆನ್ನುವ ಬಗ್ಗೆ ನಿಯಮಾವಳಿಗಳು ಸರಿಯಾದ ರೀತಿಯಲ್ಲಿ ಇಲ್ಲ. ೧೯೬೪ರ ಮುನಿಸಿಪಾಲಿಟಿ ಆಕ್ಟ್‌ನ್ನು ಬದಲಾವಣೆ ಮಾಡಬೇಕು. ಇಲ್ಲದಿದ್ದರೆ ಬಹಳ ತೊಂದರೆಯಾಗುತ್ತದೆ. ಇದು ಮೂರನೆಯ ಎರಡು ಭಾಗ ಏನಿದೆ, ಅದರ ಬದಲು ನಾಲ್ಕನೆಯ ಮೂರು ಭಾಗ ಮಾಡಿದರೆ ಒಳ್ಳೆಯದೆಂದು ನನ್ನ ಅಭಿಪ್ರಾಯ. ತಾವು ಗಂಟೆ ಹೊಡೆಯುತ್ತಿದ್ದೀರಿ. ಇನ್ನೂ ಸಾಕಷ್ಟು ಹೇಳುವುದಕ್ಕೆ ಇದೆ. ನಗರ ಸಮಿತಿಯ ಬಗ್ಗೆ ಹೇಳುವುದಾದರೆ, ಈಗಾಗಲೇ ರಾಯಚೂರನ್ನು ಸ್ಲಮ್ ಸಿಟಿಯಾಗಿ ಡಿಕ್ಲೇರ್ ಮಾಡಬೇಕೆಂದು ನಾನು ಕೇಳಿಕೊಂಡಿದ್ದೇನೆ. ಇಲ್ಲಿ ೨೮ ಸ್ಲಮ್‌ಗಳಿವೆ. ಇಡೀ ರಾಷ್ಟ್ರದಲ್ಲಿ ಸ್ಲಮ್ ಸಿಟಿ ಎಂದರೆ ರಾಯಚೂರು ನಗರ. ಎಲ್ಲಿ ಹೋದರೂ ಜೋಪಡಿಗಳು ಇವೆ. ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ತೋರಿಸಿದ್ದೇನೆ; ಅವರೂ ಒಪ್ಪಿಕೊಂಡಿದ್ದಾರೆ. ಇದನ್ನು ಸ್ಲಮ್ ಸಿಟಿಯಾಗಿ ಡಿಕ್ಲೇರ್ ಮಾಡದೇ ಇದ್ದರೂ ಕೂಡ ಬೇರೆ ರೀತಿಯಲ್ಲಿ ಇದರ ಅಭಿವೃದ್ಧಿಗೋಸ್ಕರವಾಗಿ ಹಣ ಮಂಜೂರು ಮಾಡಬೇಕೆಂದು ಹೇಳುತ್ತೇನೆ. ಇನ್ನು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಮಾಡಬೇಕೆಂದು ಕೇಳಿಕೊಂಡಿದ್ದೇನೆ. ನನ್ನ ಕ್ಷೇತ್ರದಲ್ಲಿ ನಗರ ಮತ್ತು ಹಳ್ಳಿಗಳು ಎರಡೂ ಇವೆ. ಅದಕ್ಕೋಸ್ಕರವಾಗಿ ನಗರಸಮಿತಿಯ ಅಧಿಕಾರದಲ್ಲಿ ಎಂ.ಎಲ್.ಎ. ಕೂಡ ಬರಬೇಕು ಎಂದು ಕೇಳಿಕೊಂಡಿದ್ದೇನೆ. ಈ ಕಾನೂನು ತಿದ್ದುಪಡಿಯಾಗಬೇಕು. ನಾವು ಇಲ್ಲಿ ಜಿಲ್ಲಾಪರಿಷತ್ತಿನ ಬಗ್ಗೆ ಮಾತನಾಡುತ್ತೇವೆ. ಅನೇಕ ನಗರಸಮಿತಿಯ ಕಟ್ಟಡಗಳು ಸುಸ್ಥಿತಿಯಲ್ಲಿಲ್ಲ. ನಗರ ಸಮಿತಿಯ ಅಧಿಕಾರ ಬಹಳ ಕಡಿಮೆ ಇದೆ. ಏಕೆಂದರೆ ಅಲ್ಲಿ ಪ್ರತಿಯೊಂದಕ್ಕೂ ಡಿವಿಜನಲ್ ಕಮಿಷನರ್ ಅವರ ಕಡೆಗೆ ಮುಖಮಾಡಿ ಕುಳಿತುಕೊಳ್ಳಬೇಕಾಗುತ್ತದೆ. ಅಲ್ಲಿ ನಾಲ್ಕನೆ ದರ್ಜೆಯ ನೌಕರರಲ್ಲದೆ ಬೇರೆಯವರನ್ನು ನೇಮಕ ಮಾಡಲಿಕ್ಕೆ ಅಧಿಕಾರ ಇಲ್ಲ. ಇದು ತಿದ್ದುಪಡಿಯಾಗಬೇಕು. ಅನೇಕ ರೀತಿಯ ಮಂಜೂರಾತಿಗಳು ಬೇಕಾಗುತ್ತವೆ. ತಾಂತ್ರಿಕವಾಗಿ, ಆಡಳಿತಾತ್ಮಕವಾಗಿ ಮಂಜೂರಾತಿ ಬೇಕಾದರೆ ಸೂಪರಿಂಟೆಂಡೆಂಟ್ ಇಂಜಿನೀಯರ್, ಎಕ್ಸಿಕ್ಯೂಟಿವ್ ಇಂಜಿನಿಯರ್ ಹತ್ತಿರ ಹೋಗಬೇಕಾಗುತ್ತದೆ. ಕಮಿಷನರ್ ಅವರಿಗೆ ಈ ಅಧಿಕಾರ ಕೊಟ್ಟರೆ ಮುನಿಸಿಪಾಲಿಟಿಗಳು ಚೆನ್ನಾಗಿ ಕೆಲಸ ಮಾಡಲು ಸಾಧ್ಯವಾಗುತ್ತದೆ ಎಂದು ಹೇಳಿ, ಮಾತನಾಡಲು ನನಗೆ ಆಸ್ಪದ ಕೊಟ್ಟಿದ್ದಕ್ಕೆ ತಮ್ಮನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು.—ಇಲ್ಲಿಗೆ ಚರ್ಚೆ ಮುಗಿಯಿತು. ಇನ್ನು ಮಾನ್ಯ ನಗರಾಭಿವೃದ್ಧಿ ಸಚಿವರು ಉತ್ತರ ಕೊಡುತ್ತಾರೆ.

ಶ್ರೀ ಎಂ. ಚಂದ್ರಶೇಖರ್ (ಮಾನ್ಯ ನಗರಾಭಿವೃದ್ಧಿ ಮತ್ತು ಬೆಂಗಳೂರು ಪ್ರಾಧಿಕಾರಿಕ ವರ್ಗದ ಸಚಿವರು).—ಮಾನ್ಯ ಅಧ್ಯಕ್ಷರೆ,

ಶ್ರೀ ವೈ.ಕೆ. ರಾಮಯ್ಯ.—ಸಭೆಯ ಕಾರ್ಯಕಲಾಪಗಳನ್ನು ಗೊತ್ತು ಮಾಡುವಾಗ ಪಕ್ಷದ ನಾಯಕರುಗಳನ್ನು ಕರೆದು ಮಾತನಾಡುತ್ತೀರಿ. ಅವರು ಎಷ್ಟು ಕಡಿಮೆ ಸಮಯ ಬೇಕಾದರೂ ಒಪ್ಪಿಕೊಳ್ಳುತ್ತಾರೆ. ಕೆಲವು ಸಲ ನಾವು ಯಾವುದಾದರೂ ವಿಷಯದ ಬಗ್ಗೆ ಮಾತನಾಡುವುದಾದರೆ ಅದು ಅನಾವಶ್ಯಕವೆಂದು ತಾವು ಭಾವಿಸುವುದಾದರೆ ಅದು ತಪ್ಪಾಗುತ್ತದೆ.

ಉಪಾಧ್ಯಕ್ಷರು.—ನಿಮ್ಮ ಪರವಾಗಿ ನಿಮ್ಮ ಮುಖ್ಯ ಸಚೇತಕರು ಇದ್ದಾರೆ. ಅವರನ್ನು ಕೇಳಿ.

ಶ್ರೀ ಎಂ.ಎಸ್. ಕೃಷ್ಣನ್.—ನಾನು ನಮ್ಮ ಪಕ್ಷದ ನಾಯಕನಾದರೂ ನನಗೇ ಮಾತನಾಡಲಿಕ್ಕೆ ಅವಕಾಶ ಕೊಟ್ಟಿಲ್ಲ.

ಉಪಾಧ್ಯಕ್ಷರು.—ಹೌದು ಕೃಷ್ಣನ್ ಅವರಿಗೇ ಅವಕಾಶ ಕೊಟ್ಟಿಲ್ಲ. ರಾಮಯ್ಯನವರೇ ನೀವು ಕ್ಲಾರಿಫಿಕೇಷನ್ ಸಮಯದಲ್ಲಿ ಕೇಳಬಹುದು.

ಶ್ರೀ ಎಂ.ಎಸ್. ಕೃಷ್ಣನ್.—ನನಗೂ ಮತ್ತು ಬೆಂಗಳೂರು ವಿಷಯಕ್ಕೂ ಬಹಳ ನೆಂಟಸ್ತನ್ನ ಅದನ್ನೂ ಈಗ ತಪ್ಪಿಸಿದ್ದಾರೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೆ, ಈ ಖಾತೆಯ ಬೇಡಿಕೆಗಳ ಮೇಲೆ ಹಿರಿಯರಾದ ರಾಮಕೃಷ್ಣ ಅವರಿಂದ ಹಿಡಿದು ಅನೇಕ ಅನುಭವಿಗಳು ಈ ಬಗ್ಗೆ ಅನೇಕ ಉನ್ನತಮಟ್ಟದ ಟೀಕೆಗಳನ್ನು ಮಾಡಿದ್ದಾರೆ ಮತ್ತು ಅದರ ಜೊತೆಗೆ ಸಲಹೆಗಳನ್ನು ಕೂಡ ಕೊಟ್ಟಿದ್ದಾರೆ. ಆದರೆ ಒಟ್ಟಿನಲ್ಲಿ ಅವರೆಲ್ಲರೂ ಒಂದು ವಿಷಯದಲ್ಲಿ ಮಾತ್ರ ಸರ್ಕಾರದ ಧೋರಣೆಯನ್ನು ಬಹಳಷ್ಟು ಬೆಂಬಲಿಸಿದ್ದಾರೆ. ಕಳೆದಹತ್ತಾರುವರ್ಷಗಳಿಂದಪುರಸಭೆ ಮತ್ತು ನಗರ ಸಭೆಗಳಿಗೆಚುನಾವಣೆ ನಡೆಯುವ ಕಾರಣವಾಗಿ ಜನತಾ ಪ್ರತಿನಿಧಿಗಳನ್ನು ಆರಿಸಿಲ್ಲದ ಕಾರಣದಿಂದ ಅವುಗಳ ಅಭಿವೃದ್ಧಿ ಬಹಳಷ್ಟು ಹೀನ ಪರಿಸ್ಥಿತಿಗೆ ಬಂದಿದೆ. ಹೀಗಿರುವಾಗಸರ್ಕಾರದವರುಸುಮಾರುಎಂಟುನಗರಸಭೆಮತ್ತುಒಂದು ಪುರಸಭೆಯನ್ನುಬಿಟ್ಟುಮಿಕ್ಕ ೨೨ ಪುರಸಭೆಗಳು ಮತ್ತು ನಗರ ಸಭೆಗಳಿಗೆ ಚುನಾವಣೆ ನಡೆಸಿದೆ. ಮತ್ತು ಅಲ್ಲಿ ಹೊಸದಾಗಿ ಆಯ್ಕೆಯಾದ ಪ್ರತಿನಿಧಿಗಳು ಬಂದ ಅವರೂ ಕೂಡ ತಮ್ಮ ಕ್ಷೇತ್ರದ ಕೆಲಸ ಕಾರ್ಯಗಳನ್ನು ಮಾಡಲಿಕ್ಕೆ ಬಹಳ ಆತುರರಾಗಿದ್ದಾರೆ. ಆದರೆ ಅದಕ್ಕೆ ಬೇಕಾದ ಅನುಕೂಲತೆ ಸರ್ಕಾರದಿಂದ ಹಣದ ಸಹಾಯದ ಮುಖಾಂತರ ಆಗುತ್ತಿಲ್ಲವೆಂದು ಅಭಿಪ್ರಾಯವನ್ನು ಅವರು ಏನು ವ್ಯಕ್ತ ಮಾಡುತ್ತಿದ್ದಾರೆ ಅದನ್ನು ನಾನು ಒಪ್ಪಬೇಕಾದದ್ದೇ. ಆದ್ದರಿಂದ ಒಂದು ಅಂಶವನ್ನು ಮಾತ್ರ ನಾವು ಅರ್ಥಮಾಡಿಕೊಳ್ಳಬೇಕು. ಸುಮಾರು ಹತ್ತಾರು ದಶಕಗಳಿಂದ ನೋಡಿದಾಗ ಈ ಪಟ್ಟಣಗಳ ಬೆಳವಣಿಗೆಯನ್ನು ವಿಂಗಡಿಸಿದರೆ ಐದರಿಂದ ಹತ್ತು ಸಾವಿರ ಮತ್ತು ಹತ್ತು ಸಾವಿರ ಒಳಗಡೆ ಜನಸಂಖ್ಯೆ ಇರುವ ಪಟ್ಟಣಗಳು ಮತ್ತು ೨೦ರಿಂದ ೫೦ ಸಾವಿರ ಜನಸಂಖ್ಯೆ ಇರತಕ್ಕಂಥ ಪಟ್ಟಣಗಳು ಸುಮಾರು ಹತ್ತು ಇದೆ. ಈ ಭಾಗದಲ್ಲಿ ೧೯೦೧ರಿಂದ ಇದುವರೆಗೂ ಇರತಕ್ಕಂಥ ಅಂಕಿಅಂಶಗಳ ಪ್ರಕಾರ ಜನಸಂಖ್ಯೆ ಜಾಸ್ತಿಯಾಗುತ್ತಲೇ ಬಂದಿದೆ, ಮತ್ತು ಅವುಗಳ ಅಭಿವೃದ್ಧಿ ಕಾರ್ಯಗಳು ಇಲ್ಲದ ಕಾರಣಾಂತರಗಳಿಂದ, ಅವುಗಳ ಬೆಳವಣಿಗೆ ಕೂಡ ಕಡಿಮೆಯಾಗುತ್ತಾ ಬಂದಿದೆ. ಇದನ್ನು ನಾವು ಕಾಣುತ್ತಿದ್ದೇವೆ. ಆದರೆ ಈ ಮಧ್ಯ ಇರುವಂಥ ಮಧ್ಯಮ ಪ್ರಮಾಣದ ಪಟ್ಟಣಗಳು ಹತ್ತರಿಂದ ಇಪ್ಪತ್ತು ಸಾವಿರ ಜನಸಂಖ್ಯೆ ಇರುವುದು ಹಾಗೂ ಒಂದು ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಪಟ್ಟಣಗಳು ಇವುಗಳ ಜನಸಂಖ್ಯೆ ಹೆಚ್ಚಾಗುತ್ತಲೇ ಇದೆ. ಒಟ್ಟು ಜನಸಂಖ್ಯೆಯಲ್ಲಿ ಗ್ರಾಮಾಂತರ ಪ್ರದೇಶಗಳು ಮತ್ತು ನಗರಪ್ರದೇಶಗಳಲ್ಲೂ ಕೂಡ, ಅದರಲ್ಲೂ ಹೆಚ್ಚು ಜನಸಂಖ್ಯೆ ನಗರಪ್ರದೇಶದಲ್ಲಿ ಬರುತ್ತಿರುವುದು ನಮ್ಮ ಗಮನಕ್ಕೆ ಬರುತ್ತದೆ. ನಗರಪ್ರದೇಶದಲ್ಲಿ ಇರತಕ್ಕಂಥ ಜನಸಂಖ್ಯೆಯಲ್ಲಿ ೬೧ನೇ ಇಸವಿಯ ಗಣತಿಯ ಪ್ರಕಾರ ಶೇಕಡಾ ೩೦ರಷ್ಟು ಜನಸಂಖ್ಯೆ ನಗರಪ್ರದೇಶದಲ್ಲಿ ಇದೆ. ಅಂದಮೇಲೆ ನಗರಪ್ರದೇಶಗಳ ಬೆಳವಣಿಗೆ ಯಾವ ರೀತಿಯಿಂದ ಆಗುತ್ತಿದೆ ಎಂಬುದನ್ನು ನಾವು ಪರಿಗಣನೆಗೆ ತೆಗೆದುಕೊಳ್ಳಬೇಕಾದದ್ದು ಅವಶ್ಯಕ. ನಮ್ಮ ರಾಷ್ಟ್ರದ ಬಹಳಷ್ಟು ಜನ ಗ್ರಾಮಾಂತರ ಪ್ರದೇಶಗಳಲ್ಲಿ ವಾಸ ಮಾಡುವವರು ಮತ್ತು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಹಿಂದುಳಿದವರು. ಆದ್ದರಿಂದ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿ ಬಗ್ಗೆ ಹೆಚ್ಚಿನ ಆದ್ಯತೆಯನ್ನು ಕೊಡತಕ್ಕದ್ದನ್ನು ನೋಡುತ್ತಿದ್ದೇವೆ. ಇದೊಂದು ಕಾರಣದಿಂದ ಸರ್ಕಾರ ಕೂಡ ತನ್ನ ಆಯವ್ಯಯದಲ್ಲಿ ಹೆಚ್ಚು ಭಾಗವನ್ನು ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಗೆ ಇಡಬೇಕಾಗಿರತಕ್ಕಂಥ ಕ್ರಮವನ್ನು ತೆಗೆದುಕೊಂಡಿದೆ. ಈ ಸಮಯದಲ್ಲಿ ಶೇಕಡ ೩೦ ರಷ್ಟು ಜನರು ಗ್ರಾಮಾಂತರ ಪ್ರದೇಶಗಳಿಂದ ನಗರಪ್ರದೇಶಗಳಿಗೆ ಬಂದಿದ್ದಾರೆ ಎಂಬುದನ್ನೂ ಕೂಡ ನಾವು ಪರಿಗಣಿಸಬೇಕಾಗುತ್ತದೆ. ನಗರಪ್ರದೇಶ

ಗಳಿಗೆ ಬರುವ ಜನರು ಯಾರು ? ಚೆನ್ನಾಗಿ ಅನುಕೂಲವಾಗಿರುವವರು ಯಾರೂ ಬರುವುದಿಲ್ಲ. ಉದ್ಯೋಗದ ಕಾರಣವಾಗಿ, ಮೇಲ್ವರ್ಗದ ಉದ್ಯೋಗದ ಕಾರಣಕ್ಕಾಗಿ ನಗರಪ್ರದೇಶಗಳಿಗೆ ಜನರು ಬರುತ್ತಾರೆ. ಹೆಚ್ಚಾಗಿ ದಿನನಿತ್ಯದ ಜೀವನೋಪಾಯಕ್ಕೋಸ್ಕರ ಪಟ್ಟಣಗಳಿಗೆ ಬರುವವರ ಸಂಖ್ಯೆ ಜಾಸ್ತಿಯಾಗಿರುತ್ತದೆ. ಹೀಗಾಗಿ ಜನಸಂಖ್ಯೆ ಹೆಚ್ಚಾಗಿ ನಗರಪ್ರದೇಶಗಳಲ್ಲಿ ಬೆಳೆದಿದೆ, ಅದರಲ್ಲೂ ಹೆಚ್ಚಿನ ಪ್ರಮಾಣದಲ್ಲಿ ಆರ್ಥಿಕವಾಗಿ ಹಿಂದುಳಿದವರು ಇಲ್ಲಿ ಇದ್ದಾರೆ.

ಗ್ರಾಮಾಂತರ ಪ್ರದೇಶಗಳಾಗಲೀ, ನಗರ ಪ್ರದೇಶಗಳಾಗಲೀ ಒಂದೇ ಎಂದು ಸರಿಸಮನಾಗಿ ಪರಿಗಣನೆಗೆ ತೆಗೆದುಕೊಳ್ಳಬೇಕಾದ್ದು ಅತ್ಯಾವಶ್ಯಕ. ಅದನ್ನು ತೆಗೆದುಕೊಳ್ಳಬೇಕಾಗಿತ್ತು, ಅದನ್ನು ಗಣನೆಗೆ ತೆಗೆದುಕೊಳ್ಳಬೇಕೆಂದು ಅನೇಕ ಸದಸ್ಯರು ಸಲಹೆಗಳನ್ನು ಕೊಟ್ಟಿದ್ದಾರೆ. ಆಯವ್ಯಯದಲ್ಲಿ ನಗರ ಪ್ರದೇಶಗಳಿಗೆ ಸ್ವಲ್ಪ ಇದುವರೆಗೂ ಇರುವಂಥ ವ್ಯವಸ್ಥೆ ಏನು ಇದೆ, ಅದನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಗಮನಕ್ಕೆ ತೆಗೆದುಕೊಂಡು, ಆ ಕಡೆಗೆ ಹಣದ ವ್ಯವಸ್ಥೆ ಮಾಡಬೇಕೆಂದು ಹೇಳುವುದು ಸಮಂಜಸವಾಗಿರುವಂಥಾದ್ದು, ಇದನ್ನು ಪರಿಗಣನೆಗೆ ತೆಗೆದುಕೊಂಡು ನಾವು ಸ್ಥಳೀಯ ಸಂಸ್ಥೆಗಳ ಆರ್ಥಿಕ ಆಯೋಗವನ್ನು ರಚನೆ ಮಾಡಿದ್ದೇವೆ. ಆ ವರದಿಯನ್ನು ಆದಷ್ಟು ಬೇಗ ತೆಗೆದುಕೊಳ್ಳುವುದಕ್ಕೆ ನಾವು ಪ್ರಯತ್ನ ಮಾಡುತ್ತೇನೆ. ಅವರು ಕೂಡಾ ಈ ದಿಸೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅದು ಬಂದನಂತರ ಆರ್ಥಿಕ ಆಯವ್ಯಯ ವಿಚಾರದಲ್ಲಿ ಎಷ್ಟು ಮಾತ್ರ ನಾವು ಹೆಚ್ಚಿನ ಪ್ರಮಾಣದಲ್ಲಿ ನಗರ ಪ್ರದೇಶಗಳಿಗೆ ಕೂಡಾ ಹಣದ ವ್ಯವಸ್ಥೆ ಮಾಡಬೇಕು ಎನ್ನುವುದು ಗೊತ್ತಾಗುತ್ತದೆ. ಈಗ ಸದ್ಯದಲ್ಲಿರುವಂಥ ಪರಿಸ್ಥಿತಿಯನ್ನು ಹೇಳಬೇಕಾಗಿದ್ದರೆ, ಮೊದಲನೆಯದಾಗಿ ಸಾಮಾನ್ಯವಾಗಿ ಎಲ್ಲಾ ಅಭಿಪ್ರಾಯ ಬಂದಿರುವುದು ಎಂದರೆ ಆಕ್ಟ್ರಾಯನ್ನೇ ರದ್ದು ಮಾಡಿರುವುದರಿಂದ ಸ್ಥಳೀಯವಾಗಿ ಸಂಪನ್ಮೂಲಗಳು ರೂಢಿಯಾಗುವುದು ಪುರಸಭೆಗಳಲ್ಲಿ ಹಾಗೂ ನಗರ ಸಭೆಗಳಲ್ಲಿ ಕಡಿಮೆಯಾಗಿದೆ. ೧೯೭೮–೭೯ರಲ್ಲಿ ಯಾವ ಪ್ರಮಾಣದಲ್ಲಿ ಆಕ್ಟ್ರಾಯ್ ಕಲೆಕ್ಟ್ ಆಗುತ್ತಿತ್ತು ಅದನ್ನು ಒಂದು ಆಧಾರವಾಗಿ ಇಟ್ಟುಕೊಂಡು, ಈಗ ವರ್ಷೇ ವರ್ಷೇ ಸರ್ಕಾರದಿಂದ ಕೊಡುವಂಥ ಹಣವನ್ನು ನಾವು ಹೆಚ್ಚು ಮಾಡುತ್ತಿದ್ದೇವೆ. ಕಳೆದೆರಡು ವರ್ಷಗಳಿಂದ ಶೇಕಡಾ ಹತ್ತರಷ್ಟು ಹೆಚ್ಚು ಮಾಡುತ್ತಾ ಬಂದಿದ್ದೇವೆ, ಅದೇ ಪ್ರಮಾಣದಲ್ಲಿ ಬರುತ್ತಿತ್ತು. ಈ ರೀತಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಬರುವ ಹಾಗೆ ಎಂದರೆ ಆಕ್ಟ್ರಾಯಿ ಬರುತ್ತಿದ್ದಕ್ಕಿಂತಲೂ ಒಂದಕ್ಕೆ ಎರಡರಷ್ಟು ಹಣವನ್ನು ಸೂಚಿಸಿದ್ದಾರೆ. ಅವರ ಅಭಿಪ್ರಾಯವನ್ನು ಗಮನಕ್ಕೆ ತೆಗೆದುಕೊಂಡು ಆಕ್ಟ್ರಾಯ್ ಪರಿಹಾರ ಧನವನ್ನು ಈಗಾಗಲೇ ಕೊಡುತ್ತಿದ್ದೇವೆ. ಅದನ್ನು ಲೆಕ್ಕ ಹಾಕಿದಾಗ ೧೯೮೨–೮೩ರಲ್ಲಿ ಒಟ್ಟು ೨೬ ಕೋಟಿ ೬೦ ಲಕ್ಷ ಕೊಟ್ಟಿದ್ದೇವೆ, ಅದೇ ರೀತಿ ೧೯೮೩–೮೪ರಲ್ಲಿ ೩೨ ಕೋಟಿ ೩೮ ಲಕ್ಷ ಕೊಟ್ಟಿದ್ದೇವೆ. ೧೯೮೪–೮೫ರಲ್ಲಿ ೩೫ ಕೋಟಿ ೬೨ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಈ ರೀತಿ ಇದು ಹೆಚ್ಚಾಗುವ ರೀತಿಯಲ್ಲಿ ಆಗುತ್ತಿದೆ. ಇದರ ಜೊತೆಗೆ ನಾವು ಮುಖ್ಯವಾಗಿ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದಕ್ಕೋಸ್ಕರ ರಸ್ತೆಗಳ ಅಭಿವೃದ್ಧಿಯ ಅನುದಾನವನ್ನು, ಬಿಡುಗಡೆ ಮಾಡುತ್ತಿದ್ದೇವೆ. ದಕ್ಷಿಣ ಕನ್ನಡ ಜಿಲ್ಲೆ, ಧಾರವಾಡ ಮತ್ತು ಬೆಳಗಾಂ ಪ್ರದೇಶಗಳಲ್ಲಿರುವ ೨೭ ಪುರಸಭೆಗಳಲ್ಲಿ ೧೯೭೮–೭೯ರಲ್ಲಿ ಆಕ್ಟ್ರಾಯ್ ಇರಲಿಲ್ಲ. ಆ ಕಾರಣದಿಂದ ನಾವು ಕೊಡತಕ್ಕಂಥ ಆಕ್ಟ್ರಾಯ್ ಪರಿಹಾರ ಅವರಿಗೆ ಸಲ್ಲುತ್ತಿಲ್ಲ. ಇದನ್ನು ಗಣನೆಗೆ ತೆಗೆದುಕೊಂಡು ಸರ್ಕಾರ ಕೂಡಾ ಒಂದು ತೀರ್ಮಾನಕ್ಕೆ ಬಂದಿದೆ. ಆ ಕಡೆಗೆ ನಮ್ಮ ಮುಖ್ಯಮಂತ್ರಿಗಳು ಕೂಡಾ ಡಾ. ಆಚಾರ್ಯರವರಿಗೆ ಉತ್ತರ ಕೊಡುತ್ತಾ ಅದನ್ನು ಪರಿಗಣನೆಗೆ ತೆಗೆದುಕೊಳ್ಳುವುದು ಅತ್ಯಾವಶ್ಯಕವೆಂದು ಹೇಳಿದ್ದಾರೆ. ಆ ಬಗ್ಗೆ ಅನುದಾನವನ್ನು ಬಿಡುಗಡೆ ಮಾಡುವುದಕ್ಕೂ ಕೂಡಾ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆನ್ನುವುದನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆದರೆ ಯಾವ ಪ್ರಮಾಣದಲ್ಲಿ ಆಗಬೇಕು ? ಎಂದರೆ ಹಿಂದಿನ ಬಾಕಿಯನ್ನು ಕೊಡಬೇಕೇ ಎನ್ನುವುದನ್ನು ಪರಿಶೀಲನೆ ಮಾಡುತ್ತಿದ್ದೇವೆ, ಅಂಥ ಒಂದು ತಾತ್ವಿಕ ತೀರ್ಮಾನವನ್ನು ಕೊಡತಕ್ಕಂಥ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆ.

ಶ್ರೀ ವಿ. ಎಸ್. ಆಚಾರ್ಯ.—ಮೋಟಾರ್ ವೆಹಿಕಲ್ ಟ್ಯಾಕ್ಸ್ ೮೦ ಕೋಟಿ ಹಾಕಿದಾಗ ತಾವು ಕೇವಲ ೪೭ ಲಕ್ಷ ಕೊಡುತ್ತಿದ್ದೀರಿ ಇದು ಎಲ್ಲಿ ಸಾಧ್ಯ ?

ಶ್ರೀ ಎಂ. ಎಸ್. ಕೃಷ್ಣನ್.—ಬೆಂಗಳೂರಿನಲ್ಲಿ ಮೋಟಾರ್ ವೆಹಿಕಲ್ ಟ್ಯಾಕ್ಸ್ ೪೩ ಲಕ್ಷ ಎಂದು ಕೊಟ್ಟಿದ್ದೀರಿ, ಅದಕ್ಕೆ ಅರ್ಥ ಇದೆಯೇ ? ಅದು ೪ ಕೋಟಿ ಆಗಬೇಕು. ಇಲ್ಲದಿದ್ದರೆ ಅಭಿವೃದ್ಧಿ ಕಾರ್ಯ ಹೇಗಾಗುತ್ತದೆ ಸ್ವಾಮಿ ?

ಶ್ರೀ ಎಂ. ಚಂದ್ರಶೇಖರ್.—ಇದನ್ನು ಪರಿಶೀಲನೆ ಮಾಡುವುದಕ್ಕೆ ಸಮಿತಿಯನ್ನು ನೇಮಕ ಮಾಡಿದ್ದೇವೆ. ಆ ಸಮಿತಿಯು ವರದಿ ಇಷ್ಟರಲ್ಲೇ ಬರುವುದಿದೆ.

ಶ್ರೀ ವಿ. ಎಸ್. ಆಚಾರ್ಯ.—ಸಂತೋಷ ಏನು ಎಂದರೆ, ವಿರೋಧಪಕ್ಷದವರಿಗಿಂತ ಹೆಚ್ಚಾಗಿ ಆಡಳಿತ ಪಕ್ಷದ ಒಬ್ಬ ಸದಸ್ಯರು ಈ ಟ್ಯಾಕ್ಸನ್ನು ಹತ್ತು ಪರ್ಸೆಂಟು ಕೊಡಬೇಕು ಎಂದು ಹೇಳಿದರು ಆದರೆ ಡಾ. ಹೆಚ್. ಎಲ್. ತಿಮ್ಮೇಗೌಡರು 20 ಪರ್ಸೆಂಟ್ ಕೊಡಬೇಕೆಂದು ಹೇಳಿದ್ದಾರೆ. ಮಾನ್ಯ ಸದಸ್ಯರಾದ ಕಾಂತಾ ಅವರೂ ಸಹ ಆಕ್ಟ್ರಾಯ್ ತೆಗೆದಿರುವುದರಿಂದ ಇದನ್ನು ತುಂಬಲು ಬೇರೆ ಸಂಪನ್ಮೂಲಗಳಿಂದಲಾದರೂ ಅಷ್ಟನ್ನು ಸರ್ಕಾರ ಕೊಡಬೇಕು. ಇದನ್ನು ವಿಚಾರ ಮಾಡುವುದು ಒಳ್ಳೆಯದು. ಫಾದರ್ ಜಾಕಬ್ ಅವರ ವರದಿ ಬಂದ ತಕ್ಷಣ ತಾವು ಇದರ ಬಗ್ಗೆ ವಿಚಾರ ಮಾಡಬೇಕು.

ಶ್ರೀ ಎಂ. ಎಸ್. ಕೃಷ್ಣನ್,—ವರದಿ ಯಾವಾಗ ಬರಬಹುದು,

ಶ್ರೀ ಎಂ. ಚಂದ್ರಶೇಖರ್.—ಆದಷ್ಟು ಬೇಗ ಬರಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ಅದು ಬರುವುದರೊಳಗೆ ಮುಂದಿನ ಬಜೆಟ್ ಬಂದೇಬರುತ್ತದೆ.

ಶ್ರೀ ಎಂ. ಚಂದ್ರಶೇಖರ್.—ಆದರೂ ಕೂಡಾ ಈ ಬಗ್ಗೆ ಅವರ ಕಳಕಳಿ ನಮಗೂ ಅರ್ಥವಾಗಿದೆ, ನಮ್ಮ ಪಕ್ಷದವರು ಹಾಗೂ ನಮ್ಮ ಸರ್ಕಾರಕ್ಕೆ ಆ ಒಂದು ಭಾವನೆ ಇದೆ. ಸ್ಥಳೀಯವಾಗಿ ಸಂಪನ್ಮೂಲಗಳನ್ನು ರೂಢಿಸುವುದಕ್ಕೂ ಕೂಡಾ ಸರ್ಕಾರ ಆದಷ್ಟು ಸಹಾಯ ಮಾಡುತ್ತಿದೆ. ಇದು ಯಾವ ರೀತಿ ಎಂದರೆ ಹುಡ್ಕೋ ಯೋಜನೆಯ ಮುಖಾಂತರವಾಗಲೀ ಮುಖ್ಯವಾದ ವಾಣಿಜ್ಯ ಮಳಿಗೆಗಳನ್ನು ಕಟ್ಟುವ ಕಾರ್ಯಕ್ರಮದಲ್ಲಿ ಅವರಿಗೆ ಸಹಾಯ ಮಾಡುವುದರಿಂದ ಸ್ಥಳೀಯವಾಗಿ ಸಂಪನ್ಮೂಲಗಳನ್ನು ರೂಢಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇದರ ಜೊತೆಗೆ ಬ್ಯಾಂಕ್ ಮುಖಾಂತರ, ಹುಡ್ಕೋ ಮುಖಾಂತರ ಹಣವನ್ನು ವ್ಯವಸ್ಥೆ ಮಾಡಿದಾಗಲೂ ಕೂಡಾ ಸ್ಥಳೀಯವಾಗಿ ಸಂಪನ್ಮೂಲ ಹೆಚ್ಚಾಗುತ್ತದೆ ಅದಕ್ಕೆ ಬೇಕಾದಂಥ ಸಹಕಾರವನ್ನು ಸರ್ಕಾರ ಕೊಡುತ್ತದೆ. ಜೊತೆಗೆ ಮತ್ತೊಂದನ್ನು ಅರ್ಥ ಮಾಡಿಕೊಳ್ಳಬೇಕು. ಅದೇನೆಂದರೆ ನಿಮಗೆಲ್ಲಾ ಗೊತ್ತಿರುವ ಹಾಗೆ ಸ್ಥಳೀಯ ಸಂಸ್ಥೆಗಳ ಆಸ್ತಿಗಳು ಇರುತ್ತವೆ, ಆ ಸಂಸ್ಥೆಗೆ ಸಂಬಂಧಪಟ್ಟ ಯಾವುದೇ ಆಸ್ತಿ ಇರಲಿ, ಅದನ್ನು ಬೇರೆಯವರಿಗೆ ಕೊಡುವಾಗ ಅಥವಾ ಅವುಗಳನ್ನು ಮಾರಾಟ ಮಾಡುವ ಸಮಯದಲ್ಲಿ ಒಳ್ಳೆಯ ಬೆಲೆ ಬರುವಂತಿದ್ದರು ಕೂಡಾ ಅದನ್ನು ಕಡಿಮೆ ಬೆಲೆಗೆ ಹಂಚಿಕೆಯಾಗಿರುವುದು ನಮ್ಮ ಗಮನಕ್ಕೆ ಬಂದಿದೆ. ಇದನ್ನು ಕಂಡು ಸರ್ಕಾರ ಒಂದು ನಿರ್ದೇಶನದ ರೂಪದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಆದೇಶವನ್ನು ಕಳುಹಿಸಿದೆ. ಅದೇನೆಂದರೆ, ಯಾವುದೇ ಸಂಸ್ಥೆಗಳಿಗೆ ಹಾಗೂ ಮುನಿಸಿಪಾಲಿಟಿಗಳಿಗೆ ಸೇರಿರತಕ್ಕಂಥ ಜಾಗಗಳನ್ನು ಮಾರಾಟ ಮಾಡಬೇಕಾದರೆ ಅವುಗಳನ್ನು ಆಕ್ಷನ್ ಮುಖಾಂತರವಾಗಿಯೇ ಮಾಡಬೇಕು. ಅದೂ ಅಲ್ಲದೆ ಆ ರೀತಿ ಮಾಡುವಾಗ ಆ ಜಾಗಗಳು ಸುತ್ತಮುತ್ತ ಸಿಐಟಿಬಿ ಗೆ ಸಂಬಂಧಪಟ್ಟ ಆಸ್ತಿ ಇರುತ್ತದೆ. ಅದನ್ನೂ ನೋಡಿಕೊಳ್ಳಬೇಕು. ಮುನಿಸಿಪಾಲಿಟಿಗಳಿಗೆ ಲಿಮಿಟ್‌ಗೆ ಒಳಪಟ್ಟು ಇರುವಂಥ ಪ್ರದೇಶಗಳನ್ನು ಹಂಚಿಕೆ ರೂಪದಲ್ಲಿ ಮಾಡದೆ ಆಕ್ಷನ್ ರೂಪದಲ್ಲಿ ಆಗಬೇಕು. ವಾಣಿಜ್ಯ ಉದ್ದೇಶಗಳಿಗಾಗಿ ಅಥವಾ ಇನ್ನಾವುದೇ ಬೇರೆ ಉದ್ದೇಶಗಳಿಗಾಗಿ ಎನ್ನುವುದನ್ನು ತೀರ್ಮಾನ ಮಾಡಿದಲ್ಲಿ ಅದನ್ನು ಆಕ್ಷನ್ ರೂಪದಲ್ಲಿ ಮಾಡಿಕೊಟ್ಟರೆ ಒಳ್ಳೆಯ ಬೆಲೆ ಬರುತ್ತದೆ. ಆ ಮುಖಾಂತರ ಕೂಡಾ ಸಂಪನ್ಮೂಲಗಳನ್ನು ರೂಢಿಸಿಕೊಳ್ಳಬೇಕೆನ್ನುವ ಆದೇಶವನ್ನು ಕೂಡಾ ಕಳುಹಿಸಿದ್ದೇವೆ. ಈ ಸಂಪನ್ಮೂಲಗಳ ವಿಚಾರದಲ್ಲಿ ಅವುಗಳನ್ನು ಪರಿಗಣನೆಗೆ ತೆಗೆದುಕೊಂಡು ಸಾಧ್ಯವಾದ ಮಟ್ಟಿಗೆ ಆದಾಯವನ್ನು ಎಷ್ಟು ಹೆಚ್ಚು ಮಾಡುವುದಕ್ಕೆ ಸಾಧ್ಯವೋ ಅಷ್ಟನ್ನು ಮಾಡುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಆಕ್ಟ್ರಾಯ್ ವಿಷಯದಲ್ಲಿ ಕಳೆದ ಸಾರಿ ಏನು ಹೇಳಿದ್ದೀರಿ ? ಈ ಸಾರಿ ಕೂಡಾ ಅದನ್ನೇ ಹೇಳುತ್ತಿದ್ದೀರಿ. ಮುಂದಿನ ಸಾರಿ ಕೂಡ ಇದನ್ನೇ ಹೇಳುತ್ತೀರಾ.

ಶ್ರೀ ಎಂ. ಚಂದ್ರಶೇಖರ್.—ಹೌಸ್ ಟ್ಯಾಕ್ಸ್ ಏನು ಇತ್ತು ಅದರ ಮೇಲೆ ಸೆಸ್ ಹಾಕಿ ಒಂದು ಕೋಟಿ ರೂಪಾಯಿಗಳನ್ನು ನಗರ ನೀರು ಸರಬರಾಜು ಮಂಡಳಿಗೆ ಕೊಡಬೇಕೆಂದು ಹೇಳಿದ್ದೇವೆ, ಎರಡನೆಯದು ಈ ವರ್ಷ ಎರಡು ಕೋಟಿ ರೂಪಾಯಿಗಳನ್ನು ಕೊಳಚೆ ನಿರ್ಮೂಲನಾ ಮಂಡಳಿಗೆ ಇಟ್ಟಿದ್ದೇವೆ. ಏಕೆಂದರೆ ಹೆಚ್ಚಿನ ಕಾರ್ಯಕ್ರಮಗಳನ್ನು ಈ ವರ್ಷ ಹಾಕಿಕೊಳ್ಳುವುದಕ್ಕೆ ಅನುಕೂಲವಾಗಲೆಂದು ಮುಂದೆ ಇರುವಂಥ ಸಂಪನ್ಮೂಲಗಳನ್ನು ವೆಚ್ಚ ಮಾಡುವುದರಲ್ಲೂ ಕೂಡಾ ಶೇಕಡಾ 18 ರಷ್ಟು ಏನು ಇದೆ, ಅವುಗಳನ್ನು ಹರಿಜನ ಗಿರಿಜನರ ಕಲ್ಯಾಣಕ್ಕಾಗಿಯೇ ಮಾಡಬೇಕು. ಇರುವಂಥ

ಆದಾಯದಲ್ಲಿ ಸಂಬಳ ಸಾರಿಗೆ ಬಿಟ್ಟು, ಉಳಿದ ಹಣದಲ್ಲಿ ೧೮ ಪರ್ಸೆಂಟ್ ಹಣವನ್ನು ಹರಿಜನ–ಗಿರಿಜನರ ಅಭಿವೃದ್ಧಿಗಾಗಿ ಖರ್ಚು ಮಾಡಿರುವುದನ್ನು ನಾವು ಕೊಟ್ಟಿರುವಂತಹ ವರದಿಯಲ್ಲಿ ತಾವು ನೋಡಿರ ಬಹುದು. ನಗರ ಪಾಲಿಕೆಯಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ ಎಂಬುದು ಇದರಿಂದ ತಮಗೆ ಗೊತ್ತಾಗುತ್ತದೆ.

೩–೦೦ ಪಿ ಎಂ.

ನಾನು ಹೋದ ವರ್ಷ ಪ್ರತಿಯೊಂದು ಪುರಸಭೆಗಳಿಗೂ ಹೋದಾಗ ಅಲ್ಲಿ ಅವರು ಶೇಕಡಾ ೧೮ ಭಾಗದ ಹಣವನ್ನು ನೇರವಾಗಿ ಹರಿಜನ ಮತ್ತು ಗಿರಿಜನ ಮತ್ತು ಹಿಂದುಳಿದವರಿಗೆ ಸೇರುವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ಮತ್ತು ಈ ವಿಷಯದಲ್ಲಿ ಬೇರೆ ಲೆಕ್ಕ ಇಡಬೇಕೆಂದು ಹೇಳಿದ್ದೇನೆ. ಮುಖ್ಯಮಂತ್ರಿಯವರೂ ಸಹ ಎಲ್ಲಾ ಪುರಸಭೆಗಳಿಗೆ ಕಾಗದ ಬರೆದಿದ್ದಾರೆ. ಆಯವ್ಯಯ ವೆಚ್ಚದಲ್ಲಿ ಶೇಕಡಾ ೧೮ ರಷ್ಟು ಹಣವನ್ನು ಅವರಿಗೆ ತಲುಪುವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ಆದೇಶ ನೀಡಿದ್ದಾರೆ. ನಾವು ಈ ದಿಶೆಯಲ್ಲಿ ನೋಡಿದಾಗ ನಗರಪಾಲಿಕೆಗಳು ಹೆಚ್ಚಾಗಿ ಕಾಮಗಾರಿಗಳನ್ನು ಮಾಡಲು ಇರುವ ಸಂಪನ್ಮೂಲಗಳಲ್ಲಿ ಅವರು ವೆಚ್ಚ ಮಾಡಲು ಅವಕಾಶ ಇದೆ. ಆದರೆ ಪುರಸಭೆಗಳ ವಿಚಾರದಲ್ಲಿ ಈ ಬಗ್ಗೆ ಹಣವನ್ನು ತೆಗೆದಿಟ್ಟರೂ ಕೂಡ ಸಂಪನ್ಮೂಲಗಳು ಸರಿಯಾದ ರೀತಿಯಲ್ಲಿ ಸಾಲ ದಿರುವುದರಿಂದ ಪುರಸಭೆಗಳ ಕಾಮಗಾರಿಗಳು ಸರಿಯಾದ ರೀತಿಯಲ್ಲಿ ಆಗಿಲ್ಲ. ಆದರೂ ಕೂಡಾ ನಾವು ಈಗ ಮತ್ತೊಂದು ಆದೇಶವನ್ನು ಕಳುಹಿಸಿದ್ದೇವೆ. ಎಷ್ಟು ಹಣವನ್ನು ತೆಗೆದಿಟ್ಟಿದ್ದರೂ ಅಷ್ಟು ಹಣವನ್ನು ನೇರವಾಗಿ ಹರಿಜನ ಗಿರಿಜನರಿಗೆ, ಬಡವರಿಗೆ ತಲುಪುವ ರೀತಿಯಲ್ಲಿ ವೆಚ್ಚ ಮಾಡಬೇಕೆಂದು ಈ ಹಣವನ್ನು ಸಾಮಾನ್ಯವಾದ ವೆಚ್ಚಕ್ಕಾಗಿ ಉಪಯೋಗ ಮಾಡಬಾರದೆಂದೂ ಹೇಳಿದ್ದಾರೆ. ಈಗ ಗೃಹನಿರ್ಮಾಣ ಮಂಡಳಿ, ಭಾಗ್ಯಮಂದಿರಗಳ ಯೋಜನೆ ಬಗ್ಗೆ ಹೇಳುವುದಾದರೆ. ಹಿಂದಿನವರ್ಷದಲ್ಲಿ ಅಂದರೆ ೮೨–೮೩ ರಲ್ಲಿ ತೆಗೆದಿಟ್ಟಿದ್ದ ಹಣ ಖರ್ಚು ಆಗದೆ ಇದ್ದುದರಿಂದ ಈಗ ಕೆಲವು ಭಾಗ್ಯಮಂದಿರಗಳು ಆಗದಿದ್ದುದರಿಂದ ಈ ಮುನ್ಸಿಪಲ್ ಲಿಮಿಟ್ಸಿನಲ್ಲಿ ಒಂದೊಂದು ಪುರಸಭೆಗೆ ೩೦–೪೦ ರಂತೆ ನಾವು ನಾಲ್ಕು ಸಾವಿರ ರೂಪಾಯಿ ಗಳ ವೆಚ್ಚದಲ್ಲಿ ಕಟ್ಟುವ ಜನತಾಗೃಹಗಳು ಏನಿವೆ ಈ ಮನೆಗಳು ಹಿಂದಿನ ವರ್ಷದಲ್ಲಿ ಪೂರ್ಣ ಆಗದೆ ಇದ್ದುದರಿಂದ ೨೦೦ ಲಕ್ಷ ರೂಪಾಯಿಗಳಷ್ಟು ಹಣವನ್ನು ತೆಗೆದಿಟ್ಟಿದ್ದರೂ ಪೂರ್ಣ ಆಗದೆ ಇದ್ದಂತಹ ಮನೆಗಳಿಗೆ ಖರ್ಚು ಮಾಡಿರುವುದು ಕೇವಲ ೭೫ ಲಕ್ಷ ರೂಪಾಯಿಗಳು ಮಾತ್ರ. ಮುಂದಿನ ವರ್ಷ ಈ ಯೋಜನೆಯನ್ನು ತ್ವರಿತ ಗತಿಯಲ್ಲಿ ಮುಂದುವರಿಸಿಕೊಂಡು ಹೋಗು ತ್ತೇವೆ. ಮಂನ್ನರೆ ಯೋಜನೆ ಬಗ್ಗೆ ಹೇಳುವುದಾದರೆ, ಈ ಕಾರ್ಯಕ್ರಮವನ್ನು ನಾವು ಅದೇರೀತಿ ಮುಂದುವರಿಸಿಕೊಂಡು ಬಂದಿದ್ದೇವೆ. ಆದರೆ ಈ ವರ್ಷ ಕೇಂದ್ರ ಸರಕಾರದವರು ಈ ಯೋಜನೆ ಯನ್ನು ನಿಲ್ಲಿಸಲು ಆದೇಶ ನೀಡಿರುವುದರಿಂದ ನಾವು ಈ ಯೋಜನೆಯನ್ನು ನಿಲ್ಲಿಸಬೇಕಾಗಿದೆ. ಇದು ವರೆಗೂ ೧೨ ಸಾವಿರದ ೫೦೫ ಜನರಿಗೆ ಉಪಯೋಗ ಆಗುವ ರೀತಿಯಲ್ಲಿ ೪೭.೫ ಲಕ್ಷ ಧನ ಸಹಾಯದ ಜೊತೆಗೆ ಬ್ಯಾಂಕುಗಳಿಂದ ೧೦೮ ಲಕ್ಷಗಳನ್ನು ಕೊಟ್ಟು ಈ ಕಾರ್ಯಕ್ರಮವನ್ನು ನಡೆಸಿಕೊಂಡು ಬಂದಿ ದ್ದೇವೆ. ಆದರೆ ಈ ಕಾರ್ಯಕ್ರಮವನ್ನು ನಿಲ್ಲಿಸಲು ಕೇಂದ್ರ ಸರ್ಕಾರದಿಂದ ಆದೇಶ ಬಂದಿದೆ.

ಹಿಂದೆ ಪುರಸಭೆಗಳಿಗೆ ಎರಡು ಕೋಟಿ ಮಾತ್ರ ತೆಗೆದಿಡಲಾಗಿತ್ತು. ಇದನ್ನು ೨೩೪ ನಗರಗಳಿಗೆ ಹಂಚಬೇಕಾದರೆ ಅದು ಪ್ರತಿಯೊಬ್ಬರಿಗೂ ಎಂದರೆ ಕಡಿಮೆ ಬರುತ್ತದೆ. ಕೆಲವುಕಡೆ ಅಗತ್ಯ ಕಾಮಗಾರಿ ಗಳು ಆಗಬೇಕು. ಕೆಲವೊಂದು ಕಡೆ ಪ್ರದೇಶದಲ್ಲಿ ಅನೇಕ ವರ್ಷಗಳಿಂದ ಕಛೇರಿ ಇಲ್ಲ. ಅಂತಹ ಕಡೆಗಳಲ್ಲಿ ಅಂದಾಜನ್ನು ತಯಾರಿಸಿ ನಕ್ಷೆಗಳನ್ನು ತರಿಸಿ, ನಾವು ಕಛೇರಿಯನ್ನು ಕಟ್ಟಿಸುವ ಒಂದು ಯೋಜನೆಯನ್ನು ಮಾಡುತ್ತಿದ್ದೇವೆ.

ಈಗ ಸುಲಭಶೌಚಾಲಯಗಳ ನಿರ್ಮಾಣ ಕಾರ್ಯವನ್ನು ತೆಗೆದುಕೊಳ್ಳುತ್ತಿದ್ದೇವೆ. ಪಟ್ಟಣಗಳಲ್ಲಿ ನಗರಗಳಲ್ಲಿ, ತಾಲ್ಲೂಕ್ ಕೇಂದ್ರಗಳಲ್ಲಿ ಇರುವ ಪಟ್ಟಣಗಳಲ್ಲಿ ಸುಲಭಶೌಚಾಲಯ ನಿರ್ಮಾಣಕ್ಕೆ ೨೦೦ ಲಕ್ಷರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ. ಈ ಕಾರ್ಯ ಈ ವರ್ಷ ಈಗಾಗಲೇ ಪ್ರಾರಂಭವಾಗಿದೆ. ಎಂಟು ಪುರಸಭೆಗಳಲ್ಲಿ ಈ ಕಾರ್ಯ ಪ್ರಾರಂಭವಾಗಿದೆ. ಸ್ನಾನಗೃಹ, ಮೂತ್ರ, ಇತ್ಯಾದಿಗಳನ್ನು ಮೊದ ಲನೇಯ ಹಂತವಾಗಿ ಸಾರ್ವಜನಿಕ ಬಸ್ ಸ್ಟ್ಯಾಂಡ್‌ಗಳು ಎಲ್ಲಿ ಇವೆಯೋ ಅಲ್ಲಿ ಕಟ್ಟಲು ಯೋಜನೆ ಮಾಡಿದ್ದೇವೆ. ಅನಂತರ ಆರ್ಥಿಕವಾಗಿ ಹಿಂದುಳಿದಿರತಕ್ಕಂತಹ ಪ್ರದೇಶಗಳಲ್ಲಿ ಸಹ ಅವುಗಳನ್ನು ಕಟ್ಟಿಸುವ ಯೋಜನೆ ಇದೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ಸುಲಭ ಶೌಚಾಲಯಗಳಲ್ಲಿ ರಾಜಕೀಯ ಇಲ್ಲವೆ ?.

ಶ್ರೀ ಎಂ. ಚಂದ್ರಶೇಖರ್.—ಇದರಲ್ಲಿ ರಾಜಕೀಯ ಇಲ್ಲ. ೧೭೫ ತಾಲ್ಲೂಕು ಕೇಂದ್ರಗಳಲ್ಲಿ ಶೌಚಾಲಯ ಗೃಹಗಳು ಬರುವಹಾಗೆ ಮತ್ತು ನಗರಗಳಲ್ಲಿ ಅಲ್ಲಲ್ಲಿ ಎರಡೆರಡು ಸುಲಭ ಶೌಚಾಲಯಗಳು ನಿರ್ಮಾಣ ಆಗುವ ಹಾಗೆ ಕಾರ್ಯಕ್ರಮ ಕೈಗೊಂಡಿದ್ದೇವೆ. ಬೆಂಗಳೂರು ನಗರದಲ್ಲಿ ಈಗಾಗಲೇ ಮೂರು ಸುಲಭಶೌಚಾಲಯಗಳು ಕಾರ್ಯ ಮಾಡುತ್ತಿವೆ. ಮತ್ತು ನಗರಸಭೆಗಳ ವ್ಯಾಪ್ತಿಯಲ್ಲಿ ಒಂದೊಂದು ಡಿವಿಜನ್ನಿಗೆ ಒಂದೊಂದು ಶೌಚಾಲಯವನ್ನು ಕಟ್ಟಿಸಲು ಯೋಜನೆ ಮಾಡಲಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಇದನ್ನು ಕೇಳಿ ಕೇಳಿ ನಮಗೆ ಸುಸ್ತಾಗಿದೆ.

ಎಂ. ಚಂದ್ರಶೇಕರ್.—ಈಗ ಮಾಡುತ್ತಾ ಇದ್ದೇವೆ. ಈಗ ಮಲ್ಲೇಶ್ವರಂನಲ್ಲಿ ನಾವು ಒಂದು ಶೌಚಾಲಯ ಗೃಹವನ್ನು ನಿರ್ಮಿಸಿದ್ದೇವೆ. ಇದನ್ನು ಪಾಟ್ನಾದ ಒಂದು ಸಂಸ್ಥೆ ಮೈಂಟೇನ್ ಮಾಡುತ್ತಿದೆ. ನಾವು ಕಟ್ಟುವ ಶೌಚಾಲಯಗಳನ್ನು ಅವರು ಮೈಂಟೇನ್ ಮಾಡುತ್ತಾರೆ. ಇನ್ನು ಮುಂದೆ ನಿರ್ಮಿಸುವ ಶೌಚಾಲಯಗಳನ್ನು ಕೂಡಾ ಆ ಸಂಸ್ಥೆಯವರಿಗೆ ವಹಿಸುವ ಉದ್ದೇಶ ಸರಕಾರದವರಿಗೆ ಇದೆ.

ಡಾ. ವಿ. ಎಸ್. ಆಚಾರ್ಯ.—ಈ ಸುಲಭ ಶೌಚಾಲಯಗಳ ಬಗ್ಗೆ ನನಗೆ ಏನೋ ಸಂತೋಷವಾಗಿದೆ. ಇದು ಬಹಳ ಒಳ್ಳೆಯ ಯೋಜನೆ. ಮಲ್ಲೇಶ್ವರದಲ್ಲಿರುವ ಶೌಚಾಲಯವು ಒಂದು ಉತ್ತಮ ಶೌಚಾಲಯವಾಗಿದೆ.

ಎಂ. ಚಂದ್ರಶೇಖರ್.—ಇದರ ಬಗ್ಗೆ ಹೇಳಬೇಕಾದರೆ, ಪಾಟ್ನಾದಲ್ಲಿ, ಬಿಹಾರದಲ್ಲಿ ರಾಜಾಸ್ಥಾನದಲ್ಲಿ, ಮಧ್ಯಪ್ರದೇಶದಲ್ಲಿ ಹತ್ತು ಪೈಸೆಯನ್ನು ಕೊಟ್ಟು ಈ ಸ್ನಾನ, ಶೌಚ, ಮೂತ್ರಿಗಳ ಅನುಕೂಲಗಳನ್ನು ಪಡೆಯುತ್ತಾರೆ. ಅದೇ ರೀತಿ ಕರ್ನಾಟಕದಲ್ಲಿ ಏಕೆ ಈ ರೀತಿ ಆಗಬಾರದು ! ಬೆಂಗಳೂರು ನಗರದಲ್ಲಿ ನಿರ್ಮಾಣ ಆಗಿರುವಂತಹ ಶೌಚಾಲಯಗಳಿಂದ ದಿನಕ್ಕೆ ೩೦೦ ರಿಂದ ೪೦೦ ರೂಪಾಯಿಗಳ ವರೆಗೆ ವರಮಾನ ಬರುತ್ತಾ ಇವೆ. ಕಲಾಸಿಪಾಳ್ಯದಲ್ಲಿ ನಿರ್ಮಿಸಿರುವಂತಹ ಶೌಚಾಲಯದಿಂದ ೭೦ರಿಂದ ೧೦೦ ರೂಪಾಯಿಗಳವರೆಗೆ ವರಮಾನ ಬರುತ್ತಾ ಇದೆ. ಅಲ್ಲಿ ೫ ಜನರಿಗೆ ಉದ್ಯೋಗವನ್ನು ಕೊಟ್ಟಿದ್ದೇವೆ. ಜನರು ಈ ಸೌಲಭ್ಯವನ್ನು ಉಪಯೋಗ ಮಾಡಿಕೊಳ್ಳಬೇಕು. ಇಂತಹ ಸೌಲಭ್ಯಗಳನ್ನು ರಾಜ್ಯದ ಎಲ್ಲಾ ಪುರಸಭೆಗಳು ಕೊಡತಕ್ಕದ್ದೆಂದು ಸರಕಾರ ಆದೇಶ ಕೊಟ್ಟು ಸರಕಾರದ ವತಿಯಿಂದ ಪುರಸಭೆಗೆ ವಂತಿಗೆ ಕೊಡಬೇಕಾಗಿದೆ ಪುರಸಭೆಯವರ ಎಷ್ಟು ವಂತಿಗೆ ಕೊಡುತ್ತಾರೋ ಅದನ್ನು ಬಿಟ್ಟು ಉಳಿದಹಣವನ್ನು ಸರಕಾರ ಕೊಡುತ್ತಿದೆ.

ಇನ್ನು ಪುರಸಭೆ ಸಿಬ್ಬಂದಿಯವರಿಗೆ ೧೯೭೩–೭೪ ರಲ್ಲಿ ಕೆಲವಾರು ಅನುಕೂಲಗಳನ್ನು ಎಂದರೆ, ವೇತನ, ತುಟ್ಟಿಭತ್ಯೆ, ವಿಶ್ರಾಂತಿ ವೇತನ ಇವುಗಳನ್ನು ನಿಯಮಗಳ ಅನುಸಾರವಾಗಿ ಏನೇನು ಕೊಡಬೇಕೋ ಅವುಗಳನ್ನು ಪುರಸಭೆಗಳು ಕೊಡಬೇಕೆಂದು ನಾವು ಆದೇಶ ನೀಡಿದ್ದೇವೆ.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ಪುರಸಭೆಯ ನಿರ್ದೇಶನಾಲಯಗಳ ಬಗ್ಗೆ ಹೇಳಲಿಲ್ಲ.

ಇದರ ಜೊತೆಗೆ ಬೆಳಗಾಂನಲ್ಲಿ ನಗರಪಾಲಿಕೆಯಲ್ಲಿ ಪೌರಕಾರ್ಮಿಕರಿಗೆ ಒಂದು ಗ್ರೂಪ್ ಇನ್‌ಷ್ಯೂರೆನ್ಸ್ ಸ್ಕೀಮನ್ನು ಜಾರಿಗೆ ತಂದಿದ್ದೇನೆ. ಬೇರೆ ನಗರಪಾಲಿಕೆಯಲ್ಲಿ ಯಾವ ರೀತಿ ಇದೆ ಅದೇ ರೀತಿ ಇಲ್ಲಿಯೂ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅನೇಕರ ಒಂದು ಅಭಿಪ್ರಾಯ ಏನಿದೆ ಎಂದರೆ ಆಡಳಿತಾತ್ಮಕವಾಗಿ ಒಂದು ಇಲಾಖೆ ಮುಖಾಂತರವಾಗಿ ಆಡಳಿತ ನಡೆಸಿದಾಗ ಒಂದು ಕಡೆ ಪುರಸಭೆಗಳಿಗೆ ಜಿಲ್ಲಾಧಿಕಾರಿಗಳು, ಅಲ್ಲಿಂದ ವಿಭಾಗಾಧಿಕಾರಿಗಳು ಅಲ್ಲಿಂದ ಸರ್ಕಾರ ಹೀಗಾಗಿ ಆಡಳಿತದಲ್ಲಿ ಅನೇಕ ಕಾರ್ಯಚಟುವಟಿಕೆಗಳು ವಿಳಂಬವಾಗುತ್ತಿವೆ. ಅದನ್ನು ತಪ್ಪಿಸಲು ಅದಕ್ಕೆ ಬೇರೆ ಒಂದು ನಿರ್ದೇಶನಾಲಯ ಇರಬೇಕೆಂಬುದು ಅನೇಕರ ಅಭಿಪ್ರಾಯವಾಗಿದೆ. ಇದರಿಂದ ಸಿಬ್ಬಂದಿಯವರ ಸೇವಾ ದೃಷ್ಟಿಯಲ್ಲಿ ಕೂಡ ಅನುಕೂಲವಾಗುತ್ತದೆ. ಸಿಬ್ಬಂದಿ ಮತ್ತು ನೌಕರರನ್ನು ಹೊರಗಡೆಯಿಂದ ಎರವಲು ಸೇವೆಯಲ್ಲಿ ಏನು ತೆಗೆದುಕೊಳ್ಳುತ್ತಾರೆ ಅದನ್ನು ಬೇಕಾದರೆ ಕಡಿಮೆ ಮಾಡಿ ನಾವೇ ನೇರವಾಗಿ ಇಲಾಖೆಗೆ ತೆಗೆದುಕೊಂಡರೆ ಕೆಲಸಕಾರ್ಯಗಳು ಉತ್ತಮ ರೀತಿಯಲ್ಲಿ ಆಗುತ್ತವೆ. ಈ ಎರಡು ಕಾರಣಗಳಿಂದಾಗಿ ನಿರ್ದೇಶನಾಲಯವನ್ನು ಮಾಡುವ ತೀರ್ಮಾನವನ್ನು ಸರ್ಕಾರ ತೆಗೆದುಕೊಂಡಿದೆ. ಈಗ ಅದರ ಬಗ್ಗೆ ಡ್ರಾಫ್ಟ್ ಸಿದ್ಧವಾಗಿದ್ದು ನಮ್ಮ ಸಂಪುಟದಲ್ಲಿ ಚರ್ಚೆಯಾದಾಗ ಏನು ಅಭಿಪ್ರಾಯ ಮೂಡಿತ್ತೆಂದರೆ ಈ ಅಧಿವೇಶನ ಮುಗಿದಕೂಡಲೇ ಕೆಲವಾರು ರಾಜ್ಯಗಳಲ್ಲಿರುವ ನಿರ್ದೇಶನಾಲಯಗಳನ್ನು

ನೋಡಿಕೊಂಡು ಬಂದು ರಚನೆಯಲ್ಲಿ ಏನಾದರೂ ಬದಲಾವಣೆ ಇದ್ದರೆ ಅದನ್ನು ಮಾಡಿ ಯಾವ ರೀತಿ ರಚನೆಯಾಗಬೇಕು ಎಂಬುದರ ಬಗ್ಗೆ ತೀರ್ಮಾನಿಸಿ ನಿರ್ದೇಶನಾಲಯವನ್ನು ಮಾಡುವ ತೀರ್ಮಾನವನ್ನು ಸರ್ಕಾರ ತೆಗೆದುಕೊಂಡಿದೆ.

ಇನ್ನು ನಗರಾಭಿವೃದ್ಧಿ ಮಂಡಳಿಯ ಬಗ್ಗೆ ಹೇಳುವುದಾದರೆ, ೧೨ ನಗರ ಅಭಿವೃದ್ಧಿ ಮಂಡಳಿಗಳು ರಚನೆಯಾಗಿದ್ದು ಇದುವರೆಗೆ ನಾವು ಅವುಗಳಿಗೆ ಸದಸ್ಯರುಗಳನ್ನು ಮಾಡಿರಲಿಲ್ಲ. ಈಗ ನಾವು ಅಫಿಷಿಯಲ್ ಮೆಂಬರ್‌ಗಳನ್ನು ಮಾಡಿದ್ದೇವೆ. ಅಧ್ಯಕ್ಷರನ್ನು ಮಾಡಿದ್ದೇವೆ. ಕೆಲಸಕಾರ್ಯಗಳು ಬಹಳ ಚುರುಕ್ಕಾಗಿ ನಡೆಯುತ್ತಿವೆ ಮಾನ್ಯ ಲಕ್ಷ್ಮೀನರಸಿಂಹಯ್ಯನವರು ಹೇಳಿದರು, ತುಮಕೂರು, ರಾಯಚೂರು ಮತ್ತು ಕೆ.ಜಿ.ಎಫ್. ಇವು ನಗರಗಳೂ ಆಗಿದ್ದರೂ ಕೂಡ ಅಲ್ಲಿ ಸಿ ಐ.ಟಿ.ಬಿ. ರಚನೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ ೧೯೮೩-೮೪ರಲ್ಲಿ ದಾವಣಗೆರೆಯಲ್ಲಿರುವ ನಗರಾಭಿವೃದ್ಧಿ ಮಂಡಳಿಯವರ ೮೩೩ ನಿವೇಶನಗಳು ಬೆಳಗಾಂನಲ್ಲಿ ೨೨೦ ನಿವೇಶನ, ಮೈಸೂರು ವಿಶ್ವಸ್ಥ ಮಂಡಳಿಯಲ್ಲಿ ೭೭೦+೧೮೦ ನಿವೇಶನ, ಮಂಗಳೂರಿನಲ್ಲಿ ೧೦೬ ನಿವೇಶನಗಳನ್ನು ಮಾಡಿಕೊಳ್ಳುವುದಕ್ಕೆ ಮಂಜೂರಾತಿ ಕೊಟ್ಟು ಈಗಾಗಲೇ ಕ್ರಮ ತೆಗೆದುಕೊಳ್ಳುವುದಕ್ಕೆ ಅರ್ಜಿಗಳನ್ನು ಹೊರಡಿಸಿದ್ದೇವೆ. ಒಟ್ಟಿನಲ್ಲಿ ಯೋಜನೆಗಳನ್ನು ಮಾಡಬೇಕಾಗಿದ್ದರೆ ಭೂಸ್ವಾಧೀನ ಸಮಸ್ಯೆ ಬಹಳಷ್ಟು ಇದೆ. ಬೈಲಾಟರಲ್ ಅಗ್ರಿಮೆಂಟ್ ಎಂದು ಮಾಡಿಕೊಂಡು ಭೂಸ್ವಾಧೀನವನ್ನು ಜಿಲ್ಲಾಧಿಕಾರಿಗಳು ಮಾಡಿಕೊಳ್ಳುವುದಕ್ಕೆ ಬರುತ್ತದೆ. ಮೊದಲು ಸರ್ಕಾರದವರು ಪ್ರತಿಯೊಂದು ಎಕರೆಯನ್ನು ಭೂಸ್ವಾಧೀನ ಮಾಡಬೇಕಾಗಿದ್ದರೆ ತಿಂಗಳಾನುಗಟ್ಟಲೆ ಹಿಡಿಯುತ್ತಿತ್ತು ಈಗ ಅಧಿಕಾರ ವಿಕೇಂದ್ರೀಕರಣ ಮಾಡಿ ಜಿಲ್ಲಾಧಿಕಾರಿಗಳು ೫ ಹೆಕ್ಟೇರ್, ವಿಭಾಗಾಧಿಕಾರಿಗಳು ೧೦ ಹೆಕ್ಟೇರ್‌ವರೆಗೆ ಸ್ವಾಧೀನ ಮಾಡಿ ಮಂಡಳಿಯವರು ಅಲ್ಲೇ ಕುಳಿತು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಅಧಿಕಾರ ಕೊಟ್ಟಿದೆ. ಮಂಡಳಿಯಲ್ಲಿ ಕೇವಲ ೨೫ ಸಾವಿರ ರೂಪಾಯಿಗಳ ಕಾಮಗಾರಿ ತೆಗೆದುಕೊಳ್ಳುವುದಕ್ಕೆ ಮಾತ್ರ ಅಧಿಕಾರವಿತ್ತು. ಅದನ್ನು ಈಗ ೨ ಲಕ್ಷದವರೆಗೆ ಏರಿಸಿದ್ದೇವೆ. ಈ ರೀತಿ ಆದಷ್ಟು ಅಧಿಕಾರ ವಿಕೇಂದ್ರೀಕರಣ ಮಾಡಿ ಮಂಡಳಿಗಳು ಸ್ವಾಯತ್ತತೆಯಿಂದ ಕೆಲಸ ಮಾಡಲಿಕ್ಕೆ ನಾವು ಕ್ರಮ ತೆಗೆದುಕೊಂಡಿದ್ದೇವೆ. ಈ ವಿಷಯದಲ್ಲಿ ಮೈಸೂರು ವಿಶ್ವಸ್ಥ ಮಂಡಳಿಯಲ್ಲಿ ೭೭೦+೧೮೦ ಅಲ್ಲದೇ ೫೦೦೦ ನಿವೇಶನಗಳನ್ನು ಅಲ್ಲಿ ಹಂಚುವುದಕ್ಕೋಸ್ಕರವಾಗಿ ಕ್ರಮ ತೆಗೆದುಕೊಂಡಿದ್ದೇವೆ ವಿಜಯನಗರ ಬಡಾವಣೆಯಲ್ಲಿ ಸುಮಾರು ೧೫.೬ ಕೋಟಿ ಯೋಜನೆಯಲ್ಲಿ ಸುಮಾರು ೮೨೦೦ ನಿವೇಶನಗಳನ್ನು ಮಾಡುವುದಕ್ಕೆ ಒಂದು ಅವಕಾಶವಿದೆ. ಅದು ಸರ್ಕಾರಕ್ಕೆ ಬಂದಿದ್ದು ನಾವು ಮಂಜೂರಾತಿ ಕೊಟ್ಟು ಕಳುಹಿಸಿದ್ದೇವೆ. ಒಟ್ಟಿನಲ್ಲಿ ೧೦-೧೨ ಸಾವಿರ ನಿವೇಶನಗಳನ್ನು ಹಂಚುವ ಯೋಜನೆಯನ್ನು ಈ ವರ್ಷದಲ್ಲಿ ಮಾಡಿ ನಿವೇಶನವನ್ನು ಹಂಚುವ ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ. ಅದೇರೀತಿ ಹುಬ್ಬಳ್ಳಿ ಧಾರವಾಡದಲ್ಲಿ ೧೫೩ ಎಕರೆ ವಿಸ್ತೀರ್ಣದಲ್ಲಿ ೨೩೬೮ ನಿವೇಶನಗಳನ್ನು ಮತ್ತು ಮಂಗಳೂರಿನಲ್ಲಿ ೩೫೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ೧೪೨ ಎಕರೆಯಷ್ಟು ಭೂಮಿಯನ್ನು ನಿವೇಶನ ಮಾಡುವುದಕ್ಕೋಸ್ಕರವಾಗಿ, ಗುಲ್ಬರ್ಗಾದಲ್ಲಿ ಫಿಲ್ಟರ್‌ಬೆಡ್ ಯೋಜನೆಗೆ ಇನ್ನು ಭೂಸ್ವಾಧೀನದ ಕೆಲಸ ಪ್ರಗತಿಯಲ್ಲಿದೆ. ಅಲ್ಲಿ ೧೦೬೪ ನಿವೇಶನಗಳನ್ನು ಮಾಡಿ ಆರ್ಥಿಕವಾಗಿ ಹಿಂದುಳಿದವರಿಗೆ ಹರಿಜನ ಗಿರಿಜನರಿಗೆ ೨೫×೩೦ ಅಳತೆಯ ೮೪೯ ನಿವೇಶನಗಳನ್ನು ಹಂಚುವುದಕ್ಕೆ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಇನ್ನು ಆಟೋವರ್ಕ್‌ಷಾಪ್, ಸಾಮಿಲ್ಸ್ ಕಮರ್ಷಿಯಲ್ ಷಾಪ್ಸ್ ಇತ್ಯಾದಿ ಯೋಜನೆಗಳ ಸಲುವಾಗಿ ೧೨೫ ನಿವೇಶನಗಳನ್ನು ಕೊಳ್ಳುವಂತಹ ಯೋಜನೆಯನ್ನು ಕೂಡ ಹಾಕಿಕೊಂಡಿದ್ದೇವೆ. ಜೊತೆಗೆ ೪೭೨೦ ನಿವೇಶನ ಮಾಡಿಕೊಳ್ಳುವಂತಹ ಯೋಜನೆಯನ್ನು ಕೂಡ ವಿಶ್ವಸ್ಥ ಮಂಡಳಿಯಲ್ಲಿ ಹಾಕಿಕೊಂಡಿದೆ. ದಾವಣಗೆರೆಯಲ್ಲಿ ೧.೩೧ ಕೋಟಿ ರೂಪಾಯಿಗಳ ವೆಚ್ಚದಲ್ಲಿ ೮೩೩ ನಿವೇಶನಗಳು ರಚನೆಯಾಗಿವೆ. ಶಾಂತಿನಗರದಲ್ಲಿ ಬಡವರಿಗೆ ಮತ್ತು ಹಿಂದುಳಿದವರಿಗೆ ೨೬ ಎಕರೆ ವಿಸ್ತೀರ್ಣದಲ್ಲಿ ನಿವೇಶನ ಮಾಡುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಬೀಡಿ ಕಾರ್ಮಿಕರಿಗೆ ಆರ್ಥಿಕವಾಗಿ ಹಿಂದುಳಿದವರಿಗೆ ೩೬ ಎಕರೆ ಜಾಗದಲ್ಲಿ ನಿವೇಶನ ಮಾಡಿ ಹಂಚುವ ಕಾರ್ಯಕ್ರಮ ಹಾಕಿಕೊಂಡಿದ್ದೇವೆ.

ಶ್ರೀ ವೈ. ರಾಮಕೃಷ್ಣ.—ಶಾಂತಿನಗರನ್ನೇ ಏತಕ್ಕೆ ತೆಗೆದುಕೊಂಡಿರಿ ? ರಾಜ್ಯದ ಎಲ್ಲಾ ಕಡೆ ಏತಕ್ಕೆ ಮಾಡಬಾರದು ?

ಶ್ರೀ ಎಂ. ಚಂದ್ರಶೇಖರ್.—ದಾವಣಗೆರೆಯಲ್ಲಿ ಮಾಡಿರುವುದು ; ನಮ್ಮ ಊರಿನಲ್ಲಿ ಅಲ್ಲ. ಬಳ್ಳಾರಿಯಲ್ಲೂ ಕೂಡ ೫೦೦೦ ನಿವೇಶನ ಹಂಚಿಕೆಯಾಗುವ ವ್ಯವಸ್ಥೆಯಾಗಿದೆ. ಈಗಾಗಲೇ ಅಧ್ಯಕ್ಷರು

ಯೋಜನೆಯನ್ನು ಸಿದ್ಧಮಾಡಿ ಕಳುಹಿಸುತ್ತಿದ್ದಾರೆ. ಈ ವರ್ಷದಲ್ಲಿ ಹೆಚ್ಚಿನ ರೀತಿಯಲ್ಲಿ ನಿವೇಶನಗಳನ್ನು ಹಂಚುವುದಕ್ಕೆ ಸಾಧ್ಯವೆಂದು ನನ್ನ ಭಾವನೆ.

ಇನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಕಾರ್ಯಕ್ರಮದಲ್ಲಿ ಆಗಲೇ ಹೇಳಿದಹಾಗೆ ಕೊಳವೆ ನೀರು ಪೂರೈಕೆ ಯೋಜನೆ ಮತ್ತು ನಗರ ನೀರು ಪೂರೈಕೆಯೋಜನೆ, ಯು.ಬಿ.ಡಿ. ಯೋಜನೆ, ಮಂಡಳಿ ಯೋಜನೆಗಳು ಈರೀತಿಯಾಗಿ ೯೪ ಯೋಜನೆಗಳು ಪ್ರಗತಿಯಲ್ಲಿವೆ. ಒಂದಲ್ಲಾ ಒಂದು ಹಂತದಲ್ಲಿ ಕೆಲಸಕಾರ್ಯಗಳು ನಡೆಯುತ್ತಿವೆ. ಈ ವರ್ಷದಲ್ಲಿ ೧೦ ಯೋಜನೆಗಳು ಪೂರ್ಣಗೊಂಡಿವೆ. ಹಾಸನ, ಅರಸೀಕೆರೆ, ಅಂಕಲಗೂಡು, ಆದಿತ್ಯಪುರ. ಮಾಲೂರು, ಮುಲ್ಕಿ, ಗಜೇಂದ್ರಘಟ್ಟ, ಬ್ಯಾಡಗಿ, ಸಾವನೂರು, ಸಿಂಧಗಿ, ಸೇಡಂ, ಇತ್ಯಾದಿ ಪ್ರದೇಶಗಳಲ್ಲಿ. .

ಶ್ರೀ ಎ. ಎಸ್. ಆಚಾರ್ಯ.—ಎನ್.ಆರ್.ಡಬ್ಲ್ಯು.ಎಸ್. ಏನಾಯಿತು.

ಶ್ರೀ ಎಂ. ಚಂದ್ರಶೇಖರ್.—ಹಿಂದೆ ಪಿ.ಹೆಚ್.ಇ. ಇದ್ದಾಗ ಎನ್.ಆರ್.ಡಬ್ಲ್ಯು.ಎಸ್. ಇತ್ತು. ಈಗ ಆ ಕೆಲಸವೆಲ್ಲಾ ನಮ್ಮ ಇಲಾಖೆಯ ಮುಖಾಂತರವಾಗಿ ನಡೆಯುತ್ತಿದೆ. ಇದರ ಜೊತೆಗೆ ಬಳ್ಳಾರಿ ನೀರು ಪೂರೈಕೆ ಏನಿದೆ ಅದುಮಂಡಳಿಯ ಯೋಜನೆ. ಅದಕ್ಕೆ ಕೂಡ ಎಲ್.ಐ.ಸಿ. ಯಿಂದ ಸಾಲವನ್ನು ತೆಗೆದುಕೊಂಡು ಕಾಮಗಾರಿ ಕೆಲಸ ಪ್ರಾರಂಭವಾಗಿದೆ.

ಈ ಸಮಯದಲ್ಲಿ ಗದಗ, ಬೆಟಗೇರಿ ವಿಷಯವನ್ನೂ ಕೂಡ ಮಾನ್ಯ ಮುತ್ತಿನಪೆಂಡಿಮಠ್ ಅವರು ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಎಲ್ಲರಿಗೂ ಗೊತ್ತು.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಕಾರ್ಪೊರೇಷನ್‌ಗಳ ಅಭಿವೃದ್ಧಿ ಮಾಡುತ್ತೇವೆಂದು ಹೇಳುತ್ತಿದ್ದೀರಿ, ಬೀರೂರು ಬಾಣಾವರ ಮತ್ತು ಕಡೂರು ಮುನಿಸಿಪಾಲಿಟಿಯಲ್ಲಿ ಕಸ ಗುಡಿಸುವವರಿಗೆ ದುಡ್ಡು ಕೊಡುವುದಕ್ಕೆ ಹಣವಿಲ್ಲ.

ಶ್ರೀ ಎಂ. ಚಂದ್ರಶೇಖರ್.—ಹಿಂದೆ ಮಲಪ್ರಭಾ ಯೋಜನೆಯಿಂದ ಗದಗ್–ಬೆಟಗೇರಿಗೆ ನೀರು ಸರಬರಾಜು ಮಾಡುವುದಕ್ಕೆ ಯೋಜನೆ ಮಾಡಿದ್ದರು. ಮಾನ್ಯ ಸದಸ್ಯರಾದ ಮುತ್ತಿನ ಪೆಂಡಿಮಠ್ ಅವರು ಹೇಳಿದ ಹಾಗೆ ಅದನ್ನು ಕೈಬಿಟ್ಟು ಈಗ ತುಂಗಭದ್ರಾ ನದಿ ಯೋಜನೆ ಮಾಡಿದ್ದಾರೆ. ಇದರ ವೆಚ್ಚ ೭೦೮ ಲಕ್ಷ ರೂಪಾಯಿಗಳು ಎಂದು ಅಂದಾಜು ಮಾಡಿದ್ದು ಇದು ಪ್ರತಿ ಸಾವಿರ ಗ್ಯಾಲನ್‌ಗೆ ಬೆಲೆ ಹೆಚ್ಚಾಗುತ್ತದೆಂದು ಎಲ್. ಐ. ಸಿ.ಯವರು ಸಾಲ ಕೊಡುವುದಕ್ಕೆ ಒಪ್ಪಿಕೊಳ್ಳಲಿಲ್ಲ. ಈಗ ಸರ್ಕಾರದ ಜವಾಬ್ದಾರಿ ಮುಖಾಂತರ ಇದನ್ನು ಮಾಡಲು ತೀರ್ಮಾನಿಸಿ ಇದಕ್ಕಾಗಿ ಒಬ್ಬ ತಜ್ಞರನ್ನು ನೇಮಕ ಮಾಡಿ, ಈ ಯೋಜನೆಗೆ ಎಷ್ಟಾಗುತ್ತದೆಂದು ಪರಿಶೀಲನೆ ಮಾಡಿಸಿದ್ದೇವೆ. ಅದರ ಪ್ರಕಾರ ಮುಂಡರಗಿ, ಗದಗ–ಬೆಟಗೇರಿ, ಈ ಕಡೆಗಳಲ್ಲಿ ಬೈಲಾಟರಲ್ ಅಸಿಸ್ಟೆನ್ಸ್‌ನಿಂದ ಮಾಡುವ ಯೋಜನೆ ಬಗ್ಗೆ ಪರಿಶೀಲನೆ ಮಾಡಿ ತಜ್ಞರು ಒಂದು ವರದಿ ಕೊಟ್ಟಿದ್ದಾರೆ. ಅದರಂತೆ ಇವೊತ್ತು ಎಲ್. ಐ. ಸಿ.ನವರು ಸಾಲ ಕೊಡಲು ಒಪ್ಪಿಕೊಳ್ಳುತ್ತಾರೆ. ಅದಕ್ಕೆ ಸರ್ಕಾರದ ನೇರವಾದ ಜವಾಬ್ದಾರಿ ಇದ್ದಾಗ ಇವರೂ ಸಹಾಯ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಬೋರ್ಡ್ ಸ್ಕೀಂ ಮುಖಾಂತರ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕೆಂದು ಈ ವರ್ಷ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಎಂ. ಎಂ. ನದಾಫ್.—ಗದಗ್–ಬೆಟಗೇರಿ ಯೋಜನೆಗೆ ಹಣ ಎಷ್ಟು ಇಟ್ಟಿದ್ದೀರಿ.

ಶ್ರೀ ಎಂ. ಚಂದ್ರಶೇಖರ್.—ಮಾಡುತ್ತಿದ್ದೇವೆ, ಅದು ತೀರ್ಮಾನವಾಗಿದೆ.

ಶ್ರೀ ಎ. ಎಸ್ ಆಚಾರ್ಯ.—ಪರ್‌ಫಾರ್ಮೆನ್ಸ್ ಬಜೆಟ್‌ನಲ್ಲಿ ಅದನ್ನು ಕಾಣಿಸಿಲ್ಲ.

ಶ್ರೀ ಎಂ. ಚಂದ್ರಶೇಖರ್—ಅದಕ್ಕೆ ಬೇರೆ ಬೇರೆ ಮೂಲಗಳಿಂದ...

ಶ್ರೀ ಎ. ಎಸ್. ಆಚಾರ್ಯ.—ಈ ಯೋಜನೆಗೆ ಎಲ್. ಐ. ಸಿ.ಯವರು ಒಪ್ಪಲಿಲ್ಲ ಎಂಬ ವಾಕ್ಯವನ್ನು ಕಳೆದ ವರ್ಷವೂ ಹೇಳಿದ್ದೀರಿ. ಅದರ ಬಗ್ಗೆ ಮುಂದಿನ ವಾಕ್ಯವನ್ನೇ ಹೇಳಲಿಲ್ಲ.

ಶ್ರೀ ಎಂ. ಚಂದ್ರಶೇಖರ್—ಮುಂದೆ ಪ್ರಶ್ನೆ ಕೇಳದೇ ಇರುವ ರೀತಿಯಲ್ಲಿ ಈ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎ. ಎಸ್. ಆಚಾರ್ಯ.—ನಾವು ಐದು ಜನ ಶಾಸಕರಿದ್ದೇವೆ.

ಶ್ರೀ ಎಂ. ಎಸ್. ಪಾಟೀಲ್.—ನಿರ್ದಿಷ್ಟವಾದ ಉತ್ತರ ನಮಗೆ ಹೇಳಬೇಕು.

ಶ್ರೀ ಪಿ. ಎಸ್. ಆಚಾರ್ಯ.—ಗದಗ್-ಬೆಟಗೇರಿ ಯೋಜನೆ ಮಾತ್ರವಲ್ಲ. ಕಾವೇರಿ ಅಗನಾಶಿನಿ, ಕುಮಟ, ಹೊನ್ನಾವರ, ಸಂಕೇಶ್ವರ, ಘಟಪ್ರಭ ಈ ಎಲ್ಲಾ ಯೋಜನೆಗಳ ಬಗ್ಗೆ ತಾವು ಹೇಳಬೇಕು.

ಶ್ರೀ ಎಂ. ಚಂದ್ರಶೇಖರ್—ಹೇಳುತ್ತೇನೆ, ಕುಳಿತುಕೊಳ್ಳಿ. ಗದಗ್-ಬೆಟಗೇರಿ ವಿಚಾರದಲ್ಲಿ ಮುಖ್ಯಮಂತ್ರಿಗಳ ಹತ್ತಿರ ಚರ್ಚೆ ಮಾಡಿದ್ದೇನೆ. ಈ ಬಗ್ಗೆ ಅವರೂ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಈ ವರ್ಷದಲ್ಲಿ ಯೋಜನೆಯನ್ನು ಮಾಡುವ ಬಗ್ಗೆ, ಎಲ್. ಐ. ಸಿ. ಅವರಿಗೆ ಶಿಫಾರಸ್ ಮಾಡಿ ಸಾಲ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಇದು ಬೋರ್ಡ್ ಸ್ಕೀಂ ಆಗಿರುವುದರಿಂದ ಸಾಲ ಸಿಕ್ಕೇ ಸಿಗುತ್ತದೆ. ನಮ್ಮದೇ ಪೂರ್ಣ ಜವಾಬ್ದಾರಿ ಇರುವುದರಿಂದ, ಅವರು ಸಾಲ ಕೊಡುತ್ತಾರೆ. ಗದಗ್-ಬೆಟಗೇರಿಯದು ವಿಶಿಷ್ಟವಾದ ಪರಿಸ್ಥಿತಿ. ಬೇರೆ ಯೋಜನೆಗಳು ಈ ರೀತಿ ಇಲ್ಲ. ಅಲ್ಲಿ ಬೋರ್‌ವೆಲ್ ಮೂಲಕ ನೀರು ಕೊಡುವುದಕ್ಕೆ ಅವಕಾಶ ಇಲ್ಲ. ಏಕೆಂದರೆ ಆ ನೀರು ಕುಡಿಯಲು ಅರ್ಹವಲ್ಲ. ಆದ್ದರಿಂದ ಸರ್ಕಾರ ಆದ್ಯತೆ ಮೇರೆಗೆ ಈ ಯೋಜನೆಯನ್ನು ತೆಗೆದುಕೊಂಡು ಕೆಲಸ ಮಾಡುತ್ತದೆಂದು ಹೇಳಲು ಇಚ್ಛೆಪಡುತ್ತೇನೆ. ಇದಲ್ಲದೆ ನಮ್ಮ ಕರ್ನಾಟಕ ನಗರ ನೀರು ಸರಬರಾಜು ಮಂಡಲಿಯವರು ಸುಮಾರು ೧೫ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಇದರಲ್ಲಿ ನೀರು ಪೂರೈಕೆ ಮತ್ತು ವಿತರಣೆಯ ಬಗ್ಗೆ ಕೆಲವು ಪೂರ್ಣ ಜವಾಬ್ದಾರಿ ತೆಗೆದುಕೊಂಡು ನಿರ್ವಹಣೆ ಮಾಡಿದರೆ ಇನ್ನು ಕೆಲವು ಯೋಜನೆಯಲ್ಲಿ ಪೂರೈಕೆ ಮಾತ್ರ ಮಾಡುತ್ತಾರೆ. ಮುನಿಸಿಪಾಲಿಟಿಯವರು ಅಥವಾ ಪುರಸಭೆಯವರು ನಿರ್ವಹಣೆ ಮಾಡುವುದಕ್ಕೆ ಆಗುತ್ತಿಲ್ಲ. ದರ ಹೆಚ್ಚಾಗುತ್ತಿರುವುದರಿಂದ ವಸೂಲಿಯಾಗುವುದು ತೊಂದರೆಯಾಗುತ್ತದೆ. ಆದ್ದರಿಂದ ಮಂಡಲಿಯವರೇ ಪೂರ್ತಿ ಜವಾಬ್ದಾರಿ ತೆಗೆದುಕೊಂಡು ಅವರು, ನೀವೇ ವಿತರಣೆ ಮಾಡಿ, ನೀವೇ ದರ ವಸೂಲು ಮಾಡಿ ಆಡಳಿತವನ್ನು ತೆಗೆದುಕೊಳ್ಳಿ ಎಂದು ಅನೇಕ ಮುನಿಸಿಪಾಲಿಟಿಯವರು ಹೇಳುತ್ತಿದ್ದಾರೆ. ಈ ೧೫ ಯೋಜನೆಗಳನ್ನು ಹಂತ ಹಂತವಾಗಿ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತಿದ್ದೇವೆ. ಈ ಹದಿನೈದು ಯೋಜನೆಗಳನ್ನು ಒಂದೊಂದು ಹಂತದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಪೂರ್ಣವಾಗಿ ತೆಗೆದುಕೊಂಡು ವಿತರಣೆ ಮತ್ತು ಪೂರೈಕೆ ಮಾಡಿ ಆಡಳಿತವನ್ನು ನೋಡಿಕೊಳ್ಳುವ ಬಗ್ಗೆ ಪರಿಶೀಲನೆ ಮಾಡುವ ಯೋಚನೆ ಇದೆ. ಈ ವರ್ಷ ಮತ್ತೊಂದು ತೀರ್ಮಾನ ತೆಗೆದುಕೊಂಡಿದ್ದೇವೆ. ೧೯೮೪-೮೫ರಲ್ಲಿ ಕೊಳವೆ ಬಾವಿ ಮೂಲಕ ನೀರು ಸರಬರಾಜು ಮಾಡುವ ಯೋಜನೆ ಇದೆ. ೨೦ ಸಾವಿರ ಜನಸಂಖ್ಯೆಗೆ ಕಡಿಮೆ ಇರುವ ಪುರಸಭೆಗಳವರು ಯೋಜನೆಯ ಶೇಕಡ ೧೦ರಷ್ಟು ಅವರ ಪಾಲನ್ನು ಕೊಟ್ಟರೆ, ಮಿಕ್ಕಿದ್ದನ್ನು ಸರ್ಕಾರ ಹಾಕಿ ಯೋಜನೆ ಪೂರ್ಣ ಮಾಡುವ ಯೋಚನೆ ಇದೆ. ಅಂಥಾದ್ದು ೧೦ ಲಕ್ಷಕ್ಕೂ ಕಡಿಮೆ ಇರುವ ಯೋಚನೆ ಇದೆ. ತಮ್ಮ ವಂತಿಗೆಯನ್ನು ಕೊಡುವುದಕ್ಕೆ ಯಾರು ತಯಾರಾಗಿದ್ದಾರೆ, ಆ ಭಾಗದಲ್ಲಿಯೇ ಯೋಜನೆಯನ್ನು ಮುಂದಿನ ವರ್ಷ ತೆಗೆದುಕೊಂಡು ಕಾಮಗಾರಿಗಳನ್ನು ಮಾಡುವುದಕ್ಕೆ ಸಿದ್ಧತೆಗಳನ್ನು ಮಾಡಿಕೊಳ್ಳುವುದಕ್ಕೆ ಮಂಡಲಿಯವರಿಗೆ ಸೂಚನೆ ಕೊಟ್ಟಿದೆ. ಇದಲ್ಲದೆ ಮೊದಲನೆ ಬಾರಿಗೆ ಈ ನಗರಪ್ರದೇಶಗಳಲ್ಲಿ ಕೊಳವೆ ಬಾವಿಗಳನ್ನು ಅಭಾವ ಪರಿಹಾರ ಕಾಮಗಾರಿಯಲ್ಲಿ ಮಾಡಿದ್ದೇವೆ. ಸುಮಾರು ೨೫೧ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ೧೧೦೫ ಕೊಳವೆ ಬಾವಿಗಳನ್ನು ಎಲ್ಲಾ ಪಟ್ಟಣ ಮತ್ತು ನಗರ ಪ್ರದೇಶಗಳಲ್ಲಿ ತೆಗೆಸಿದ್ದು, ಸುಮಾರು ೯೨೭ ಕೊಳವೆ ಬಾವಿಗಳು ಯಶಸ್ವಿಯಾಗಿ, ೬೫೦ ಕೊಳವೆ ಬಾವಿಗಳಿಗೆ ಕೈ ಪಂಪುಗಳನ್ನೂ. ೯೧ ಕೊಳವೆ ಬಾವಿಗಳಿಗೆ ವಿದ್ಯುತ್ ಪಂಪುಗಳನ್ನೂ ಅಳವಡಿಸಲಾಗಿದೆ. ೧೦೦೦-೧೫೦೦ ಗ್ಯಾಲನ್ ಇರುವಂಥ ಕಡೆ ವಿದ್ಯುತ್ ಪಂಪ್ ಹಾಕಿ ಇವುಗಳ ವಿತರಣಾ ಜಾಲಕ್ಕೆ ಜೋಡಣೆ ಮಾಡಿದಾಗ, ಹೆಚ್ಚು ನೀರು ಬರುವ ಅವಕಾಶ ಇರುವುದರಿಂದ ವಿದ್ಯುತ್ ಪಂಪ್ ಹಾಕಿ ಕಾಮಗಾರಿಗಳನ್ನು ಮಾಡುತ್ತಿದ್ದೇವೆ. ಬರುವ ವರ್ಷದಲ್ಲಿ ಕೂಡ ಸಾವಿರ ಕೊಳವೆ ಬಾವಿಗಳಿಗೆ ಬೇಡಿಕೆ ಇದೆ. ಇದನ್ನು ಕೂಡ ಮುಂದಿನ ಅಭಾವ ಪರಿಹಾರದ ಕಾಮಗಾರಿ ಯೋಜನೆಯಲ್ಲಿ ಹೋದ ವರ್ಷ ಯಾವ ರೀತಿ ಪ್ರಾರಂಭ ಮಾಡಿದ್ದೆವೋ ಆ ರೀತಿ ಮಾಡುವುದಕ್ಕೆ ಎಲ್ಲಾ ಪ್ರಯತ್ನ ಮಾಡಿ, ಕಾಮಗಾರಿಗಳನ್ನು ಮಾಡುತ್ತೇವೆ.

ಮತ್ತೊಂದು ಯೋಜನೆ ತಲೆ ಮೇಲೆ ಮಲ ಹೊರುವ ಪದ್ಧತಿಯನ್ನು ನಿರ್ಮೂಲನೆ ಮಾಡಿ, ಒಳಚರಂಡಿ ಮಾಡುವ ಯೋಜನೆ ಇದೆ. ದಿನನಿತ್ಯ ೨೦ ಗ್ಯಾಲನ್ ನೀರಿರುವ ಕಡೆಗಳಲ್ಲಿ ಒಳಚರಂಡಿ ಯಶಸ್ವಿಯಾಗಿ ಕೆಲಸ ಮಾಡುತ್ತದೆ. ಇಲ್ಲದಿದ್ದರೆ ಒಳಚರಂಡಿ ಯೋಜನೆ ಪ್ರಯೋಜನವಿಲ್ಲವೆಂಬುದು ತಾಂತ್ರಿಕ ಅಭಿಪ್ರಾಯ. ಅದರ ಪ್ರಕಾರ ಎಲ್ಲಿ ಅಷ್ಟು ನೀರು ಕೊಡಲು ಸಾಧ್ಯವಿಲ್ಲ ಅಂಥ ಕಡೆ ಲೋ ಕಾಸ್ಟ್ ಶೌಚಾಲಯಗಳನ್ನು ಕಟ್ಟುವ ಯೋಜನೆ ಇದೆ. ಪ್ರತಿಯೊಂದು ಮನೆಯಲ್ಲಿ ಕಕ್ಕಸು, ನಿರ್ಮಿಸುವ ಕೆಲಸ ಮಾಡಿ, ಎರಡು ಚೇಂಬರುಗಳನ್ನು ಹಾಕುತ್ತೇವೆ. ಒಂದು ಚೇಂಬರ್ ಉಪಯೋಗಿಸಿ,

೬ ತಿಂಗಳು, ಒಂದು ವರ್ಷ ಆದ ಮೇಲೆ ಅದನ್ನು ಮುಚ್ಚಿ ಎರಡನೆಯ ಚೇಂಬರ್ ಉಪಯೋಗಿಸಬಹುದು. ಮೊದಲನೆಯ ಚೇಂಬರ್‌ನಲ್ಲಿ ಶೇಖರಣೆಯಾಗಿರುವುದನ್ನು ಗೊಬ್ಬರವಾಗಿ ಪರಿವರ್ತನೆ ಮಾಡಿ, ಉಪಯೋಗ ಮಾಡಿಕೊಳ್ಳಬಹುದು. ಈ ರೀತಿಯ ಒಂದು ಹೊಸ ಯೋಜನೆಯನ್ನು ಹಾಕಿಕೊಂಡಿದ್ದೇವೆ. ನಾಲ್ಕು ಪಟ್ಟಣ ಪ್ರದೇಶಗಳಾದ ನಂಜನಗೂಡು, ಕುಶಾಲನಗರ, ತಿಪಟೂರಿನಲ್ಲಿ ಈ ಯೋಜನೆಯನ್ನು ತೆಗೆದುಕೊಳ್ಳುವ ಉದ್ದೇಶವಿದ್ದು, ಈ ಯೋಜನೆಗೆ ೪೧ ಲಕ್ಷ ರೂಪಾಯಿಗಳ ಹಣ ಖರ್ಚಾಗುತ್ತದೆ. ಈಗಾಗಲೇ ೨೦ ಲಕ್ಷ ಬಿಡುಗಡೆಯಾಗಿದ್ದು ಕಾಮಗಾರಿ ಪ್ರಾರಂಭವಾಗುತ್ತಿದೆ. ಅದು ಅಲ್ಲದೆ ಈ ವರ್ಷ ತುಂಗಭದ್ರ ನಾಲೆ ದುರಸ್ತಿಗೋಸ್ಕರ ನೀರನ್ನು ನಿಲ್ಲಿಸುವುದರಿಂದ ನಾಲ್ಕು ಪಟ್ಟಣ ಪ್ರದೇಶಗಳಿಗೆ ತೊಂದರೆಯಾಗುತ್ತದೆ. ಆ ಪ್ರದೇಶಗಳು ರಾಯಚೂರು, ಸಿಂಧನೂರು, ಗಂಗಾವತಿ, ಮಾನ್ವಿ, ಈ ನಗರಗಳಲ್ಲಿ ಏಪ್ರಿಲ್ ೧೫ರಿಂದ ೭೫ ದಿವಸಗಳ ಕಾಲ ನೀರನ್ನು ನಿಲ್ಲಿಸುತ್ತೇವೆ. ಅದಕ್ಕಾಗಿ ತಾತ್ಕಾಲಿಕವಾದ ಕ್ರಮ ತೆಗೆದುಕೊಳ್ಳಬೇಕಾಗಿದೆ. ತುಂಗಭದ್ರ ನಾಲೆ ಅಥವಾ ನದಿಯಿಂದ ಬರುವ ನೀರನ್ನು ಉಪಯೋಗ ಮಾಡಿಕೊಂಡು ಕುಡಿಯುವ ನೀರನ್ನು ಅವರು ಪಡೆಯುತ್ತಿದ್ದಾರೆ. ದುರಸ್ತಿ ಕಾರ್ಯ ಆಗುವಾಗ ನೀರಿಲ್ಲದೆ ತೊಂದರೆಯಾಗುತ್ತವೆ. ಆದ್ದರಿಂದ ಕೊಳವೆಗಳನ್ನು ಹಾಕಿ ನೀರು ಒದಗಿಸಬೇಕಾಗಿದೆ. ಇದಕ್ಕೆ ತಾತ್ಕಾಲಿಕ ಕಾರ್ಯಕ್ರಮ ಹಾಕಿಕೊಂಡು ೩೦ ಲಕ್ಷ ರೂಪಾಯಿಗಳ ವೆಚ್ಚ ಮಾಡುತ್ತಿದ್ದೇವೆ. ಈಗಾಗಲೇ ೨೦ ಲಕ್ಷ ರೂಪಾಯಿಗಳು ಇದಕ್ಕೆ ಬಿಡುಗಡೆಯಾಗಿ, ಕಾಮಗಾರಿ ಕೆಲಸ ನಡೆಯುತ್ತಿದೆ. ನಮ್ಮ ಇಲಾಖೆಯವರು ಅದನ್ನು ನೋಡಿಕೊಂಡು ಬಂದಿದ್ದಾರೆ.

೩-೩೦ ಪಿ. ಎಂ.

ರಾಯಚೂರು, ಮಾನ್ವಿ ಮತ್ತು ಸಿಂಧನೂರುಗಳಲ್ಲಿ ಕೊಳವೆ ಬಾವಿಗಳನ್ನು ಮತ್ತು ದೊಡ್ಡದಾದ ಶೇಖರಣಾಗಾರಗಳನ್ನು ಮಾಡಿ ೭೫ ದಿವಸಕ್ಕೆ ಬೇಕಾಗುವಷ್ಟು ನೀರನ್ನು ಶೇಖರಣೆ ಮಾಡುವುದಕ್ಕೆ, ಈ ವರ್ಷಕ್ಕೆ ಮಾತ್ರ ಕೆಲಸವಾಗಿದೆ ಎಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಇಷ್ಟು ನಗರನೀರು ಸರಬರಾಜು ಮಂಡಲಿ ಬಗ್ಗೆ ಹೇಳಿ, ಕೊಳಚೆ ನಿರ್ಮೂಲನಾ ಮಂಡಲ ವಿಚಾರ ತಾವು ಹೇಳುತ್ತಿದ್ದೀರಿ ಅದಕ್ಕೆ ಬರುತ್ತೇನೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಐ.ಟಿ.ಐ ಪ್ರದೇಶದಲ್ಲಿ ಕೊಳವೆ ಬಾವಿ ಇಲ್ಲ, ನೀರೂ ಇಲ್ಲ, ಅದನ್ನು ಮರೆತೇ ಬಿಟ್ಟಿದ್ದೀರಿ.

ಶ್ರೀ ಎಂ. ಚಂದ್ರಶೇಖರ್.—ಅದನ್ನು ಬೆಂಗಳೂರು ವಿಚಾರಕ್ಕೆ ಬಂದಾಗ ಹೇಳುತ್ತೇನೆ. ರಾಜ್ಯಾದ್ಯಂತ ೨೦೫ ಕೊಳಚೆ ಪ್ರದೇಶಗಳಿವೆ. ಎಲ್ಲಾ ತಾಲ್ಲೂಕು ಕೇಂದ್ರಗಳಿಂದ ಹಿಡಿದು, ಬೆಂಗಳೂರು ನಗರದವರೆಗೆ. ಎಲ್ಲಾ ಸೇರಿಸಿ ೮೦೫ ಕೊಳಚೆ ಪ್ರದೇಶಗಳು ಇವೆ. ಇದರಲ್ಲಿ ೫೮೧ನ್ನು ಕೊಳಚೆ ಪ್ರದೇಶ ಎಂದು ಘೋಷಿಸಿದ್ದಾರೆ. ಇನ್ನು ಮಿಕ್ಕಿದ್ದು ಗುರುತು ಹಾಕಿದ್ದಾರೆ, ಇನ್ನೂ ಘೋಷಣೆ ಮಾಡಿಲ್ಲ, ಈ ಕೊಳಚೆ ಪ್ರದೇಶಗಳ ನಿರ್ಮೂಲನೆಗೆ ಎರಡು ಕಾರ್ಯಕ್ರಮಗಳನ್ನು ನಾವು ಹಾಕಿದ್ದೇವೆ, ಒಂದನೆಯದು ಎಂದರೆ, ಪರಿಸರ ಸುಧಾರಣೆ. ಅಲ್ಲಿರುವಂಥ ಪ್ರದೇಶದಲ್ಲಿ ಅವರಿಗೆ ಕೊಡಬೇಕಾದಂಥ ನಾಗರೀಕ ಸೌಲಭ್ಯಗಳನ್ನು ಕೊಡುವಂಥಾದ್ದು. ಎರಡನೆಯದು, ಕ್ಲಿಯರೆನ್ಸ್ ಅಂದರೆ ನಿರ್ಮೂಲನೆ, ಯಾವ ಪ್ರದೇಶದಲ್ಲಿ ಕಾರಣಾಂತರದಿಂದ ಅದು ಹಳ್ಳದ ಪ್ರದೇಶ ಇರಬಹುದು, ಗುಂಡ್ಡ ಪ್ರದೇಶ ಇರಬಹುದು, ವಾಸ ಮಾಡುವುದಕ್ಕೆ ಆಗದಿರುವ ಪ್ರದೇಶದಲ್ಲಿ ಸ್ಥಳ ಸಿಗುತ್ತದೆ ಎಂದು ಗುಡಿಸಲುಗಳನ್ನು ಹಾಕಿರುವಂಥಾದ್ದು ಇದೆ. ಅದು ಶಾಶ್ವತವಾಗಿ ವಾಸ ಮಾಡುವುದಕ್ಕೆ ಯೋಗ್ಯವಾದ ಪ್ರದೇಶ ಆಗಿರುವುದಿಲ್ಲ. ಮತ್ತು ಕೆಲವು ಪ್ರದೇಶದಲ್ಲಿ ಹೆಚ್ಚು ಜನ ಇರುವಂಥಾದ್ದು, ೧೦೦ ಕುಟುಂಬಗಳು ವಾಸ ಮಾಡತಕ್ಕ ಪ್ರದೇಶದಲ್ಲಿ ಒತ್ತಡದಿಂದ ೨೦೦ ಕುಟುಂಬಗಳು ವಾಸ ಮಾಡತಕ್ಕದ್ದು. ಈ ಪ್ರದೇಶಗಳಿಂದ ನಾವು ಕೆಲವರನ್ನಾದರೂ ಶಿಫ್ಟ್ ಮಾಡಬೇಕಾಗುತ್ತದೆ. ಹೀಗೆ ಎರಡು ಹಂತದಲ್ಲಿ ಎರಡು ಯೋಜನೆಗಳನ್ನು ಮಾಡಿ ಕಾಮಗಾರಿಗಳನ್ನು ನಡೆಯುತ್ತಿವೆ. ಪರಿಸರ ಸುಧಾರಣೆ ಕಾರ್ಯಕ್ರಮದಲ್ಲಿ ೫೭ ಸಾವಿರ ಗುಡಿಸಲು ನಿವಾಸಿಗಳಿಗೆ ಅನುಕೂಲವಾಗುವಂತೆ ಯೋಜನೆ ಹಾಕಿ ೧೧೭ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಿ, ಈ ತಿಂಗಳ ಆಖೈರಿಗೆ ಗುರಿಸಾಧನೆ ಮಾಡಿ, ಮುಂದೆಹೋಗಿ ಸುಮಾರು ೭೨,೮೨೬ ನಿವಾಸಿಗಳಿಗೆ ಅನುಕೂಲವಾಗುವಂಥ ರೀತಿಯಲ್ಲಿ ಕಾರ್ಯಕ್ರಮಗಳು ನಡೆದಿವೆ. ಈ ಬಗ್ಗೆ ರಾಜ್ಯ ಸರ್ಕಾರ ೧೨೬ ಲಕ್ಷ ರೂಪಾಯಿಗಳನ್ನು ಖರ್ಚುವೆಚ್ಚ ಮಾಡಿದೆ. ಈ ಕಾರಣದಿಂದ ಕೇಂದ್ರ ಸರ್ಕಾರದಿಂದ ಪ್ರೋತ್ಸಾಹಕ ಹಣ ಸಹಾಯ ಆಗುವುದರಲ್ಲಿದೆ. ನಾವು ಏನು ಟಾರ್ಜೆಟ್ ಇಟ್ಟು ಕೊಂಡಿದ್ದೆವು, ಅದಕ್ಕೂ

ಹೆಚ್ಚು ಖರ್ಚು ಮಾಡಿದ ಕಾರಣದಿಂದ ಕೇಂದ್ರ ೧೧ ಲಕ್ಷ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿದೆ. ಈ ತಿಂಗಳ ಕೊನೆಯೊಳಗೆ ಇನ್ನೂ ೩೭ ಸಾವಿರ ಹೆಚ್ಚು ಅಂದರೆ ಒಟ್ಟು ೮೭ ಸಾವಿರ ಗುಡಿಸಲು ನಿವಾಸಿಗಳಿಗೆ ಅನುಕೂಲವಾಗುವಂತೆ ಪರಿಸರ ಸುಧಾರಣಾ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಇದಕ್ಕೆ ರಾಜ್ಯ ಸರ್ಕಾರದಿಂದ ಹೆಚ್ಚುವರಿಯಾಗಿ ೨೫ ಲಕ್ಷ ರೂಪಾಯಿಗಳನ್ನು, ಕೇಂದ್ರ ಸರಕಾರದ ೧೧ ಲಕ್ಷ ರೂಪಾಯಿಗಳನ್ನೂ ಬಿಡುಗಡೆ ಮಾಡಿ ಕಾಮಗಾರಿಗಳು ನಡೆಯುತ್ತಿವೆ. ಮತ್ತೆ ನಿರ್ಮೂಲನಾ ಕಾರ್ಯದಲ್ಲಿ ಒಂದು ಯೋಜನೆ ಎಂದರೆ, ಕೊಳಚೆ ಪ್ರದೇಶದಲ್ಲಿರುವವರಿಗೆ ವಸತಿ ನಿರ್ಮಾಣ ಮಾಡುವುದು ಮುಖ್ಯವಾದ ಒಂದು ಕಾರ್ಯ. ಯಾವುದೇ ಆಗಲಿ, ಕೊಳಚೆ ಪ್ರದೇಶ ನಾವು ಬದಲಾವಣೆ ಮಾಡಿದಾಗ, ಯಥಾಪ್ರಕಾರ ಅವರಿಗೆ ನಿವೇಶನ ಮಾಡಿ, ಅವರನ್ನು ಕಳುಹಿಸುವ ಬದಲು ಅವರಿಗೆ ಹೊಸದಾಗಿ ಬಡಾವಣೆ ಮಾಡುವುದರ ಜೊತೆಗೆ, ಅಲ್ಲಿ ಮನೆಗಳನ್ನು ನಿರ್ಮಾಣ ಮಾಡಿ ಕೊಡುವುದು ಇರುವ ಪ್ರದೇಶವನ್ನು ಖಾಲಿ ಮಾಡಿಸಿ, ಟ್ರಾನ್ಸಿಟ್ ಕ್ಯಾಂಪ್ಸ್ ಮಾಡಿ ಕಳುಹಿಸಿ, ನಿವೇಶನಗಳ ಜೊತೆಗೆ ಹುಡ್ಕೋ ಯೋಜನೆ ಪ್ರಕಾರ ಮನೆಗಳನ್ನು ಕಟ್ಟಿ ಕೊಡುವ ಯೋಜನೆ ಇದೆ. ಈ ಯೋಜನೆ ಪ್ರಕಾರ ಹೋದ ವರ್ಷ ಅಂದರೆ ೮೩–೮೪ರಲ್ಲಿ ೨೫೦೦ ಸಣ್ಣ ಮನೆಗಳನ್ನು ಕಟ್ಟುವ ಯೋಜನೆ ಇಟ್ಟು ಕೊಂಡಿದ್ದು, ಇದುವರೆಗೆ ೭೩೮ ಮನೆಗಳನ್ನು ಕಟ್ಟಿದ್ದೇವೆ. ಇದರಲ್ಲಿ ನಿಗದಿತ ಗುರಿ ಮುಟ್ಟುವುದಕ್ಕೆ ಸಾಧ್ಯವಾಗಿಲ್ಲ. ಇದಕ್ಕೆ ಕಾರಣ ಹಣದ ಒಂದು ಕೊರತೆ. ಈಗ ೭೩೮ ಮನೆಗಳನ್ನು ಪೂರ್ಣ ಮಾಡಿದ್ದು ಉಳಿದುದನ್ನು ಈ ವರ್ಷ ಪೂರ್ಣ ಮಾಡುವಂಥ ಕಾರ್ಯಕ್ರಮ ಇಟ್ಟು ಕೊಂಡಿದ್ದೇವೆ. ಮುಂದಿನ ವರ್ಷ ಅಂದರೆ ೧೯೮೪–೮೫ ರಲ್ಲಿ ಕೂಡಾ ಇದೇ ರೀತಿಯ ನಿರ್ಮೂಲನಾ ಕಾರ್ಯ. ಪರಿಸರ ಅಭಿವೃದ್ಧಿ ಯೋಜನೆಗೋಸ್ಕರ ೩೧೮ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಹೋದವರ್ಷ ೧೧೮ ಲಕ್ಷ ರೂಪಾಯಿಗಳನ್ನು ಮಾತ್ರ ಈ ಕಾರ್ಯಕ್ರಮಕ್ಕೆ ಕೊಟ್ಟಿದ್ದೆವು. ಈ ವರ್ಷ ಎರಡು ಕೋಟಿ ಹೆಚ್ಚುವರಿ ಆಗಿದೆ. ಹೋದವರ್ಷ ನಾವು ೫೭ ಸಾವಿರ ಜನಕ್ಕೆ ಅನುಕೂಲ ಮಾಡಿಕೊಡ್ಡಿದ್ದೆವು. ಈ ವರ್ಷ ೧.೨೮ ಲಕ್ಷ ಜನಗಳಿಗೆ ಅಭಿವೃದ್ಧಿ ಆಗುವ ರೀತಿಯಲ್ಲಿ ಕಾಮಗಾರಿಗಳನ್ನು ನಾವು ಸಿದ್ಧ ಮಾಡಿಕೊಂಡಿದ್ದೇವೆ. ಇದರಲ್ಲೂ ಕೂಡಾ ಕೇಂದ್ರ ಸರ್ಕಾರದಿಂದ ೧೦೦ ಲಕ್ಷ ರೂಪಾಯಿಗಳ ಅನುದಾನವನ್ನು ನಾವು ಅಪೇಕ್ಷೆ ಮಾಡುತ್ತಿದ್ದೇವೆ. ಈ ರೀತಿಯಾಗಿ ಕೊಳಚೆ ನಿರ್ಮೂಲನಾ ಕಾರ್ಯಕ್ರಮಕ್ಕೆ ಈ ವರ್ಷ ಹೆಚ್ಚಾದ ರೀತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುತ್ತಿದ್ದೇವೆಂದು ನಾನು ನೀಡಿದ ಅಂಕಿ ಅಂಶಗಳ ಮುಖಾಂತರವಾಗಿ ಗೊತ್ತಾಗುತ್ತದೆ. ಇದರ ಜೊತೆಗೆ ಹಿಂದುಳಿದಂಥ ಜನರಿಗೆ ನಿವೇಶನಗಳನ್ನು ಹಂಚುವ ಕಾರ್ಯಕ್ರಮದಲ್ಲಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಯಾವುದೇ ಯೋಜನೆಗಳನ್ನು ಹಾಕಿಕೊಂಡಾಗ, ಅಲ್ಲಿ ಈ ವರ್ಷ ಸುಮಾರು ಒಂದು ಸಾವಿರ ಸೈಟುಗಳನ್ನು ೮೪–೮೫ನೇ ವರ್ಷದಲ್ಲಿ ಹಂಚುವ ಕಾರ್ಯಕ್ರಮ ಹಾಕಿಕೊಂಡಾಗ, ಒಂದು ಸಾವಿರ ನಿವೇಶನಗಳನ್ನು ಆರ್ಥಿಕವಾಗಿ ಹಿಂದುಳಿದವರಿಗೆ ಹಂಚುವುದಕ್ಕೆ ಕಾದಿರಿಸುವುದು, ನಗರ ಪ್ರದೇಶದ ವಿಶ್ವಸ್ಥ ಮಂಡಳಿಯವರು ೫೦೦ ಮತ್ತು ಪುರಸಭೆಗಳು ೨೫೦ ನಿವೇಶನಗಳನ್ನು ಆರ್ಥಿಕವಾಗಿ ಹಿಂದುಳಿದವರಿಗೆ ಹಂಚುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರದ ಆಜ್ಞೆ ಕಳುಹಿಸಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಹಿಂದೆ ಬೆಂಗಳೂರು ನಗರದಲ್ಲಿ ಫ್ರೀಯಾಗಿ ಸೈಟುಗಳನ್ನು ಹಂಚಿಬಿಟ್ಟಿದ್ದಾರೆ, ಹಂಚಿದ್ದಾರೆ ಎಂದರೆ. ಪೇಪರ್‌ನಲ್ಲಿ ಹಂಚಿದ್ದಾರೆ. ಅದು ತಮಗೂ ಗೊತ್ತು. ಯಾವರೀತಿ ಅವರಿಗೆ ಹಂಚಿದರು ಎಂಬುದು ತಮಗೆ ಗೊತ್ತು. ಈಗ ಅವರಿಗೆ ನೀವು ಏನು ಮಾಡುತ್ತೀರಿ ?

ಶ್ರೀ ಎಂ. ಚಂದ್ರಶೇಖರ್.—ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರ ಕಾರ್ಯಕ್ರಮ ನೋಡಿಕೊಂಡು ತೀರ್ಮಾನ ಮಾಡುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಹಿಂದಿನ ಅನೇಕ ಮಂತ್ರಿಗಳು ಅಲ್ಲಿಗೆ ಹೋಗಿದ್ದರು. ಹಿಂದಿನ ಚೀಫ್ ಮಿನಿಸ್ಟರ್ ಹೋಗಿದ್ದರು. ಎಲ್ಲಾ ಹೋಗಿ ಏನೇನು ಬೇಕೋ ಎಲ್ಲಾ ಮಾಡಿಕೊಂಡರು, ಆದರೆ ಅವರಿಗೆ ಸೈಟ್ ಸಿಗಲೇ ಇಲ್ಲ.

ಶ್ರೀ ವೈ. ರಾಮಕೃಷ್ಣ.—ಅಧ್ಯಕ್ಷರೇ, ನಮ್ಮ ಕಡೆ ಕೈ ತೋರಿಸುತ್ತಿದ್ದಾರೆ. ಈ ರೀತಿ ಸೈಟ್ ಕೊಟ್ಟಿರುವುದನ್ನು ನಾವೇ ಪತ್ತೆ ಹಚ್ಚಿ, ಸಾವಿರಾರು ಸೈಟ್‌ಗಳನ್ನು ಹಿಡಿದು ಕೊಟ್ಟಿದ್ದೇವೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳಿ. ನಮ್ಮ ಕಡೆ ಕೈ ತೋರಿಸಿದರಲ್ಲ ಇದು ಮಾಡಿರತಕ್ಕದ್ದು ಬಹಳ ಹಿಂದೆ, ನಾವಲ್ಲ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಮಾನ್ಯ ಗುಂಡೂರಾಯರು ಬಾಣಸವಾಡಿಯಲ್ಲಿ ಎರಡು ಸಾವಿರ ಸೈಟ್‌ಗಳನ್ನು ಕೊಡುತ್ತೇವೆಂದು ಹೇಳಿದರು. ಆದರೆ ಯಾರಿಗೂ ಕೊಟ್ಟಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಇದರ ಬಗ್ಗೆ ಭಾರೀ ದೊಡ್ಡ ಫಂಕ್ಷನ್ ಮಾಡಿದರು. ಅದಕ್ಕೆ ಸಾವಿರಾರು ರೂಪಾಯಿಗಳು ಖರ್ಚಾಯಿತು. ಬಡವರಿಗೆ ಫ್ರೀಯಾಗಿ ಸೈಟುಗಳನ್ನು ಕೊಡುತ್ತೇವೆ ಎಂದರು. ಒಬ್ಬೊಬ್ಬರಿಗೆ ಒಂದೊಂದು ಚೀಟಿಯನ್ನು ಕೊಟ್ಟರು.

ಶ್ರೀ ವೈ. ರಾಮಕೃಷ್ಣ.—ಚೀಟಿ ಅಲ್ಲ, ಪೊಸೇಷನ್ ಸರ್ಟಿಫಿಕೇಟ್.

ಶ್ರೀ ಎಂ. ಎಸ್. ಕೃಷ್ಣನ್.—ಪೊಸೇಷನ್ ಸರ್ಟಿಫಿಕೇಟ್ ಎಂದು ಬೇಕಾದರೆ ಹೇಳಿ. ಪೊಸೇಷನ್ ಸರ್ಟಿಫಿಕೇಟ್ ಕೊಟ್ಟರು. ಆದರೆ ಪೊಸೆಷನ್ ಬರಲಿಲ್ಲ. ಅದು ಯಾರ ಪೊಸೆಷನ್‌ಗೋ ಹೋಗಿದೆ. ಅದನ್ನು ಏನು ಮಾಡುತ್ತೀರಿ ? ಅದಕ್ಕೆ ನೀವು ಏನು ಮಾಡುತ್ತೀರಿ ಎಂದು ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ.

ಶ್ರೀ ವೈ. ರಾಮಕೃಷ್ಣ.—ಅದರ ಬಗ್ಗೆ ಎನ್‌ಕ್ವೈರಿ ಮಾಡಿ.

ಶ್ರೀ ಎಂ. ಚಂದ್ರಶೇಖರ್.—ಅಧ್ಯಕ್ಷರೇ, ಅವರು ಹೇಳಿದಹಾಗೆ ಹಿಂದಿನ ಸರ್ಕಾರ ಎರಡುಸಾವಿರ ನಿವೇಶನಗಳನ್ನು ಉಚಿತವಾಗಿ ಹಂಚುವುದಾಗಿ ಹೇಳಿತ್ತು. ಮಡಿವಾಳ, ತಾವರೆಗೆರೆ, ಯೋಜನೆಯಲ್ಲಿ ಒಂದು ಸಾವಿರ ಮತ್ತು ರಾಜಮಹಲ್ ಮತ್ತು ಬಾಣಸವಾಡಿ. ಯೋಜನೆಯಲ್ಲಿ ಒಂದು ಸಾವಿರ ಕೊಡುವಂತೆ ಕಾರ್ಯಕ್ರಮ ಹಾಕಿತ್ತು. ಬೆಂಗಳೂರು ನಗರದಲ್ಲಿ ಉಚಿತ ನಿವೇಶನ ಸಿಗಬೇಕಾದರೆ ಯೋಚನೆ ಮಾಡಿ, ಅದೂ ೩೦x೨೦ ಅಳತೆಯ ನಿವೇನಶ ಅದನ್ನು ಕೊಡಬೇಕೆಂದು ತೀರ್ಮಾನ ತೆಗೆದುಕೊಂಡರು. ಈ ಬಗ್ಗೆ ಬಿ.ಬಿ.ಎಮ್ ಸ್ಕೀಮ್‌ನಲ್ಲಿ ಒಂದು ಸಾವಿರ ನಿವೇಶನಗಳನ್ನು ಹಂಚಿದ್ದಾರೆ. ಈಗಿನ ಪ್ರಾಧಿಕಾರದವರು ಉಳಿದಿರುವ ಅರ್ಜಿಗಳನ್ನು ಪರಿಶೀಲನೆ ಮಾಡುತ್ತಾರೆ, ಯಾರು ಅರ್ಹರಾಗಿರುತ್ತಾರೆ, ಯಾರಿಗೆ ನಿಯಮಗಳು ಅನ್ವಯವಾಗುತ್ತವೆ, ಅವರಿಗೆ ಮಾತ್ರ ಕೊಡಬೇಕು ಎಂದು ಹೇಳಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಅಲ್ಲಿ ಈಗಾಗಲೇ ಬೇರೆಯವರು ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ.

ಶ್ರೀ ಎಂ. ಚಂದ್ರಶೇಖರ್.—ಅದೇ ಜಾಗದಲ್ಲಿ ಅಲ್ಲ, ಬೇರೆ ಎಲ್ಲಾದರೂ ಒಂದು ಕಡೆ ಜಾಗ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಒಂದು ಸಾವಿರ ಸೈಟ್‌ಗಳನ್ನು ಕೊಡಬೇಕು. ಹೋದ ಸರ್ಕಾರ ಕೈಗೊಂಡ ನಿರ್ಧಾರದ ಪ್ರಕಾರ ಕೊಡಬೇಕಾಗುತ್ತದೆ.

ಡಾ. ವಿ. ಎಸ್. ಆಚಾರ್ಯ.—ಕೆಲವರು ದುಡ್ಡು ಕೊಟ್ಟು ಪೊಸೆಷನ್ ಸರ್ಟಿಫಿಕೇಟ್ ಪಡೆದು ಕೊಂಡರೂ, ಇನ್ನೂ ಸೈಟ್ ಬಂದಿಲ್ಲ, ಅವರಿಗೆ ಏನು ಮಾಡುತ್ತೀರಿ ?

ಶ್ರೀ ಎಂ. ಚಂದ್ರಶೇಖರ್.—ಆ ವಿಚಾರ ಪ್ರಾಧಿಕಾರದ ವಿಷಯಕ್ಕೆ ಬಂದಾಗ ಹೇಳುತ್ತೇನೆ. ಪ್ರಾಧಿಕಾರದವರು, ಪುರಸಭೆಗಳು, ವಿಶ್ವಸ್ಥ ಮಂಡಳಿಯವರು, ಅಭಿವೃದ್ಧಿ ಯೋಜನೆಯಲ್ಲಿ, ಆರ್ಥಿಕವಾಗಿ ಹಿಂದುಳಿದವರಿಗೆ, ಬಡವರಿಗೆ, ನಿವೇಶನಗಳನ್ನು ಕಾದಿರಿಸಲಿಕ್ಕೆ ನಿರ್ದೇಶನ ಕಳುಹಿಸುವುದರ ಬಗ್ಗೆ ನಾನು ಹೇಳುತ್ತಿದ್ದೇನೆ.

ಶ್ರೀ ಬಿ. ಎಸ್. ಎಡಿಯೂರಪ್ಪ.—ಯಾರು ದುಡ್ಡು ಕೊಟ್ಟಿದ್ದಾರೆ ಅವರಿಗೇ ನಿವೇಶನ ಬರಲಿಲ್ಲ, ಇನ್ನು ಪುಗಸಟ್ಟೆ ನಿವೇಶನ ಹೇಗೆ ಕೊಡುತ್ತೀರಿ ?

ಇನ್ನು ಎರಡನೆಯದಾಗಿ ಕೊಳಚೆ ನಿರ್ಮೂಲನಾ ಮಂಡಲಿಯವರಿಗೆ ಇದು ಒಂದು ದೊಡ್ಡ ಸಮಸ್ಯೆಯಾಗಿದೆ....

ಶ್ರೀ ಎಂ. ಎಸ್. ಕೃಷ್ಣನ್.— ಒಂದು ರೀತಿಯಲ್ಲಿ ಇದು ತಮಾಷೆಯಾಗಿ ಕಂಡರೂ ಕೂಡ ಅದನ್ನು ತಾವು ಮಾಡುವುದು ಒಳ್ಳೆಯದು. ಜಯನಗರ ಮುಂತಾದ ಬಡಾವಣೆಗಳಲ್ಲಿ ದೊಡ್ಡ ದೊಡ್ಡ ಶ್ರೀಮಂತರು ಇದ್ದಾರೆ. ಅವರು ೧ ಲಕ್ಷಕ್ಕಿಂತ ಹೆಚ್ಚಿಗೆ ಕೊಡಬೇಕೆಂದರೂ ಅವರು ಕೊಡುವುದಕ್ಕೆ ಸಿದ್ಧವಾಗಿರುತ್ತಾರೆ. ಬಡವರಿಗೆ ಕೊಡುವಾಗ ಕಡಿಮೆ ದರದಲ್ಲಿ ಕೊಟ್ಟರೂ ಪರವಾಗಿಲ್ಲ, ಅಥವಾ ಫ್ರೀ ಆಗಿ ಕೊಟ್ಟರೂ ಪರವಾಗಿಲ್ಲ ? ಸ್ವಾಮಿ, ತಾವು ಬೆಂಗಳೂರು ಪ್ರಾಧಿಕಾರದ ವಿಚಾರದಲ್ಲಿ ಪ್ರಸ್ತಾಪ ಮಾಡುತ್ತಿದ್ದೀರಿ. ಆದರೆ ಅದರ ಅಧ್ಯಕ್ಷರನ್ನಾಗಿ ನೀವು ನೇಮಕ ಮಾಡಿರತಕ್ಕವರೇ ಬಂದಿಲ್ಲವಲ್ಲ.

ಶ್ರೀ ಎಂ. ಚಂದ್ರಶೇಖರ್.— ಅವರೂ ಬಂದಿದ್ದಾರೆ. ಈಗ ನಾವು ಏನು ಒಂದು ನಿರ್ದೇಶನವನ್ನು ಕೊಟ್ಟಿದ್ದೇವೆಂದರೆ, ಬೆಂಗಳೂರು ಮತ್ತು ನಗರಪಾಲಿಕೆಯ ಮಧ್ಯದಲ್ಲಿರತಕ್ಕ ಕೊಳಚೆ ಪ್ರದೇಶಗಳನ್ನು ನಗರ ಪ್ರದೇಶದಿಂದ ಹೊರಗಡೆ ಹಾಕಬೇಕೆಂದು ಮಾಡುತ್ತಿದ್ದೇವೆ. ಬೆಂಗಳೂರು ವಿಶ್ವಸ್ಥ ಮಂಡಲಿಯವರ ಕೊಳಚೆ ನಿರ್ಮೂಲನಾ ಮಂಡಲಿಯವರ ಬೇಡಿಕೆಗಳನ್ನು ನೋಡಿಕೊಂಡು ಅವರಿಗೆ ಅನುಕೂಲ ಮಾಡುತ್ತಾರೆ.

ಶ್ರೀ ಎಂ ಎಸ್. ಕೃಷ್ಣನ್.— ಸ್ವಾಮಿ, ಬೆಂಗಳೂರು ನಗರದಿಂದ ಕೊಳಚೆ ಪ್ರದೇಶಗಳನ್ನೆಲ್ಲಾ ಹೊರಗಡೆ ಹಾಕಿದರೆ ಸರಿಯಾಗುತ್ತದೆಯೆ ?

ಶ್ರೀ ಎಂ. ಚಂದ್ರಶೇಖರ್.— ಪರಿಸರ ಮಾಲಿನ್ಯವನ್ನು ತಡೆಗಟ್ಟುವ ದೃಷ್ಟಿಯಿಂದ ನಾವು ಈ ಕೆಲಸವನ್ನು ಮಾಡಬೇಕಾಗಿದೆ. ಉದಾಹರಣೆಗೆ ಹೇಳುವುದಾದರೆ ನೂರು ಗುಡಿಸಲುಗಳು ಇರುವ ಕಡೆಗಳಲ್ಲಿ ೪೦೦-೫೦೦ ಗುಡಿಸಲುಗಳು ಬಂದಿದ್ದರೆ ಅಂಥ ಕಡೆ ಇವೊತ್ತು ನಾವು ಬಹು ಅಂತಸ್ತಿನ ಕಟ್ಟಡಗಳು ಅಂದರೆ ೩ ಅಂತಸ್ತಿನ ಕಟ್ಟಡಗಳನ್ನು ಕಟ್ಟಿಸಿ ಕೊಳ್ಳುವುದಕ್ಕೆ ಹೋಗುವುದಿಲ್ಲ, ಈ ರೀತಿ ಕಟ್ಟಿದಾಗ ಪ್ರತಿಯೊಬ್ಬರು ಕೂಡ ಕೆಳಗಿನ ಮನೆಯನ್ನೇ ಕೇಳುತ್ತಾರೆ. ೧ ಮತ್ತು ೨ನೇ ಮಹಡಿಯ ಮನೆಗಳನ್ನು ಯಾರೂ ಕೇಳುವುದಿಲ್ಲ. ಆದ್ದರಿಂದ ಕೇಂದ್ರ ಪ್ರದೇಶದಲ್ಲಿ ಇರತಕ್ಕ ಕೊಳಚೆ ಪ್ರದೇಶದವರನ್ನು ನಗರದ ಹೊರ ವಲಯಗಳಿಗೆ ತೆಗೆದುಕೊಂಡು ಹೋಗಿ ಹಾಕಬೇಕೆಂದು ಯೋಚನೆ ಮಾಡುತ್ತಿದ್ದೇವೆ. ೪೦ X ೬೦ ಅಳತೆಯ ನಿವೇಶನಗಳನ್ನು ಹಂಚುವ ಬದಲು ೩೦X೨೦ ಅಡಿ ಅಳತೆಯ ನಿವೇಶನಗಳನ್ನು ಮಾಡಿ ಹಂಚಿದರೆ ಹೆಚ್ಚು ಜನರಿಗೆ ನಿವೇಶನಗಳು ಸಿಕ್ಕುತ್ತವೆ. ಅಲ್ಲದೆ ಅವರು ಉತ್ತಮ ಜೀವನವನ್ನು ಮಾಡಿಕೊಳ್ಳುವುದಕ್ಕೂ ಅನುಕೂಲವಾಗುತ್ತದೆ. ಆದ್ದರಿಂದ ನಾವು ಈ ಒಂದು ಯೋಚನೆಯನ್ನು ಮಾಡುತ್ತಿದ್ದೇವೆ.

ಶ್ರೀ ಎಸ್. ಸೂರ್ಯನಾರಾಯಣರಾವ್.— ಸ್ವಾಮಿ, ಈ ಕೊಳಚೆ ಪ್ರದೇಶದಲ್ಲಿ ವಾಸಿಸುವವರೆಲ್ಲಾ ಬಹಳ ಬಡವರು ಮತ್ತು ಕೂಲಿ ಮಾಡತಕ್ಕವರು, ಇವರನ್ನು ನೀವು ನಗರದಿಂದ ಹೊರಗೆ ಹಾಕಿದರೆ ಅವರು ಕೂಲಿ ಕೆಲಸಕ್ಕೆ ಹೋಗುವುದಕ್ಕೆ ಬಹಳ ಕಷ್ಟವಾಗುತ್ತದೆ. ಇದನ್ನು ತಾವು ಯೋಚನೆ ಮಾಡುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.— ಅವರಿಗೆ ಎಲ್ಲಿ ಅನುಕೂಲವಾಗುತ್ತದೆಯೋ ಅಂಥ ಕಡೆ ನಿವೇಶನಗಳನ್ನು ಒದಗಿಸಿಕೊಡುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.— ಅಂದರೆ ಅವರನ್ನು ಕರೆದುಕೊಂಡು ಹೋಗಿ ನಿವೇಶನಗಳನ್ನು ಮೊದಲು ತೋರಿಸಿ, ಅವರು ಒಪ್ಪಿದಮೇಲೆ ಅಲ್ಲಿಗೆ ಕಳುಹಿಸುತ್ತೀರಾ ? ಕೊಳಚೆ ಪ್ರದೇಶದಲ್ಲಿ ಮೂನ್ನೂರು ಜನರಿದ್ದರೆ ಅದರಲ್ಲಿ ಇನ್ನೂರು ಜನರಿಗೆ ಒಂದು ಕಡೆ ಒದಗಿಸಿಕೊಟ್ಟು ಇನ್ನುಳಿದ ನೂರು ಜನರಿಗೆ ಬೇರೆ ಕಡೆ ನಿವೇಶನವನ್ನು ಒದಗಿಸಿಕೊಡುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.— ಅದನ್ನು ಆಮೇಲೆ ಯೋಚನೆ ಮಾಡೋಣ. ಈಗ ವೃದ್ಧಾಶ್ರಮಗಳನ್ನು ಕಟ್ಟಿಸುವ ಬಗ್ಗೆ ನಿವೇಶನ ಕೊಡುವ ಯೋಜನೆಯನ್ನು ನಾವು ಇಟ್ಟುಕೊಂಡಿದ್ದೇವೆ. ಇದಕ್ಕಾಗಿ ಅರ್ಜಿಗಳೂ ಕೂಡ ಬಂದಿವೆ. ಇದು ಒಳ್ಳೆಯ ಯೋಜನೆ. ಯಾವುದೇ ಸಂಘ ಸಂಸ್ಥೆಗಳಾಗಲಿ ಈ ಒಂದು ವೃದ್ಧಾಶ್ರಮಗಳನ್ನು ಕಟ್ಟಿಸುತ್ತೇವೆಂದು ಮುಂದೆ ಬಂದರೆ ಅಂಥ ಸಂಘ ಸಂಸ್ಥೆಗಳಿಗೆ ಆದ್ಯತೆಯ ಮೇರೆಗೆ ನಿವೇಶನಗಳನ್ನು ಕೊಡಬೇಕೆಂದು ನಿರ್ದೇಶನವನ್ನು ಕೊಟ್ಟಿದ್ದೇವೆ.

ಇನ್ನು ನಗರ ಯೋಜನಾ ಇಲಾಖೆಯ ಬಗ್ಗೆ ಹೇಳುವುದಾದರೆ, ಇಂಟಿಗ್ರೇಟೆಡ್ ಅರ್ಬನ್ ಡೆವಲಪ್‌ಮೆಂಟ್ ಯೋಜನೆಯ ಅಡಿಯಲ್ಲಿ ೮೧—೮೨ರಲ್ಲಿ ೧೬ ಪಟ್ಟಣಗಳನ್ನು ತೆಗೆದುಕೊಂಡರು, ಈ ಯೋಜನೆಗೆ ಕೇಂದ್ರ ಸರ್ಕಾರ ಮತ್ತು ರಾಜ್ಯಸರ್ಕಾರದ ನೆರವು ಇದೆ. ಇದರಲ್ಲಿ ಮುಖ್ಯವಾಗಿ ಬಡಾವಣೆಗಳು ಮತ್ತು ವಾಣಿಜ್ಯ ಮಳಿಗೆಗಳನ್ನು ಕಟ್ಟತಕ್ಕ ಉದ್ದೇಶ ಇದೆ. ಆದರೆ ನಮ್ಮ ರಾಜ್ಯದಲ್ಲಿ ಈ ಕೆಲಸ ಸರಿಯಾಗಿ ಆಗಲಿಲ್ಲ. ಈ ಯೋಜನೆಗಾಗಿ ನಮ್ಮ ಸರ್ಕಾರದ ವತಿಯಿಂದ ೨೨೭ ಲಕ್ಷ ರೂಪಾಯಿಗಳನ್ನು ಒದಗಿಸಿಕೊಟ್ಟರೂ ಕೂಡ ಇದಕ್ಕಾಗಿ ಖರ್ಚುಮಾಡಿರುವುದು ಕೇವಲ ೧೧೮ ಲಕ್ಷ ರೂಪಾಯಿಗಳು ಮಾತ್ರ. ಏತಕ್ಕೆ ಪೂರ್ತಿ ಹಣವನ್ನು ಖರ್ಚು ಮಾಡಲಿಲ್ಲ ಎಂದರೆ ಭೂಸ್ವಾಧೀನ ಮಾಡಿಕೊಳ್ಳುವ ವಿಚಾರ ಅಡ್ಡ ಬಂದು ಈ ಕೆಲಸಮಾಡಲು ಸಾಧ್ಯವಾಗಲಿಲ್ಲ. ೬ ಪಟ್ಟಣಗಳಲ್ಲಿ ಇಂಡಸ್ಟ್ರಿಯಲ್

ಶೆಡ್ಡುಗಳನ್ನು ಕಟ್ಟಿಸುವ ಸಲುವಾಗಿ ಎಸ್ಟಿಮೇಟನ್ನು ಕೇಂದ್ರಸರ್ಕಾರಕ್ಕೆ ಕೊಡುತ್ತಿದ್ದೇವೆ. ಈಗ ಹೊಸಪೇಟೆ, ರಾಯಚೂರು, ಚಿತ್ರದುರ್ಗ ಈ ೩ ಸ್ಥಳಗಳಲ್ಲಿ ಷೆಡ್ಡುಗಳನ್ನು ಕಟ್ಟಲು ೮೭.೬೦ ಲಕ್ಷ ರೂಪಾಯಿಗಳ ಒಂದು ಅಂದಾಜನ್ನು ತಯಾರಿಸಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಇನ್ನು ಚನ್ನಪಟ್ಟಣ, ಹೊಳೇನರಸೀಪುರ, ಕನಕಪುರದ ಬಗ್ಗೆ ಯೋಚಿಸಬೇಕಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.— ಇಂಡಸ್ಟ್ರಿಯಲ್ ಷೆಡ್ಡುಗಳನ್ನು ಕಟ್ಟುವ ಕೆಲಸ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟಿಗೆ ಸೇರಿದ್ದು. ಇದಕ್ಕಾಗಿ ಒಂದು ಪ್ರತ್ಯೇಕವಾದ ಇಲಾಖೆಯೇ ಇದೆ. ಅವರು ಅದನ್ನು ನೋಡಿಕೊಳ್ಳುತ್ತಾರೆ. ಆದರೆ ನಿಮ್ಮ ಕೆಲಸ ಏನು ಎಂದರೆ ಯಾರಿಗೆ ಮನೆಗಳು ಇಲ್ಲ, ನಿವೇಶನಗಳು ಇಲ್ಲ ಅಂಥವರನ್ನು ಹುಡುಕಿ ಅವರಿಗೆ ನಿವೇಶನಗಳನ್ನು ಕೊಡುವುದು.

ಶ್ರೀ ಎಂ. ಚಂದ್ರಶೇಖರ್.— ಈ ಕೆಲಸದ ಜೊತೆಗೆ ಭಾಗ್ಯ ಮಂದಿರದ ಕೆಲಸವನ್ನೂ ನಾವೇ ಮಾಡಬೇಕಾಗಿದೆ. ಇನ್ನು ನಮ್ಮಲ್ಲಿ ರೀಜನಲ್ ಡೆವಲಪ್‌ಮೆಂಟ್ ಸ್ಕೀಂ ಎಂದು ಇದೆ. ಕಾವೇರಿ ಜಲಾನಯನ ಪ್ರದೇಶ, ಕೃಷ್ಣಾ ಜಲಾನಯನ ಪ್ರದೇಶ, ಮುಂತಾದ ಕಡೆಗಳಲ್ಲಿ ಬರತಕ್ಕ ನಗರ ಪ್ರದೇಶವನ್ನು ಯಾವರೀತಿ ಅಭಿವೃದ್ಧಿ ಮಾಡಬೇಕೆಂಬ ಬಗ್ಗೆ ಒಂದು ನಕ್ಷೆಯನ್ನು ತಯಾರು ಮಾಡಬೇಕೆಂದು ನಗರ ಯೋಜನಾ ಇಲಾಖೆಯಲ್ಲಿ ಮಾಡುತ್ತಿದ್ದೇವೆ. ಇದಕ್ಕೆ ಸಂಬಂಧಪಟ್ಟಂತೆ ಮೈಸೂರಿನ ಯೋಜನೆ ಸಿದ್ಧವಾಗಿ ಸರ್ಕಾರಕ್ಕೆ ಬಂದಿದೆ. ಔಟ್‌ಲೇ ಡೆವಲಪ್‌ಮೆಂಟ್ ಪ್ಲಾನ್ ಪ್ರಕಾರ ನಗರ ಯೋಜನೆಗಳ ಪ್ರಕಾರ ನಗರಗಳು ಬೆಳೆಯಬೇಕೆಂದು ಈ ಕೆಲಸವನ್ನು ಮಾಡುತ್ತಿದ್ದೇವೆ; ಇದರ ಜೊತೆಗೆ ಕಾಂಪ್ರಹೆನ್ಸಿವ್ ಪ್ಲಾನ್ ಇದೆ. ಅದರಲ್ಲಿ ಇಂಥಿಂಥ ಕಟ್ಟಡಗಳು ಇಂಥಿಂಥ ಭಾಗದಲ್ಲಿ ಬರಬೇಕೆಂದು ಇದೆ. ಅಂದರೆ ವಾಸಮಾಡತಕ್ಕ ಪ್ರದೇಶ ಯಾವುದು ? ಕೈಗಾರಿಕಾ ಪ್ರದೇಶ ಯಾವುದು ಎಂಬುದೂ ಕೂಡ ಈ ಇಲಾಖೆಯ ಮುಖಾಂತರವೇ ಆಗುತ್ತಿದೆ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ವಿವರಗಳನ್ನು ಬಿ.ಡಿ.ಎ. ಬಗ್ಗೆ ಹೇಳುವಾಗ ಹೇಳುತ್ತೇನೆ.

ಇನ್ನು ಬೆಂಗಳೂರು ಮೆಟ್ರೋಪಾಲಿಟನ್ ಆಥಾರಿಟಿಯ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರೆಂದು ಕೇಳಿದ್ದೀರಿ. ಈ ವಿಚಾರ ಸಚಿವ ಸಂಪುಟದಲ್ಲಿ ಚರ್ಚೆಯಾಗಿದ್ದು ಆದಷ್ಟುಬೇಗ ಅದು ಮಸೂದೆಯ ರೂಪದಲ್ಲಿ ಸದನದ ಮುಂದೆ ಬರಲಿದೆ.

ಶ್ರೀ ಎಂ. ಎಸ್. ಕೃಷ್ಣನ್.— ಈ ಸಾರಿ ಅದು ಬರುತ್ತದೆಯೆ ?

ಶ್ರೀ ಎಂ. ಚಂದ್ರಶೇಖರ್.— ಹೌದು, ಈ ಸಾರಿ ಬರುತ್ತದೆ.

ಬೆಂಗಳೂರು ವಾಟರ್ ಸಪ್ಲೈ ಬಗ್ಗೆ ಹೇಳುವುದಾದರೆ ಅದು ತಮಗೆಲ್ಲಾ ಗೊತ್ತಿದೆ. ಈಗ ಕಾವೇರಿ ಒಂದು ಮತ್ತು ಎರಡನೆಯ ಸ್ಟೇಜ್ ಮಾಡಿದ್ದೇವೆ. ಈ ಮನೆಯಲ್ಲಿ ನಾವು ಆಗಲೇ ಆಶ್ವಾಸನೆ ಕೊಟ್ಟ ರೀತಿಯಲ್ಲಿ ಫೆಬ್ರವರಿ ತಿಂಗಳಲ್ಲಿ ನೀರು ಸರಬರಾಜು ಮಾಡಲಿಕ್ಕೆ ಇನ್ನೊಂದು ಪಂಪ್ ಪ್ರಾರಂಭ ಮಾಡುತ್ತೇವೆಂದು ಹೇಳಿದ್ದೇವೆ. ಅದು ಪ್ರಾರಂಭವಾದರೆ ೧೦ ಎಂಜಿಡಿ ನೀರು ಬೆಂಗಳೂರು ನಗರಕ್ಕೆ ಬರುತ್ತದೆ. ಇನ್ನೊಂದು ೧೦ ಎಂಜಿಡಿ ನೀರು ಬರಲಿಕ್ಕೆ ಒಂದು ಪಂಪು ಪ್ರಾರಂಭ ಮಾಡಬೇಕು. ಜೂನ್, ಜುಲೈನಲ್ಲಿ ನಾಲ್ಕು ಏರ್ ಛೇಂಬರ್ ಬಂದಮೇಲೆ ಕಾವೇರಿ ಎರಡನೆಯ ಯೋಜನೆ ಪೂರ್ಣವಾಗುತ್ತದೆ. ಈಗ ಹೈಗ್ರೌಂಡ್ಸ್‌ನಲ್ಲಿ ಜಲಸಂಗ್ರಹಾಲಯ ಕಟ್ಟಲಿಕ್ಕೋಸ್ಕರ ಎರಡು ಮೂರು ವರ್ಷದಿಂದ ಆ ಪ್ರದೇಶದ ಭೂ ಸ್ವಾಧೀನದ ಬಗ್ಗೆ ವಿಳಂಬವಾಗಿತ್ತು. ಈಗ ಅದನ್ನು ಪಡೆದಿದ್ದೇವೆ. ಈಗ ಅಲ್ಲಿ ಒಂದು ಜಲಸಂಗ್ರಹಾಲಯ ಕಟ್ಟಲಿಕ್ಕೆ ಪ್ರಾರಂಭಮಾಡಿದ್ದೇವೆ.

ಶ್ರೀ ಎಂ.ಎಸ್. ಕೃಷ್ಣನ್.—ಸ್ವಾಮಿ, ಮಿಲಿಟರಿಯವರಿಗೆ ಹೆಸರಘಟ್ಟದ ನೀರು ಸಿಕ್ಕುತ್ತಿಲ್ಲ, ಈ ನೀರನ್ನು ಕೊಡಬೇಕೆಂದು ಅವರು ಒತ್ತಾಯ ಮಾಡುತ್ತಿದ್ದಾರೆ ಎಂದು ಕೇಳಿ ಬಂದಿದೆ. ಬೆಂಗಳೂರು ನಗರದ ಜನರಿಗೆ ನೀರು ಸಿಕ್ಕದೆ ತೊಂದರೆಯಾದೀತು. ಆದುದರಿಂದ, ಇದರ ಬಗ್ಗೆ ಸ್ಪಷ್ಟವಾದ ನಿಲುವನ್ನು ತೆಗೆದುಕೊಂಡು ಬೆಂಗಳೂರು ಜನರಿಗೆ ನೀರು ಕೊಡುವಂಥ ವ್ಯವಸ್ಥೆಯನ್ನು ನಾವು ಮಾಡಬೇಕು.

ಶ್ರೀ ಎಂ. ಚಂದ್ರಶೇಖರ್.—ಹೈಗ್ರೌಂಡ್ಸ್ ಹತ್ತಿರ ಎರಡನೆಯ ಹಂತದ ನೀರು ಬರುತ್ತದೆ. ಅದಕ್ಕೆ ಒಂದು ಪಂಪ್ ಹಾಕಿ ಮೂರನೆಯ ಪಂಪ್ ಪ್ರಾರಂಭ ಮಾಡಿದ ಮೇಲೆ ಅಲ್ಲಿಂದ ರಾಜ್‌ಮಹಲ್ ವಿಲಾಸಕ್ಕೆ, ಪಂಪ್ ಮಾಡಿದಾಗ ಮಲ್ಲೇಶ್ವರ, ರಾಜಾಜಿನಗರಕ್ಕೆ ವಿತರಣೆ ಹೆಚ್ಚಾಗುತ್ತದೆ.

ಶ್ರೀ ಎಂ.ಎಸ್. ಕೃಷ್ಣನ್.—ಹೆಸರುಘಟ್ಟ ಟ್ಯಾಂಕಿನಲ್ಲಿ ನೀರು ಇಲ್ಲ ಎಂದು ಹೇಳುತ್ತಿದ್ದಾರೆ, ಆ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಲಿಲ್ಲ.

ಶ್ರೀ ಎಂ. ಚಂದ್ರಶೇಖರ್.—ಆ ಬಗ್ಗೆ ನನ್ನಲ್ಲಿ ಮಾಹಿತಿ ಇಲ್ಲ, ಅದನ್ನು ನಾನು ವಿಚಾರ ಮಾಡುತ್ತೇನೆ. ಈಗ ಕಾವೇರಿ ಎರಡನೆಯ ಹಂತದಲ್ಲಿ, ಪೂರ್ಣವಾಗಿ ನೀರನ್ನು ೨೦ ಎಂಜಿಡಿ ಜೊತೆಗೆ ೧೨ ಎಂಜಿಡಿ ಪಂಪ್ ಮಾಡಲಿಕ್ಕೆ ಜಲಸಂಗ್ರಹಾಲಯದ ನಿರ್ಮಾಣ ಕೂಡ ತ್ವರಿತಗತಿಯಲ್ಲಿ ನಡೆಯುತ್ತಿದೆ. ಇದುವರೆಗೂ ಕೈಗೆ ತೆಗೆದುಕೊಂಡಿರತಕ್ಕ ಯೋಜನೆಗಳು ಪೂರ್ಣವಾಗುತ್ತಿವೆ. ಇನ್ನು ಕಾವೇರಿ ಮೂರನೆಯ ಹಂತವನ್ನು ತೆಗೆದುಕೊಳ್ಳುವುದು ಅವಶ್ಯಕ. ಅದು ಎಲ್ಲರಿಗೂ ಗೊತ್ತಿದೆ. ಅದು ಆಗಲೇಬೇಕೆಂದು ಒತ್ತಾಯ ಇದೆ. ಯಥಾಪ್ರಕಾರ ಒಂದು ಪ್ರಶ್ನೆ ಏನೆಂದರೆ, ಎರಡು ಮೂರು ವರ್ಷಗಳ ಹಿಂದಿನಿಂದ ಸುಮಾರು ೨೪೦ ಕೋಟಿ ರೂಪಾಯಿಗಳು ಅಂದಾಜು ಇದೆ. ಅದನ್ನು ನಾವು ತೆಗೆದುಕೊಂಡು ಮುಂದುವರಿಸಬೇಕಾದರೆ, ೩೦೦ ಕೋಟಿ ರೂಪಾಯಿಗಳು ಆಗುತ್ತದೆ. ಅದಕ್ಕೆ ಸಂಪನ್ಮೂಲಗಳನ್ನು ಯಾವರೀತಿ ಮಾಡಬೇಕು ಎನ್ನುವ ಬಗ್ಗೆ ಇನ್ನೂ ಖಚಿತವಾಗಿ ಯಾವುದೇ ತೀರ್ಮಾನ ತೆಗೆದುಕೊಳ್ಳದ ಪ್ರಯುಕ್ತ ಈ ವರ್ಷದಲ್ಲಿ ಆ ಯೋಜನೆಯನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಬೆಂಗಳೂರು ನಗರ ಬೆಳೆಯುವುದನ್ನು ತಡೆಯಲಿಕ್ಕೆ ಆಗುವುದಿಲ್ಲ. ಈಗ ೩೦ ಲಕ್ಷ ಜನಸಂಖ್ಯೆ ಇದ್ದರೆ, ನಾವು ಎಷ್ಟೇ ಜನಸಂಖ್ಯೆಯ ಬೆಳವಣಿಗೆಯನ್ನು ಕಡಿಮೆ ಮಾಡುತ್ತೇವೆಂದರೂ ೨೦೦೧ನೇ ಇಸವಿಯ ಹೊತ್ತಿಗೆ ೭೦ ಲಕ್ಷ ಜನಸಂಖ್ಯೆ ಇಲ್ಲಿ ಆಗುತ್ತದೆ ಎನ್ನುವ ಒಂದು ಲೆಕ್ಕ ಇದೆ. ಆದ್ದರಿಂದ, ಈಗ ಇರತಕ್ಕ ಲೆಕ್ಕ ತೆಗೆದುಕೊಂಡರೆ ನಮಗೆ ನೀರು ಸಹ ಇನ್ನು ಎರಡರಷ್ಟು ಬೇಕಾಗುತ್ತದೆ. ಕಾವೇರಿ ಮೂರನೆಯ ಹಂತಕ್ಕೆ ಪ್ರಯತ್ನ ಮಾಡದೇ ಇದ್ದರೆ ಬೆಂಗಳೂರು ನಗರಕ್ಕೆ ತೊಂದರೆ ಉಂಟು. ಆದ್ದರಿಂದ, ಸಂಪನ್ಮೂಲಗಳ ಬಗ್ಗೆ ನಾವು ಕೇಂದ್ರಸರ್ಕಾರ, ವಿಶ್ವಬ್ಯಾಂಕ್ ಮುಖಾಂತರ, ಕಾರ್ಪೊರೇಷನ್ ಮತ್ತು ಬಿಡಿಎ ಇವರೆಲ್ಲರ ಹಣದ ಸಹಾಯದಿಂದ ಈ ಯೋಜನೆಯನ್ನು ತೆಗೆದುಕೊಳ್ಳ ಬೇಕಾಗುತ್ತದೆ. ಆದರೆ ಈ ವರ್ಷ ಅದನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಇನ್ನು ಒಂದು ವರ್ಷ ಕಳೆದರೆ ಇನ್ನೂ ಜನಸಂಖ್ಯೆ ಜಾಸ್ತಿಯಾಗುತ್ತದೆ. ಆದ್ದರಿಂದ, ಈ ಸಾರಿಯೇ ಹೇಗಾದರೂ ಮಾಡಿ ಪ್ರಾರಂಭ ಮಾಡಿ.

ಡಾ॥ ವಿ.ಎಸ್. ಆಚಾರ್ಯ.—ತೆಲುಗು-ಗಂಗಾ, ೭೦೦ ಕೋಟಿ ರೂಪಾಯಿಗಳ ಯೋಜನೆಯನ್ನು ಪಕ್ಕದ ರಾಜ್ಯದಲ್ಲಿ ತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ಎಂ.ಎಸ್. ಕೃಷ್ಣನ್.—ಈ ಮನೆಯಲ್ಲಿ ಎಲ್ಲಾ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ಮಾಡೋಣ. ಇದಕ್ಕೆ ಕಾಂಗ್ರೆಸ್ ಸದಸ್ಯರು ವಿರೋಧ ಮಾಡಲಿಕ್ಕೆ ಹೋಗುವುದಿಲ್ಲ.

ಶ್ರೀ ಎಂ. ಚಂದ್ರಶೇಖರ್.—ಇದರ ಬಗ್ಗೆ ಪ್ರಶ್ನೆ ಬಂದಾಗ ಉತ್ತರ ಕೊಟ್ಟಿದ್ದೇನೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಬರೀ ಬೆಂಗಳೂರು ನಗರಕ್ಕೆ ಜಾಸ್ತಿ ಮಾಡುತ್ತಿದ್ದೀರಿ ಎಂದು ಕೆಲವು ಸದಸ್ಯರು ಹೇಳಿರಬಹುದು ಅದಕ್ಕೆ ತಾವು ಯೋಚನೆ ಮಾಡುವುದು ಬೇಡ.

ಶ್ರೀ ಎಂ.ಎಸ್. ಕೃಷ್ಣನ್.—ಈ ವರ್ಷವೇ ಯೋಜನೆಯನ್ನು ಪ್ರಾರಂಭ ಮಾಡಿ.

ಶ್ರೀ ಎಂ. ಚಂದ್ರಶೇಖರ್.—ಈ ವರ್ಷ ಪ್ರಾರಂಭ ಮಾಡಲಿಕ್ಕೆ ಬಹಳ ಕಷ್ಟ ಇದೆ. ಹಣದ ಸಹಾಯದ ಬಗ್ಗೆ ಕೇಂದ್ರ ಸರ್ಕಾರದ ಹತ್ತಿರ ಹೋಗಬೇಕಾಗಿದೆ. ವಿರೋಧ ಪಕ್ಷದವರ ಸಹಕಾರ ಅಗತ್ಯ ಇದೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ನಾವು ಸಹಕಾರ ಕೊಡುತ್ತೇವೆ ಎಲ್ಲಿಗೆ ಬೇಕೋ ಅಲ್ಲಿಗೆ ನಾವೂ ಬರುತ್ತೇವೆ.

ಶ್ರೀ ಎಂ. ಚಂದ್ರಶೇಖರ್.—ಕೇಂದ್ರ ಸರ್ಕಾರದಿಂದ ಹಣ ಕೊಡಿಸುವುದಾದರೆ ಈ ಯೋಜನೆಯನ್ನು ತೆಗೆದುಕೊಳ್ಳಬಹುದು.

ಶ್ರೀ ಎಂ. ಚಂದ್ರಶೇಖರ್.—ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ೧೯೭೬ರಿಂದ ಇದುವರೆಗೆ ೧೦ ಸಾವಿರ ಎಕರೆಯಷ್ಟು ಭೂಮಿಯನ್ನು ಸ್ವಾಧೀನ ಮಾಡಿಕೊಂಡು ಆ ಪ್ರದೇಶವನ್ನು ಅಭಿವೃದ್ಧಿ ಮಾಡಿ

ನಿವೇಶನ ಮಾಡಬೇಕೆಂಬ ಯೋಜನೆ ಇತ್ತು. ಆ ಯೋಜನೆಯಲ್ಲಿ ವಶಪಡಿಸಿಕೊಂಡಿರುವುದು ಕೇವಲ ೩,೧೪೧ ಎಕರೆಯಷ್ಟು ಮಾತ್ರ. ಮೊದಲು ೧೦ ಸಾವಿರ ಎಕರೆ ಎಂದು ಅವರು ಪ್ರಿಲಿಮಿನರಿ ನೋಟಿಫಿಕೇಷನ್ ಮಾಡಿಕೊಂಡಿದ್ದರು. ಆದರಲ್ಲಿ ೩೬,೨೦೦ ನಿವೇಶನಗಳನ್ನು ಮಾಡಬಹುದೆಂದು ಎಂದು ಹೇಳಿ ಇದುವರೆಗೂ ೩೦ ಸಾವಿರ ನಿವೇಶನಗಳನ್ನು ಹಂಚಿದೆ. ಮೊನ್ನೆ ನೀವು ಹಂಚಿದ ೧೩೨೬ ನಿವೇಶನಗಳು ಇದರಲ್ಲಿ ಸೇರಿದೆ. ಒಟ್ಟು ೩೦ ಸಾವಿರ ನಿವೇಶನಗಳನ್ನು ಹಂಚಲ್ಪಟ್ಟಿವೆ. ೧೯೭೭ರಿಂದ ೧೯೮೩ರವರೆಗಿನ ಯೋಜನೆಯಲ್ಲಿ ಸುಮಾರು ೩೬ ಸಾವಿರ ಅರ್ಜಿಗಳು ನೋಂದಣಿಯಾಗಿವೆ. ಪ್ರಾಧಿಕಾರದಲ್ಲಿ ನಾವು ಇನ್ನಷ್ಟು ಭೂಮಿಯನ್ನು ಸ್ವಾಧೀನ ಪಡಿಸಿಕೊಂಡು ನಿವೇಶನ ಮಾಡಬೇಕಾಗುತ್ತದೆ. ಆ ಬಗ್ಗೆ ಪ್ರಾಧಿಕಾರದವರು ಕೆಲವೊಂದು ಯೋಜನೆಗಳನ್ನು ಸಿದ್ಧಮಾಡಿದ್ದಾರೆ. ಸುಮಾರು ೩ ಸಾವಿರ ಎಕರೆಯಷ್ಟು ಪ್ರದೇಶವನ್ನು ಕೆಲವಾರು ಬಡಾವಣೆಗಳಲ್ಲಿ ತೆಗೆದುಕೊಂಡು ಸುಮಾರು ೪೦-೪೫ ಸಾವಿರ ನಿವೇಶನಗಳು ಮಾಡಬೇಕೆಂದು ಇದ್ದಾರೆ. ಈಗ ೩೬ ಸಾವಿರ ಅರ್ಜಿಗಳನ್ನು ನೋಂದಣಿ ಮಾಡಿಕೊಂಡಿರುವುದರ ಜೊತೆಗೆ, ಅನೇಕ ಗೃಹನಿರ್ಮಾಣ ಸಹಕಾರ ಸಂಘಗಳ ಬೇಡಿಕೆ ಬೇರೆ ಇದೆ. ಅದು ಸೇರಿದರೆ ೧೫-೨೦ ಸಾವಿರ ನಿವೇಶನಗಳು ಲೆಕ್ಕಕ್ಕೆ ಬರಬಹುದು. ಈಗ ಸುಮಾರು ೪೨ರಿಂದ ೪೫ ಸಾವಿರ ನಿವೇಶನ ಆಗುವ ರೀತಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಭೂ ಸ್ವಾಧೀನ ಕಾರ್ಯಕ್ರಮ ಹಾಕಿಕೊಳ್ಳಲಿಕ್ಕೆ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ. ಇನ್ನು ಹೆಣ್ಣೂರು, ಬಾಣಸವಾಡಿಯಲ್ಲಿ, ಈಗ ತೆಗೆದುಕೊಂಡಿರುವ ಕ್ರಮದಲ್ಲಿ ೫೨೪ ಎಕರೆಗೆ ಅವಾರ್ಡ್ ಪಾಸ್ ಮಾಡಿದ್ದರೂ ನಮಗೆ ಏನೂ ತೊಂದರೆ ಇಲ್ಲದೆ ಸಿಕ್ಕಿರುವ ಜಾಗ ೩೪೫ ಎಕರೆ ಪ್ರದೇಶ. ಅಲ್ಲಿ ನಾವು ಇವೊತ್ತು ನಿವೇಶನಗಳನ್ನು ಮಾಡುವಾಗ ಸುಮಾರು ೫ ಸಾವಿರ ನಿವೇಶನಗಳು ಆಗಬಹುದು ಎನ್ನುವ ಸೂಚನೆಯ ಮೇಲೆ ಕಾರ್ಯಕ್ರಮಗಳ ಆಗುತ್ತಿವೆ. ನಗರ ಬೆಳೆಯುತ್ತಿರುವಾಗ ನಗರದಲ್ಲಿ ಮುಂದಿನ ಯೋಜನೆಗಳನ್ನು ಇಟ್ಟುಕೊಂಡರೆ, ರಸ್ತೆಗಳನ್ನು ಮಾಡುವಾಗ, ಆಯಾ ಬಡಾವಣೆಗಳಿಗೆ ಬೇಕಾದ ಸೌಲಭ್ಯಗಳನ್ನು ಕಲ್ಪಿಸುವಾಗ, ಕೆಲವಾರು ಜನರಿಗೆ ತೊಂದರೆಯಾಗುತ್ತದೆ. ಮುಂದಿನ ಪೀಳಿಗೆ ನಮಗೆ ಶಾಪ ಹಾಕದೇ ಇರಲಿ ಎಂದು ನಾವು ಯೋಜನಾ ಬದ್ಧವಾಗಿ ಬಡಾವಣೆಗಳು ಆಗಬೇಕೆಂದು ಈ ಕ್ರಮ ತೆಗೆದುಕೊಂಡಿದ್ದೇವೆ. ರಸ್ತೆಗಳಿಗೆ ನಿವೇಶನಗಳು ಅಡ್ಡ ಬರುವಂಥಾದ್ದು ಇದ್ದರೆ ಅವರಿಗೆ ಅದರ ಬದಲಾಗಿ ಸಮೀಪದಲ್ಲಿಯೇ ನಿವೇಶನ ಕೊಟ್ಟು ಅನುಕೂಲ ಮಾಡುತ್ತೇವೆ. ರಸ್ತೆ ಮಾಡುವಂಥ ಸಂದರ್ಭದಲ್ಲಿ ಈ ತರಹ ತೊಂದರೆ ಬಂದರೆ ನಾವು ಆ ನಿವೇಶನ ತೆಗೆದುಕೊಂಡು ಸಮೀಪದಲ್ಲೇ ಬೇರೆ ನಿವೇಶನ ಕೊಡುವಂಥ ವ್ಯವಸ್ಥೆ ಇದೆ.

೪-೦೦ ಪಿ.ಎಂ.

ನಿಮಗೆ ಗೊತ್ತಿರುವಹಾಗೆ ಬೆಂಗಳೂರು ನಗರದ ಹೊರ ವಲಯದಲ್ಲಿ ಮುಖ್ಯವಾಗಿ ಒಂದು ಹೆದ್ದಾರಿಯಿಂದ ಮತ್ತೊಂದು ಹೆದ್ದಾರಿಗೆ ಹೋಗುವಂಥ ೬೪ ಕಿಲೋಮೀಟರ್ ಉದ್ದದ ರಿಂಗ್ ರೋಡು ಬರುತ್ತಿದೆ. ಇದು ೧೫೦ ಅಡಿ ಇದ್ದರೆ. ಒಳ್ಳೆಯದು ಎನ್ನುವ ಅಭಿಪ್ರಾಯ ಇದೆ. ಜೊತೆಗೆ ಒಳ ರೋಡುಗಳು ೪೧ ಅಡಿ ಇಲ್ಲದೇ ಹೋದರೆ ಸಾಧ್ಯವಾಗುವುದಿಲ್ಲ. ಆ ಕಾರಣದಿಂದ ಯಾವ ಪ್ರದೇಶದಲ್ಲಿ ಕಟ್ಟಡಬಂದಿದೆ ಅಥವಾ ನಿವೇಶನ ಇದೆ ಎಂದು ಹೇಳುತ್ತಾ ಇದ್ದಾರೆ ಆದರ ಬಗ್ಗೆ ಅವರಲ್ಲೇ ದಾಖಲೆಗಳಿರುತ್ತವೆ. ದಾಖಲೆಗಳನ್ನು ನೋಡಿ ಅವರು ಬದಲಿ ವ್ಯವಸ್ಥೆ ಮಾಡುತ್ತಾರೆ ಎನ್ನುವುದು ಒಂದು. ಎರಡನೆಯದು, ಈಗಾಗಲೇ ನಗರ ಪ್ರದೇಶಗಳಲ್ಲಿ ಏನು ಕಟ್ಟಡಗಳು ಆಗಿಯೋಗಿವೆ, ಅಲ್ಲಿ ೨೦ ಅಡಿ, ೩೦ ಅಡಿ ರಸ್ತೆ ಬಿಟ್ಟಿರಬಹುದು. ಆ ಪ್ರದೇಶಗಳಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಆರಸ್ತೆಗಳನ್ನು ನೇರಮಾಡಿ ಈಗಾಗಲೇ ಬಂದುಬಿಟ್ಟಿರುವ ಬಿಲ್ಡಿಂಗ್‌ಗಳಿಗೆ ತೊಂದರೆಯಾಗದ ರೀತಿಯಲ್ಲಿ ರೀಕನ್ಸ್ಟ್ರಕ್ಷನ್ ಎನ್ನುವ ಪದವನ್ನು ತೆಗೆದು ರೀ ಅಲಾಟ್‌ಮೆಂಟ್ ಮಾಡಬೇಕು ಎಂಬ ಯೋಚನೆ ಇದೆ. ರೀಕನ್ಸ್ಟ್ರಕ್ಷನ್‌ಗೂ, ರೀ ಅಲಾಟ್‌ಮೆಂಟ್‌ಗೂ ಇರುವ ವ್ಯತ್ಯಾಸ ತಮಗೆ ಗೊತ್ತಿದೆ. ಈಗ ಆ ಪ್ರದೇಶದಲ್ಲಿ ೩೦X೪೦ ಮತ್ತು ೪೦X೬೦ ಅಡಿ ಸೈಟುಗಳನ್ನು ಮಾಡುತ್ತೇವೆ. ಕೆಲವರಿಗೆ ಜಾಗ ಸಿಕ್ಕಿದಾಗ ೨೦೦X೩೦೦ ಅಡಿ ಹದ್ದು ಬಸ್ತು ಹಾಕಿಕೊಂಡಿದ್ದರು. ರೀಕನ್ಸ್ಟ್ರಕ್ಷನ್ ಮಾಡುವುದಕ್ಕೆ ಹೋದಾಗ ಪೂರ್ಣ ಪ್ರದೇಶವನ್ನು ರೀಕನ್ಸ್ಟ್ರಕ್ಷನ್ ಮಾಡಬೇಕಾಗಿ ಬರುತ್ತದೆ. ಆಗ ಆತನಿಗೆ ಒಂದು ನಿವೇಶನ ಕೊಡಬೇಕಾದ ಅವಶ್ಯಕತೆ ಇದೆ. ಅದನ್ನು ರೀ ಅಲಾಟ್‌ಮೆಂಟ್ ಮಾಡಿದಾಗ ಅವರ ದಾಖಲೆಗಳನ್ನು ನೋಡಿದಾಗ ಬೇರೆಯವರಿಗೆ ನಿವೇಶನಗಳನ್ನು ಹಂಚುವಹಾಗೆ, ಕರ್ನಾಟಕದಲ್ಲಿ ೧೧ ವರ್ಷ ವಾಸಮಾಡಿರುವ ವ್ಯಕ್ತಿಯಾಗಿರಬೇಕು ಎಂದು ಏನಿದೆ ಅದು ಬೇರೆ ನಿವೇಶನಗಳನ್ನು ಕೊಡುವಾಗ ಇರಬಾರದು, ಬೇರೆ ಕಡೆ ನಿಯಮಗಳ ಪಾಲನೆಗೆ ತಕ್ಕಂತೆ ರೀ

ಅಲಾಟ್‌ಮೆಂಟ್ ಮಾಡುವಂಥ ಕಾರ್ಯಕ್ರಮ ಹಾಕಿಕೊಳ್ಳಬೇಕು ಎಂದು ಯೋಜನೆ ಹಾಕಿಕೊಂಡಿದ್ದೇವೆ. ಒಂದು ಪ್ರದೇಶದಲ್ಲಿ ಪೂರ್ಣ ಕಟ್ಟಡಗಳು ಬಂದಿರುತ್ತವೆ, ಅಲ್ಲಿ ಎಷ್ಟು ಸಾಧ್ಯವೋ ಅಷ್ಟು ರಸ್ತೆಯನ್ನು ನೇರವಾಗಿ ಮಾಡುವುದಕ್ಕೆ ಆಗಲಿಲ್ಲ ಅಂದರೆ, ನೇರ ಮಾಡುವುದಕ್ಕೆ ಪ್ರಯತ್ನ ಮಾಡಿ ಅವರಿಗೆ ರೀ ಅಲಾಟ್‌ಮೆಂಟ್ ಮುಖಾಂತರ ಕ್ರಮ ಬದ್ಧ ಮಾಡುವುದಕ್ಕೆ ಕೂಡ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಹೇಳಿದ್ದು ಬಹಳ ಸಂತೋಷ. ಕಟ್ಟಡಗಳು ಬಂದಿದ್ದರೆ ಬೇರೆ ಹತ್ತಿರದೊಳಗೆ ಸೈಟ್ ಕೊಡುತ್ತೇವೆಂದು ಹೇಳಿದರೆ ಸಂತೋಷ. ಡೆವಲಪ್ ಆಗಿದ್ದರೆ ರೀ ಅಲಾಟ್‌ಮೆಂಟ್ ಮಾಡುತ್ತೇವೆಂದು ಹೇಳುತ್ತೀರಿ. ರೀ ಅಲಾಟ್‌ಮೆಂಟ್‌ಗೂ ರೀಕನ್ವೆಗೂ ವ್ಯತ್ಯಾಸವಿದೆ. ೧೫೦ ಅಡಿ ರಸ್ತೆ ಎಂದು ಹೇಳುತ್ತೀರಿ, ಅದರಲ್ಲಿ ೪೦X೬೦ ಮತ್ತು ೩೦X೪೦ ಸೈಟುಗಳನ್ನು ಮಾಡಿದರೆ ಕಡಿಮೆಯಾಗುತ್ತದೆ. ರೀಕನ್ವೆ ಎಂದರೆ ಸ್ವಲ್ಪ ರೇಟ್ ಕಡಿಮೆಯಾಗುತ್ತದೆ. ಮನೆ ಕಳೆದುಕೊಂಡವರಿಗೆ ರೀ ಅಲಾಟ್‌ಮೆಂಟ್ ಮಾಡುವುದಾದರೆ ರೇಟ್ ಜಾಸ್ತಿ ಆಗಬಹುದು. ಆದುದರಿಂದ ರಿಕನ್ವೆ ಮಾಡಿ ಕಡಿಮೆ ರೇಟಿನಲ್ಲಿ ಕೊಡಿ. ಈ ತರಹ ಬಿ.ಡಿ.ಎ.ಗೆ ೧೨ ಸಾವಿರ ೨೦ ಸಾವಿರ ಅರ್ಜಿಗಳು ಬಂದಿರಬಹುದು. ಅಲ್ಲಿ ಸೈಟುಗಳು ಆಗಿಹೋಗಿದೆ, ಸೈಟುಗಳನ್ನು ಕೊಂಡುಕೊಂಡಿದ್ದಾರೆ, ದಾಖಲೆಗಳನ್ನು ಕೇಳಿದ್ದಾರೆ. ಬಿ. ಡಿ. ಎ.ನವರು ನಿಮ್ಮ ಸೈಟು ಹೋಗುತ್ತದೆ, ದಾಖಲೆಗಳನ್ನು ಕೊಡಿ ಎಂದು ಹೇಳಿದ್ದಾರೆ. ಹೀಗಾಗಿ, ಕೆಲವರು ಸೈಟನ್ನು ಕಳೆದುಕೊಂಡಿದ್ದಾರೆ, ಈಗ ದುಡ್ಡನ್ನೂ ಕಳೆದುಕೊಂಡು ಬಿಡುತ್ತಾರೆ. ಅಂತಹವರಿಗೆಲ್ಲ ರೀಅಲಾಟ್‌ಮೆಂಟಿನಲ್ಲಿ ಸೈಟ್ ಕೊಡಿಸಿಕೊಡಬೇಕು. ನಿಮ್ಮ ಈ ಯೋಜನೆಯಿಂದ ಸೈಟು ಹೋದರೆ ರೀ ಅಲಾಟ್‌ಮೆಂಟ್ ಮಾಡಿ ಅದೇ ಜಾಗದಲ್ಲಿ ಸೈಟು ಕೊಡಿಸಿಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಬಿ.ಡಿ.ಎ.ನವರು ಅವರಿಗೆ ಕಡಿಮೆ ದರದಲ್ಲಿ ಸೈಟ್ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್—ಈ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೋಸ್ಕರವಾಗಿ ಮಾನ್ಯ ಕೃಷ್ಣಯ್ಯರ್‌ರವರು ಇರುವಂಥ ಒಂದು ಉಪಸಮಿತಿ ಮಾಡಿದೆ. ಅಲ್ಲಿ ಇದನ್ನು ಅವರು ಪರಿಶೀಲನೆ ಮಾಡುತ್ತಾರೆ. ಈ ಬಗ್ಗೆ ಸಮಸ್ಯೆ ಏನಿದೆ ಎನ್ನುವುದನ್ನು ಸರ್ಕಾರದ ಗಮನಕ್ಕೆ ತನ್ನಿ. ಕುಳಿತು ಮಾತನಾಡಿ ಯಾರಿಗೂ ತೊಂದರೆ ಯಾಗದ ರೀತಿಯಲ್ಲಿ ಮಾಡೋಣ. ಅಭಿವೃದ್ಧಿ ಕಾರ್ಯಗಳಿಗೆ ಎಷ್ಟು ವೆಚ್ಚವಾಗುತ್ತದೋ ಅದನ್ನು ಕೊಡಬೇಕು, ಅದನ್ನು ಕಡಿಮೆ ಮಾಡಿದರೆ ಆಗುವುದಿಲ್ಲ. ಅವರಿಗೇ ಬೇರೆ, ಇವರಿಗೇ ಬೇರೆ ಮಾಡಿದರೆ ಸರಿಹೋಗುವುದಿಲ್ಲ. ಯಾರು ಮೂಲ ಜಮೀನುದಾರರು ಇರುತ್ತಾರೆ, ಅವರಲ್ಲಿ ದಾಖಲೆ ಇತ್ತು ಎಂದರೆ, ಜಮೀನುದಾರರಿಗೆ ಬಿ.ಡಿ.ಎ. ಅವಾರ್ಡ್ ಮಾಡಿದ್ದರೆ ಇನಿಷಿಯೇಟ್ ಮಾಡಿ ಆ ಹಣವನ್ನು ವಾಪಸ್ ಕೊಡಿಸುವ ಹಾಗೆ ಇತ್ತು ಎಂದರೆ ಬೇರೆಯವರಿಗೆ ಏನು ಬೆಲೆಗೆ ಸಿಗುತ್ತದೋ ಅಷ್ಟೇ ಬೆಲೆ ಕೊಡುವಂತೆ ಮಾಡಬೇಕು. ಇಷ್ಟು ವಿಷಯವನ್ನು ಈ ಒಂದು ನೀತಿ ಬಗ್ಗೆ ಹೇಳಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಸಬ್ ಕಮಿಟಿ ವಿಚಾರ ಹೇಳಿದಿರಿ, ಸೈಟುಗಳನ್ನು ಅವರಿಗೇ ಕೊಡಬೇಕು ಎಂಬ ವಿನ್ಯಾತತ್ವ ಇದೆಯೋ ಅದರಂತೆ ಮಾಡಿ.

ಶ್ರೀ ಎಂ. ಚಂದ್ರಶೇಖರ್.—ಅದರ ಬಗ್ಗೆ ಸರ್ಕಾರ ಇನ್ನೂ ತೀರ್ಮಾನ ತೆಗೆದುಕೊಂಡಿಲ್ಲ. ಅನಧಿಕೃತವಾಗಿ ಕಟ್ಟಡಗಳು ಆಗಿರುವುದರ ಬಗ್ಗೆ ಮಾತ್ರ ಅಷ್ಟೆ.

ಶ್ರೀ ಎಂ. ಎಸ್. ಕೃಷ್ಣನ್.—ಅದರ ಬಗ್ಗೆ ಸ್ಪಷ್ಟವಾಗಿ ಹೇಳಿ ?

ಶ್ರೀ ಎಂ. ಚಂದ್ರಶೇಖರ್.—ಆ ಬಗ್ಗೆ ಇನ್ನೂ ಕ್ರಮ ತೆಗೆದುಕೊಂಡಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಈಗ ಏನು ಮಾಡುತ್ತೀರಿ ಎನ್ನುವುದನ್ನು ಹೇಳಿ ? ಏಕೆಂದರೆ ಡಿಮ್ಯಾಂಡ್‌ನಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಕೊಡಬೇಕಲ್ಲವೇ ? ತಾವು ಇದರ ಬಗ್ಗೆ ಹೇಳಬೇಕು.

ಶ್ರೀ ಎಂ. ಚಂದ್ರಶೇಖರ್.—ಸಮಸ್ಯೆ ಏನು ಎನ್ನುವುದನ್ನು ಸರ್ಕಾರದ ಗಮನಕ್ಕೆ ತಂದರೆ ನೋಡಿಕೊಂಡು ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ.ಎಸ್. ಕೃಷ್ಣನ್.—ತಾವು ಸ್ಪಷ್ಟವಾಗಿ ಈಗಲೇ ಹೇಳಬೇಕು. ಇದು ಸಣ್ಣ ಪ್ರಶ್ನೆ ಯಲ್ಲ. ಸಾವಿರಾರು ಜನಗಳ ಪ್ರಶ್ನೆ ಅದಕ್ಕೆ ತಾವು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಎಂ. ಚಂದ್ರಶೇಖರ್.—೩೪ ಸಾವಿರ ಜನ ೧೯೭೨ರಲ್ಲಿ ದುಡ್ಡು ಕಟ್ಟಿ ಕಾಯುತ್ತಾ ಇದ್ದಾರೆ. ಅವರಿಗೆ ನಿವೇಸನಗಳನ್ನು ಕೊಡಬೇಕು, ಬದಲಿ ನಿವೇಶನ ಕೊಡುವುದು ಬೇರೆ ಇದೆ, ಬದಲಿ ನಿವೇಶ ನಗಳನ್ನು ಕೊಡಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಅವರೆಲ್ಲಾ ಇದರೊಳಗೆ ಬರುತ್ತಾರೆ. ಅವರಿಗೆ ತಾವು ಅನುಕಂಪ ತೋರಿಸಬೇಕಾಗುತ್ತದೆ.

ಶ್ರೀ ಎಂ. ಚಂದ್ರಶೇಖರ್.—ಪ್ರಾಧಿಕಾರದವರು, ನಾವು ಈ ಸಮಸ್ಯೆ ಏನಿದೆ ಎಂದು ತಿಳಿದು ಕೊಂಡು ತೀರ್ಮಾನ ತೆಗೆದುಕೊಳ್ಳುತ್ತೇವೆ.

ಇದರ ಜೊತೆಗೆ ಪ್ರಾಧಿಕಾರದ ೧೩ ಗೃಹನಿರ್ಮಾಣ ಯೋಜನೆಗಳೂ ಕೂಡ ಕಾರ್ಯಗತವಾಗುತ್ತಿವೆ. ೪೦೦೦ ಮನೆಗಳು ಪ್ರಾಧಿಕಾರದ ವತಿಯಿಂದ ನಿರ್ಮಾಣವಾಗಿ ಹಂಚಿಕೆಯಾಗುತ್ತಿವೆ. ಇದರ ಜೊತೆಗೆ ಸೆಲ್ಫ್‌ಫೈನಾನ್ಸಿಂಗ್ ಸ್ಕೀಂ ಇದೆ. ಈ ಮೂರು ಯೋಜನೆಗಳ ಪೈಕಿ ಎರಡು ಯೋಜನೆಗಳು ನಂದಿನಿ ಯಲ್ಲಿ, ಒಂದು ಯೋಜನೆ ಬಿಟಿಎಂ.ನಲ್ಲಿ ಕಾರ್ಯಗತವಾಗಿ ಮೊದಲನೆಯ ಅಂತಸ್ತಿನ ಮೇಲ್ಛಾವಣಿ ಮಟ್ಟಕ್ಕೆ ಅನೇಕ ಕಟ್ಟಡಗಳು ಬಂದಿವೆ. ಈ ಕಾಮಗಾರಿಗಳೂ ಕೂಡ ಕಾರ್ಯಕ್ರಮಕ್ಕೆ ತಕ್ಕಂತೆ ನಡೆಯುತ್ತಾ ಇದೆ. ಈ ರೀತಿಯಾಗಿ ಪ್ರಾಧಿಕಾರ ಹಿಂದಿನ ವರ್ಷ ಇದ್ದಂಥ ಸಮಸ್ಯೆಗಳನ್ನು ಬಿಡಿಸಿ ಕೊಂಡು ತನ್ನ ಕೆಲವಾರು ಕಾರ್ಯಕ್ರಮಗಳ ಕಾರ್ಯವನ್ನು ಮಾಡುತ್ತಿದೆ. ನಿವೇಶನಗಳ ಹಂಚಿಕೆ ಯಲ್ಲೂ ಮತ್ತು ಮನೆಗಳನ್ನು ಹಂಚುವಿಕೆಯಲ್ಲೂ ಕಾರ್ಯವನ್ನು ಮಾಡುತ್ತಿದೆ. ಈ ಕಾರ್ಯಕ್ರಮ ಗಳಿಗೆ ಅನುಸಾರವಾಗಿ ೧೩೭೦ ನಿವೇಶನಗಳನ್ನು ಹಂಚುವುದರಲ್ಲಿ ಅನೇಕ ವರ್ಷಗಳಿಂದ ಯಾರು ಪ್ರಯತ್ನ ಮಾಡಿದ್ದಾರೆ ಅವರಿಗೆ ಆದ್ಯತೆ ಕೊಟ್ಟು ನಿವೇಶನಗಳನ್ನು ಹಂಚಿರುವುದನ್ನು ತಾವುಗಳು ನೋಡಿದ್ದೀರಿ.

ಶ್ರೀ ವೈ. ರಾಮಕೃಷ್ಣ.—ರಿಸರ್ವೇಷನ್ ಫಾಲೋ ಮಾಡಿದ್ದೀರಾ ?

ಶ್ರೀ ಎಂ. ಚಂದ್ರಶೇಖರ್.—ಅದು ಪೇಪರಿನಲ್ಲಿ ಬಂದಿದೆ, ಯಾರೂ ಬೆರಳು ತೋರಿಸುವ ರೀತಿ ಯಲ್ಲಿ ಮಾಡಿಲ್ಲ, ಆ ರೀತಿ ಮಾಡಿದ್ದೇವೆ. ಇದಕ್ಕೆ ಜನಸಾಮಾನ್ಯರೂ ಒಪ್ಪಿಗೆ ಸೂಚಿಸಿದ್ದಾರೆ ತಾವೂ ಕೂಡ ಸೂಚಿಸಿದ್ದೀರಿ. ಮತ್ತೆ ೯೦೦೦, ೧೦,೦೦೦ ಬದಲಿ ನಿವೇಶನಗಳನ್ನು ಕೊಡತಕ್ಕ ಸಮಸ್ಯೆ ಇದೆ. ನಿವೇಶನಗಳನ್ನು ಕೊಟ್ಟಿರುತ್ತಾರೆ, ಅಲ್ಲಿ ಬೆಟ್ಟ ಇರುತ್ತದೆ, ಹಳ್ಳ ಇರುತ್ತದೆ, ಅಥವಾ ಸೈಟೇ ಇರುವುದಿಲ್ಲ, ಒಂದು ಸೈಟನ್ನು ಮೂರು ಜನರಿಗೆ ಕೊಟ್ಟಿರುತ್ತಾರೆ. ಇಂಥಾದ್ದು ಒಂಬತ್ತು, ಹತ್ತು ಸಾವಿರ ಇದೆ. ಅದಕ್ಕೆ ಪ್ರಾಧಿಕಾರ ಯಾವುದೇ ಬಡಾವಣೆ ಮಾಡುವಾಗ ಶೇಕಡ ೧೦ ರಷ್ಟನ್ನು ಕಾದಿರಿಸಿ ಯಾರಿಗೆ ತೊಂದರೆಯಾಗಿದೆ ಅವರಿಗೆ ಕೊಡಬೇಕು ಎಂದು ಹೇಳಿ ನಿವೇಶನಗಳ ಹಂಚಿಕೆ ಬಗ್ಗೆ ಕೂಡ ಕಾರ್ಯಕ್ರಮ ತೆಗೆದುಕೊಂಡಿದೆ.

ಶ್ರೀ ವಿ.ಎಸ್. ಆಚಾರ್ಯ.—ಮುಂಚೆ ಎಷ್ಟು ದುಡ್ಡು ಕೊಟ್ಟಿದ್ದರು, ಅಷ್ಟೇ ದುಡ್ಡಿಗೆ ಸೈಟನ್ನು ಕೊಡಬೇಕು.

ಆ ಮಟ್ಟಕ್ಕೆ ಎಲ್ಲಾ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳುತ್ತೇನೆ. ರಾಜ್ಯದಲ್ಲಿರತಕ್ಕಂತಹ ಅನೇಕ ನಗರ ಪಾಲಿಕೆಗಳು ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಮುಂದಿನ ವರ್ಷ ಏನೇನು ಮಾಡಬೇಕೆಂದಿದ್ದೇವೆಂಬುದನ್ನು ನಮ್ಮ ವಾರ್ಷಿಕ ವರದಿಯಲ್ಲೇ ಹೇಳಿದ್ದೇವೆ. ಅದರ ಬಗ್ಗೆ ಕಾಲ ಇಲ್ಲದೇ ಇರುವುದರಿಂದ ಪ್ರಸ್ತಾಪ ಮಾಡುವುದಕ್ಕಾಗುವುದಿಲ್ಲ. ಎಲ್ಲಾ ಪ್ರದೇಶಗಳಿಗೂ ಆದ್ಯತೆಯ ಮೇರೆಗೆ ಅದನ್ನು ಗಮನಿಸಿಯೇ ಮಾಡುತ್ತಿದ್ದೇವೆ. ಆರ್ಥಿಕವಾಗಿ ಹಿಂದುಳಿದ ಮತ್ತು ಹರಿಜನ–ಗಿರಿ ಜನರಿಗೆ ನಿವೇಶನವನ್ನು ಕೊಡುವುದರಲ್ಲಿಯೇ ಆಗಲಿ, ಅಥವಾ ಅವರಿಗೆ ಇತರೇ ಸೌಲಭ್ಯಗಳನ್ನು ಕೊಡುವು ದರಲ್ಲಿಯೇ ಆಗಲಿ, ನಗರ ಪಾಲಿಕೆಗಳೂ ಕೂಡ ಕೆಲಸ ಮಾಡುತ್ತಿವೆ ಎಂದು ಹೇಳುತ್ತಾ, ಮಾನ್ಯ ಸದಸ್ಯರು ವ್ಯಕ್ತಪಡಿಸುವ ಕೆಲವು ವಿಚಾರಗಳ ಬಗ್ಗೆ ಉತ್ತರವನ್ನು ಕೊಡುವುದಕ್ಕೆ ಪ್ರಯತ್ನ ಮಾಡಿ ದ್ದೇವೆ. ಆದರೆ ಕಾಲಾವಕಾಶ ಇಲ್ಲದೇ ಇರುವುದರಿಂದ, ಕೆಲವು ಮಾನ್ಯ ಸದಸ್ಯರು ಸೂಚಿಸಿರುವಂತಹ ವಿಚಾರಗಳ ಬಗ್ಗೆ ಉತ್ತರವನ್ನು ಕೊಡುವುದಕ್ಕೆ ಸಾಧ್ಯವಾಗದೇ ಇರಬಹುದು. ಅವರಿಗೆ ಪ್ರತ್ಯೇಕವಾಗಿ

ಬರೆದು ತಿಳಿಸುತ್ತೇನೆ. ನನ್ನ ಇಲಾಖೆಯ ಬೇಡಿಕೆಗಳಿಗೆ ತಮ್ಮ ಸರ್ವಾನುಮತದ ಒಪ್ಪಿಗೆಯನ್ನು ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸದಸ್ಯರನ್ನು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಚಂದ್ರಪ್ರಭಾ ಅರಸ್ (ರೇಷ್ಮೆ ಹಾಗೂ ಸಮಾಜ ಕಲ್ಯಾಣ ಸಚಿವೆಯರು).—ಸನ್ಮಾನ್ಯ ಉಪಾಧ್ಯಕ್ಷರೆ ನಮ್ಮ ರೇಷ್ಮೆ ಇಲಾಖೆ ಈ ಕರ್ನಾಟಕ ರಾಜ್ಯದಲ್ಲಿ ಕನ್ನಡ ನಾಡಿನಲ್ಲಿ ಬಹಳ ಪ್ರಸಿದ್ಧಿಯಾದ ಒಂದು ಸ್ಥಾನವನ್ನು ಚಾರಿತ್ರಿಕವಾಗಿ ಇತಿಹಾಸದಲ್ಲಿಯೂ ಪಡೆದುಕೊಂಡಿದೆ. ಇನ್ನಿತರ ಪ್ರಖ್ಯಾತವಾದ ಸಂಪತ್ತು ಎಂದರೆ ಶ್ರೀಗಂಧ ಮತ್ತು ಚಿನ್ನದ ನಾಡು ಎಂದು ಹೇಗೆ ಕರೆಯುತ್ತಾರೋ ಹಾಗೆ ರೇಷ್ಮೆ ಕೂಡ ಅತ್ಯಂತ ಪ್ರಾಚೀನವಾದ ಹಾಗೂ ಸಂಪದ್ಭರಿತವಾದ ಕೃಷಿಯಾಗಿದೆ, ಹಾಗೂ ಉದ್ದಿಮೆಯೂ ಕೂಡ ಆಗಿದೆ. ಇದರ ವಿಶೇಷ ಏನೆಂದರೆ, ಇನ್ನಿತರ ಕೃಷಿಗಿಂತ ಭಿನ್ನತೆ ಇದರಲ್ಲಿದೆ. ಈಗ ರೈತರು ತಾವು ಬೆಳೆದ ಬೆಳೆಯಿಂದ ಬರೀ ಆಹಾರ ಸಾಮಗ್ರಿಗಳನ್ನು ಉಪಯೋಗಿಸುವ ರೀತಿಯಲ್ಲಿ ಉಪಯೋಗಿಸದೆ ಇದರ ಮೂಲಕ ಉದ್ದಿಮೆಯ ಕಸಬನ್ನೂ ಮಾಡತಕ್ಕಂತಹ ಇದು ಒಂದು ಮೂಲ ಸಂಪನ್ಮೂಲವನ್ನು ಕೊಡತಕ್ಕಂತಹ ಕೃಷಿಯೂ ಹೌದು. ನಮ್ಮ ರಾಜ್ಯದಲ್ಲಿ ಇಡೀ ರಾಷ್ಟ್ರದ ಶೇಕಡ ೭೦ ರಷ್ಟು ರೇಷ್ಮೆಯನ್ನು ನಮ್ಮ ರಾಜ್ಯದಲ್ಲಿ ಉತ್ಪಾದನೆ ಮಾಡುತ್ತಿದ್ದೇವೆ. ಹಳೇ ಮೈಸೂರು ಸಂಸ್ಥಾನದಲ್ಲಿ ಕೆಲವೊಂದು ಭಾಗಗಳಲ್ಲಿ ಉದಾಹರಣೆಗೆ ಮಂಡ್ಯ, ಮೈಸೂರು, ಬೆಂಗಳೂರು, ತುಮಕೂರು ಹಾಗೂ ಕೋಲಾರ ಈ ಜಿಲ್ಲೆಗಳಲ್ಲಿ ಇದರ ಬೆಳೆಯನ್ನು ಸಾಂಪ್ರದಾಯಿಕವಾಗಿ ಮುಖ್ಯವಾಗಿ ಬೆಳೆಯುತ್ತಿದ್ದಾರೆ. ಇದರಲ್ಲಿ ಹೆಚ್ಚಾಗಿ ಮಳೆ ಆಧಾರಿತ ಪ್ರದೇಶಗಳಲ್ಲೂ ಮಳೆಯನ್ನೇ ಅವಲಂಭಿಸಬೇಕಾದ ಪರಿಸ್ಥಿತಿಯಲ್ಲೂ ಈ ಬೆಳೆಯನ್ನು ಬೆಳೆಯುತ್ತಿದ್ದಾರೆ. ಶೇಕಡ ೮೦ರಷ್ಟು ಭಾಗ ಈ ರಾಜ್ಯದಲ್ಲಿ ಇನ್ನೂ ಕೂಡ ಮಳೆಯನ್ನೇ ಅವಲಂಬಿಸಿದ್ದಾರೆ. ಅವರ ಈ ಒಂದು ಸ್ಥಿತಿ ಸುಧಾರಣೆಯಾದರೆ ಇನ್ನೂ ಹೆಚ್ಚು ಬೆಳೆಯನ್ನು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಶೇಕಡ ೭೦ ಭಾಗದ ರೈತರಿಗೆ ಈ ಒಂದು ಸೌಲಭ್ಯವನ್ನು ಇನ್ನೂ ಪ್ರಾರಂಭ ಮಾಡಿಲ್ಲ. ಹಳೇ ಮೈಸೂರು ಪ್ರದೇಶದಲ್ಲೇ ಇದನ್ನು ಹೆಚ್ಚಾಗಿ ಬೆಳೆಯುತ್ತಿದ್ದರು. ಇತ್ತೀಚೆಗೆ ಕೆಲವು ವರ್ಷಗಳಿಂದ ರಾಜ್ಯದ ಇನ್ನಿತರ ವಿವಿಧ ಜಿಲ್ಲೆಗಳಿಗೂ ಇದು ಪ್ರಸರಿಸುತ್ತಿದೆ. ಇದರಿಂದ ರೈತರಿಗೆ ಇರತಕ್ಕಂತಹ ತೊಂದರೆಯನ್ನು ನಿವಾರಿಸುವ ಉದ್ದೇಶದ ಜೊತೆಗೆ, ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಲಿಕ್ಕಾಗಿ ಈ ಒಂದು ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ. ಇದಕ್ಕಾಗಿ ವಿಶ್ವಬ್ಯಾಂಕಿನ ನೆರವನ್ನೂ ಕೂಡ ಕರ್ನಾಟಕ ರಾಜ್ಯ ತೆಗೆದುಕೊಂಡಿದೆ. ಈ ನೆರವು ೧೯೮೦-೮೧ನೇ ಇಸವಿಯಿಂದ ನಮಗೆ ಲಭ್ಯವಾಗಿದೆ. ೮೦ ಕೋಟಿ ರೂಪಾಯಿಗಳನ್ನು ಇದಕ್ಕಾಗಿ ವಿಶ್ವ ಬ್ಯಾಂಕಿನವರು ಮಂಜೂರು ಮಾಡಿದ್ದಾರೆ. ಒಟ್ಟು ಇದರ ಬೆಳೆಯ ವ್ಯಾಪ್ತಿ ೩೦೪ ಲಕ್ಷ ಎಕರೆಗಳು. ೧೯೮೨-೮೩ ರಲ್ಲಿ ಸುಮಾರು ೩೦೫೦ ಟನ್ ರೇಷ್ಮೆ ಗೂಡು ನಮ್ಮ ರಾಜ್ಯದಲ್ಲಿ ತಯಾರಾಗಿದೆ. ಈ ೧೯೮೨-೮೩ನೇ ಸಾಲಿನಲ್ಲಿ ೨೦.೬೯ ಕೋಟಿ ರೂಪಾಯಿಗಳ ವಿದೇಶಿ ವಿನಿಮಯವನ್ನು ಗಳಿಸಿದೆ. ೧೯೮೨-೮೩ರಲ್ಲಿ ಈ ಇಲಾಖೆಗೆ ಇಟ್ಟಂತಹ ಒಟ್ಟು ಅಂದಾಜು ವೆಚ್ಚಕ್ಕಿಂತ ಹೆಚ್ಚಾಗಿ ೧೯೮೪-೮೫ನೇ ಸಾಲಿಗೆ ೧೬.೫೨ ಕೋಟಿ ರೂಪಾಯಿಗಳನ್ನು ಇರಿಸಿಕೊಂಡಿದ್ದೇವೆ. ಮತ್ತು ಇನ್ನೂ ಹೆಚ್ಚಿನದಾಗಿ ಎರಡು ಕೋಟಿ ರೂಪಾಯಿಗಳನ್ನು ಪಡೆದಿದ್ದೇವೆ. ಹಳೇ ಮೈಸೂರು ರೇಷ್ಮೆ ಗೂಡುಗಳನ್ನು ಅಥವಾ ಅದರ ಸೊಪ್ಪಿನ ಬೆಳೆಯ ಇನ್ನೂ ಕೆಲವು ಭಾಗಗಳಾದ ಚಾಮರಾಜನಗರ, ಮಳವಳ್ಳಿ, ಇನ್ನಿತರ ಕಡೆಗಳಲ್ಲಿ ಅನೇಕ ವರ್ಷಗಳಿಂದ ಬದಲಾವಣೆ ಮಾಡುವುದಕ್ಕಾಗಿಲ್ಲ. ಇದರ ಉತ್ಪತ್ತಿ ಕೂಡ ಕಡಿಮೆ. ಸೊಪ್ಪಿನ ಗುಣಮಟ್ಟ ಕೂಡ ಕಡಿಮೆ. ನೀರಾವರಿ ಸೌಲಭ್ಯ ಇಲ್ಲದೇ ಇರುವುದರಿಂದ ಈ ರೀತಿಯಾಗುತ್ತಿದೆ. ಅದಕ್ಕಾಗಿ ಈಗ ಸುಧಾರಿಸಿದ ತಳಿಗಳನ್ನು ಹಳೇ ಮೈಸೂರು ತಳಿಗೆ ಬದಲಾಗಿ ಕೊಡಬೇಕೆಂಬ ಉದ್ದೇಶ ಇದೆ. ಜಪಾನ್ ದೇಶದಿಂದ ತಂದಿರತಕ್ಕಂತಹ ಬಿಳಿಗೂಡು ಅಥವಾ ಬೈವೋಲ್ಟಿನ್ ರೇಷ್ಮೆ ಗುಣಮಟ್ಟದಲ್ಲೂ ಒಳ್ಳೆಯದು. ನೂಲಿನ ಗುಣಮಟ್ಟದಲ್ಲೂ ಬಹಳ ಉತ್ತಮವಾದ ತಳಿ. ಅದನ್ನು ಅಳವಡಿಸಿಕೊಂಡು ಬೈವೋಲ್ಟಿನ್ ಅಥವಾ ಮಿಶ್ರ ತಳಿಯನ್ನು ನಾವು ಪ್ರಾರಂಭ ಮಾಡಿದ್ದೇವೆ. ಆದರೆ ಮುಖ್ಯವಾಗಿ ಇದಕ್ಕೆ ಇರತಕ್ಕಂತಹ ಕೊರತೆ ಏನೆಂದರೆ ಅದಕ್ಕೆಬೇಕಾದ ಪರಿಸರಒಳ್ಳೆಯ ಹವಮಾನ ಶುಚಿಯಾಗಿಡುವಂತಹದ್ದು ಮತ್ತೆ ಉತ್ತಮವಾದ ಸೊಪ್ಪು. ಇದಕ್ಕೆ ಮನೆಯಲ್ಲಿರುವ ಎಂದರೆ ಒಂದು ಕುಟುಂಬದಲ್ಲಿರುವ ಎಲ್ಲರೂ ಕೆಲಸ ಮಾಡಬಹುದು ಇದಕ್ಕೆ ಯಾವ ವಯೋಮಿತಿಯೂ ಇಲ್ಲ. ಇದು ಹೆಣ್ಣು ಮಕ್ಕಳು, ಗಂಡಸರು, ವೃದ್ಧರು ಹಾಗೂ ಮಕ್ಕಳು ಮಾಡತಕ್ಕಂತಹ ಒಳ್ಳೆಯ ಉದ್ಯಮ. ಇದಕ್ಕೆ ಯಾವುದೇ ವಿಶೇಷವಾದ ತರಬೇತಿಯ ಅರ್ಹತೆ ಬೇಕಾಗಿಲ್ಲ. ಕೆಲವು ತಾಂತ್ರಿಕ ತರಬೇತಿ ಎಂದರೆ ಅದರ ಬಗ್ಗೆ ಹೆಚ್ಚಿನ ತಿಳುವಳಿಕೆ ಕೊಟ್ಟರೆ ಕೆಲವಾರು

ತಿಂಗಳಲ್ಲೇ ಅದನ್ನು ಅಳವಡಿಸಿಕೊಂಡು ಕೆಲಸ ಮಾಡುವಂತಹ ಒಂದು ಉದ್ಯಮ. ಹಾಗೇ ಹೊಸ ಭಾಗಗಳಾದ ಗುಲ್ಬರ್ಗ, ರಾಯಚೂರು, ಬೀದರ್ ಮತ್ತು ಚಿತ್ರದುರ್ಗ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಿಗೂ ಕೂಡ ನಾನು ಹೋಗಿ ನೋಡಿದ್ದೇನೆ. ಅಲ್ಲಿ ಒಂದು ವಿಶೇಷವೇನೆಂದರೆ, ಈ ಒಂದು ತಾಂತ್ರಿಕ ಸಲಹೆಗಳನ್ನು ಮತ್ತು ಸೌಲಭ್ಯವನ್ನು ಹೊಸ ಸಲಕರಣೆಗಳನ್ನು ಅಳವಡಿಸುವುದಕ್ಕೆ ತೀವ್ರವಾದ ಆಸಕ್ತಿಯನ್ನು ತೋರಿಸುತ್ತಿರುವ ಪ್ರಕಾರ ಸ್ವಲ್ಪ ಉತ್ತಮವಾದ ಬೆಳೆಯನ್ನು ಬೆಳೆಯುವುದಕ್ಕೆ ಸಾಧ್ಯವಾಗಿದೆ. ನೀರಾವರಿ ಇರುವಂತಹ ರೈತರು ಒಂದು ವರ್ಷಕ್ಕೆ ಕನಿಷ್ಟ ೫-೬ ಬೆಳೆಯನ್ನು ಉತ್ತಮವಾಗಿ ತೆಗೆಯಬಹುದು. ನೀರಾವರಿ ಇಲ್ಲದೇ ಇರುವಂತಹ ಪ್ರದೇಶಗಳಲ್ಲಿ ಸ್ವಲ್ಪ ತೊಂದರೆಯಾಗಿದೆ. ಜಪಾನಿನ ದೇಶದ ಹವಾಮಾನಕ್ಕೂ ನಮ್ಮ ರಾಜ್ಯದ ಹವಾಮಾನಕ್ಕೂ ಸ್ವಲ್ಪ ಹೊಂದಾಣಿಕೆಯಾಗದಿರುವುದರಿಂದ ಬೈವೋಲ್ಟಿನ್ ಬೆಳೆಯ ರೇಷ್ಮೆ ಗೂಡನ್ನು ಒಂದು ಸಾವಿರ ಟನ್ ಉತ್ಪಾದನೆಯನ್ನು ಮಾಡಬೇಕೆಂಬ ಗುರಿಯನ್ನು ಇಟ್ಟು ಕೊಂಡಿದ್ದರೂ ಅದು ಸ್ವಲ್ಪ ಕುಂಠಿತವಾಗಿದೆ. ಆದ್ದರಿಂದ ಸುಮಾರು ೧೫೦ ಟನ್ ಮಾತ್ರ ಉತ್ಪಾದನೆಯಾಗಿದೆ. ಇದಕ್ಕಿರುವ ಅನೇಕ ತೊಂದರೆಗಳನ್ನು ಈಗಾಗಲೇ ನಾನು ತಮ್ಮ ಗಮನಕ್ಕೆ ತಂದಿದ್ದೇನೆ. ಇದನ್ನೂ ಕೂಡ ಉತ್ತಮಪಡಿಸಬೇಕು ಎನ್ನುವ ದೃಷ್ಟಿಯಿಂದ ಇದಕ್ಕಾಗಿ ಬಿತ್ತನೆ ಬೀಜಗಳು ಹಾಗೂ ಬಿತ್ತನೆ ಬೀಜಗಳನ್ನು ತಯಾರು ಮಾಡತಕ್ಕ ಕ್ರಮಗಳನ್ನೂ ಸುಧಾರಣೆ ಮಾಡಿ ಆ ಮೂಲಕವಾಗಿ ಬಿತ್ತನೆ ಬೀಜಗಳನ್ನು ರೈತರಿಗೆ ಕೊಡತಕ್ಕಂತಹದ್ದು. ಉತ್ತಮವಾದ ಬೀಜವನ್ನು ಅವರಿಗೆ ಕೊಡುವುದಕ್ಕೆ ಸಹಕಾರವನ್ನು ಕೊಡತಕ್ಕಂತಹದ್ದರಲ್ಲಿ ದುರಾದೃಷ್ಟವಶಾತ್ ಈಗಿರತಕ್ಕ ಒಪ್ಪಂದದ ಪ್ರಕಾರ ಏನಾಗಿದೆ ಎಂದರೆ ಇನ್ನಿತರೆ ಬೆಳೆಗಳನ್ನು ಹೆಚ್ಚಿನ ಭೂಮಿಯಲ್ಲಿ ಇಟ್ಟುಕೊಂಡಿರಬಾರದು.

ಉದಾಹರಣೆಗೆ, ಅವರಿಗೆ ೪ ಎಕರೆ ನೀರಾವರಿ ಜಮೀನು ಇದ್ದು ಅದರಲ್ಲಿ ಒಂದು ಎಕರೆ ಜಮೀನನ್ನು ರೇಷ್ಮೆ ಬೆಳೆ ಬೆಳೆಯುವುದಕ್ಕೆ ತೆಗೆದುಕೊಂಡರೆ ಉತ್ತಮವಾಗಿ ಕೆಲಸ ಮಾಡಬಹುದು. ಆದರೆ ಸಾಲ ಸೋಲಗಳಿಂದ ಸಣ್ಣ ಹಿಡುವಳಿದಾರರು ಕೆಳಗೆ ಬರುವುದರಿಂದ ಈ ಒಂದು ಸೌಲಭ್ಯ ಸಿಕ್ಕುತ್ತಿಲ್ಲ. ನಾನೂ ಕೂಡ ವಿಶ್ವಬ್ಯಾಂಕಿನ ಸಂಬಂಧಪಟ್ಟ ಅಧಿಕಾರಿಗಳು ಬಂದಾಗ ಹೇಳಿದೆ. ರೇಷ್ಮೆ ಬೆಳೆಯಲ್ಲಿ ಸಣ್ಣ ರೈತ ಇದ್ದಾನೆ ಎನ್ನುವುದನ್ನು ಪರಿಗಣಿಸಬೇಕು. ಒಂದು ಕುಟುಂಬದಲ್ಲಿ ದೊಡ್ಡ ರೈತನಾದರೆ ೩-೪ ಎಕರೆಗಳನ್ನು ತೆಗೆದುಕೊಂಡು ಮಾಡಬೇಕಾದರೂ ಕೂಡ ಅವನು ಇನ್ನಿತರ ವ್ಯಕ್ತಿಗಳ ಮೇಲೆ ಅವಲಂಭಿಸಬೇಕಾಗುತ್ತದೆ. ಅದನ್ನು ಕುಟುಂಬದವರೇ ಮಾಡಬೇಕೆಂಬ ಕಾರ್ಯಕ್ರಮವನ್ನು ಇಟ್ಟುಕೊಂಡಾಗ ಹೆಚ್ಚಿಗೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅರ್ಧ ಅಥವಾ ಒಂದೆರಡು ಎಕರೆಗಳನ್ನು ಮಾಡಿದರೆ ಮಾತ್ರ ಕೂಲಿ ಕೊಡದ ಹಾಗೆ ಕುಟುಂಬದ ಸದಸ್ಯರೇ ಕೆಲಸಗಳನ್ನು ಮಾಡಿಕೊಂಡು ಆರ್ಥಿಕ ಮಟ್ಟವನ್ನು ಹೆಚ್ಚು ಮಾಡಿಕೊಳ್ಳಬಹುದು. ಬೇರೆ ಕೃಷಿಗಳ ಜೊತೆಗೆ ಇದು ಒಂದು ಸಹಾಯಕ ಕಸುಬಾಗಿ ತೆಗೆದುಕೊಂಡಾಗ ಮಾತ್ರ ಇದರ ಲಾಭ ಕಾಣಿಸುತ್ತದೆ. ಈಗಿರತಕ್ಕ ನಮ್ಮ ಕಾರ್ಯಕ್ರಮಗಳಲ್ಲಿ ಹರಿಜನ ಗಿರಿಜನ ರೈತರಿಗೆ ರೇಷ್ಮೆ ಗೂಡುಗಳನ್ನು ಮತ್ತು ಉಪಕರಣಗಳನ್ನು ಮುಫತ್ತಾಗಿ ಸರಬರಾಜು ಮಾಡತಕ್ಕ ಯೋಜನೆ ಈ ಇಲಾಖೆಯಲ್ಲಿ ಇದೆ. ಕರ್ನಾಟಕ ರಾಜ್ಯದ ರೇಷ್ಮೆ ಕೈಗಾರಿಕಾ ನಿಗಮದ ಮುಖಾಂತರ ಇದಕ್ಕೆ ಬೇಕಾದ ಕೈಗಾರಿಕಾ ಘಟಕಗಳನ್ನು ಮಾಡಿಸುತ್ತಿದ್ದೇವೆ. ಇಂಥ ಒಂದು ಕೈಗಾರಿಕಾ ಘಟಕಗಳು ಹಳೇ ಮೈಸೂರು ಪ್ರದೇಶದಲ್ಲಿ ಏನೊಂದು ಫಾಸಲೆಯಲ್ಲಿ ಬರುತ್ತವೆ ಎಂದರೆ ಚನ್ನಪಟ್ಟಣ, ಮೈಸೂರು ಇನ್ನಿತರ ಕಡೆಗಳಲ್ಲಿ ಮಂಡಳಿಯವರು ನೋಡಿಕೊಳ್ಳುತ್ತಿದ್ದಾರೆ. ನಮ್ಮ ಇಲಾಖೆ ಚಾಮರಾಜನಗರ, ಕೊಳ್ಳೇಗಾಲ ಮತ್ತಿತರ ಪ್ರದೇಶದ ಕೈಗಾರಿಕೆಗಳನ್ನು ನೋಡಿಕೊಳ್ಳುತ್ತದೆ. ಇದಕ್ಕಾಗಿ ಕೆ.ಎಸ್.ಐ.ಸಿ. ಮುಖಾಂತರ ನಾವು ಕೆಲವು ಹೊಸ ಕೈಗಾರಿಕೆಗಳನ್ನು ಕೈಗೆತ್ತಿಕೊಂಡಿದ್ದೇವೆ. ಇದರಲ್ಲಿ ಒಂದು ಮುಖ್ಯವಾಗಿ ಚಿತ್ರದುರ್ಗ ಜಿಲ್ಲೆಯ ತೋಳಹುಣಸಿ ಎಂಬ ಗ್ರಾಮದಲ್ಲಿ ಬರುತ್ತದೆ. ಅಲ್ಲಿ ತರಬೇತಿ ಕೇಂದ್ರ ಮತ್ತು ಹಾಸ್ಟೆಲ್ ಕೆಲಸಪೂರ್ಣಗೊಂಡಿದೆ. ಕೆಲವಾರು ದಿನಗಳಲ್ಲಿ ಫಿಲೇಚರ್ ಭಾಗ ಪೂರ್ಣಗೊಳ್ಳುತ್ತದೆ. ಇದಕ್ಕಾಗಿ ಜಪಾನ್ ಮತ್ತು ಕೊರಿಯಾ ದೇಶದಿಂದ ಕೆಲವು ಯಂತ್ರೋಪಕರಣಗಳನ್ನು ಆಮದು ಮಾಡಿಕೊಂಡಿದ್ದೇವೆ. ಮೊನ್ನೆ ತಾನೇ ರಾಷ್ಟ್ರಾಧ್ಯಕ್ಷರು, ಮೈಸೂರಿನಲ್ಲಿ ಹೊಸ ಯಂತ್ರೋಪಕರಣಗಳನ್ನು ಏನು ಹಾಕಿದ್ದೇವೆ ಅದರ ಉದ್ಘಾಟನೆ ಮಾಡಿದ್ದಾರೆ. ಕಾರ್ಖಾನೆಯಲ್ಲಿದ್ದಂತಹ ಯಂತ್ರೋಪಕರಣಗಳು ಬಹಳ ಹಳೆಯವು ಅಂದರೆ ೧೯೩೦-೪೦ನೇ ಇಸವಿಯವು ಇವೆ. ಅಲ್ಲಿನ ಕೈಗಾರಿಕಾ ಕಾರ್ಮಿಕರು ೫೦ನೇ ವರ್ಷದ ಹಬ್ಬವನ್ನು ಆಚರಿಸಲಿದ್ದಾರೆ. ಈ ರೀತಿ ಕೈಗಾರಿಕೆಗೆ ವ್ಯಾಪಕ ಪ್ರಚಾರ ಇದೆ. ಅದಕ್ಕೆ ಸರಿಯಾದ ಪ್ರಾದೇಶಿಕ ಸೌಲಭ್ಯಗಳು ಇನ್ನೂ ಹೆಚ್ಚಿನ ರೀತಿಯಲ್ಲಿ ರೈತರಿಗೆ ದೊರಕಬೇಕಾಗಿದೆ. ಕೆಲವಾರು ವರ್ಷ

ಗಳಿಂದ ಅಂದರೆ ೮೦-೮೮ರಿಂದೀಚೆಗೆ ಮಳೆಯ ತೀವ್ರಭಾವದಿಂದ ಹಾಗೂ ಊಜಿನೊಣದ ಹಾವಳಿಯಿಂದ ರೈತರು ಅನೇಕ ಕಷ್ಟನಷ್ಟಗಳನ್ನು ಅನುಭವಿಸಬೇಕಾಯಿತು. ಅಂಥ ಒಂದು ಸಂದರ್ಭದಲ್ಲಿ ಕೇಂದ್ರ ಸರ್ಕಾರದವರು ೨೫೦ ಟನ್ ಕಚ್ಚಾ ರೇಷ್ಮೆಯನ್ನು ಆಮದು ಮಾಡಿಕೊಳ್ಳುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಅದೇನು ತಪ್ಪಲ್ಲ. ಒಂದೇ ಸಾರಿ ಆ ರೀತಿ ಆಮದಾಗಿದೆ. ಕರ್ನಾಟಕ ರಾಜ್ಯಕ್ಕೆ ೨೫ ಟನ್ ತೆಗೆದುಕೊಳ್ಳಬೇಕೆಂದು ಹೇಳಿ ನಮಗೆ ಅಷ್ಟನ್ನು ಅಲಾಟ್ ಮಾಡಿದ್ದರು. ಆದರೆ ನಾವು ತೆಗೆದುಕೊಳ್ಳಲಿಲ್ಲ. ಏತಕ್ಕೆಂದರೆ ಮುಂದೆ ಪರಿಸ್ಥಿತಿ ಸುಧಾರಿಸಬಹುದೆಂದು ತೆಗೆದುಕೊಳ್ಳಲಿಲ್ಲ. ಈಗ ನಾವು ಊಜಿ ನೊಣದ ಹಾವಳಿಯನ್ನು ಶೇಕಡ ೬೫ ರಷ್ಟು ತಡೆಗಟ್ಟಿದ್ದೇವೆ. ಈಗ ಮಳೆ ಕೂಡ ಸುಧಾರಿಸಿದೆ. ಊಜಿ ನೊಣದ ಹಾವಳಿ ತಡೆಗಟ್ಟುವ ಸಲುವಾಗಿ ಶೇಕಡ ೫೦ ರಷ್ಟು ಸಬ್ಸಿಡಿ ಮೂಲಕ ನೈಲಾನ್ ಪರದೆಗಳನ್ನು ರೈತರಿಗೆ ಕೊಡುತ್ತಿದ್ದೇವೆ. ಇದಕ್ಕಾಗಿ ಈ ವರ್ಷ ಸುಮಾರು ೨೦ ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಹಣ ಇಟ್ಟಿದ್ದೇವೆ. ಅದರ ಸಾಕಷ್ಟು ಪ್ರಯೋಜನವನ್ನು ರೈತರು ಪಡೆದಿದ್ದಾರೆ. ಊಜಿ ನೊಣಗಳನ್ನು ತಡೆಗಟ್ಟಲು ಕಿಲವು ಔಷಧಿಗಳನ್ನು ಸಿಂಪಡಿಸಬಹುದು. ಆದರೆ ಅದು ರೇಷ್ಮೆ ಹುಳುಗಳಿಗೆ ಹಾನಿಕಾರಕವಾದುದರಿಂದ ಅಂಥ ಔಷಧಿ ಸಿಂಪಡಿಕೆಯನ್ನು ವ್ಯಾಪಕವಾಗಿ ಮಾಡುವುದಕ್ಕಾಗುವುದಿಲ್ಲ. ಆದುದರಿಂದ ನೈಲಾನ್ ಪರದೆಯನ್ನು ಉಪಯೋಗಿಸಿ ಊಜಿ ನೊಣಗಳನ್ನು ತಡೆಗಟ್ಟುವ ಸಲುವಾಗಿ ಸಾಕಷ್ಟು ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ನಮ್ಮಲ್ಲಿ ಮಾದರಿ ಬಿತ್ತನೆ ಕೇಂದ್ರಗಳು ಎಂದು ಏನು ಇವೆ ಅದರ ೧೨ ಕಟ್ಟಡಗಳು ಈಗಾಗಲೇ ಪೂರ್ಣವಾಗಿವೆ. ನಮ್ಮ ಗುರಿ ಇದ್ದದ್ದು ೨೦ನ್ನು ಮಾಡಬೇಕೆಂದು. ಇನ್ನು ಕೆಲವು ಈಗಾಗಲೇ ಪೂರ್ಣವಾಗುವ ಹಂತದಲ್ಲಿವೆ. ೧೯೮೪ರ ಕೊನೆಯೊಳಗೆ ಆದಷ್ಟು ಪೂರ್ಣವಾಗುತ್ತವೆ. ಮನಗಾನಪಳ್ಳಿ, ಉತ್ತನೂರು, ತೊಗಣೆಹಳ್ಳಿ, ಮತ್ತು ಹೊನ್ನಲಗರೆಯ ಕಟ್ಟಡಗಳು ಏಪ್ರಿಲ್ ೧೯೮೪ರಲ್ಲಿ ಪೂರ್ಣಗೊಳ್ಳುತ್ತವೆ. ೨-೩ ಕಟ್ಟಡಗಳಿಗೆ ಟೆಂಡರನ್ನು ಕ್ಯಾನ್ಸಲ್ ಮಾಡಬೇಕಾಗಿ ಬಂತು.

ರೇಷ್ಮೆ ಮಾರಾಟ ಮಾರುಕಟ್ಟೆಗಳ ಬಗ್ಗೆ ಹೇಳಬೇಕಾದರೆ, ನಮ್ಮ ರಾಜ್ಯದಲ್ಲಿ ಮುಖ್ಯವಾಗಿ ರಾಮನಗರದಲ್ಲಿ ಇದರ ಕೇಂದ್ರ ಇತ್ತು. ರಾಜ್ಯದ ವಿವಿಧ ಭಾಗಗಳಿಂದ ಅಲ್ಲಿಗೆ ಮಾರಾಟಗಾರರು ಬರುತ್ತಿದ್ದರು. ಅದು ಅತೀ ಪ್ರಾಚೀನವಾದ ಮತ್ತು ದೊಡ್ಡ ಮಾರುಕಟ್ಟೆ ಆಗಿತ್ತು. ಅಲ್ಲಿ ಕೆಲವು ಸುಧಾರಣಾ ಕ್ರಮಗಳನ್ನು ತಂದು ರಾಮನಗರ ರಸ್ತೆಯ ಪಕ್ಕದಲ್ಲಿ ಹೊಸ ಮಾರುಕಟ್ಟೆಯ ದೊಡ್ಡ ಕಟ್ಟಡ ಬರುತ್ತಿದೆ. ಇನ್ನು ಕೆಲವಾರು ವಾರಗಳಲ್ಲಿ ರೈತರನ್ನು ಆಹ್ವಾನಿಸಿ ಉದ್ಘಾಟನೆ ಮಾಡಬೇಕೆಂದಿದ್ದೇವೆ. ಈ ತರಹ ೩೦ ಮಾರುಕಟ್ಟೆಗಳು ಇವೆ. ಅದರಲ್ಲಿ ೧೫ರ ಕೆಲಸ ಪೂರ್ಣಗೊಂಡಿದೆ, ಇನ್ನು ೧೫ರ ಕೆಲಸಗಳು ವಿವಿಧ ಹಂತಗಲ್ಲಿವೆ. ಅವು ಕೂಡ ಆದಷ್ಟು ಜಾಗ್ರತೆ ಮುಕ್ತಾಯವಾಗುತ್ತವೆ. ಒಂದೆರಡು ಕಡೆಯದು ಬಿಟ್ಟರೆ ಬಾಕಿಯದೆಲ್ಲಾ ಜಾಗ್ರತೆ ಬರುತ್ತದೆಂದು ತಿಳಿಸುವುದಕ್ಕೆ ಇಷ್ಟಪಡುತ್ತೇವೆ. ಇನ್ನು ಬಿತ್ತನೆ ಕೋಟಿಗಳ ಬಗ್ಗೆ ಹೇಳುವುದಾದರೆ ೧೦ ಮಾದರಿ ಬಿತ್ತನೆ ಕೋಟಿಗಳ ಕಟ್ಟಡದ ಕೆಲಸ ವಿವಿಧ ಹಂತಗಳಲ್ಲಿ ನಡೆಯುತ್ತಿದೆ. ಆರು ಕೋಟಿಗಳು ಮಾರ್ಚ್ ೧೯೮೪ರ ಒಳಗೆ ಪೂರ್ಣಗೊಳ್ಳಲಿವೆ. ಈ ಕೆಲಸ ಅತಿ ಶೀಘ್ರವಾಗಿ ಆಗುವ ಹಾಗೆ ಕ್ರಮಗಳನ್ನು ಕೈಗೊಳ್ಳಲಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಕೆಲವು ಸಂಶೋಧನೆಗಳನ್ನು ಮಾಡುವುದಕ್ಕೋಸ್ಕರ ಬೆಂಗಳೂರಿಗೆ ಕೆಲವೇ ಮೈಲಿಗಳ ದೂರದಲ್ಲಿರುವ ತಲೆಗಟ್ಟಪುರ ಎಂಬಲ್ಲಿ ಒಂದು ಕೇಂದ್ರವನ್ನು ಪ್ರಾರಂಭ ಮಾಡಿ ಒಂದೂವರೆ ವರ್ಷವಾಗಿದೆ. ಈ ಬೆಳೆಗೆ ಬರತಕ್ಕ ರೋಗರುಜಿನಗಳು ಏನು ಎಂಬುದನ್ನು ಕಂಡುಹಿಡಿಯುವುದಕ್ಕೆ ಇರತಕ್ಕ ಕೇಂದ್ರ ಅದು. ಅದರಲ್ಲಿ ಕೂಡ ಸುಧಾರಣೆ ತಂದು ಸಂಶೋಧನೆ ನಡೆಸುತ್ತಿದ್ದೇವೆ. ಮುಖ್ಯವಾಗಿ ಮಳೆಗಾಲದಲ್ಲಿ ಮಸ್ಕಾರ್ಡ್ ರೋಗ ಬೇರಿಗೆ ಬರತಕ್ಕ ರೋಗ. ಇಂಥ ಅನೇಕ ರೋಗಗಳು ಬರುವ ಬಗ್ಗೆ ಮತ್ತು ಅವುಗಳನ್ನು ತಡೆಗಟ್ಟುವ ಬಗ್ಗೆ ಈ ಕೇಂದ್ರದಿಂದ ಇಲಾಖೆಯು ಸಲಹೆಗಳನ್ನು ತೆಗೆದುಕೊಳ್ಳುತ್ತಿದೆ. ಅದರಲ್ಲಿ ಸಾಕಷ್ಟು ಸುಧಾರಣೆಗಳನ್ನು ತಂದಿದ್ದೇವೆ ಅದರ ಮೂಲಕ ಕೆಲವಾರು ಔಷಧಿಗಳನ್ನು ಮತ್ತು ಇನ್ನಿತರ ಉಪಕರಣಗಳನ್ನು ಕೂಡ ರೈತರಿಗೆ ಕೊಡತಕ್ಕ ಕಾರ್ಯಕ್ರಮಗಳನ್ನು ಸಹ ಹಾಕಿಕೊಂಡಿದ್ದೇವೆ. ಹುಳು ಸಾಕಾಣಿಕೆಯ ಮನೆಗಳಿಗೆ ಸಿ. ಆರ್. ಸಿ. ಎಂದು ಹೇಳುತ್ತಾರೆ. ಅವು ಕೂಡ ಸಾಕಷ್ಟು ಸಂಖ್ಯೆಯಲ್ಲಿ ನಮ್ಮ ರಾಜ್ಯದಲ್ಲಿ ವಿಸ್ತಾರಗೊಂಡಿವೆ.

೪-೩೦ ಪಿ.ಎಂ.

ಇದರಲ್ಲಿ ಮುಖ್ಯವಾಗಿ ರೈತರನ್ನು ಒಳಪಡಿಸಿ ಅವರನ್ನೂ ಭಾಗಿಯಾಗಿ ಮಾಡಿಕೊಂಡು ಅಲ್ಲಿ ಹುಳುವನ್ನು ಸಾಕುವ ರೀತಿ, ಬೆಳೆಸುವ ರೀತಿ ತೋರಿಸಿ ಉತ್ತಮವಾದ ಪರಿಸರದಲ್ಲಿ ೧೦ ದಿವಸದವರೆಗೆ

ಅವುಗಳನ್ನು ಪೋಷಿಸಿ ರೈತರಿಗೆ ಹಂಚುವ ಕ್ರಮವನ್ನು ಈ ಕೇಂದ್ರದಲ್ಲಿ ಮಾಡುತ್ತಿದ್ದೇವೆ. ಇದರಲ್ಲಿ ರೈತರೂ ಕೂಡ ಸಾಕಷ್ಟು ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದಾರೆ. ರೈತರ ಮಕ್ಕಳು ಅಥವಾ ರೈತರ ಪೈಕಿ ಯಾರಾದರೂ ಒಬ್ಬರು ಬಂದು ತರಬೇತಿ ಪಡೆದುಕೊಂಡು ತಮ್ಮ ತಮ್ಮ ಜಮೀನುಗಳಲ್ಲಿ ಈ ರೇಷ್ಮೆ ಉದ್ಯಮವನ್ನು ಮಾಡುವುದಕ್ಕೆ ಸರ್ಕಾರ ಪ್ರೋತ್ಸಾಹ ಕೊಡುತ್ತಿದೆ. ಈಗ ಏನು ೧೦೦ ರೂಪಾಯಿಗಳ ಸ್ಟೈಫಂಡ್ ಕೊಡುತ್ತಿದ್ದೇವೆ ಅದನ್ನು ಹೆಚ್ಚು ಮಾಡುವ ಅಭಿಲಾಷೆ ಇದೆ. ಕೊಡುವ ಸ್ಟೈಫಂಡನ್ನು ೧೦೦ ರಿಂದ ೧೫೦ ರೂಪಾಯಿಗಳಿಗೆ ಹೆಚ್ಚು ಮಾಡುವ ಆಸೆ ಇದೆ. ಈ ರೇಷ್ಮೆ ಕಸುಬಿಗೆ ಇನ್ನಿತರ ಸಂಸ್ಥೆಗಳು ಕೂಡ ನೆರವು ಕೊಡುತ್ತಿವೆ. ಮುಖ್ಯವಾಗಿ ನಬಾರ್ಡ್ ಸಂಸ್ಥೆಯವರು ಪ್ಲಾಂಟೇಷನ್‌ಗೆ ೧೬೦೦ ರೂಪಾಯಿಗಳನ್ನು ಕೊಡುತ್ತಿದ್ದರು. ಅವರನ್ನು ಹೆಚ್ಚು ಮಾಡಬೇಕೆಂದು ಕೇಳಿಕೊಂಡಾಗ ೨೨೦೦ ರೂಪಾಯಿಗಳಿಗೆ ಒಟ್ಟಿಗೆ ಕೊಡುವ ಯೋಚನೆ ಮಾಡಿದ್ದಾರೆ. ಅದೇರೀತಿ ರೇರಿಂಗ್ ಹೌಸ್‌ಗೆ ೯ ಸಾವಿರ ರೂಪಾಯಿಗಳನ್ನು ಕೊಡುತ್ತಿರುವುದನ್ನು ೧೫ ಸಾವಿರ ರೂಪಾಯಿಗಳಿಗೆ ಕೊಡಬೇಕೆಂದು ಹೇಳಿದ್ದೇವೆ. ಎಕ್ವಿಪ್‌ಮೆಂಟ್ಸ್‌ಗೆ ೨ ಸಾವಿರದಿಂದ ಮೂರು ಸಾವಿರ ರೂಪಾಯಿಗಳವರೆಗೆ ಹೆಚ್ಚು ಮಾಡಬೇಕು. ಕಾಟೇಜ್ ಬೇಸಿಸ್ ಉದ್ಯಮಕ್ಕೆ ೪೧ ಸಾವಿರದಿಂದ ೬೧,೫೦೦ ರೂಪಾಯಿಗೆ ಹೆಚ್ಚು ಮಾಡಬೇಕು ಎಂದು ಕೇಳಿದ್ದೇವೆ. ಡಚ್ ಸಂಸ್ಥೆ ಕೂಡ ನಮಗೆ ನೆರವು ನೀಡುತ್ತಿದೆ. ಬ್ಯಾಂಕ್ ಮುಖಾಂತರ ಸಾಲ ಮಂಜೂರಾತಿ ಮಾಡುವುದನ್ನು ಅವರು ಮಾಡುತ್ತಿದ್ದಾರೆ. ೧೯೮೪ರ ಕೊನೆಯಲ್ಲಿ ೪೫೦೦ ಟನ್ ಕಚ್ಚಾ ರೇಷ್ಮೆ ಉತ್ಪಾದನೆ ಮಾಡಬೇಕೆಂಬ ಗುರಿ ಏನಿತ್ತು ಅದು ಕೆಲವಾರು ಕಾರಣಗಳಿಂದ ಆಗಿಲ್ಲ. ಹೋದವರ್ಷ ೧೯೮೨-೮೩ರಲ್ಲಿ ಮಳೆ ಅಭಾವ ಉಂಟಾಯಿತು. ಇದರಿಂದ ರೇಷ್ಮೆ ಬೆಳೆ ಪೆಟ್ಟನ್ನು ತಿನ್ನಬೇಕಾಯಿತು. ಆಂಧ್ರಪ್ರದೇಶದಲ್ಲಿ ಕೂಡ ಈ ಬೆಳೆಯನ್ನು ಕೈಗೆ ತೆಗೆದುಕೊಂಡಿದ್ದಾರೆ. ಅವರು ಬೆಳೆ ತೆಗೆದುಕೊಂಡು ೧೯೮೩ ರಿಂದ ಮಾರುಕಟ್ಟೆಗೆ ಬಂದಿದ್ದರಿಂದ ನಮ್ಮ ರೈತರಿಗೆ ಸ್ವಲ್ಪಮಟ್ಟಿಗೆ ತೊಂದರೆಯಾಗಿದೆ. ಕೆ.ಎಸ್.ಐ.ಡಿ.ಸಿ. ಯಲ್ಲಿ ಉತ್ತಮವಾದ ಮೊಟ್ಟೆಗಳನ್ನು ತಯಾರು ಮಾಡಿ ರೈತರಿಗೆ ಹಂಚುವ ರೀತಿಯಲ್ಲಿ ಸುಧಾರಣೆ ಮಾಡಿದ್ದೇವೆ. ಇನ್ನೂ ಅನೇಕ ಸುಧಾರಣೆಗಳನ್ನು ತರಬೇಕಾಗಿದೆ. ನಮ್ಮಲ್ಲಿ ಶೈತ್ಯಾಗಾರದಲ್ಲಿ ಇಡತಕ್ಕ ವ್ಯವಸ್ಥೆ ಇಲ್ಲ. ಕೋಲ್ಡ್ ಸ್ಟೋರೇಜ್‌ನಲ್ಲಿ ಪ್ರಿಸರ್ವ್ ಮಾಡಿಟ್ಟು ಯಾವಾಗ ಬೇಕೋ ಆಗ ಮೊಟ್ಟೆಗಳನ್ನು ರೈತರಿಗೆ ವಿತರಣೆ ಮಾಡತಕ್ಕ ವ್ಯವಸ್ಥೆ ಇನ್ನೂ ಕೂಡ ಪೂರ್ತಿಯಾಗಿ ಆಗಿಲ್ಲ. ಅದು ಪೂರ್ತಿಯಾಗುವಂತೆ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳುತ್ತಿದೆ. ಹಳೇ ಪ್ರದೇಶದಲ್ಲಿ ರೇಷ್ಮೆ ಕಡ್ಡಿಯನ್ನು ಏನು ಬೆಳೆಯುತ್ತಿದ್ದಾರೆ ಅದನ್ನು ಬದಲಾವಣೆ ಮಾಡಿ ಹೊಸ ರೇಷ್ಮೆ ಬೆಳೆಯನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಹೊಸದಾಗಿ ಎಂ. ೫ ಕಡ್ಡಿಯನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡಿದ್ದೇವೆ. ೧೯೮೨-೮೩ರಲ್ಲಿ ೨೪೬೭ ಹೆಕ್ಟೇರ್ ಭೂಮಿಯಲ್ಲಿ ಹೊಸ ರೇಷ್ಮೆ ಕಡ್ಡಿಯನ್ನು ಹಾಕಿದ್ದೇವೆ. ೧೯ ತರಬೇತಿ ಕೇಂದ್ರಗಳು, ೧೬೨೦ ಹುಳು ಸಾಕಾಣಿಕೆ ಕೇಂದ್ರಗಳು, ೨೦ ಮಾದರಿ ಹುಳು ಸಾಕಾಣಿಕೆ ಕೇಂದ್ರಗಳು, ೧೦ ಮಾದರಿ ಬಿತ್ತನೆ ಕೇಂದ್ರಗಳು, ೨೩ ದೊಡ್ಡ ಮಾರುಕಟ್ಟೆ ಕೇಂದ್ರಗಳು, ಇವುಗಳನ್ನು ಮಾಡಿದ್ದೇವೆ. ೧೯೮೪ನೇ ಜನವರಿವರೆಗೆ ೧೦೭ ಲಕ್ಷ ರೂಪಾಯಿಗಳ ಹಣವನ್ನು ರೈತರಿಗೆ ಸಾಲಸೌಲಭ್ಯದ ಮುಖಾಂತರ ನೀಡಿದ್ದೇವೆ. ಈ ಉದ್ದಿಮೆಯಲ್ಲಿ ರಾಜ್ಯದ ಎರಡು ಎರಡೂವರೆ ಲಕ್ಷ ಕುಟುಂಬಗಳು ಆರ್ಥಿಕ ಚೈತನ್ಯವನ್ನು ಪಡೆಯುತ್ತಿವೆ. ಸುಮಾರು ೮ ಸಾವಿರ ರೀಲರ್ಸ್, ನೂಲು ಬಿಚ್ಚುವವರು ಇದ್ದಾರೆ. ಅವರ ಸಮಸ್ಯೆಗಳು ಅನೇಕ ವರ್ಷಗಳಿಂದ ಇದೆ. ಅದನ್ನು ಬಗೆಹರಿಸುವಲ್ಲಿ ಸರ್ಕಾರ ನಿಧಾನ ಮಾಡಿದ್ದುದು ನಿಜ. ಆದರೆ ಇತ್ತೀಚೆಗೆ ಅಂದರೆ ನವೆಂಬರ್ ೧೯೮೩ ರಲ್ಲಿ ಯಾವುದೇ ಮುನ್ಸೂಚನೆ ಇಲ್ಲದೆ ಅವರು ಮುಷ್ಕರ ಪ್ರಾರಂಭ ಮಾಡಿದ್ದರಿಂದ ಇಡೀ ಮಾರುಕಟ್ಟೆಯಲ್ಲಿ ಆಗತಕ್ಕ ವಹಿವಾಟು ಸ್ಥಗಿತವಾಯಿತು. ಹೀಗಾಗಿ ರೈತರು ತಂದ ಗೂಡು ತೆಗೆದುಕೊಳ್ಳುವವರಿಲ್ಲವಾಯಿತು. ನವೆಂಬರ್‌ನಲ್ಲಿ ದೀಪಾವಳಿ ಹಬ್ಬದ ಪ್ರಯುಕ್ತ ರಜಾದಿನ ಇತ್ತು. ಅದಲ್ಲದೆ ಶನಿವಾರ, ಭಾನುವಾರ ರಜಾದಿನ ಇತ್ತು. ಈ ರಜಾ ದಿನಗಳಲ್ಲಿ ಮುಷ್ಕರ ಪ್ರಾರಂಭ ಮಾಡಿದ್ದರಿಂದ ರೈತರಿಗೆ ತೊಂದರೆಯಾಯಿತು. ಇಡೀ ರಾಜ್ಯದ ಮಾರುಕಟ್ಟೆಯನ್ನು ಅವರು ಬಹಿಷ್ಕಾರ ಮಾಡಿದಾಗ ಯಾವುದೇ ಕ್ರಮಕ್ಕೆ ಹಿಂದೆಗೆಯದೆ ಅವರಿಗೆ ಕೊಡಬೇಕಾದ ನೆರವು ಕೊಡುವುದಕ್ಕೆ ಸರ್ಕಾರ ಮುಂದೆ ಬಂತು. ನಂತರ ಅವರೂ ಎಲ್ಲಾ ರೀತಿಯ ಸಹಕಾರವನ್ನು ಕೊಟ್ಟರು. ೨೯-೧೦-೧೯೮೩ ರಿಂದ ಪ್ರಾರಂಭವಾದ ಮುಷ್ಕರ ೨-೧೧-೧೯೮೩ರ ವರೆಗೆ ನಡೆಯಿತು. ಸರ್ಕಾರ ಮಾರುಕಟ್ಟೆಯ ವಹಿವಾಟಿನಲ್ಲಿ ನೇರವಾಗಿ ಭಾಗವಹಿಸಿ ಗೂಡನ್ನು ಕೊಳ್ಳಬೇಕಾದ ಪರಿಸ್ಥಿತಿ ಬಂತು. ಈ ರೀತಿ ೪೩೩ ಟನ್ ರೇಷ್ಮೆ ಗೂಡನ್ನು ನಾವು ಕೊಂಡಿದ್ದೇವೆ. ಇದರಿಂದ ೧.೩೩ ಕೋಟಿ ರೂಪಾಯಿಗಳ ವೆಚ್ಚವನ್ನು ಸರ್ಕಾರ ಭರಿಸಬೇಕಾಯಿತು. ಸರಾಸರಿ ಬೆಲೆ ಕೊಟ್ಟಿದ್ದು ೩೦.೫೯

ರೂಪಾಯಿಗಳು. ಆ ಗೂಡಿನಲ್ಲಿ ಸರ್ಕಾರಿ ಫಿಲೇಚರ್‌ನಲ್ಲಿ ಉಪಯೋಗಿಸಿರುವ ಗೂಡುಗಳು ೨೪೯ ಟನ್. ವಿಂಕ್ಸಿದ್ದನ್ನು ಏನು ಮಾಡಬೇಕು ಎಂಬ ಪ್ರಶ್ನೆ ಸರ್ಕಾರದಲ್ಲಿದೆ. ಅದನ್ನು ಆಕ್ಷನ್ ಮಾಡುವ ಉದ್ದೇಶ ಸರ್ಕಾರಕ್ಕಿದೆ. ಓವರ್ ಹೆಡ್ ಚಾರ್ಜಸ್‌ನಲ್ಲಿ ಕುಂಠಿತವಾಗುತ್ತಿರುವುದರಿಂದ ಮುಂದೆ ಆಕ್ಷನ್ ಮಾಡಿ ಅದನ್ನು ಡಿಸ್ಪೋಸ್ ಮಾಡುವ ಉದ್ದೇಶ ಸರ್ಕಾರಕ್ಕಿದೆ. ಇನ್ನು ರೀಲರ್ಸ್ ಬಗ್ಗೆ ಹೇಳಬೇಕೆಂದರೆ ಇದಕ್ಕೆ ಸಂಬಂಧಪಟ್ಟಂತೆ ಸರ್ಕಾರ ಒಂದು ಸಚಿವ ಸಂಪುಟದ ಉಪಸಮಿತಿಯನ್ನು ನೇಮಕ ಮಾಡಿತ್ತು. ಹಿರಿಯ ಸಚಿವರುಗಳಾದ ಸಹಕಾರ ಸಚಿವರು, ವಿದ್ಯಾ ಸಚಿವರು ಎಲ್ಲರೂ ಕೂಡ ಸೂಕ್ತವಾದ ಮತ್ತು ಅಮೋಘವಾದ ಸಲಹೆಯನ್ನು ಈ ವಿಷಯದಲ್ಲಿ ಕೊಟ್ಟು ಅವರೆಲ್ಲರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಸಹಾಯ ಮಾಡಿದ್ದಾರೆ. ಅವರು ನಿರೀಕ್ಷೆ ಮಾಡಿದ್ದಕ್ಕಿಂತ ಹೆಚ್ಚಿನ ರೀತಿಯಲ್ಲಿ ರಿಯಾಯಿತಿಯನ್ನು ಸರ್ಕಾರ ಕೊಟ್ಟಿದೆ. ಮಾರ್ಕೆಟ್ ಫೀಸ್ ಬಗ್ಗೆ ಹೇಳಬೇಕೆಂದರೆ ಮಾರ್ಕೆಟ್‌ಗಳಲ್ಲಿ ಒಂದು ಪರ್ಸೆಂಟ್ ಮತ್ತು ಸಿಲ್ಕ್ ಎಕ್ಸ್‌ಚೇಂಜಿನಲ್ಲಿ ಒಂದು ಪರ್ಸೆಂಟ್ ಸೆಸ್ ರೀಲರ್ಸ್‌ನಿಂದ ಮೊದಲು ವಸೂಲು ಮಾಡುತ್ತಿದ್ದರು. ಅದನ್ನು ಒಂದು ಪರ್ಸೆಂಟಿಗೆ ಕಡಿಮೆ ಮಾಡಿದ್ದೇವೆ. ಇದರಿಂದಾಗಿ ರಾಜ್ಯದ ಬೊಕ್ಕಸಕ್ಕೆ ಸುಮಾರು ಒಂದೂಕಾಲು ಕೋಟಿ ರೂಪಾಯಿಗಳು ಕಡಿಮೆಯಾಗುತ್ತದೆ. ಎರಡು ಕಡೆ ಏನು ಸೆಸ್ ಕೊಡುತ್ತಿದ್ದರು ಅದನ್ನು ತಪ್ಪಿಸಿ ಒಂದು ಕಡೆ ಮಾತ್ರ ಕೊಡುವ ರೀತಿಯಲ್ಲಿ ರಿಯಾಯಿತಿ ಕೊಟ್ಟಿದ್ದೇವೆ. ಈ ಬಗ್ಗೆ ಸರ್ಕಾರ ಈಗಾಗಲೇ ಆದೇಶವನ್ನು ಹೊರಡಿಸಿದೆ. ಚರಕದಿಂದ ನೂಲು ತೆಗೆಯುವ ಘಟಕಗಳಿಗೆ ಕೊಡುತ್ತಿದ್ದ ಫ್ಯೂಯಲ್ ಟ್ಯಾಕ್ಸ್ ಕೂಡ ನಾವು ತೆಗೆದಿದ್ದೇವೆ. ಅವರು ಇಂದನದ ತೆರಿಗೆ ಕೊಡಬೇಕಾಗಿಲ್ಲ. ಮಾರ್ಕೆಟ್ ಫೀಸನ್ನು ಒಂದು ಕಡೆ ಮಾತ್ರ ಕೊಡಬೇಕು ಎಕ್ಸ್‌ಚೇಂಜಿನಲ್ಲಿ ಕೊಡಬೇಕಾಗಿಲ್ಲ ಮಾಜಿ ಮಂತ್ರಿಗಳಾದ ವೈ. ರಾಮಕೃಷ್ಣ ಅವರು ಹೇಳಿದಹಾಗೆ ಅವರ ಸೌಲಭ್ಯಕ್ಕೆ ಉಪಯೋಗವಾಗಬೇಕಾದುದು ೮–೧೦ ಕೋಟಿಗಳು ರೂಪಾಯಿಗಳು ರಾಜ್ಯದ ಬೊಕ್ಕಸದಲ್ಲಿ ಸೇರಿಹೋಗಿದೆ. ಮೂರು ನಾಲ್ಕು ವರ್ಷಗಳಿಂದ ಅದು ಅಲ್ಲಿ ಸೇರಿದ್ದು ನಮ್ಮ ಸರ್ಕಾರ ಬಂದಮೇಲೆ ಅದನ್ನು ತೆಗೆದು ಸಂಬಂಧಪಟ್ಟ ರೈತರಿಗೆ, ರೀಲರ್ಸ್‌ಗೆ ಉಪಯೋಗ ಮಾಡಬೇಕೆಂಬ ದೃಷ್ಟಿಯಿಂದ ಕಾನೂನು ಇಲಾಖೆ ಮತ್ತು ಇನ್ನಿತರ ಇಲಾಖೆಗಳಿಂದ ಸಲಹೆ ತೆಗೆದುಕೊಂಡು ಈ ವರ್ಷ ೫೦ ಲಕ್ಷ ರೂಪಾಯಿಗಳನ್ನು ಅದರಲ್ಲಿ ಪಡೆಯುವುದಕ್ಕೆ ಸರ್ಕಾರ ಅನುಮೋದನೆ ಕೊಟ್ಟಿದೆ. ಇದರಿಂದ ಮಾರ್ಕೆಟ್ ಸ್ಥಳದಲ್ಲಿ ರೈತರಿಗೆ ಅನುಕೂಲವಾಗುವಂತೆ ಕುಡಿಯುವ ನೀರಿನ ವ್ಯವಸ್ಥೆ, ಕ್ಯಾಂಟೀನ್ ವ್ಯವಸ್ಥೆ ಮಾಡಬೇಕೆಂದಿದ್ದೇವೆ. ರೀಲರ್ಸ್‌ಗೆ ಸಂಬಂಧಪಟ್ಟಂತೆ ೧೯ ಕೋ-ಆಪರೇಟೀವ್ ಸೊಸೈಟಿಗಳಿವೆ. ಅವೆಲ್ಲಾ ಹೀನ ಸ್ಥಿತಿಯಲ್ಲಿವೆ. ಅದನ್ನು ಪುನರುಜ್ಜೀವನಗೊಳಿಸುವುದಕ್ಕೆ ಈ ಹಣ ಉಪಯೋಗ ಮಾಡುವ ಯೋಜನೆ ಹಾಕಿಕೊಂಡಿದ್ದೇವೆ. ತನ್ಮೂಲಕ ಕೆಲವು ರಿಯಾಯಿತಿಗಳನ್ನು ಮತ್ತು ಸೌಲಭ್ಯಗಳನ್ನು ಕೊಡುವುದಕ್ಕೆ ಕಾರ್ಯಕ್ರಮ ಹಾಕಿಕೊಂಡಿದ್ದೇವೆ.

ಶ್ರೀ ವೈ. ರಾಮಕೃಷ್ಣ.—ಇನ್ನು ಮೇಲಾದರೂ ಈ ಹಣವನ್ನು ರೆವಿನ್ಯೂ ಖಾತೆಯಲ್ಲಿ ಇಡುವ ಬದಲು ಒಂದು ಫಂಡ್ ಮಾಡಿ ಇಡುವ ಬಗ್ಗೆ ಆಶ್ವಾಸನೆ ಕೊಡುತ್ತೀರಾ ? ಆ ರೀತಿ ಮಾಡಿದರೆ ಆ ಹಣ ಮತ್ತು ಅದರಿಂದ ಬರತಕ್ಕ ಬಡ್ಡಿ ಕೂಡ ರೈತರಿಗೆ ಆಗುತ್ತದೆ. ಆದ್ದರಿಂದ ಇದರ ಬಗ್ಗೆ ಆಲೋಚನೆ ಮಾಡಿ.

ಶ್ರೀಮತಿ ಚಂದ್ರಪ್ರಭ ಅರಸ್.—ಸಿಲ್ಕ್ ಎಕ್ಸ್‌ಚೇಂಜ್ ಬಗ್ಗೆ ಏನು ಹೇಳಿದ್ದೀರಿ ಇದನ್ನು ಕೆಲವು ವರ್ಷದ ಹಿಂದೆ ಮಾಡಿದೆ. ಮುಖ್ಯವಾಗಿ ರೈತರ ತೊಂದರೆ ಬಗೆಹರಿಯಬೇಕು, ಅವರಿಗೆ ನ್ಯಾಯವಾದ ಬೆಲೆ ಸಿಗಬೇಕು ಎಂಬ ದೃಷ್ಟಿಯಿಂದ ೧೯೭೯-೮೦ರಲ್ಲಿ ರೇಷ್ಮೆ ನಿಯಂತ್ರಣ ಮಂಡಳಿ ವಿನಿಮಯ ಕೇಂದ್ರವನ್ನು ಜಾರಿಗೆ ತಂದರು. ಆ ಸಂದರ್ಭದಲ್ಲಿ ಅದರಲ್ಲಿ ಕೆಲವು ಲೋಪದೋಷಗಳು ಕಂಡುಬಂದಿರಬಹುದು. ಅದು ಕ್ರಮಬದ್ಧವಾಗಿ ನಡೆಯುತ್ತಿಲ್ಲ ಎಂಬ ದೃಷ್ಟಿ ಸಾಮಾನ್ಯ ಜನರಲ್ಲಿ ಬಂದಿದೆ. ಅದಕ್ಕೆ ಕೆಲವಾರು ಕಾರಣಗಳಿವೆ.

ಮಾರುಕಟ್ಟೆ ಇಲ್ಲದ ಸಂದರ್ಭದಲ್ಲಿ ರೀಲರ್ಸ್ ಅಕೌಂಟ್ಸ್ ಆಗಲೀ, ಮಾರ್ಕೆಟ್ ಫೀ ಬಗ್ಗೆಯಾಗಲೀ ಲೆಕ್ಕ ಸಿಕ್ಕುತ್ತಿರಲಿಲ್ಲ. ಈಗ ರೇಷ್ಮೆ ಮಂಡಲಿ ತನ್ನ ಕೆಲಸವನ್ನು ಬಹಳ ಚೆನ್ನಾಗಿ ಮಾಡಿಕೊಂಡು ಹೋಗುತ್ತಿದೆ ಆದರಿಂದ ರೈತರಿಗೆ ಮತ್ತು ರೀಲರ್ಸ್‌ಗೆ ಏನೇನು ಸೌಕರ್ಯಗಳು ಸಿಗಬೇಕೋ ಅದು ಸಿಗುತ್ತದೆ ಎಂದು ಹೇಳಿದರೆ ತಪ್ಪಾಗಲಾರದು. ಇದರ ಅಂಕಿಅಂಶಗಳನ್ನು ನಾನು ನಂತರ ಕೊಡುತ್ತೇನೆ, ಇನ್ನು ರೇಷ್ಮೆ ವಿನಿಮಯ ಕೇಂದ್ರ ಒಂದು ವಿಸ್ತಾರವಾದ ಸ್ಥಳದಲ್ಲಿ ಆಗಬೇಕೆಂದು ನಾವು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಇವೊತ್ತು ಅದು ಒಂದು ಬಾಡಿಗೆ ಕಟ್ಟಡದಲ್ಲಿ ಇದೆ. ರಾಜಾಜಿ

ನಗರದ ಎಂ. ಇ. ಐ. ಇರುವ ಕಡೆ ಒಂದು ಸ್ಥಳವನ್ನು ಈ ಬಗ್ಗೆ ಸರ್ಕಾರ ಪರಿಶೀಲನೆ ಮಾಡಿದೆ. ಆ ಜಾಗವನ್ನು ಅವರು ಕೊಡಲು ಒಪ್ಪಿದ್ದಾರೆ. ನಾವು ಯಾವ ಪ್ಲಾನ್ ಕೊಡುತ್ತೇವೆ ಅದರ ಪ್ರಕಾರ ಕಟ್ಟಡವನ್ನು ಕಟ್ಟಿ ಬಾಡಿಗೆ ಪಡೆದುಕೊಳ್ಳುವವರಿದ್ದು ಈ ಬಗ್ಗೆ ಒಪ್ಪಂದ ಆಗುತ್ತದೆ. ಒಂದೆರಡು ವರ್ಷಗಳಲ್ಲಿ ಈ ಜಾಗದಲ್ಲಿ ಹೊಸ ಎಕ್ಸ್‌ಚೇಂಜ್ ಕಟ್ಟಡ ಬರುತ್ತದೆಂದು ನಿರೀಕ್ಷೆ ಮಾಡಿದ್ದೇವೆ. ಈ ಒಂದು ವಿನಿಮಯ ಕೇಂದ್ರದ ಕೆಲಸ ಏನೆಂದರೆ, ರೇಷ್ಮೆ ಬೆಲೆ ತೀರಾ ಕಡಿಮೆಗೆ ಬಂದಾಗ ಅದನ್ನು ದೃಢೀಕರಣ ಮಾಡುವುದಕ್ಕೆ ಅದನ್ನು ಕೊಂಡುಕೊಂಡು ಅವರಿಗೆ ನ್ಯಾಯವಾದ ಬೆಲೆಯನ್ನು ದೊರಕಿಸಿ ಕೊಡುವುದೇ ಇದರ ಉದ್ದೇಶವಾಗಿದೆ. ಈ ಒಂದು ಮಂಡಲಿಯ ಕೆಲಸ ಕಾರ್ಯಗಳ ಬಗ್ಗೆ ಏನು ಸದಸ್ಯರು ತಪ್ಪು ಕಲ್ಪನೆ ಇಟ್ಟುಕೊಂಡಿದ್ದಾರೆ ಅದನ್ನು ತೆಗೆಯಬೇಕು. ಇದರ ಒಂದು ಅಂಕಿಅಂಶವನ್ನು ನಾನು ಕೊಡುತ್ತೇನೆ. ಈ ಒಂದು ಕೇಂದ್ರ ಮಾರ್ಚ್ ೧೯೭೮ರಲ್ಲಿ ಪ್ರಾರಂಭವಾಗಿದ್ದು ಇದರ ಮೂಲಧನ ೨೯೦ ಲಕ್ಷ ರೂಪಾಯಿಗಳಾಗಿರುತ್ತವೆ. ೩೧-೩-೧೯೮೪ಕ್ಕೆ ಕೊನೆಗೊಳ್ಳುವ ಲೆಕ್ಕದ ಪ್ರಕಾರ ಈ ಕೇಂದ್ರ ಸುಮಾರು ೬೦೦ ಟನ್‌ಗಳಷ್ಟು ಎಂದರೆ ೧,೬೨೩ ಲಕ್ಷ ರೂಪಾಯಿಯಷ್ಟು ರೇಷ್ಮೆಯನ್ನು ಖರೀದಿ ಮಾಡಿತ್ತು ಎಂದು ಅಂದಾಜು ಇದೆ. ಹಿಂದಿನ ವರ್ಷದ ಖರೀದಿ ಸುಮಾರು ೩೭೪ ಟನ್‌ಗಳು. ಅನುಕ್ರಮವಾಗಿ ಪ್ರಮಾಣದಲ್ಲಿ ಶೇಕಡಾ ೭ರಷ್ಟು ಹಾಗೂ ಬೆಲೆಯಲ್ಲಿ ಶೇಕಡಾ ೧೫ರಷ್ಟು ಹೆಚ್ಚುವರಿ ಆಗಿದೆ. ೧೯೮೪-೮೫ರ ಹಣಕಾಸಿನ ವರ್ಷಕ್ಕೆ ಕೊಳ್ಳುವಿಕೆಯ ಪ್ರಮಾಣ ೫೫೦ ಟನ್‌ಗಳು ಎಂದು ಹಾಗೂ ಅಂದಾಜು ವೆಚ್ಚ ೨.೨೮೮ ಲಕ್ಷ ರೂಪಾಯಿಗಳೆಂದು ತಿಳಿದು ಬಂದಿದೆ. ವಿನಿಮಯ ಕೇಂದ್ರಕ್ಕೆ ಆಗಮಿಸುವ ರೇಷ್ಮೆ ಶೇಕಡ ೨೫ರಷ್ಟು ಎಂದು ಅಂದಾಜು ಮಾಡಲಾಗಿದೆ. ಈಗ ಸರಾಸರಿ ೬೭ಟನ್‌ನಷ್ಟು ರೇಷ್ಮೆಯನ್ನು ಖರೀದಿಸಲಾಗುತ್ತದೆಂದು ಅಂದಾಜು ಮಾಡಲಾಗಿದೆ. ಸಮಾನತೆ ದೃಷ್ಟಿಯಿಂದ ೨೯೦ ಲಕ್ಷ ರೂಪಾಯಿಗಳ ಬ್ಯಾಂಕ್ ಒಕ್ಕೂಟ ಮತ್ತು ಸಾಲದ ಮಿತಿಯನ್ನು ಕೂಡ ಹೊಂದಿರುತ್ತದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಕಂಪೆನಿ ಖರೀದಿಸುವ ನೀತಿಯ ಪ್ರಕಾರ ವಿರೀತವನ್ನು ತಗ್ಗಿಸುವಲ್ಲಿ ಪರಿಣಾಮಕಾರಿಯಾದ ಕೆಲಸವನ್ನು ಮಾಡುತ್ತಿದೆ. ಇನ್ನು "ನೇಕಾರರ ಬಂಧು" ಎಂದು ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ನೇಕಾರರನ್ನು ನಮ್ಮ ಸದಸ್ಯರನ್ನಾಗಿ ಮಾಡಿಕೊಂಡು ಅವರಿಗೆ ಏನೇನು ಸಾಲಸೌಲಭ್ಯಗಳನ್ನು ಕೊಡಬೇಕೋ ಆ ಎಲ್ಲಾ ಸೌಕರ್ಯಗಳನ್ನು ಕೊಡಲಾಗುತ್ತದೆ. ಈ ರೀತಿ ಸುಮಾರು ೩೭೫ ಜನ ನೇಕಾರರು ಪಟ್ಟಿಯಲ್ಲಿ ಇದ್ದಾರೆ. ಆದರೆ ಒಂದೇ ಒಂದು ತೊಂದರೆ ಏನೆಂದರೆ ಈಗಾಗಲೇ ಏನು ಸಾಲವನ್ನು ತೆಗೆದುಕೊಂಡಿದ್ದಾರೆ ಅದರಲ್ಲಿ ಎಷ್ಟೋ ಮಂದಿ ಜನ ಅನೇಕ ವರ್ಷಗಳಿಂದ ಹಣವನ್ನು ಮರುಪಾವತಿ ಮಾಡಿರುವುದಿಲ್ಲ. ಇದುವರೆವಿಗೂ ನಾವು ಕೊಟ್ಟಿರತಕ್ಕ ಸಾಲವನ್ನು ೧ ವರ್ಷಕ್ಕೆ ಕಡಿಮೆ ಇಲ್ಲದಂತೆ ವಾಪಸ್ ಕೊಡದೇ ಇರುವವರ ಅಂಕಿಸಂಖ್ಯೆ ನಮ್ಮಲ್ಲಿ ಇದೆ. ಸಾಲ ಪಡೆದು ೧ ವರ್ಷಕ್ಕೆ ಮೇಲ್ಪಟ್ಟು ೨ ವರ್ಷದೊಳಗೆ ಕೊಡದೇ ಇರುವಂತಹವರಿಂದ ಬರಬೇಕಾದ ಹಣ ಸುಮಾರು ೧೩ ಲಕ್ಷ ರೂಪಾಯಿಗಳು. ಹಾಗೇ ೨ ವರ್ಷಗಳಿಗೆ ಮೇಲ್ಪಟ್ಟು ಸುಮಾರು ೨೮ ಲಕ್ಷ ರೂಪಾಯಿಗಳು ಬರಬೇಕಾಗಿದೆ. ಇದನ್ನೆಲ್ಲಾ ಲೆಕ್ಕಕ್ಕೆ ತೆಗೆದುಕೊಂಡರೂ ಕೂಡಾ ಇದು ಉತ್ತಮ ಕೆಲಸ ಮಾಡಿಕೊಂಡು ಬಂದಿದ್ದು ಈ ವರ್ಷ ೧೭ ಲಕ್ಷ ರೂಪಾಯಿಗಳ ಲಾಭವನ್ನು ಮಾಡಿರುತ್ತದೆ.

ಶ್ರೀ ವೈ. ರಾಮಕೃಷ್ಣ.—ಈ ಪ್ರಾಫಿಟ್ ಎಂಬುದು ಯಾರ ಹಣ ? It is nothing but a legalised robbery from the producers or the growers. You want profit at the cost of the producers, ಅದು ಬೇಡ ಎಂದು ನಾನು ಹೇಳುತ್ತೇನೆ. ಈ ಒಂದು ಕೇಂದ್ರವನ್ನು ಕೆ. ಬಿ. ಶಿವಯ್ಯ ಅವರು ಪ್ರಾರಂಭ ಮಾಡಿದರು. ಇವೊತ್ತು ಅಲ್ಲಿ ಬರತಕ್ಕ ಹಣ ಪ್ರೊಡ್ಯೂಸರ್ಸ್‌ಗೆ ಹೋಗಬೇಕು. ಈ ದಿನ ಈ ಕೇಂದ್ರವನ್ನು ನಿಗಾವಣೆ ಮಾಡಲು ಎಷ್ಟು ಹಣ ಬೇಕೋ ಅಷ್ಟನ್ನು ತಾವು ಪಡೆದುಕೊಳ್ಳಿ. ಬರೀ ಲಾಭವನ್ನು ನೀವು ನಿರೀಕ್ಷೆ ಮಾಡಬಾರದು.

ಶ್ರೀಮತಿ ಚಂದ್ರಪ್ರಭಾ ಅರಸ್.—ಪ್ರಾಫಿಟ್ ಮಾಡುವುದು ನಮ್ಮ ಉದ್ದೇಶವಲ್ಲ. ಆದರೆ ಇಲ್ಲಿ ಇರುವ ಔಟ್ ಸ್ಟ್ಯಾಂಡಿಂಗ್ ಬಿಲ್ಸ್‌ಗಳನ್ನೆಲ್ಲಾ ಲೆಕ್ಕಕ್ಕೆ ತೆಗೆದುಕೊಂಡರೆ ಮಾರ್ಜಿನ್ ಆಫ್ ಪ್ರಾಫಿಟ್ ಕಡಿಮೆ ಇದೆ ಇದನ್ನೆಲ್ಲಾ ನೋಡಿದರೆ ಇದು ನೋ ಪ್ರಾಫಿಟ್ ನೋ ಲಾಸ್‌ನಲ್ಲೇ ನಡೆಯುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು. ಇನ್ನು ರೇಷ್ಮೆ ಆಮದು ನೀತಿ ಬಗ್ಗೆ ಸ್ವಲ್ಪ ಹೇಳಬೇಕಾಗುತ್ತದೆ. ಈ ಬಗ್ಗೆ ಹಿಂದಿನ ವರ್ಷದ ಆಯವ್ಯಯ ಭಾಷಣದಲ್ಲೂ ಕೂಡಾ ಹೇಳಿದ್ದೇನೆ. ಇದು ಕೇಂದ್ರ ಸರ್ಕಾರದ ಅಧಿಕಾರ ವ್ಯಾಪ್ತಿಯಲ್ಲಿ ಬಂದಿರುವುದರಿಂದ ರೇಷ್ಮೆ ಆಮದನ್ನು ಒಂದು ಬಾರಿ ಮಾತ್ರ ಮಾಡಿ

ದರು ಅದು ಒಳ್ಳೆಯದು ಇತ್ತು. ಆದರೆ replacement scheme ಪ್ರಕಾರ ರೇಷ್ಮೆಯನ್ನು ರಪ್ತು ಮಾಡತಕ್ಕ ಲೈಸೆನ್ಸ್ ಹೊಂದಿರತಕ್ಕ ವ್ಯಕ್ತಿಗಳಿಗೆ ಇದನ್ನು ಕೊಡುತ್ತಿದ್ದಾರೆ. ಶೇಕಡ ೧೦ ಇದ್ದದನ್ನು ಅವರು ಶೇಕಡ ೨೦ ಮಾಡಿದ್ದಾರೆ. ಇದನ್ನು ಕಡಿಮೆ ಮಾಡಬೇಕು ಅಥವಾ ಪೂರ್ಣ ರದ್ದು ಮಾಡಬೇಕು ಎಂದು ನಮ್ಮ ಬಲವಾದ ಬೇಡಿಕೆಯನ್ನು ನಾವು ಇಟ್ಟಿದ್ದೇವೆ. ಕರ್ನಾಟಕ ರೇಷ್ಮೆ ಬೆಳೆಗಾರರ ಪರವಾಗಿ ನಾವು ಈ ಬೇಡಿಕೆ ಇಟ್ಟಿದ್ದು ಈ ಬಗ್ಗೆ ಅವರು ಗಮನ ತೆಗೆದುಕೊಂಡ ಹಾಗೆ ಕಾಣುತ್ತಿಲ್ಲ. ಆದರೆ ಒಂದೇ ಒಂದು ಸುಧಾರಣೆ ಏನು ಎಂದರೆ, ಇತ್ತೀಚೆಗೆ ಕೇಂದ್ರದ ಮಂತ್ರಿಗಳಿಂದ ಬಂದ ಉತ್ತರದ ಪ್ರಕಾರ ಈ ಯಾವುದೇ ರಪ್ತು ಮಾಡತಕ್ಕ ಕಾಲದಲ್ಲೂ ೨೦ ಪರ್ಸೆಂಟ್ ಏನು ಸಿಲ್ಕ್ ತರುವುದಕ್ಕೆ ಅವಕಾಶ ಇತ್ತು ಅದನ್ನು ತಪ್ಪಿಸಿದ್ದು ಬೇರೆ ಐಟಮ್‌ನ್ನು ತರಬೇಕೆಂದು ಮಾಡಲಾಗಿದೆ. ಏನು ೨೦ ಪರ್ಸೆಂಟ್ ರೇಷ್ಮೆ ಅಮದು ಮಾಡಿಕೊಳ್ಳುತ್ತಿದ್ದಾರೆ ಆ ರೇಷ್ಮೆಯಿಂದ ಉತ್ಪಾದನೆ ಮಾಡಿ ಅದನ್ನು ಹೊರ ದೇಶಕ್ಕೆ ರಪ್ತು ಮಾಡುತ್ತಾ ಇರಲಿಲ್ಲ. ಇದರಿಂದಾಗಿ ಇಲ್ಲಿ ನಮ್ಮ ರಾಜ್ಯದ ಮಾರುಕಟ್ಟೆಯಲ್ಲಿ ಅದು ಕಡಿಮೆ ಬೆಲೆಯಲ್ಲಿ ಮಾರಾಟವಾಗುತ್ತಾ ಇತ್ತು. ಇದರಿಂದಾಗಿ ನಮ್ಮ ಬೆಳೆಗಾರರ ಮೇಲೆ ಪರಿಣಾಮ ನೇರವಾಗಿ ಆಗುತ್ತದೆ. ಹಾಗೂ ಇದರಿಂದ ಬೆಲೆಯೂ ಕೂಡ ಹಿಡಿತಕ್ಕೆ ಸಿಕ್ಕುತ್ತಾ ಇರಲಿಲ್ಲ, ಇಲ್ಲಿ ತಯಾರಾಗತಕ್ಕ ಸರಕಿಗೆ ನ್ಯಾಯಬೆಲೆ ದೊರಕುವುದು ಕಷ್ಟವಾಗುತ್ತದೆ. ಚೈನಾ ದೇಶ ಇವೊತ್ತು ಸಿಲ್ಕ್‌ನಲ್ಲಿ ಪ್ರಥಮ ಸ್ಥಾನದಲ್ಲಿ ಇದ್ದು, ಜಪಾನ್ ಎರಡನೆಯ ಸ್ಥಾನದಲ್ಲಿ ಇದೆ. ಭಾರತ ನಾಲ್ಕನೆಯ ಸ್ಥಾನದಲ್ಲಿ ಇದೆ. ಅವರು ಆ ರೇಷ್ಮೆಯನ್ನು ನಮ್ಮ ದೇಶಕ್ಕೆ ೨೫ ಡಾಲರ್‌ಗೆ ಕೊಟ್ಟರೆ ಅದೇ ಬೇರೆ ದೇಶಗಳಾದ ರಷ್ಯಾ ಮುಂತಾದ ಕಡೆಗಳಿಗೆ ೬೫ ಡಾಲರ್‌ಗಳಂತೆ ಕೊಡುತ್ತಿದ್ದಾರೆ. ಈ ಒಂದು ಬೆಲೆಯ ಹಿನ್ನೆಲೆ ಏನು ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ. ಇದನ್ನೆಲ್ಲಾ ಪರಿಗಣಿಸಿ ಕೇಂದ್ರ ಸರ್ಕಾರ ಈ ಬಗ್ಗೆ ತೀವ್ರ ಕಾರ್ಯಕ್ರಮ ತೆಗೆದುಕೊಳ್ಳುವ ಬಗ್ಗೆ ಬೆಳೆಗಾರರ ಹಾಗೂ ಸರ್ಕಾರದ ಪರವಾಗಿ, ಉದ್ಯಮದಾರರ ಪರವಾಗಿ ವಿರೋಧ ಪಕ್ಷದ ಸದಸ್ಯರು ಹಾಗೂ ರಾಜ್ಯ ಸಭಾ ಮತ್ತು ಲೋಕಸಭಾ ಸದಸ್ಯರು ಕೇಂದ್ರ ಸರ್ಕಾರಕ್ಕೆ ಈ ಬಗ್ಗೆ ಹೆಚ್ಚಿನ ಮಾಹಿತಿ ಕೊಟ್ಟು ನಮ್ಮ ಪರವಾಗಿ ಹೋರಾಟ ಮಾಡಲಿ ಎಂದು ಹೇಳಿ ಪತ್ರವನ್ನು ಬರೆದಿದ್ದೇವೆ. ಈ ಒಂದು ಆಮದು ನೀತಿಯನ್ನು ನಿಲ್ಲಿಸಬೇಕು ಅಥವಾ ಕಡಿಮೆ ಮಾಡಬೇಕು ಅಥವಾ ನಿಯಂತ್ರಣ ಮಾಡಬೇಕೆಂದು ನಾನು ಹೇಳುತ್ತಿದ್ದೇನೆ, ಹಿಂದೆ ೧೦ ಪರ್ಸೆಂಟ್ ಇದ್ದುದನ್ನು ಈಗ ೨೦ ಪರ್ಸೆಂಟ್ ಮಾಡಿದ್ದಾರೆ. ಇನ್ನು ಮಾರುಕಟ್ಟೆ ಬೆಲೆ ಬಗ್ಗೆ ಹೇಳುವುದಾದರೆ ಫ್ಲೋರ್ ಪ್ರೈಸ್ ಫಿಕ್ಸ್ ಮಾಡುವುದು ಇದೆ. ಈ ಬಗ್ಗೆ ಡಾ॥ ಮಾಲಿಕ್ ಅವರ ವರದಿ ಒಮ್ಮೆ ಮಾತ್ರ ಬಂದಿತು ಎಂದು ನಾನು ತಿಳಿದುಕೊಂಡಿದ್ದೇನೆ. ಈ ಬಗ್ಗೆ ಅವರು ಕೊಟ್ಟ ವರದಿ ಸಮಂಜಸವಾಗಿಲ್ಲ, ಅವರು ನಿಗದಿ ಮಾಡಿರತಕ್ಕದ್ದು ಬಹಳ ಕನಿಷ್ಟ ಬೆಲೆ ಎಂದು ತಿಳಿಸಿದಾಗ ಮತ್ತೆ ಅದನ್ನು ವಿಮರ್ಶೆ ಮಾಡುತ್ತೇವೆಂದು ಅವರು ಒಪ್ಪಿಕೊಂಡಿದ್ದು ಆ ಬಗ್ಗೆ ಇನ್ನೂ ವರದಿ ಬಂದಿರುವುದಿಲ್ಲ. ಆದರೂ ನಮ್ಮ ಸರ್ಕಾರದ ವ್ಯಾಪ್ತಿಯಲ್ಲಿ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿದ್ದೇವೆ. ಬೆಲೆ ದೃಢತೆ ಬಗ್ಗೆ ಸಲಹಾ ಸಮಿತಿಗಳನ್ನು ಮಾಡುವುದಕ್ಕೆ ಸರ್ಕಾರ ಯೋಜನೆ ಹಾಕಿಕೊಂಡಿದೆ. ಈ ಬಗ್ಗೆ ಇಲ್ಲಿನ ಕಮಿಟಿ ಪ್ರಕಟಣೆ ಆಗಿರಬಹುದೆಂದು ನಾನು ತಿಳಿದುಕೊಂಡಿದ್ದೇನೆ. ಅಥವಾ ಅದು ಆಗಿದೆಯೋ ಇಲ್ಲವೋ ಎಂಬುದನ್ನು ನಾನು ನೋಡುತ್ತೇನೆ. ಆಯಾಯ ಮಾರುಕಟ್ಟೆಯಲ್ಲಿ ದಿನಂಪ್ರತಿ ಬರತಕ್ಕ ಸಮಸ್ಯೆಗಳ ಬಗ್ಗೆ, ಸಪ್ಲೈ ಮತ್ತು ಡಿಮ್ಯಾಂಡನ್ನು ನೋಡಿಕೊಂಡು ಬೆಲೆ ನಿಗದಿ ಮಾಡುವ ಬಗ್ಗೆ ರೀಲರ್ಸ್, ರೇರರ್ಸ್ ಹಾಗೂ ಸ್ಥಳೀಯ ಜನರು ಹಾಗೂ ಅಧಿಕಾರಿಗಳು ಒಳಗೊಂಡಂತೆ ಅನ್‌ಅಫಿಷಿಯಲ್ಲಾಗಿ ಸಮಿತಿಗಳನ್ನು ತೆರೆಯುವ ಯೋಜನೆ ಹಾಕಿಕೊಳ್ಳಲಾಗಿದೆ. ಈ ಕಚ್ಚಾ ವಸ್ತುಗಳ ಮಳಿಯನ್ನು ಸಹ ಅವಲಂಭಿಸಿಕೊಂಡಿದ್ದು ರೋಗರುಜಿನಗಳಿಗೆ ತುತ್ತಾಗುತ್ತದೆ. ಇವೊತ್ತು ಇಷ್ಟೇ ಪ್ರಮಾಣದಲ್ಲಿ ಮಾರ್ಕೆಟ್‌ಗೆ ರೇಷ್ಮೆ ಬರುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಒಂದು ದಿನ ಹೆಚ್ಚು ಆಗಬಹುದು, ಒಂದು ದಿನ ಕಡಿಮೆ ಆಗಬಹುದು. ಈಗ ೨ ತಿಂಗಳ ಹಿಂದೆ ಇದು ಕಡಿಮೆ ಪ್ರಮಾಣದಲ್ಲಿ ಬರುತ್ತಿದ್ದು ಈಗಿನ ೨ ತಿಂಗಳುಗಳಲ್ಲಿ ರೇಷ್ಮೆ ಹೆಚ್ಚು ಬರುತ್ತಾ ಇದೆ.

ಇನ್ನು ೧೯೮೪–೮೫ರಲ್ಲಿ ೪,೫೦೦ ಟನ್ ಕಚ್ಚಾ ರೇಷ್ಮೆಯನ್ನು ಉತ್ಪತ್ತಿ ಮಾಡತಕ್ಕ ನಿರ್ಧಾರವನ್ನು ಸರ್ಕಾರ ಇಟ್ಟುಕೊಂಡಿದೆ, ಸಾಧ್ಯವಾದಷ್ಟು ಮಟ್ಟಿಗೆ ಅಲ್ಲಲ್ಲಿ ಈ ಟ್ವಿಸ್ಟರ್ಸ್ ಮತ್ತು ವೀವರ್ಸ್ ಅವರ ಸಮಸ್ಯೆಗಳ ಬಗ್ಗೆ ಪರಿಹಾರ ದೊರಕಿದೆ. ಇನ್ನು ರೇಷ್ಮೆ ಇಲಾಖೆಯಲ್ಲಿ ಕೆಲಸ ಮಾಡತಕ್ಕ ನೌಕರರ ಸಮಸ್ಯೆ ಬಗ್ಗೆ ಹೇಳಿದ್ದಾರೆ ಅದರ ಬಗ್ಗೆ ಕೂಡ ಪರಿಶೀಲನೆ ಮಾಡುತ್ತಿದ್ದೇವೆ. ಅವರಿಗೂ

ಸಹ ಆದಷ್ಟು ಬೇಗ ಪರಿಹಾರವನ್ನು ಕಂಡುಹಿಡಿಯುವುದಕ್ಕೆ ಸರ್ಕಾರ ಈಗಾಗಲೇ ತೀವ್ರವಾಗಿ ಪರಿಶೀಲನೆ ಮಾಡುತ್ತಿದೆ. ಮಾನ್ಯ ಸದಸ್ಯರುಗಳು ಹೇಳಿದಹಾಗೆ ಅಲ್ಲಿನ ಕೆಲಸಗಾರರ ಬಗ್ಗೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸುಮಾರು ೬-೮ ಸಾವಿರಜನರು ಯಾವಒಂದು ನೇಮಕಾತಿ ನಿಯಮಗಳಿಲ್ಲದೇ, ಎಕ್ಸ್‌ಟೆನ್‌ಷನ್ ಫಾರ್ಮ್ಸ್ ಎಂದು ಮುಂತಾದವರುಗಳನ್ನು ಸೇರಿಸಿಕೊಂಡಿದ್ದಾರೆ. ಇದರಲ್ಲಿ ಯಾರದೇ ತಪ್ಪು ಇರಲಿ, ಇದು ಆಗಿ ಹೋಗಿದೆ ಈಗ ಅವರು ಸುಮಾರು ೬-೭-೮ ವರ್ಷಗಳಿಂದ ಸೇವೆ ಮಾಡುತ್ತಿದ್ದಾರೆ. ಅವರಲ್ಲಿ ಎಷ್ಟೋ ಜನ ವಿದ್ಯಾವಂತರೂ ಇದ್ದಾರೆ ಅವರು ವಿವಿಧ ಹುದ್ದೆಗಳಲ್ಲಿ ಇದ್ದು ವ್ಯಾಪಕವಾಗಿ ಕೆಲಸ ಮಾಡಿಕೊಂಡು ಬರುತ್ತಿದ್ದಾರೆ. ಇವರಲ್ಲಿ ಎಸ್‌ಎಸ್‌ಎಲ್‌ಸಿ ಆಗಿರತಕ್ಕವರು, ನಾನ್ ಎಸ್‌ಎಸ್‌ಎಲ್‌ಸಿ ಯವರು ಗ್ರಾಜುಯೇಟ್ಸ್ ಡಬ್ಬಲ್ ಗ್ರಾಜುಯೇಟ್ಸ್ ಎಲ್ಲಾ ಇದ್ದಾರೆ, ಇವರೆಲ್ಲಾ ನೌಕರರ ವ್ಯಾಪ್ತಿಯಲ್ಲಿ ಬರುವುದಕ್ಕೆ ಈಗಿರತಕ್ಕ ಕಾನೂನಿಗೆ ಏನಾದರೂ ತಿದ್ದುಪಡಿ ತಂದು ಮಾಡುವ ಹಾಗಿದ್ದರೆ ಅದನ್ನು ಆದಷ್ಟು ಬೇಗ ಬದಲಾವಣೆ ಮಾಡಿ ಅವರನ್ನು ಆದಷ್ಟು ಬೇಗ ಖಾಯಂ ಮಾಡುವುದಕ್ಕೆ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ.

ಶ್ರೀ ವೈ. ರಾಮಕೃಷ್ಣ.—ಹೋದ ವರ್ಷವೂ ಹಾಗೇ ಹೇಳಿದಿರಿ. ಈಗ ಪರಿಸ್ಥಿತಿ ಏನಾಗಿದೆ ಎಂದರೆ ಅವರು ಅಲ್ಲಿ ಎಲ್ಲಾ ಕಚೇರಿಗಳ ಮುಂದೆ ಧರಣಿ ಕುಳಿತ್ತಿದ್ದಾರೆ. It is a human problem. It requires utmost consideration and immideate and urgent attention.

SMT CHANDRAPRABHA URS.—It has been accumulated since many years,

ಶ್ರೀ ವೈ. ರಾಮಕೃಷ್ಣ.—ಇವರ ಸೇವೆಯನ್ನು ಮುಂದುವರೆಸಿ ಖಾಯಂ ಮಾಡುತ್ತೀರೋ ಇಲ್ಲವೋ ಎನ್ನುವ ಬಗ್ಗೆ ಭರವಸೆಯನ್ನು ಕೊಡಿ. ಪಿ.ಡಬ್ಲ್ಯು.ಡಿ, ಯಲ್ಲಿರತಕ್ಕ ಕಂಟ್ರಾಕ್ಟ್ ಕೆಲಸಗಾರರನ್ನು ಖಾಯಂ ಮಾಡುತ್ತೇವೆಂದು ಮಾನ್ಯ ಪಿ.ಡಬ್ಲ್ಯು.ಡಿ. ಇಲಾಖೆಯ ಮಂತ್ರಿಗಳವರು ಹೇಳಿ ಆರ್ಡರ್‌ಕೊಡಿರುವಾಗ ಅದೇ ರೀತಿಯಾಗಿ ಬೇರೆ ಇಲಾಖೆಗಳಲ್ಲೂ ಏತಕ್ಕೆ ಮಾಡಬಾರದು ?

ಶ್ರೀ ಎಂ. ಎಸ್. ಕೃಷ್ಣನ್.—ಮಾಡಿಯೇ ಮಾಡುತ್ತೇವೆಂದು ಹೇಳಿದರೆ ಸಂತೋಷ. ಆದರೆ ನಾವು ನಿಮ್ಮನ್ನು ಕೇಳುವುದು ಇಷ್ಟೇ. ಎಷ್ಟು ದಿನಗಳಲ್ಲಿ ಇದನು ಮಾಡುತ್ತೀರಿ ಎಂಬುದನ್ನು ಹೇಳಿ ಬಿಡಿ.

ಶ್ರೀಮತಿ ಚಂದ್ರಪ್ರಭಾ ಅರಸ್.—ರಾಜ್ಯದಲ್ಲಿ ಹಂಗಾಮಿ ನೌಕರರ ಸಮಸ್ಯೆ ಇದೊಂದು ಇಲಾಖೆಯಲ್ಲಿ ಅಲ್ಲ. ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟ್, ಸಿರಿಕಲ್ಚರಲ್ ಡಿಪಾರ್ಟ್‌ಮೆಂಟ್, ಪಿ.ಡಬ್ಲ್ಯು.ಡಿ, ಎಲ್ಲಾ ಇಲಾಖೆಗಳಲ್ಲೂ ಈ ಸಮಸ್ಯೆ ಇದೆ.

ಶ್ರೀ ಎಂ.ಎಸ್. ಕೃಷ್ಣನ್.—ಪಿ. ಡಬ್ಲ್ಯು. ಡಿ. ಇಲಾಖೆಯಲ್ಲಿ ಗ್ಯಾಂಗ್‌ಮನ್ ಕೂಲಿ ಬಗ್ಗೆ ಮಾನ್ಯ ಶ್ರೀ ದೇವೇಗೌಡರವರು ಬಹಳ ಧೈರ್ಯ ಮಾಡಿದ್ದಾರೆ. ಇದು ಪಾಲಿಸಿ ಮ್ಯಾಟರ್ ಅದೇ ರೀತಿಯಾಗಿ ತಾವು ಏತಕ್ಕೆ ಮಾಡಬಾರದು ? ನಾವು ನಿಮಗೆ ಬೆಂಬಲ ಕೊಡುತ್ತಿದ್ದೇವೆ.

ಶ್ರೀಮತಿ ಚಂದ್ರಪ್ರಭಾ ಅರಸ್.—ಅದಕ್ಕೆ ಸ್ಟೆಬಿಲೈಜೇಷನ್ ಫಂಡ್ಸ್‌ನ್ನು ತೋರಿಸಬೇಕಾಗುತ್ತದೆ ಎಲ್ಲಿಂದ ತೋರಿಸುವುದು ? ಸುಮ್ಮನೆ ಖಾಯಂ ಮಾಡಿಬಿಡುತ್ತೇವೆಂದು ಹೇಳಿದಾಕ್ಷಣ ಅದು ಆಗುವುದಿಲ್ಲ ಆದುದರಿಂದ ಎಲ್ಲಿಂದ ಹಣ ಉಳಿತಾಯ ಮಾಡಬಹುದು. ಎಲ್ಲಿಂದ ಹೆಚ್ಚಿಗೆ ಹಣ ಹಾಕಬಹುದು ಎನ್ನುವ ಬಗ್ಗೆ ನೋಡೋಣ. ಅಲ್ಲಿ ೧೮, ೧೯ ಸಾವಿರ ಗ್ಯಾಂಗ್‌ಮನ್ ಕೂಲಿಗಳು ಇದ್ದರು ಅದರಲ್ಲಿ ೧೦,೦೦೦ ಗ್ಯಾಂಗ್‌ಮನ್ ಕೂಲಿಗಳನ್ನು ಖಾಯಂ ಮಾಡುತ್ತೇವೆಂದು ಹೇಳಿದ್ದಾರೆ. ಅವರಿಗೆ ಉದ್ಯೋಗ ಖಾಯಂ ಮತ್ತು ರಜಾ ಮತ್ತಿತರ ಸೌಲಭ್ಯವನ್ನು ಕೊಡುತ್ತಿದ್ದಾರೆ. ನಾವು ಅದೇ ರೀತಿಯಾಗಿ ಇವರಿಗೂ ಸಹ ೩೦೦ ರೂಪಾಯಿಗಳ ಸಂಬಳ ಕೊಡುವ ಹಾಗೆ ವ್ಯವಸ್ಥೆ ಮಾಡಿ ಎಂದರೆ ಒಂದೇ ಸಾರಿಯಾಗಿ ಮಾಡಬಹುದಾಗಿತ್ತು, ಆದರೆ ಇದರ ಜೊತೆಯಲ್ಲಿ ಇನ್ನು ಅನೇಕ ಸಮಸ್ಯೆಗಳು ಇದರಲ್ಲಿ ಇವೆ.

ಶ್ರೀ ವೈ. ರಾಮಕೃಷ್ಣ.—ಎಷ್ಟು ದಿನಗಳಲ್ಲಿ ಮಾಡುತ್ತೀರಿ ?

ಶ್ರೀಮತಿ ಚಂದ್ರಪ್ರಭಾ ಅರಸ್.—ಆದಷ್ಟು ಬೇಗ ಮಾಡಿಕೊಡುತ್ತೇವೆ ನಿಮಗಿಂತ ತೀವ್ರವಾದ ಕಳವಳ ನಮಗೂ ಇದೆ, ಆದುದರಿಂದ ಅವರ ಸಮಸ್ಯೆಯನ್ನೆಲ್ಲಾ ಪರಿಹಾರ ಮಾಡುವುದಕ್ಕೆ

ಬೇಕಾದ ಎಲ್ಲಾ ಪ್ರಿಪರೇಷನ್ ಆಗಿದೆ ಇದನ್ನು ಸಚಿವ ಸಂಪುಟಕ್ಕೆ ಕಳುಹಿಸಿಕೊಟ್ಟು ಅಲ್ಲಿ ಇದರ ಬಗ್ಗೆ ನಮ್ಮ ಹಿರಿಯ ಸಚಿವರುಗಳು ಮತ್ತು ಮುಖ್ಯ ಮಂತ್ರಿಗಳವರೂ ಸೇರಿ ಮಾಡಿಕೊಡುತ್ತಾರೆ. ಎನ್ನತಕ್ಕ ಭರವಸೆ ಇವೆ. ಅದನ್ನು ಅಪ್ರೂವಲ್ ಸಹ ಮಾಡಿಸಿ ಕೊಳ್ಳುತ್ತೇನೆ. ಮತ್ತೆ ಸ್ಟಡಿ ಟೂರ್ ಗೋಸ್ಕರವಾಗಿ ಈಗಾಗಲೇ ೩ ಬ್ಯಾಚ್‌ಗಳನ್ನು ಕಳುಹಿಸಿದ್ದೇವೆ. ಇಷ್ಟರಲ್ಲಿಯೇ ಇನ್ನೊಂದು ಬ್ಯಾಚ್‌ನವರು ಹೋಗುತ್ತಿದ್ದಾರೆ. ಇನ್ನು ಈ ಹುಳುವನ್ನು ಸಾಕುವುದಕ್ಕೆ ಒಳ್ಳೆಯ ಪರಿಸರ ಮತ್ತು ಮನೆ ಬೇಕಾಗುತ್ತದೆ. ಅವರಿಗೆ ಇರಲಿಕ್ಕೆ ವಾಸಕ್ಕೆ ಮನೆ ಇರುವುದಿಲ್ಲ ಇನ್ನು ಪ್ರತ್ಯೇಕವಾದ ಕೊಠಡಿಯನ್ನು ಅವರು ಹೊಂದಬೇಕಾಗಿದ್ದರೆ ಅವರಿಗೆ ಆರ್ಥಿಕ ಸಹಾಯ ಬೇಕಾಗುತ್ತದೆ. ಆದುದರಿಂದ ನಾವು ಈ ಯೋಜನೆಯನ್ನು ಗೃಹ ಮಂಡಲಿಯ ಅಧ್ಯಕ್ಷರ ನೆರವಿನಿಂದ ಹುಡ್ಕೋ ಯೋಜನೆ ಅಡಿಯಲ್ಲಿ ನಾವು ಈ ರೀತಿಯಾಗಿ ಮನೆಗಳನ್ನು ಬಡ ರೈತರಿಗೆ ಕಟ್ಟಿಸಿ ಕೊಡಬೇಕು ಎನ್ನತಕ್ಕ ಯೋಜನೆಯನ್ನು ಈಗಾಗಲೇ ಹಾಕಿಕೊಂಡಿದ್ದೇವೆ. ಇದು ಆದಷ್ಟು ಜಾಗ್ರತೆ ಕಾರ್ಯಗತವಾಗುತ್ತದೆ. ಎನ್ನುವ ಭರವಸೆಯನ್ನು ಸಹ ಹೊಂದಿದ್ದೇನೆ. ಇವೊತ್ತು ನಮ್ಮಲ್ಲಿರತಕ್ಕ ರೇಷ್ಮೆ ಬೆಳೆಯ ಉತ್ಪತ್ತಿಯ ಗುಣಮಟ್ಟವನ್ನು ಸುಧಾರಣೆ ಮಾಡಿಕೊಂಡರೆ ವರ್ಲ್ಡ್ ಮಾರ್ಕೆಟ್‌ನಲ್ಲಿ ಸ್ಪರ್ಧೆ ಮಾಡುವುದಕ್ಕೆ ಸಾಧ್ಯವಿದೆ ಎನ್ನತಕ್ಕ ಆಶಾದಾಯಕವಾದ ಭವಿಷ್ಯವಿದೆ. ಇದರಲ್ಲಿ ನಿಮ್ಮೆಲ್ಲರ ಸಹಕಾರವನ್ನು ಸಹ ಕೋರುತ್ತೇನೆ.

ಸಮಾಜ ಕಲ್ಯಾಣ ಇಲಾಖೆ ಬಗ್ಗೆ ಹೇಳಬೇಕೆಂದರೆ ಇದು ಬಹಳ ದೊಡ್ಡ ಇಲಾಖೆ ಇದೆ. ಇದರಲ್ಲಿ ಸಮಾಜದ ಎಲ್ಲಾ ಅಂಗಗಳೂ ಸೇರಿಕೊಂಡಿವೆ. ಮಹಿಳೆಯರು ಮಕ್ಕಳು ಹಿಂದುಳಿದ ವರ್ಗದವರು ಅಂಗವಿಕಲರು ಎಲ್ಲರೂ ಸೇರಿರುವುದರಿಂದ ಇದರ ಬಗ್ಗೆ ನಾನು ಉತ್ತರ ಕೊಡಲು ಸ್ವಲ್ಪ ಕಾಲಾವಕಾಶವನ್ನು ಕೊಡಬೇಕೆಂದು ಕೋರುತ್ತೇನೆ. ಹಿಂದುಳಿದ ವರ್ಗದವರಿಗೆ ಮತ್ತು ಅಲ್ಪಸಂಖ್ಯಾತರ ಕಲ್ಯಾಣವಾಗಬೇಕು ಎನ್ನುವ ಉದ್ದೇಶದಿಂದ ೧೯೭೫ರ ಈಚೆಗೆ ಹಾವನೂರ್‌ರವರ ವರದಿ ಜಾರಿಗೆ ಬಂತು. ಆ ಒಂದು ಆಯೋಗದ ಆಧಾರದ ಮೇಲೆ ಹರಿಜನ ಗಿರಿಜನರ ಅಭಿವೃದ್ಧಿ ಕಾರ್ಯಗಳು ಆಗುತ್ತಿವೆ. ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳಿಗೆ ಶುಲ್ಕ ರಿಯಾಯಿತಿ, ವಿದ್ಯಾರ್ಥಿನಿಲಯಗಳ ಸೌಲಭ್ಯ ಮತ್ತು ಇನ್ನಿತರ ಕೆಲವು ಮುಖ್ಯವಾದ ಕಾರ್ಯಕ್ರಮಗಳನ್ನು ಈ ಒಂದು ಇಲಾಖೆಯ ಮುಖಾಂತರವಾಗಿ ಮಾಡುತ್ತಿದ್ದೇವೆ,

೫-೦೦ ಪಿ.ಎಂ.

ಸುಮಾರು ೧೯೮೩-೮೪ರವರೆಗೆ ೪೧೦ ಪ್ರೀಮೆಟ್ರಿಕ್ ಮತ್ತು ೭೫ ಪೋಸ್ಟ್‌ಮೆಟ್ರಿಕ್ ವಿದ್ಯಾರ್ಥಿನಿಲಯಗಳು ನಡೆಯುತ್ತಿವೆ. ನಾವು ಬಂದಮೇಲೆ ಹೊಸದಾಗಿ ಸಾಧನೆ ಮಾಡಿದ್ದುದು ಎಂದರೆ ೧೯೮೩-೮೪ರಲ್ಲಿ ೯೧ ವಿದ್ಯಾರ್ಥಿನಿಲಯಗಳನ್ನು ಗಂಡುಮಕ್ಕಳಿಗೂ ಮತ್ತು ೯ ವಿದ್ಯಾರ್ಥಿನಿಲಯಗಳನ್ನು ಹೆಣ್ಣುಮಕ್ಕಳಿಗೂ ತೆರೆದು ಪ್ರತಿಯೊಂದು ವಿದ್ಯಾರ್ಥಿ ನಿಲಯದಲ್ಲೂ ೨೫ ಜನ ವಿದಾರ್ಥಿಗಳಿಗೆ ಸ್ಥಳಾವಕಾಶವನ್ನು ಮಾಡಿಕೊಟ್ಟಿದ್ದೇವೆ. ವಿವಿಧ ತಾಲ್ಲೂಕುಗಳಲ್ಲಿ ಹಿಂದುಳಿದ ಪ್ರದೇಶಗಳು ಏನಿವೆ ಅಲ್ಲಿ ಹರಿಜನ ಗಿರಿಜನರಿಗೆ ಜಿಲ್ಲಾಧಿಕಾರಿಯವರ ವರದಿಯ ಆಧಾರದಮೇಲೆ ವಿದ್ಯಾರ್ಥಿನಿಲಯಗಳನ್ನು ತೆರೆಯಬೇಕೆಂದು ಒಂದು ಬೇಡಿಕೆಯನ್ನು ಇಟ್ಟಿದ್ದೇವೆ. ಅನೇಕ ವರ್ಷಗಳಿಂದ ಈ ವಿದ್ಯಾ ಕೇಂದ್ರಗಳಲ್ಲಿ ಸುವ್ಯವಸ್ಥಿತವಾದ ಕಟ್ಟಡಗಳು ಇಲ್ಲದೆ ಬಹಳ ತೊಂದರೆಯಾಗಿದೆ. ನೂರಕ್ಕೆ ಸುಮಾರು ೮೦ರಷ್ಟು ಭಾಗ ಬಾಡಿಗೆ ಕಟ್ಟಡದಲ್ಲೇ ಇದ್ದಾರೆ. ಮುಖ್ಯವಾಗಿ ನೀರಿನ ವ್ಯವಸ್ಥೆ, ದೀಪದ ವ್ಯವಸ್ಥೆಗಳಿಗೆ ಬಹಳ ಕಷ್ಟವಾಗಿದೆ. ಇಂಥ ದೋಷವನ್ನು ನಿವಾರಿಸಲು ಇನ್ನುಮುಂದೆ ಸರ್ಕಾರದ ವತಿಯಿಂದಲೇ ಕಟ್ಟಡಗಳನ್ನು ಕಟ್ಟುವುದಕ್ಕೆ ಪ್ರಯತ್ನ ಮಾಡಬೇಕೆಂದಿದ್ದೇವೆ. ಆದರೆ ಇದಕ್ಕಾಗಿ ಹೆಚ್ಚಿನ ಹಣವನ್ನು ನಾವು ಇಡುವುದಕ್ಕೆ ಸಾಧ್ಯವಾಗದಿದ್ದರೂ ಇದಕ್ಕೆ ಬೇಕಾದಹಣವನ್ನು ಎನ್.ಆರ್.ಇ.ಪಿ.ಮುಖಾಂತರ ಅಥವಾ ಸ್ಪೆಷಲ್ ಕಾಂಪೊನೆಂಟ್ ಪ್ಲಾನ್‌ನ ಮುಖಾಂತರ ತೆಗೆದುಕೊಳ್ಳಬೇಕೆಂದು ಮಾಡಿದ್ದೇವೆ. ಈ ವರ್ಷ ೧೦೦ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳನ್ನು ಹೊಸದಾಗಿ ಮಂಜೂರುಮಾಡಿದ್ದೇವೆ. ಇವುಗಳ ಕಟ್ಟಡಕೋಸ್ಕರ ಸುಮಾರು ೨೦ ಲಕ್ಷ ರೂಪಾಯಿಗಳನ್ನು ಒದಗಿಸಿಕೊಳ್ಳಬೇಕಾಗಿದೆ. ಈಗ ಎನ್.ಆರ್.ಇ.ಪಿ.ನಿಂದ ೫೦ ಕಟ್ಟಡಗಳಿಗೆ ಸ್ಪೆಷಲ್ ಸಬ್ ಪ್ಲಾನ್ ಮುಖಾಂತರ ೧೯ ಕಟ್ಟಡಗಳಿಗೆ, ಪಿ.ಡಬ್ಲ್ಯು.ಡಿ.ನಿಂದ ೧೧ ಕಟ್ಟಡಗಳಿಗೆ ನಾವು ವ್ಯವಸ್ಥೆ ಮಾಡಿ ಕೊಳ್ಳಬೇಕಾಗುತ್ತದೆ. ಇದುವರೆಗೂ ಈ ರೀತಿ ನಾವು ಮಾಡಿರಲಿಲ್ಲ. ಈಗ ಎನ್.ಆರ್.ಇ.ಪಿ.ನಿಂದ ೧೯೮೩-೮೪ಕ್ಕೆ ೧೧ಲಕ್ಷ ರೂಪಾಯಿಗಳನ್ನು ಮತ್ತು ೧೯೮೪-೮೫ರಲ್ಲಿ ೧೧ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಹೊಸದಾಗಿಕಟ್ಟಡಗಳು ಕಟ್ಟಬೇಕೆಂದು ಯೋಚನೆ ಮಾಡಿದ್ದೇವೆ. ಹೊಸದಾಗಿ ಆಟದಸಾಮಾನುಗಳಿಗೋಸ್ಕರ ೧ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಹಾಸ್ಟೆಲ್‌ಗಳ ಮೈನ್‌ಟೆನೆನ್ಸ್

ಗೋಸ್ಕರ ಒಟ್ಟು ೪೩೧.೫೦ಲಕ್ಷ ರೂಪಾಯಿಗಳನ್ನು ಇಟ್ಟು ಇದರಲ್ಲಿ ಅಂದರೆ ಯೋಜನೆಯ ಅಡಿಯಲ್ಲಿ ೧೮೦ಲಕ್ಷ ಮತ್ತು ಯೋಜನೇತರದಲ್ಲಿ ೨೫೧ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಈಗ ೧೯೮೪-೮೫ರಲ್ಲಿ ಹಳೆಯದು ಮತ್ತು ಹೊಸದು ಎರಡೂ ಸೇರಿ ಒಟ್ಟಿಗೆ ೫೨೬.೧೧ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಈ ಯೋಜನೆಯ ಅಡಿಯಲ್ಲಿ ೧೯೬ಲಕ್ಷ ರೂಪಾಯಿ ಮತ್ತು ಯೋಜನೇತರದಲ್ಲಿ ೩೩೦.೧೧ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ವಿವಿಧ ಜಿಲ್ಲೆಗಳಲ್ಲಿ ೨೨೮ ಶಾಲೆಗಳಿವೆ, ಇವರಿಗೆ ಕೊಡತಕ್ಕ ಹಣದಲ್ಲಿ ಯೋಜನೆಯ ಅಡಿಯಲ್ಲಿ ೨೯ ಲಕ್ಷ ಮತ್ತು ಯೋಜನೇತರದಲ್ಲಿ ೩೪.೪೮ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ.

ಇನ್ನು ಅನಾಥಾಶ್ರಮಗಳ ಬಗ್ಗೆ ಹೇಳುವುದಾದರೆ ರಾಜ್ಯದಲ್ಲಿ ೧೪೬ ಅನಾಥಾಶ್ರಮಗಳಿವೆ. ಇದಕ್ಕಾಗಿ ೧೯೮೩-೮೪ರಲ್ಲಿ ೬೫೦.೨೬ ಲಕ್ಷ ರೂಪಾಯಿಗಳನ್ನು ಖರ್ಚುಮಾಡಲಾಗಿದೆ. ೧೯೮೪-೮೫ರಲ್ಲಿ ೬೩.೪೬ ಲಕ್ಷ ರೂಪಾಯಿಗಳನ್ನು ಇಡಲಾಗಿದೆ. ಪ್ರತಿ ತಿಂಗಳೂ ಒಬ್ಬೊಬ್ಬ ನಿವಾಸಿಗೆ ೫೦ ರೂಪಾಯಿಗಳ ಪ್ರಕಾರ ಸಹಾಯ ಅನುದಾನವನ್ನು ಕೊಡುತ್ತಿದ್ದೇವೆ. ಇಲ್ಲಿ ಹಾಸ್ಟೆಲ್ ಛಾರ್ಜಸ್‌ನ್ನು ೪೦ ರಿಂದ ೬೫ ರೂಪಾಯಿಗೆ ಏರಿಸಿದ್ದೇವೆ. ಹಿಂದುಳಿದ ವರ್ಗದ ವಿದ್ಯಾರ್ಥಿನಿಲಯದ ಮಕ್ಕಳಿಗೆ ಅಂದ ಮೆಂಟ್ರಿಕ್ ಪೂರ್ವದವರಿಗೆ ೬೫ ರೂಪಾಯಿಗಳಿಂದ ೧೦೦ ರೂಪಾಯಿಗೆ ಏರಿಸಿದ್ದೇವೆ. ಆಶ್ರಮಶಾಲೆಗಳು ಇವತ್ತು ಒಟ್ಟು ೪೭ ಇವೆ. ೧೯೮೩-೮೪ನೇ ಸಾಲಿನಲ್ಲಿ ಇವುಗಳಿಗೆ ೨೩.೬೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ಈಗ ೧೯೮೪-೮೫ನೇ ಸಾಲಿಗೆ ೩೯.೧೯ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ.೧೯೮೩-೮೪ನೇ ಸಾಲಿನಲ್ಲಿ ವಿದ್ಯಾರ್ಥಿ ವೇತನ ತೆಗೆದುಕೊಂಡವರು ೧,೫೮,೬೫೦ ಮಕ್ಕಳು ಪ್ರೀ ಮೆಂಟ್ರಿಕ್‌ಗೆ ಸೇರಿದವು. ೨೬,೧೬೭ ಮಕ್ಕಳು ಪೋಸ್ಟ್ ಮೆಟ್ರಿಕ್‌ಗೆ ಸೇರಿದವು. ೮೪-೮೫ನೇ ಸಾಲಿನಲ್ಲಿ ಪ್ರೀ ಮೆಟ್ರಿಕ್ ವಿದ್ಯಾರ್ಥಿಗಳ ವಿದ್ಯಾರ್ಥಿವೇತನಕ್ಕಾಗಿ ೧೧೬ ಲಕ್ಷ ರೂಪಾಯಿಗಳನ್ನು ಪೋಸ್ಟ್ ಮೆಟ್ರಿಕ್ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನಕ್ಕಾಗಿ ೧೨೫ ಲಕ್ಷರೂಪಾಯಿಗಳನ್ನೂ ಖರ್ಚುಮಾಡಬೇಕೆಂದು ಯೋಚನೆ ಮಾಡಿದ್ದೇವೆ.೮೪-೮೫ನೇ ಸಾಲಿನಲ್ಲಿ ಶುಲ್ಕ ರಿಯಾಯಿತಿಯ ಬಗ್ಗೆ ೩೫೮ ಲಕ್ಷ ರೂಪಾಯಿಗಳನ್ನು ಯೋಜನೇತರ ಬಾಬುಗಳಲ್ಲಿ ಒದಗಿಸಬೇಕೆಂದು ಮಾಡಿದ್ದೇವೆ. ಇಲ್ಲಿ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೋಸ್ಕರ ಬೆರಳಚ್ಚು ಮತ್ತು ಶೀಘ್ರಲಿಪಿ ತರಬೇತಿಗಾಗಿ ೮೩-೮೪ನೇ ಸಾಲಿನಲ್ಲಿ ೨ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ೩೩೨ ವಿದ್ಯಾರ್ಥಿಗಳಿಗೆ ತರಬೇತಿಯನ್ನು ಕೊಡಿಸಿದ್ದೇವೆ. ೧೯೮೪-೮೫ನೇ ಸಾಲಿನಲ್ಲಿ ಹಿಂದುಳಿದವರ್ಗದ ೩೩೦ ಮಕ್ಕಳಿಗೆ ತರಬೇತಿ ಕೊಡಿಸಲು ಮತ್ತೆ ೨ ಲಕ್ಷ ರೂಪಾಯಿಗಳು ಇಟ್ಟಿದ್ದೇವೆ. ಇನ್ನೂ ಬೇರೆಬೇರೆ ರೀತಿಯಲ್ಲಿ ಇವರಿಗೆ ತರಬೇತಿಯನ್ನು ಕೊಡಲೂ ವ್ಯವಸ್ಥೆ ಮಾಡಿದ್ದೇವೆ. ಉದಾಹರಣೆಗೆ ಹೇಳುವುದಾದರೆ ಹೊಲಿಗೆ ತರಬೇತಿ ಕೇಂದ್ರ ೨ ಇವೆ. ಇಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿನಿಗೂ ೬೫ ರೂಪಾಯಿಗಳ ಸ್ಟೈಪೆಂಡ್‌ನ್ನು ಕೊಡುತ್ತಿದ್ದೇವೆ. ಇದರಲ್ಲಿ ೨೫೦ ಜನ ಫಲಾನುಭವಿಗಳಿದ್ದಾರೆ. ೧೯೮೪-೮೫ರ ಸಾಲಿನಲ್ಲಿ ೬.೪೦ ಲಕ್ಷ ರೂಪಾಯಿಗಳನ್ನು ಇದಕ್ಕಾಗಿ ವೆಚ್ಚಮಾಡುವ ಯೋಚನೆ ಇದೆ. ಇದರಿಂದಾಗಿ ಹೆಚ್ಚು ಜನ ಫಲಾನುಭವಿಗಳಿಗೆ ತರಬೇತಿ ಸಿಕ್ಕಿದಂತಾಗುತ್ತದೆ. ಗುಲ್ಬರ್ಗಾ ಮತ್ತು ಗೌರಿಬಿದನೂರಿನಲ್ಲಿ ಮಹಿಳೆಯರಿಗಾಗಿ ಔದ್ಯೋಗಿಕ ಶಿಕ್ಷಣ ನೀಡುವ ಸಲುವಾಗಿ ನಾವು ಹೆಚ್ಚು ಗಮನ ನೀಡುತ್ತಿದ್ದೇವೆ. ಅಲ್ಲಿಕಟ್ಟಡಕ್ಕೋಸ್ಕರ ೧೯೮೩-೮೪ರಲ್ಲಿ ೩ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ, ಮತ್ತು ೧೯೮೪-೮೫ನೇ ಸಾಲಿನಲ್ಲಿ ಕಟ್ಟಡಕೋಸ್ಕರ ೩ ಲಕ್ಷ ರೂಪಾಯಿಗಳನ್ನು ಮತ್ತು ನಿರ್ವಹಣೆಗಾಗಿ ೩ ಲಕ್ಷ ರೂಪಾಯಿಗಳನ್ನೂ ಇಟ್ಟಿದ್ದೇವೆ. ಇದೂ ಅಲ್ಲದೆ ಕಾನೂನು ಪದವೀಧರರಿಗೆ ತರಬೇತಿ ಕೊಡುವುದಕ್ಕೆ ೮೪-೮೫ರ ಸಾಲಿನಲ್ಲಿ ಒಟ್ಟು ೫ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ ಪ್ರತಿಯೊಬ್ಬ ಕಾನೂನು ಪದವಿ ವಿದ್ಯಾರ್ಥಿಗಳಿಗೂ ೫೦೦ ರೂಪಾಯಿಗಳ ಸ್ಟೈಪೆಂಡ್‌ನ್ನು ಕೊಡುವ ವ್ಯವಸ್ಥೆ ಮಾಡಿದ್ದೇವೆ. ಇದು ಬೆಂಗಳೂರು ಅಡ್ವೋಕೇಟ್ ಜನರಲ್ ರವರ ಮುಖಾಂತರ ನಡೆಯುತ್ತಿದೆ. ಇದಕ್ಕೆ ಈ ಸಾರಿ ೫ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಸುಮಾರು ೫೦ ಹಾಸ್ಟೆಲ್ ಕಟ್ಟಡಗಳನ್ನು ತೆಗೆದುಕೊಳ್ಳಬೇಕೆಂದು ಮಾಡಿದ್ದೇವೆ. ಎನ್.ಆರ್.ಇ.ಪಿ ಯಲ್ಲಿ ಸಾಕಷ್ಟು ನೆರವು ತೆಗೆದುಕೊಳ್ಳುತ್ತೇವೆ. ಹಿಂದುಳಿದ ಆಯೋಗಗಳ ಬಗ್ಗೆ ಹೇಳುವುದಾದರೆ ಸುಪ್ರೀಂ ಕೋರ್ಟ್‌ನ ಆದೇಶದ ಪ್ರಕಾರ ಹಾವನೂರು ಆಯೋಗದ ನಂತರ ತಮಿಳ್ನಾಡು ಮತ್ತು ಕರ್ನಾಟಕದಲ್ಲಿ ಎರಡನೆಯ ಆಯೋಗವನ್ನು ನೇಮಕಮಾಡಿದ್ದೇವೆ. ಕರ್ನಾಟಕದಲ್ಲಿ ವೆಂಕಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ೧೪ ಜನ ಸದಸ್ಯರನ್ನೊಳಗೊಂಡಂತೆ ಆಯೋಗವನ್ನು ನೇಮಿಸಿದ್ದೇವೆ ಇದರಲ್ಲಿ ನಮ್ಮ ಇಲಾಖೆಯ ನಿರ್ದೇಶಕರು ಸದಸ್ಯ ಕಾರ್ಯದರ್ಶಿಯಾಗಿದ್ದಾರೆ. ನಮ್ಮ ರಾಜ್ಯದಲ್ಲಿ ವಿಭಾಗೀಯ ಸಮೀಕ್ಷೆಯನ್ನು ನಡೆಸಿ ಸಮಗ್ರವಾದ ಅಂಕಿಅಂಶಗಳನ್ನು ಪಡೆಯು

ಬೇಕೆಂದು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಏನೇನು ಮಾಹಿತಿಗಳನ್ನು ಸಂಗ್ರಹಿಸ ಬೇಕೋ ಅದರ ಸಲುವಾಗಿ ೧೨-೧೩ ಜಿಲ್ಲೆಗಳಲ್ಲಿ ಪ್ರವಾಸ ಮಾಡಲಾಗಿದೆ. ಅನೇಕ ಕಡೆಗಳಲ್ಲಿ ಧಾರ್ಮಿಕ ಸಂಘಸಂಸ್ಥೆಗಳ ಮುಖಾಂತರ, ಶೈಕ್ಷಣಿಕ ಸಂಘ ಸಂಸ್ಥೆಗಳ ಮುಖಾಂತರ ಅಧ್ಯಯನ ಮಾಡುತ್ತಿದೆ. ನಮ್ಮ ರಾಷ್ಟ್ರದಲ್ಲಿ ಅನೇಕ ವರ್ಷಗಳಿಂದಲೂ ಜಾತೀಯ ಪದ್ಧತಿ ಬೆಳೆದುಕೊಂಡು ಬರುತ್ತಿದೆ. ಜಾತಿ, ಉಪಜಾತಿ, ಪಂಗಡ, ಉಪ ಪಂಗಡಗಳು ಬೆಳೆದುಕೊಂಡು ಬರುತ್ತಿವೆ.

ಆದ್ದರಿಂದ ಒಂದು ಸಮಗ್ರವಾದ ಸಮೀಕ್ಷೆ ಆಗಿಲ್ಲ ಎನ್ನುವ ದೃಷ್ಟಿಯಿಂದ ಮತ್ತೆ ಸಮೀಕ್ಷೆಯ ಕಾರ್ಯವನ್ನು ಕೈಗೊಂಡಿದ್ದೇವೆ. ಹಿಂದೆ ಕೂಡ ಆಗಿದ್ದರೂ ಕೆಲವು ಭಾಗಗಳಲ್ಲಿ ಆಗಿರಲಿಲ್ಲ. ಆದ್ದರಿಂದ ಸಮಾಜದ ಪರಿಸ್ಥಿತಿಯನ್ನು ಮೂಲತಃ ಇಟ್ಟುಕೊಂಡು, ಆರ್ಥಿಕ ಆದಾಯ ಎಷ್ಟು ? ಅವರ ಪರಿಸ್ಥಿತಿ ಏನು ಇದೆ ? ಆರ್ಥಿಕವಾಗಿ ಹಿಂದುಳಿದಿದ್ದಾರೆಯೇ ? ಶೈಕ್ಷಣಿಕವಾಗಿ ಹಿಂದುಳಿದಿದ್ದಾರೆಯೇ ? ಎಷ್ಟು ಜನ ಕೆಲಸದಲ್ಲಿ ಇದ್ದಾರೆ, ಎಷ್ಟು ಜನ ಓದಿದವರು ಕೆಲಸದಲ್ಲಿ ಇದ್ದಾರೆ. ಇಂಥ ವಿಷಯಗಳನ್ನೆಲ್ಲಾ ಪರ್‌ವ್ಯೂನಲ್ಲಿ ಇಟ್ಟುಕೊಂಡು ವರದಿಯನ್ನು ಮಾಡಲು ಸಮಿತಿಯವರು ಸಂದರ್ಶನ ಕಾರ್ಯವನ್ನು ಕೈಗೊಂಡಿದ್ದಾರೆ. ಹಿಂದುಳಿದವರಿಗಾಗಿ ಸರ್ಕಾರದವರು ಕೊಡುತ್ತಿರುವ ಪ್ರಾಶಸ್ತ್ಯ ಮತ್ತು ಸೌಲಭ್ಯಗಳು ಲಾಭದಾಯಕವಾಗಿರುವುದರಿಂದ ಎಲ್ಲರಿಗೂ ಕೂಡ ಇದು ದೊರಕಲಿ ಎಂಬುದೇ ಸರ್ಕಾರದ ಆಶಯವಾಗಿರುತ್ತದೆ. ಇಂಥ ಒಂದು ಸಂದರ್ಭದಲ್ಲಿ ಸಮಗ್ರವಾದ ಒಂದು ಸಮೀಕ್ಷೆಯು ಬಹಳ ಅಗತ್ಯ ವಾಗಿದೆ. ವರದಿ ಬಂದ ತಕ್ಷಣ ಅದನ್ನು ವಿಮರ್ಶೆಮಾಡಿ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ವರದಿಯನ್ನು ಕಳುಹಿಸಿಕೊಡಬೇಕಾಗುತ್ತದೆ. ಅವರು ಎಲ್ಲವನ್ನು ಪರಿಶೀಲಿಸಿ ಯಾವುದನ್ನು ಸೇರಿಸ ಬೇಕು ಯಾವುದನ್ನು ಬಿಡಬೇಕು ಎನ್ನುವುದು ತೀವ್ರವಾಗಿ ಪರಿಶೀಲನೆಮಾಡಿ ಪರಿಗಣಿಸುತ್ತಾರೆಂದು ಭಾವಿಸುತ್ತೇನೆ.

ಶ್ರೀ ವೈ. ರಾಮಕೃಷ್ಣ.—ಶೈಕ್ಷಣಿಕವಾಗಿ ಸೋಷಿಯಲ್ ಬ್ಯಾಕವರ್ಡ್‌ನೆಸ್ ತೆಗೆದುಕೊಳ್ಳುವುದಕ್ಕೆ ಆಗದಿದ್ದರೆ ಕ್ಯಾಸ್ಟ್ ವೈಸ್ ಕನ್‌ಸಿಡರೇಷನ್‌ಗೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೇ ಎಂದು ಕೇಳುತ್ತೇನೆ.

ಶ್ರೀಮತಿ ಚಂದ್ರಪ್ರಭಾ ಅರಸ್.—ಸೋಷಿಯಲಿ ಬ್ಯಾಕ್‌ವರ್ಡ್ ಎಂದು ಹೇಳುವಾಗ ಇದೆಲ್ಲಾ ಬರುತ್ತದೆ. ಜಾತಿ ವರ್ಗಗಳು ಅನೇಕ ವರ್ಷಗಳಿಂದಲೂ ಬಂದಿರತಕ್ಕಂಥದ್ದಾಗಿರುತ್ತದೆ. ಸೋಷಿಯಲಿ ಮತ್ತು ಎಕನಾಮಿಕಲಿ ಹಿಂದುಳಿದಿರತಕ್ಕಂಥವರನ್ನು ಸುಧಾರಣೆ ಮಾಡಬೇಕು ಎಂದರೆ ಅವರಿಗೆ ಆರ್ಥಿಕವಾಗಿ ಸೌಲಭ್ಯಗಳನ್ನು ಒದಗಿಸುವುದು ಮಾತ್ರವೇ ಅಲ್ಲ ವಿದ್ಯಾ ಸೌಲಭ್ಯವನ್ನೂ ಕೂಡ ಕೊಡ ಬೇಕಾಗುತ್ತದೆ.

ಶ್ರೀ ವೈ. ರಾಮಕೃಷ್ಣ.—ಯಾರು ಯಾರು ಎನ್ನುವುದನ್ನು ಹೇಳಿ ?

ಶ್ರೀಮತಿ ಚಂದ್ರಪ್ರಭ ಅರಸ್.—ಆರ್ಥಿಕವಾಗಿ ಹಿಂದುಳಿದವರು ಎಂದರೆ ಈಗ ಮಾನ್ಯ ಎನ್.ಜಿ. ನಾಯಕ್‌ರವರು ನಮ್ಮ ಜನಾಂಗದವರನ್ನು ಎಸ್.ಟಿ. ವರ್ಗಕ್ಕೆ ಸೇರಿಸಿಲ್ಲವೆಂದು ಹೇಳಿದರು. ಇದು ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಬರತಕ್ಕಂಥದ್ದು, ಇದನ್ನು ಅವರ ಗಮನಕ್ಕೆ ತರುತ್ತೇನೆ. ಪಟ್ಟಿಯಲ್ಲಿ ಸೇರಿಸುವುದು ಬಿಡುವುದು ಅವರಿಗೆ ಸೇರಿದ್ದು.

ಶ್ರೀ ಎನ್.ಜಿ. ನಾಯಕ್.—ತಮಗೆ ಅಧಿಕಾರವಿದೆ, ತಾವು ನಮ್ಮ ಜನಾಂಗದವರನ್ನು ಎಸ್.ಟಿ. ಗುಂಪಿಗೆ ಸೇರಿಸಬೇಕು, ನಿಮ್ಮ ತಂದೆಯವರು ಸೇರಿಸಿದ್ದರು. ನೀವು ಬೇರೆಯವರ ಒತ್ತಡಕ್ಕೆ ಮಣಿದು ನಮ್ಮ ಜನಾಂಗದವರಿಗೆ ಅನ್ಯಾಯ ಮಾಡಬಾರದು.

ಶ್ರೀಮತಿ ಚಂದ್ರಪ್ರಭ ಅರಸ್.—ಅದಕ್ಕಾಗಿಯೇ ಹಿಂದುಳಿದ ವರ್ಗದವರ ಬಗ್ಗೆ ಒಂದು ಸಮಗ್ರ ವಾದ ಸಮೀಕ್ಷೆ ಮಾಡುತ್ತಿದ್ದೇವೆ. ಇಷ್ಟರಲ್ಲೇ ವರದಿ ಬರಬಹುದೆಂದು ನಾವೂ ಕೂಡ ನಿರೀಕ್ಷೆ ಮಾಡು ತ್ತಿದ್ದೇವೆ. ಹಿಂದುಳಿದ ವರ್ಗಗಳ ಅಭಿವೃದ್ಧಿ ಮಂಡಲಿ ಏನು ಇದೆ ಅದೂ ಕೂಡ ಒಳ್ಳೆಯ ಕೆಲಸ ಹಮ್ಮಿಕೊಂಡಿದೆ. ವಿವಿಧ ಕಸಬು, ವಿವಿಧ ಉದ್ಯಮಗಳಲ್ಲಿ ಇರತಕ್ಕಂಥ ಜನ ಹಳ್ಳಿಗಳಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕಂಥ ಜನರು ವಿದ್ಯಾಭ್ಯಾಸದ ಜೊತೆಗೆ ಒಂದು ಪರಂಪರಾಗತವಾಗಿ ಬಂದಿರತಕ್ಕಂಥ ಉದ್ಯಮಗಳು ಏನು ಇವೆ, ಅವುಗಳ ಒಂದು ಅಭಿವೃದ್ಧಿಗಾಗಿ ಮತ್ತು ಆರ್ಥಿಕ ನೆರವಿಗಾಗಿ ಹಿಂದುಳಿದವರ ಅಭಿವೃದ್ಧಿ ನಿಗಮವೆಂದು ಒಂದು ನಿಗಮವನ್ನು ಸ್ಥಾಪನೆ ಮಾಡಲಾಗಿರುತ್ತದೆ. ಇದಕ್ಕೆ ಮಾನ್ಯ ಮಲ್ಲಪ್ಪನವರೇ ಅಧ್ಯಕ್ಷರಾಗಿದ್ದಾರೆ. ಇದು ಪ್ರಾರಂಭವಾದದ್ದು ಕೆಲವೇ ವರ್ಷಗಳ ಹಿಂದೆ, ಇದರಲ್ಲಿ

ಮುಖ್ಯವಾಗಿ ಚೈತನ್ಯ ಎಂದು ಹೇಳಿ ಒಂದು ಯೋಜನೆ ಇದೆ. ಈ ಚೈತನ್ಯ ಯೋಜನೆಗೆ ೧೯೮೩-೮೪ಕ್ಕೆ ಶೇರು ಬಂಡವಾಳವೆಂದು ೧೨ ಲಕ್ಷ ರೂಪಾಯಿಗಳ ಅನುದಾನವನ್ನು ಕೊಡಲಾಗಿದೆ. ಈ ನಿಗಮದಿಂದ ಗ್ರಾಮಾಂತರ ಪ್ರದೇಶದಲ್ಲಿರುವ ಚಿಕ್ಕಪುಟ್ಟ ಉದ್ದಿಮೆದಾರರಿಗೆ ಸುಮಾರು ೧೨೦ ಲಕ್ಷ ರೂಪಾಯಿಗಳ ವರೆಗೆ ಸಾಲವನ್ನು ಮಂಜೂರಾತಿ ಮಾಡಿದೆ. ರಾಷ್ಟ್ರೀಕೃತ ಬ್ಯಾಂಕ್‌ಗಳಿಂದಲೂ ಸಾಲವನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿದೆ. ಬ್ಯಾಂಕಿನ ಅಧಿಕಾರಿವರ್ಗದವರು ಪ್ರತಿಯೊಂದನ್ನು ಪರಿಶೀಲನೆ ಮಾಡಿ ಸಾಲವನ್ನು ಮಂಜೂರು ಮಾಡತಕ್ಕಂಥ ವ್ಯವಸ್ಥೆಯೂ ಕೂಡ ಇದೆ. ನಿಗಮದ ಯೋಜನೆಯ ಕೆಳಗಡೆ ಆಟೋರಿಕ್ಷಾ ಕೊಳ್ಳಲು ಸಾಲವನ್ನು ಕೊಡಲಾಗುತ್ತದೆ. ಸಣ್ಣ ಅಂಗಡಿ; ಸೈಕಲ್ ಷಾಪ್, ಕೈ ಮಗ್ಗ, ವಿದ್ಯುತ್ ಮಗ್ಗ, ಎತ್ತು, ಎತ್ತಿನ ಗಾಡಿಯನ್ನು ಕೊಳ್ಳಲು, ಹಾಲಿನ ಡೈರಿ ಸ್ಥಾಪನೆ ಮಾಡಲು, ಕುರಿಸಾಕಣೆಕೆಗೆ, ತರಕಾರಿ ವ್ಯಾಪಾರ, ರೇಷ್ಮೆ ಹುಳು ತೆಗೆಯುವವರಿಗೆ, ಸೀಮೆ ಎಣ್ಣೆಗಾಡಿ, ಸೈಕಲ್ ರಿಕ್ಷಾ, ನೀರಾವರಿ, ಸಣ್ಣ ನೀರಾವರಿ ಇನ್ನೂ ಕೆಲವು ಉದ್ಯಮಗಳಿಗೆ ಈಗಾಗಲೇ ಸಾಲವನ್ನು ಕೊಡತಕ್ಕಂಥ ವ್ಯವಸ್ಥೆ ಇದೆ. ಇದರಲ್ಲಿ ಕೋಮುವಾರು ಕೊಡತಕ್ಕಂಥ ವ್ಯವಸ್ಥೆ ಇದೆ. ಯಾವ ಯಾವ ಸ್ಥಳದಲ್ಲಿ ಈ ಫಲವನ್ನು ಅನುಭವಿಸುತ್ತಿದ್ದಾರೆ ಎನ್ನುವುದಕ್ಕೆ ಪಟ್ಟಿ ಇದೆ. ವಿಷದವಾಗಿ ಬೇಕು ಎಂದರೆ ಮಾನ್ಯ ಸದಸ್ಯರಿಗೆ ಅದನ್ನು ಕಳುಹಿಸಿಕೊಡುತ್ತೇನೆ.

ಶ್ರೀ ವೈ. ರಾಮಕೃಷ್ಣ.—ಇದು ಸಾಲದು ಎಂದು ಹೇಳುತ್ತಿದ್ದೇವೆ.

ಶ್ರೀಮತಿ ಚಂದ್ರಪ್ರಭ ಅರಸ್.—ಇನ್ನು ಹೆಚ್ಚು ಮಾಡಬೇಕೆಂದೂ ಕೂಡ ಇರುತ್ತೇವೆ.

ಶ್ರೀ ವೈ. ರಾಮಕೃಷ್ಣ.—ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ ಕಾರ್ಪೊರೇಷನ್‌ಗೆ ಎಷ್ಟು ಶೇರು ಧನವನ್ನು ಕೊಟ್ಟಿದ್ದೀರಿ. ಈ ವರ್ಷ ಹೆಚ್ಚು ಮಾಡುತ್ತೀರಾ ? ಹೋದ ವರ್ಷ ೧೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ ? ಬ್ಯಾಂಕ್‌ನಿಂದ ಪಡೆದದ್ದು ಸುಮಾರು ೪೦ ಲಕ್ಷ ರೂಪಾಯಿಗಳು. ಇದರ ಲಾಭ ಪಡೆದವರು ಯಾರು ಯಾರು ?

ಶ್ರೀಮತಿ ಚಂದ್ರಪ್ರಭ ಅರಸ್.—ಕುಶಲಕರ್ಮಿಗಳು, ಕಮ್ಮಾರ, ಬಡಗಿತನ, ಉಣ್ಣೆ ನೇಯ್ಗೆ ಮಾಡತಕ್ಕಂಥವರು, ಮುಂತಾದ ಅನೇಕ ಉದ್ಯಮಗಳಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಕೊಡಗಿರತಕ್ಕಂಥವರಿಗೆ ಈ ಸೌಲಭ್ಯಗಳನ್ನು ಒದಗಿಸುತ್ತಿದ್ದೇವೆ. ಮೊಟ್ಟ ಮೊದಲು ನಗರ ಪ್ರದೇಶಗಳಲ್ಲಿ ಆಟೋರಿಕ್ಷಾ ಕೊಡತಕ್ಕಂಥದ್ದು ಇತ್ತು. ಇದು ಸಾಮಾನ್ಯ ಜನರಿಗೂ ದೊರೆಯಬೇಕು ಎನ್ನುವ ದೃಷ್ಟಿಯಿಂದ ಗ್ರಾಮಾಂತರ ಪ್ರದೇಶಗಳಲ್ಲೂ ವ್ಯಾಪಕವಾಗಿ ತರಬೇಕೆಂದು ಇದಕ್ಕೆ ಶೇರನ್ನು ಹೆಚ್ಚು ಕೊಡುತ್ತಿದ್ದೇವೆ. ಎಷ್ಟೋ ಬ್ಯಾಂಕುಗಳು ಕೂಡ ಹೆಚ್ಚು ಸಹಕಾರ ಕೊಡುತ್ತೇವೆಂದು ಮುಂದೆ ಬಂದಿವೆ. ಅದಕೋಸ್ಕರವಾಗಿ ಹೆಚ್ಚಿನ ಶೇರು ಬಂಡವಾಳವನ್ನು ಕೊಡಲು ಪ್ರಯತ್ನ ಮಾಡುತ್ತೇವೆಂದು ಹೇಳುತ್ತೇವೆ. . ಮತ್ತೆ ಕಾರ್ಪೊರೇಷನ್ ಬಗ್ಗೆ ಸಾಕಷ್ಟು ವಿಸ್ತೃತವಾಗಿ ಹೇಳಿದ್ದೇನೆ. ಅವರ ವರದಿ ಬರಬೇಕಾಗಿದೆ.

ಶ್ರೀ ವೈ. ರಾಮಕೃಷ್ಣ.—ಈಸಾರಿ ೩ ಕೋಟಿ ರೂಪಾಯಿಗಳನ್ನಾದರೂ ಕೊಡಿ.

ಶ್ರೀಮತಿ ಚಂದ್ರಪ್ರಭ ಅರಸ್.—ಪಂಚವಾರ್ಷಿಕ ಯೋಜನೆಯಲ್ಲಿ ಬಹಳಷ್ಟು ಒಳ್ಳೆಯ ಕೆಲಸಗಳನ್ನು ಮಾಡಲು ಹಮ್ಮಿಕೊಂಡು ಸಾಧ್ಯವಾದಷ್ಟು ಮಾಡಬೇಕಾಗಿದೆ. ಮಾಡಬೇಕಾದ ಕೆಲಸಗಳು ಬೇಕಾದಷ್ಟು ಇದ್ದಾಗ್ಯೂ ಎಲ್ಲವನ್ನು ಒಂದೇ ಬಾರಿಗೆ ಮಾಡಲು ಸಾಧ್ಯವಾಗುವುದಿಲ್ಲ, ಮುಖ್ಯವಾಗಿ ಹಿಂದುಳಿದ ವರ್ಗದವರಿಗೆ ಸಾಕಷ್ಟು ಸುಧಾರಣೆ ಮಾಡಲು ಬಹಳಷ್ಟು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗುತ್ತದೆ. ಇನ್ನು ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗದವರ ಬಗ್ಗೆ ಮಾನ್ಯ ಸದಸ್ಯರು ವಿಶೇಷವಾಗಿ ಒಂದು ಕಾಳಜಿಯನ್ನು ತೋರಿಸಿದ್ದಾರೆ, ಅವರ ಬಗ್ಗೆ ಹೇಳಬೇಕೆಂದರೆ ಎಸ್. ಸಿ. ಎಸ್. ಟಿ. ಜನಾಂಗದ ೧೯೮೧ರ ಪ್ರಕಾರ ಹರಿಜನ ಸಂಖ್ಯೆ ೫೫ ಲಕ್ಷ ೯೫ ಸಾವಿರದ ೩೬೩, ಮಾನ್ಯ ಸದಸ್ಯರು ಹೇಳಿದಹಾಗೆ ಈಗ ಹೆಚ್ಚಿದೆ. ಅವರೆಲ್ಲರಿಗೂ ಶಿಕ್ಷಣ ಸೌಲಭ್ಯದ ಜೊತೆಗೆ ಎಲ್ಲ ಸೌಲಭ್ಯಗಳನ್ನು ಕೊಡಬೇಕಾಗುತ್ತದೆ.

ಶ್ರೀ ವೈ. ರಾಮಕೃಷ್ಣ.—ಹಿಂದೆ ಹರಿಜನ ಗಿರಿಜನರ ಲೆಕ್ಕಾಚಾರ ಏನು ಇತ್ತು ಅದಕ್ಕೆ ಅನುಗುಣವಾಗಿ ೧೮ ಪರ್ಸೆಂಟ್ ಕೊಟ್ಟಿದ್ದರು. ಇತ್ತೀಚೆಗೆ ೧೦೧ ಜಾತಿಯವರನ್ನೂ ಸೇರಿಸುವುದರಿಂದ ಜನಸಂಖ್ಯೆ ಜಾಸ್ತಿಯಾಗಿದೆ. ಆದ್ದರಿಂದ ಪರ್ಸೆಂಟೇಜ್ ಕೂಡ ಜಾಸ್ತಿ ಮಾಡಬೇಕಾಗಿದೆ. ೧೮ ಪರ್ಸೆಂಟ್ ` ಕೊಡುತ್ತಿರುವುದು ೩೬ ಪರ್ಸೆಂಟ್ ಆಗಬೇಕಾಗಿದೆ. ತಾವು ಸೆನ್ಸಸ್

ಡಿಪಾರ್ಟ್‌ಮೆಂಟ್‌ನಿಂದ ವರದಿ ತರಿಸಿ ನೋಡಿ ಅಲ್ಲಿ ದೊರೆಯದಿದ್ದರೆ ಸೋಶಿಯಲ್ ವೆಲ್ ಫೇರ್ ಡಿಪಾರ್ಟ್‌ಮೆಂಟಿನಿಂದ ತರಿಸಿ ನೋಡಿ. ಪರ್ಸೆಂಟೇಜ್ ಹೇಗೆ ಮಾಡುತ್ತೀರಿ ಎಂದು ಕೇಳುತ್ತೇನೆ? ಸ್ಟೇಟ್ ಗೌವರ್ನ್‌ಮೆಂಟ್ ಮತ್ತು ಸೆಂಟ್ರಲ್ ಗೌವರ್ನ್‌ಮೆಂಟ್‌ದು ಎಷ್ಟು ಪರ್ಸೆಂಟ್ ಎಂದು ಫಿಕ್ಸ್ ಮಾಡುತ್ತೀರಿ.

ಶ್ರೀಮತಿ ಚಂದ್ರಪ್ರಭ ಅರಸು.—ಅದಕ್ಕಾಗಿಯೇ ಕೇಂದ್ರ ಸರ್ಕಾರದ್ದು, ರಾಜ್ಯ ಸರ್ಕಾರದ್ದು ಎರಡೂ ಆಯೋಗಗಳ ವರದಿ ಬರಲಿ ಎಂದು ಹೇಳುತ್ತೇನೆ.

ಇದರಲ್ಲಿ ವಿದ್ಯಾ ಕ್ಷೇತ್ರಕ್ಕೂ ನಾವು ಹೆಚ್ಚಿನ ಹಣವನ್ನು ಇಟ್ಟಿದ್ದೇವೆ. ಯೋಜನಾ ಬಾಬಿನಲ್ಲಿ ೨೧೯ ಹಾಸ್ಟೆಲ್‌ಗಳನ್ನು ಮತ್ತು ಯೋಜನೇತರ ಬಾಬಿನಲ್ಲಿ ೩೨೮ ಹಾಸ್ಟೆಲ್‌ಗಳನ್ನು ನಡೆಸುತ್ತಿದ್ದೇವೆ. ೨೧೯ ಹಾಸ್ಟೆಲ್‌ಗಳಿಗೆ ಸಂಬಂಧಪಟ್ಟಂತೆ ೧೩೩ ಲಕ್ಷ ರೂಪಾಯಿಗಳನ್ನು ಮತ್ತು ೩೨೮ ಹಾಸ್ಟೆಲ್‌ಗಳಿಗೆ ಸಂಬಂಧಪಟ್ಟಂತೆ ೩೭೩ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡುತ್ತಿದ್ದೇವೆ. ಇದರ ಜೊತೆಗೆ ವಿದ್ಯಾರ್ಥಿವೇತನವನ್ನು ೭೫ ರೂಪಾಯಿಗಳಿಂದ ನೂರು ರೂಪಾಯಿಗಳಿಗೆ ಹೆಚ್ಚು ಮಾಡಿದ್ದೇವೆ. ಅಂತರ್ಜಾತಿ ವಿವಾಹಕ್ಕೆ ಸಂಬಂಧಪಟ್ಟಂತೆ ಹಣವನ್ನು ೧.೦೦ ಲಕ್ಷಕ್ಕೆ ಹೆಚ್ಚು ಮಾಡಿದ್ದೇವೆ. ಮಾನ್ಯ ಸದಸ್ಯರು ಹೇಳಿದಂತೆ ಜನಸಂಖ್ಯೆಗೆ ತಕ್ಕಂತೆ ಮೀಸಲಾತಿ ಹೆಚ್ಚಾಗಬೇಕೆಂಬುದು ನಿಜ. ಈ ಬಗ್ಗೆ ನಾವು ಸಮಗ್ರವಾದಂಥ ವರದಿಯನ್ನು ತರಿಸಿಕೊಳ್ಳಬೇಕಾಗುತ್ತದೆ. ಸಂಬಂಧಪಟ್ಟ ಆಯೋಗದವರು ಇದಕ್ಕೆ ಪೂರಕವಾದಂಥ ಸಲಹೆಗಳನ್ನು ಕೊಡಬಹುದೆಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಹರಿಜನ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟಂತೆ ೩೫೬ ಪ್ರೀಮೆಂಟ್ರಿಕ್ ಹಾಸ್ಟೆಲ್‌ಗಳು ಇವೆ. ಇಲ್ಲಿರುವಂತಹ ವಿದ್ಯಾರ್ಥಿಗಳ ಸಂಖ್ಯೆ ೨೩,೬೬೬, ಹರಿಜನ ವಿದ್ಯಾರ್ಥಿನಿಯರಿಗೆ ಸಂಬಂಧಪಟ್ಟಂತೆ ೧೯೨ ಹಾಸ್ಟೆಲ್‌ಗಳಿದ್ದು, ಇಲ್ಲಿ ೯೦೮೬ ವಿದ್ಯಾರ್ಥಿನಿಯರಿದ್ದಾರೆ. ಎಸ್. ಟಿ. ಹುಡುಗರಿಗೆ ಸಂಬಂಧ ಪಟ್ಟಂತೆ ೧೬ ಪ್ರೀ-ಮೆಟ್ರಿಕ್ ಹಾಸ್ಟೆಲ್‌ಗಳಿದ್ದು, ೮೯೭ ವಿದ್ಯಾರ್ಥಿಗಳು ಈ ಹಾಸ್ಟೆಲ್‌ಗಳಲ್ಲಿದ್ದಾರೆ. ಅದೇ ರೀತಿ ಗರ್ಲ್ಸ್ ಹಾಸ್ಟೆಲ್ ಒಂದು ಮಾತ್ರವಿದೆ. ಇದರಲ್ಲಿ ೬೫ ವಿದ್ಯಾರ್ಥಿನಿಯರಿದ್ದಾರೆ. ಅನುದಾನ ಪಡೆಯುತ್ತಿರುವ ಪ್ರೀ-ಮೆಟ್ರಿಕ್ ಬಾಯ್ಸ್ ಹಾಸ್ಟೆಲ್‌ಗಳು ೧೯೨ ಇವೆ. ಇವುಗಳಲ್ಲಿ ೯೯೯೬ ವಿದ್ಯಾರ್ಥಿಗಳಿದ್ದಾರೆ. ಅನುದಾನ ಪಡೆಯುತ್ತಿರುವ ಪ್ರೀ-ಮೆಟ್ರಿಕ್ ಗರ್ಲ್ಸ್ ಹಾಸ್ಟೆಲ್ ೯ ಇವೆ. ಇಲ್ಲಿ ೬೮೮ ವಿದ್ಯಾರ್ಥಿನಿಯರಿದ್ದಾರೆ. ಅನುದಾನ ಪಡೆಯುತ್ತಿರುವ ಎಸ್. ಟಿ. ಹಾಸ್ಟೆಲ್‌ಗಳು ೭ ಇವೆ. ಇಲ್ಲಿ ೪೯೫ ವಿದ್ಯಾರ್ಥಿಗಳಿದ್ದಾರೆ. ಈ ಸಲ ನಾವು ಹೊಸದಾಗಿ ೫೦ ಪ್ರೀ-ಮೆಟ್ರಿಕ್ ಹಾಸ್ಟೆಲ್‌ಗಳನ್ನು ಪ್ರಾರಂಭ ಮಾಡುತ್ತೇವೆ.

ಇನ್ನು ಹಾಸ್ಟೆಲ್ ಕಟ್ಟಡಗಳಿಗೆ ನಾವು ಮ್ಯಾಚಿಂಗ್ ಗ್ರಾಂಟ್ ಕೊಡದಿದ್ದರೆ ಕೇಂದ್ರ ಸರ್ಕಾರದವರು ಸಹ ಕೊಡುವುದಿಲ್ಲ. ಕೇಂದ್ರ ಸರ್ಕಾರದವರು ಕೊಡುವಂತಹ ಮ್ಯಾಚಿಂಗ್ ಗ್ರಾಂಟ್‌ನ್ನು ಕಳೆದ ೨-೩ ವರ್ಷಗಳಿಂದ ಉಪಯೋಗ ಮಾಡಿಕೊಂಡಿಲ್ಲ. ಆದರೆ ಕೇರಳಾ, ತಮಿಳು ನಾಡು ಹಾಗೂ ಆಂಧ್ರ ಪ್ರದೇಶ ರಾಜ್ಯಗಳು ಉಪಯೋಗ ಮಾಡಿಕೊಂಡಿವೆ. ನಾವು ನಮ್ಮ ಯೋಜನಾ ವೆಚ್ಚದಲ್ಲಿ ಇದಕ್ಕೆ ಖರ್ಚನ್ನು ತೋರಿಸದಿದ್ದರೆ ಕೇಂದ್ರದವರು ನಮಗೆ ಮ್ಯಾಚಿಂಗ್ ಗ್ರಾಂಟ್ ಕೊಡುವುದಿಲ್ಲ. ಅದಕ್ಕಾಗಿ ಈ ಸಲ ನಾವು ಇದಕ್ಕೆ ೧೧೫ ಲಕ್ಷ ರೂಪಾಯಿಗಳ ವೆಚ್ಚವನ್ನು ತೋರಿಸಿದ್ದೇವೆ. ನಾವು ಇದಕ್ಕೂ ಹೆಚ್ಚು ಹಣವನ್ನು ಖರ್ಚು ಮಾಡಬೇಕೆಂದಿದ್ದೇವೆ. ಈ ಸಲ ಹೊಸದಾಗಿ ೫೦ ಹಾಸ್ಟೆಲ್‌ಗಳನ್ನು ಪ್ರಾರಂಭ ಮಾಡುತ್ತೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಮ್ಮ ಊರಿಗೂ ಒಂದು ಕೊಡಿ.

ಶ್ರೀಮತಿ ಚಂದ್ರಪ್ರಭಾ ಅರಸ್.—ಕೊಡೋಣ. ಇನ್ನು ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ಹರಿಜನರ ಮತ್ತು ಗಿರಿಜನರ ಬಗ್ಗೆ ಒಂದು ಸಮೀಕ್ಷೆ ನಡೆಸಲಾಯಿತು. ೧-೧-೧೯೮೧ ರಲ್ಲಿ ನಡೆಸಿದ ಸಮೀಕ್ಷೆಯ ಪ್ರಕಾರ ವಿವರಗಳು ಈ ರೀತಿ ಇವೆ.—

	ಒಟ್ಟು ನೌಕರರು	ಹರಿಜನರು	ಗಿರಿಜನರು
ಕ್ಲಾಸ್—೧	೭೧೬೧	೫೫೯	೫೩
ಕ್ಲಾಸ್—೨	೯೮೬೩	೬೨೪	೧೦೩
ಕ್ಲಾಸ್—೩	೨,೩೦,೫೦೭	೨೦೦೯೩	೩೫೬೩
ಕ್ಲಾಸ್—೪	೮೬,೭೦೯	೧೫೦೪೬	೧೯೬೭
ಕ್ಲಾಸ್—೪(ಬಿ)	೨,೩೯೭	೧೩೮೫	೧೮೦

ಹೀಗೆ ಒಟ್ಟು ೩೭,೭೦೭ ಹರಿಜನ ಮತ್ತು ಗಿರಿಜನ ನೌಕರರಿದ್ದಾರೆ.

ಶ್ರೀ ವೈ. ರಾಮಕೃಷ್ಣ.—ಈಗ ತಾವು ಎಲ್ಲಾ ಕೇಡರ್‌ಗಳನ್ನು ಸೇರಿಸಿಕೊಂಡು ಇಷ್ಟು ಜನರಿದ್ದಾರೆಂದು ಹೇಳಿದಿರಿ. ನಾಲ್ಕನೆಯ ದರ್ಜೆ ನೌಕರಿಗೆ ಹರಿಜನರೇ ಹೆಚ್ಚು ಬರುವುದು. ಬೇರೆ ಯಾರೂ ಹೆಚ್ಚಾಗಿ ಬರುವುದಿಲ್ಲ. ಆದ್ದರಿಂದ ಈ ಕೇಡರ್‌ನಲ್ಲಿ ೧೮ ಪರ್ಸೆಂಟ್‌ವರೆಗೆ ಪ್ರಾತಿನಿಧ್ಯ ಕೊಟ್ಟಿರಬಹುದು. ಆದರೆ ಕ್ಲಾಸ್-೧, ಕ್ಲಾಸ್-೨ ಮತ್ತು ಕ್ಲಾಸ್-೩ ಪೋಸ್ಟ್‌ಗಳಲ್ಲಿಯೂ ಸಹ ೧೮ ಪರ್ಸೆಂಟ್ ಪ್ರಾತಿನಿಧ್ಯ ಕೊಡಬೇಕೆಂದು ನಾವು ಕೇಳುತ್ತಿದ್ದೇವೆ. ನಮ್ಮ ತಂದೆಯವರ ಕಾಲದಲ್ಲಿ ವಿದ್ಯಾ ಇಲಾಖೆಯಲ್ಲಿ ೧೮ ಪರ್ಸೆಂಟ್ ಹುದ್ದೆಗಳನ್ನು ಭರ್ತಿ ಮಾಡಲು ಸ್ಪೆಷಲ್ ರೆಕ್ರೂಟ್‌ಮೆಂಟ್ ಮಾಡಲಾಯಿತು. ಈ ರೀತಿ ಎಲ್ಲಾ ಇಲಾಖೆಗಳಲ್ಲಿಯೂ ತಾವು ಮಾಡುತ್ತೀರಾ ?

ಶ್ರೀಮತಿ ಚಂದ್ರಪ್ರಭಾ ಅರಸ್.—ಈ ಜನಾಂಗದಲ್ಲಿ ಯಾರು ಯಾರು ಹೆಚ್ಚು ಅಂಕಗಳನ್ನು ಪಡೆಯುತ್ತಾರೋ ಅಂತಹವರನ್ನು ಗ್ರೂಪ್ 'ಎ' ಮಟ್ಟದಲ್ಲಿ ನೇರವಾಗಿ ಸರ್ಕಾರದ ಸೇವೆಗೆ ತೆಗೆದುಕೊಳ್ಳಬೇಕೆಂದು ಸರ್ಕಾರ ತೀರ್ಮಾನ ಮಾಡಿದೆ. ಇದನ್ನು ಜಾರಿಗೆ ಕೊಡಲು ಸ್ವಲ್ಪ ವಿಳಂಬವಾಗಿದೆ.

ಶ್ರೀ ವೈ. ರಾಮಕೃಷ್ಣ.—ನಾನು ಕೇಳುತ್ತಿರುವುದು, ಕ್ಲಾಸ್-೧, ಕ್ಲಾಸ್ ೨ ಮತ್ತು ಕ್ಲಾಸ್-೩ ಪೋಸ್ಟ್‌ಗಳಿಗೆ ೧೮ ಪರ್ಸೆಂಟ್‌ವರೆಗೆ ಭರ್ತಿ ಮಾಡಲು ವಿದ್ಯಾ ಇಲಾಖೆಯಲ್ಲಿ ಮಾಡಿದಂತೆ ಇತರೇ ಎಲ್ಲಾ ಇಲಾಖೆಗಳಲ್ಲಿಯೂ ಸ್ಪೆಷಲ್ ರೆಕ್ರೂಟ್‌ಮೆಂಟ್ ಮಾಡುತ್ತೀರಾ ಎಂದು ?

ಶ್ರೀಮತಿ ಚಂದ್ರಪ್ರಭಾ ಅರಸ್. ಇದನ್ನು ಆಲೋಚನೆ ಮಾಡೋಣ. ಇನ್ನು ವಿವಿಧ ಉದ್ದೇಶಗಳಿಗೆ ವಿಶೇಷ ಘಟಕ ಯೋಜನೆ ಅಡಿಯಲ್ಲಿ ಸಾಕಷ್ಟು ಹಣವನ್ನು ಕೇಂದ್ರ ಒದಗಿಸಿಕೊಟ್ಟಿದೆ. ಈ ಯೋಜನೆ ಅಡಿಯಲ್ಲಿ ರಾಜ್ಯ ಸರ್ಕಾರ ಕೂಡ ಸಾಕಷ್ಟು ಹಣ ಖರ್ಚು ಮಾಡಿದೆ. ಇದರ ಬಗ್ಗೆ ಎಲ್ಲ ವಿವರಗಳನ್ನು ಮಾನ್ಯ ಸದಸ್ಯರಿಗೆ ಆಮೇಲೆ ಒದಗಿಸಿಕೊಡುತ್ತೇನೆ ಈ ಸಲ ೪೪ ಹರಿಜನ ಹೆಣ್ಣು ಮಕ್ಕಳ ಹಾಸ್ಟಲ್ ಕಟ್ಟಡಗಳನ್ನು ಕಟ್ಟಿಸಲು ಈ ಸಲ ೧೧೫ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಅದೇ ರೀತಿ ೧೧ ಗಂಡು ಮಕ್ಕಳ ಹಾಸ್ಟಲ್ ಕಟ್ಟಡಗಳನ್ನು ಕಟ್ಟಿಸಲು ೨೪ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಹತ್ತು ಎಸ್. ಟಿ. ಗರ್ಲ್ಸ್ ಹಾಸ್ಟಲ್‌ಗಳಿಗೆ ಸಂಬಂಧಪಟ್ಟಂತೆ ೩ ಕಟ್ಟಡಗಳ ಕೆಲಸ ನಡೆಯುತ್ತಿದೆ. ಮತ್ತೆ ನಾಲ್ಕು ಕಟ್ಟಡಗಳ ಕೆಲಸಗಳನ್ನು ತೆಗೆದುಕೊಳ್ಳುತ್ತೇವೆ. ಕಟ್ಟಡಗಳಿಗಾಗಿ ೨೨.೫ ಲಕ್ಷ ರೂಪಾಯಿಗಳನ್ನು ಹೆಚ್ಚಿಗೆ ಒದಗಿಸಿದ್ದೇವೆ.

ಇನ್ನು ಸರ್ಟಿಫಿಕೇಟ್‌ಗಳನ್ನು ಕೊಡುವ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಜಾತಿ ಪ್ರಮಾಣ ಪತ್ರಗಳನ್ನು ಕೊಡುವ ಕಾಯಿದೆಯಲ್ಲಿ ಕೆಲವು ನ್ಯೂನತೆಗಳಿವೆ, ಈ ಕಾರಣದಿಂದ ಬೇರೆಯವರೂ ಸಹ ಈ ಜಾತಿ ಪ್ರಮಾಣ ಪತ್ರಗಳನ್ನು ತೆಗೆದುಕೊಳ್ಳುತ್ತಿದ್ದಾರೆ, ಇದರಿಂದ ಇವರ ಸಂಖ್ಯೆ ಹೆಚ್ಚಾಗುವುದಕ್ಕೆ ಕಾರಣವಾಗಿದೆ ಎಂದು ಇಲ್ಲಿ ಮತ್ತು ಮೇಲ್ಮನೆಯಲ್ಲಿ ಅನೇಕ ಸಲ ಅನೇಕ ಹಿರಿಯ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿ ಹೇಳಿದ್ದಾರೆ. ಇದನ್ನು ನಾನು ಒಪ್ಪುತ್ತೇನೆ. ಕೆಲವು ಕಡೆ ಇರುವಂತಹ ಲಂಬಾಣಿಗಳು ಹರಿಜನ ಜಾತಿಯಲ್ಲಿ ಬರುತ್ತಾರೆ. ಕೆಲವು ಕಡೆ ಇರುವಂತಹ ನಾಯಕ ಜನಾಂಗದವರು ಹರಿಜನ ಜಾತಿಯಲ್ಲಿ ಬರುತ್ತಾರೆ. ಮತ್ತೆ ಕೆಲವು ಕಡೆ ಇರುವಂತಹ

ನಾಯಂಕ ಜನಾಂಗದವರು ಎಸ್. ಟಿ. ಯಲ್ಲಿ ಬರುತ್ತಾರೆ ಮತ್ತೆ ಕೆಲವು ಕಡೆಗಳಲ್ಲಿ ಬಿ. ಟಿ. ಯಲ್ಲಿ ಬರುತ್ತಾರೆ. ಇದರ ಜೊತೆಗೆ ಜಾತಿ ಸರ್ಟಿಫಿಕೇಟ್‌ಗಳನ್ನು ತಹಶೀಲ್‌ದಾರರು ಕೊಡುತ್ತಾರೆ. ಅಫಿಡವಿಟ್ ಮೂಲಕ ಮ್ಯಾಜಿಸ್ಟ್ರೇಟ್ ಅವರು ಸಹ ಕೊಡುತ್ತಾರೆ. ಶಾಲೆಗಳು ಪ್ರಾರಂಭವಾದಾಗ ೫ ರೂಪಾಯಿಂಗಳ ಅಫಿಡವಿಟ್ ಮೇಲೆ ಕೊಡುವಂತಹ ಜಾತಿ ಸರ್ಟಿಫಿಕೇಟ್ ಎಷ್ಟು ಪ್ರಾಮಾಣಿಕವಾಗಿರುತ್ತದೆಂಬುದು ಎಲ್ಲರಿಗೂ ಗೊತ್ತಿದೆ. ಆದ್ದರಿಂದ ಇದನ್ನು ತಪ್ಪಿಸಬೇಕೆಂಬುದೇ ನಮ್ಮ ಉದ್ದೇಶವಾಗಿದೆ. ಆದ್ದರಿಂದ ತಹಶೀಲ್‌ದಾರರು ಇನ್ನು ಮುಂದೆ ಅವರ ಒಂದು ಅಧಿಕಾರ ವ್ಯಾಪ್ತಿಯಲ್ಲಿ ಮಾತ್ರ ಜಾತಿ ಸರ್ಟಿಫಿಕೇಟ್ ಕೊಡಬೇಕೆಂದು ಮಾಡಿದ್ದೇವೆ. ಬೆಂಗಳೂರು ತಾಲ್ಲೂಕ್‌ನಲ್ಲಿರುವ ತಹಶೀಲ್‌ದಾರರು ಬೇರೆ ವಿಭಾಗದಿಂದ ಬಂದ ವಿದ್ಯಾರ್ಥಿಗಳಿಗೆ ಸರ್ಟಿಫಿಕೇಟ್ ಕೊಡುವುದು ಮತ್ತು ಬೇರೆ ರಾಜ್ಯಗಳಿಂದ ಬಂದ ವಿದ್ಯಾರ್ಥಿಗಳಿಗೆ ಜಾತಿ ಸರ್ಟಿಫಿಕೇಟ್ ಕೊಡುವುದು ಸರಿಯಲ್ಲ. ಈಗಿನ ಪದ್ಧತಿಯನ್ನು ರದ್ದು ಮಾಡಿ ಇನ್ನು ಮುಂದೆ ಆಯಾ ವಿಭಾಗದ ತಹಶೀಲ್‌ದಾರರು ಆಯಾ ವಿಭಾಗದಲ್ಲಿ ಮಾತ್ರ ಜಾತಿ ಸರ್ಟಿಫಿಕೇಟ್‌ಗಳನ್ನು ಕೊಡಬೇಕೆಂದು ಮಾಡಿದ್ದೇವೆ. ಬೇರೆ ವಿಭಾಗದ ವಿದ್ಯಾರ್ಥಿಗಳು ಯಾವ ಜಾತಿಗೆ ಸೇರಿದವರೆಂಬುದನ್ನು ವಿಮರ್ಶೆ ಮಾಡಿ ನೋಡಲು ಸಹ ತಹಶೀಲ್‌ದಾರರಿಗೆ ಸಮಯವಿರುವುದಿಲ್ಲ. ಆದ್ದರಿಂದ ಅವರ ವಿಭಾಗದಲ್ಲಿರುವ ವಿದ್ಯಾರ್ಥಿಗಳಿಗೆ ಮಾತ್ರ ಜಾತಿ ಸರ್ಟಿಫಿಕೇಟ್ ಕೊಡಬೇಕೆಂದು ಮಾಡಿದ್ದೇವೆ. ಇದರ ಜೊತೆಗೆ ಫೋಟೋ ಇರುವಂತಹ ಗುರುತಿನ ಕಾರ್ಡನ್ನು ಏಪ್ರಿಲ್-ಮೇ ತಿಂಗಳಿನಿಂದ ಜಾರಿಗೆ ತರುತ್ತಿದ್ದೇವೆ.

ಪ್ರತಿಯೊಂದು ಸಾರಿ ಕೂಡ ತಪ್ಪು ಸರ್ಟಿಫಿಕೇಟ್‌ಗಳನ್ನು ತೆಗೆದುಕೊಂಡು ಈ ಒಂದು ಜನಾಂಗಕ್ಕೆ ಜನರು ಮೋಸ ಮಾಡುತ್ತಿದ್ದಾರೆ. ಅನೇಕ ರೀತಿಯಲ್ಲಿ ಈ ಜನರಿಗೆ ಸಿಗುತ್ತಿರುವ ಸೌಲಭ್ಯಗಳನ್ನು ಕೆಲವರು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಆದ್ದರಿಂದ ಮೂಲಭೂತವಾಗಿ ಸರ್ಕಾರ ಈ ಸಮಸ್ಯೆಯನ್ನು ಪರಿಹಾರ ಮಾಡಲು ಒಂದು ಸಾರಿ ಒಂದು ಸರ್ಟಿಫಿಕೇಟ್ ಕೊಟ್ಟ ಮೇಲೆ ಆ ಸರ್ಟಿಫಿಕೇಟ್‌ನಲ್ಲಿ ಆತನ ಒಂದು ಭಾವ ಚಿತ್ರವನ್ನು ಇರುವಂತೆ ವ್ಯವಸ್ಥೆ ಮಾಡಿದೆ. ಆ ಸರ್ಟಿಫಿಕೇಟನ್ನು ಆತ ಪ್ರತಿ ವರ್ಷ ರಿನಿವಲ್ ಮಾಡಿಸುತ್ತಿರಬೇಕು, ಅದು ಒಂದು ರೀತಿಯಲ್ಲಿ ಜಾತಿಯ ಐಡೆಂಟಿಫಿಕೇಶನ್ ಕಾರ್ಡ್ ಇದ್ದ ಹಾಗೆ. ಆತ ಶಾಲೆಗೆ ಸೇರುವಾಗ ಯಾವ ಸರ್ಟಿಫಿಕೇಟನ್ನು ಪಡೆದುಕೊಂಡಿರುತ್ತಾನೋ ಅದೇ ಸರ್ಟಿಫಿಕೇಟ್ ಆತ ಕೆಲಸಕ್ಕೆ ಸೇರುವ ತನಕ ಇರುತ್ತದೆ. ಈ ಒಂದು ಹೊಸ ಯೋಜನೆಯನ್ನು ಜಾರಿಗೆ ತರಬೇಕೆಂದು ಸರ್ಕಾರದವರು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಆ ಯೋಜನೆಯನ್ನು ಆದಷ್ಟು ಬೇಗ ಜಾರಿಗೆ ತರುತ್ತೇವೆ,

ಶ್ರೀ ವೈ. ರಾಮಕೃಷ್ಣ.—ನಾನು ಈ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಒಂದು ಮಾತನ್ನು ಹೇಳಬೇಕಾಗಿದೆ.

ಉಪಾಧ್ಯಕ್ಷರು.—ತಾವು ಕ್ಲಾರಿಫಿಕೇಷನ್ ಕಡೆಯಲ್ಲಿ ಕೇಳಿದರೆ ಒಳ್ಳೆಯದು.

ಶ್ರೀ ವೈ. ರಾಮಕೃಷ್ಣ.—ಮಾನ್ಯ ಅಧ್ಯಕ್ಷರೇ ೧೫-೩-೮೩ರಲ್ಲಿ ತಮಗೆ ಒಂದು ಅರ್ಜಿಯನ್ನು ಕೊಟ್ಟಿದ್ದಾರೆ. ಆ ಅರ್ಜಿಯಲ್ಲಿ ಅವರು ಏನು ಹೇಳಿದ್ದಾರೆಂದರೆ ಕೆಲವು ಜನಸುಳ್ಳು ಸರ್ಟಿಫಿಕೇಟ್‌ಗಳನ್ನು ತೆಗೆದುಕೊಂಡು ಹರಿಜನ ಮತ್ತು ಗಿರಿಜನರಿಗೆ ಸಿಗಬೇಕಾಗಿರತಕ್ಕಂಥ ಎಲ್ಲಾ ಸೌಲಭ್ಯಗಳನ್ನು ಪಡೆದುಕೊಂಡಿದ್ದಾರೆ. ಹಿಂದಿನ ಸರ್ಕಾರದವರು ಇದನ್ನು ಪತ್ತೆಹಚ್ಚಿದಾಗ ಸುಮಾರು ೩೫೦ಜನರು ಸಿಕ್ಕಿಬಿದ್ದರು. ಅವರ ಮೇಲೆ ಈಗ ಕೇಸುಗಳನ್ನು ಹಾಕಿದ್ದಾರೆ. ಅವರಲ್ಲಿ ಕೆಲವರನ್ನು ಸಸ್‌ಪೆಂಡ್ ಕೂಡ ಮಾಡಿದ್ದಾರೆ. ಇವೊತ್ತು ತಮ್ಮ ಇಲಾಖೆಯಲ್ಲಿಯೇ ಇಂಥ ಸುಳ್ಳು ಸರ್ಟಿಫಿಕೇಟ್ ಪಡೆದುಕೊಂಡು ಅನೇಕ ಜನ ಗೆಜಿಟೆಡ್ ಆಫೀಸರ್ಸ್ ಆಗಿದ್ದಾರೆ. ಆದ್ದರಿಂದ ಅವರ ಮೇಲೆ ಈ ಕೂಡಲೇ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

ಉಪಾಧ್ಯಕ್ಷರು.—ಹರಿಜನರೆಂದು ಸರ್ಟಿಫಿಕೇಟ್ ಕೊಟ್ಟಿದ್ದಾರೆಯೇ ?

ಶ್ರೀ ವೈ. ರಾಮಕೃಷ್ಣ.—ಹೌದು ಅಧ್ಯಕ್ಷರೇ, ಅವರು ಯಾರ್‍ಯಾರು ಎಂದು ಅವರ ಹೆಸರುಗಳು ಕೂಡ ನನ್ನ ಬಳಿ ಇವೆ. ಆದರೆ ಈ ಸದನದಲ್ಲಿ ನಾನು ಅವರ ಹೆಸರನ್ನು ಹೇಳುವುದು ಸರಿಯಲ್ಲ,

ಶ್ರೀಮತಿ ಚಂದ್ರಪ್ರಭಾ ಅರಸ್.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಹೇಳಿದ್ದು ನಿಜ ಅದರಲ್ಲಿ ಕೆಲವರು ಹರಿಜನರಲ್ಲವೆಂದು ಪ್ರೂವ್ ಆಗಿದೆ. ಅವರ ಮೇಲೆ ಸರ್ಕಾರದವರು ಕ್ರಮ ತೆಗೆದು

ಕೊಳ್ಳಬೇಕೆಂದು ನಿರ್ಧಾರ ಕೂಡ ಮಾಡಿದ್ದೇವೆ. ಮತ್ತು ಬೇರೆ ಇಲಾಖೆಯಲ್ಲಿಯೂ ಕೂಡ ಇಂಥವರು ಇದ್ದಾರೆ. ಅವರ ಮೇಲೆ ಕೂಡ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಆದೇಶವನ್ನು ಕೊಟ್ಟಿದ್ದೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಅಧ್ಯಕ್ಷರೇ ಅಂಥವರು [illegible] ಅವರನ್ನು ಕೂಡಲೇ ಏತಕ್ಕೆ ಮಾನ್ಯ ಮಂತ್ರಿಗಳು ಡಿಸ್‌ಮಿಸ್ ಮಾಡಬಾರದು ?

ಶ್ರೀಮತಿ ಚಂದ್ರಪ್ರಭಾ ಅರಸ್.—ಮಾನ್ಯ ಅಧ್ಯಕ್ಷರೇ ಸರ್ಟಿಫಿಕೇಟ್ ಕೊಡುವಾಗ ಕಟ್ಟುನಿಟ್ಟಾದ ಕ್ರಮವನ್ನು ಪಾಲನೆ ಮಾಡಿದರೆ ಇಂಥ ಒಂದು ಪ್ರಸಂಗ ಬರುವುದಿಲ್ಲ. ಕೆಲವು ಜನ ಅಧಿಕಾರಿಗಳ ಮೇಲೆ ನಾವೇ ನೇರವಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಸಂಬಂಧಪಟ್ಟ ಅಧಿಕಾರಿಗಳಿಗೆ ನಾವು ಸೂಚನೆಯನ್ನು ಕೊಟ್ಟಿದ್ದೇವೆ. ಇನ್ನು ಯಾರು ಹರಿಜನ ಮತ್ತು ಗಿರಿಜನ ವಿದ್ಯಾರ್ಥಿಗಳು ಐ. ಎ. ಎಸ್. ತರಬೇತಿಯನ್ನು ಪಡೆಯಲು ಇಚ್ಛೆ ಪಡುತ್ತಾರೋ ಅವರಿಗೆ ತರಬೇತಿಯನ್ನು ಕೊಡಲು ಒಂದು ತರಬೇತಿ ಶಿಕ್ಷಣ ಸಂಸ್ಥೆಯನ್ನು ತೆರೆಯಲು ಸರ್ಕಾರ ತೀರ್ಮಾನ ಮಾಡಿದೆ. ಮುಂದಿನ ವರ್ಷ ಈ ತರಬೇತಿ ಕೇಂದ್ರವನ್ನು ಮಾಡುವ ಉದ್ದೇಶ ಕೂಡ ಸರ್ಕಾರಕ್ಕೆ ಇದೆ.

ಶ್ರೀ ಎನ್. ಜಿ. ನಾಯಕ್.—ಮಾನ್ಯ ಅಧ್ಯಕ್ಷರೇ ನಮ್ಮಲ್ಲಿ ಕೆಲವರನ್ನು ನಾಯಕರು ಎಂದು ಬಹುವಚನದಲ್ಲಿ ಬರೆದಿರುವುದರಿಂದ ಅವರನ್ನು ಕೆಲಸದಿಂದ ತೆಗೆದು ಹಾಕಿದ್ದಾರೆ. ಅವರ ಎಸ್. ಆರ್‌ನಲ್ಲಿ ಆ ರೀತಿ ಬರೆದಿರುವುದರಿಂದ ಅವರನ್ನು ಕೆಲಸದಿಂದ ತೆಗೆದು ಹಾಕಿದ್ದಾರೆ. ಅವರಿಗೆ ಪೂರ್ವವ್ಯಾಕರಣ ಬರುವುದಿಲ್ಲವೆಂದು ಗೊತ್ತಾಗುತ್ತದೆ.

ಶ್ರೀ ವಿ. ಎಸ್. ಆಚಾರ್ಯ.—ಮಾನ್ಯ ಅಧ್ಯಕ್ಷರೇ ಎನ್. ಎ. ವೈ. ಎ. ಕೆ. ಎ ಎಂದು ಬರೆದರೆ ಅದು ಸರಿ ಬಗುತ್ತದೆ. ಆದರೆ ಎನ್. ಎ. ಐ. ಕೆ ಎಂದು ಬರೆದರೆ ಅದು ಬರುವುದಿಲ್ಲ.

ಶ್ರೀಮತಿ ಚಂದ್ರಪ್ರಭಾ ಅರಸ್.—ಮಾನ್ಯ ಅಧ್ಯಕ್ಷರೇ ಇನ್ನು ಹರಿಜನ ಮತ್ತು ಗಿರಿಜನ ಮಕ್ಕಳಿಗೆ ಹೆಚ್ಚಿನ ಒಂದು ಸೌಕರ್ಯವನ್ನು ಒದಗಿಸಿಕೊಡಬೇಕೆಂದು ಹೇಳಿ ನಾವು ಈ ವರ್ಷ ಸಾಕಷ್ಟು ಹಣವನ್ನು ಒದಗಿಸಿಕೊಟ್ಟಿದ್ದೇವೆ. ಮತ್ತು ಹರಿಜನ ಗಿರಿಜನರ ವಿದ್ಯಾರ್ಥಿನಿಲಯಗಳಿಗೆ ಈಗ ಸಾಕಷ್ಟು ಕಟ್ಟಡಗಳು ಇಲ್ಲದೇ ಇರುವುದರಿಂದ ನಾವು ಈ ವರ್ಷ ಹೆಚ್ಚು ಕಟ್ಟಡಗಳನ್ನು ಕಟ್ಟಿಸಕೊಡಬೇಕೆಂದು ಯೋಚನೆ ಹಾಕಿಕೊಂಡಿದ್ದೇವೆ. ಮತ್ತೆ ವಿದ್ಯಾರ್ಥಿನಿಲಯಗಳಲ್ಲಿ ಎಲ್ಲಾ ಸ್ಟೀಲ್ ಪಾತ್ರೆಗಳನ್ನು ಉಪಯೋಗಿಸಬೇಕೆಂದು ಹೇಳಿದ್ದೇವೆ. ವಿದ್ಯಾರ್ಥಿಗಳಿಗೆ ಒಂದು ವರ್ಷಕ್ಕೆ ಒಂದು ಜೊತೆ ಟೆರಿಕಾಟ್ ಬಟ್ಟೆಗಳನ್ನು ಕೊಡಬೇಕೆಂದು ಸಹ ನಿರ್ಧಾರ ಮಾಡಿ ಈಗಾಗಲೇ ನಾವು ಒದಗಿಸಿಕೊಟ್ಟಿದ್ದೇವೆ.

ಇನ್ನು ಹರಿಜನ ಮತ್ತು ಗಿರಿಜನರ ಅಭಿವೃದ್ಧಿ ಕಾರ್ಪೋರೇಷನ್‌ಗೆ ನಾವು ಈ ವರ್ಷ ಹೆಚ್ಚು ಹಣವನ್ನು ಒದಗಿಸಿಕೊಟ್ಟಿದ್ದೇವೆ. ಈ ಕಾರ್ಪೋರೇಷನ್‌ನಿಂದ ನಾವು ಹೆಚ್ಚು ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೇವೆ.

ಶ್ರೀ ವೈ. ರಾಮಕೃಷ್ಣ.—ಮಾನ್ಯ ಅಧ್ಯಕ್ಷರೇ ಹೋದಸಾರಿ ಮಾನ್ಯ ಮಂತ್ರಿಗಳು ನಾವು ೫ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದರು ಆದರೆ ಈ ಸಾರಿ ಹೇಳುತ್ತಿದ್ದಾರೆ ಹಿಂದಿನ ವರ್ಷಕ್ಕಿಂತ ಜಾಸ್ತಿ ಕೊಟ್ಟಿದ್ದೇವೆಂದು. ಆದರೆ ೫ ಕೋಟಿ ರೂಪಾಯಿಗಳ ಜೊತೆಗೆ ಇನ್ನು ೫ ಕೋಟಿ ರೂಪಾಯಿಗಳನ್ನು ಸೇರಿಸಿ ಒಟ್ಟು ೧೦ ಕೋಟಿ ರೂಪಾಯಿಗಳನ್ನು ಏನಾದರೂ ಕೊಟ್ಟಿದ್ದಾರೆಯೋ ?

ಶ್ರೀಮತಿ ಚಂದ್ರಪ್ರಭಾ ಅರಸ್ —ಮಾನ್ಯ ಅಧ್ಯಕ್ಷರೇ ನಮ್ಮ ಗುರಿ ಇದ್ದಿದ್ದು ೩೦ ಸಾವಿರ ಕುಟುಂಬಗಳಿಗೆ ೧೯೮೩–೮೪ನೇ ಸಾಲಿನಲ್ಲಿ ಸುಮಾರು ೧೯೬೭೭ ಫಲಾನುಭವಿಗಳನ್ನು ಒದಗಿಸಿ ಕೊಡಬೇಕೆಂದು ಆದರೆ ನಾವು ಈಗಾಗಲೇ ಕೆಲವು ಕುಟುಂಬಗಳಿಗೆ ಒದಗಿಸಿಕೊಟ್ಟಿದ್ದೇವೆ. ಆದರೆ ಇನ್ನು ಕೆಲವು ಕುಟುಂಬಗಳು ಇವೆ. ಆದಷ್ಟು ಬೇಗ ಆ ಕುಟುಂಬಗಳಿಗೂ ಕೂಡ ನಾವು ಫಲಾನುಭವವನ್ನು ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ನಾವು ೧೯೮೪–೮೫ನೇ ಸಾಲಿನಲ್ಲಿ ಸುಮಾರು ೨೫ ಪರ್ಸೆಂಟ್ ಮಾರ್ಜಿನಲ್ ಹಣವನ್ನು ಈ ಕುಟುಂಬಗಳಿಗೆ ಒದಗಿಸಿಕೊಡಬೇಕೆಂದು ಇದ್ದೇವೆ. ಈಗ ಈ ಕಾರ್ಪೋರೇಷನ್‌ನಿಂದ ಅಭಿವೃದ್ಧಿ ಹೊಂದಿರತಕ್ಕಂಥ ಕುಟುಂಬಗಳು ಸುಮಾರು ೬೦ ಸಾವಿರ, ಇನ್ನು ಸುಮಾರು ೬೦ ಸಾವಿರ ಕುಟುಂಬಗಳಿಗೆ ನಾವು ಸೌಲಭ್ಯಗಳನ್ನು ಒದಗಿಸಿಕೊಡಬೇಕಾಗಿದೆ.

ಮಾರ್ಜಿನ್ ಮನಿ ಸ್ಕೀಮ್ ಬಗ್ಗೆ ಹೇಳುವುದಾದರೆ, This would fetch another Rs. 50.05 lakhs from the Govergmrnt of India. ೪೯ ಪರ್ಸೆಂಟ್ ಕ್ಯಾಪಿಟಲ್ ಕಾಂಟ್ರಿಬ್ಯೂಷನ್ ಕೇಂದ್ರಸರ್ಕಾರದಿಂದ ಬರುತ್ತದೆ. ಒಟ್ಟು ೧೦೨.೬೦ ಲಕ್ಷ ಬಂದರೆ ಪುನಃ ೧೦ಸಾವಿರ ಕುಟುಂಬಗಳನ್ನು ಕಾರ್ಪೊರೇಷನ್ ಕವರ್ ಮಾಡಬಹುದು. ಅಡಿಷನಲ್ ಫಂಡ್ ಬಂದರೆ ಇನ್ನು ೩೦ ಸಾವಿರ ಕುಟುಂಬಗಳಿಗೆ ಕೊಡಬಹುದು ಎನ್ನುವ ಉದ್ದೇಶವಿದೆ. ಇದರಲ್ಲಿ ಮುಖ್ಯವಾಗಿ ನಿಗಮದ ಕಳಗೆ ಕೊಟ್ಟಿರತಕ್ಕ ಸೌಲಭ್ಯಗಳು ಯಾವುವು ಎಂದರೆ ವ್ಯವಸಾಯಕ್ಕೆ ಸಂಬಂಧಪಟ್ಟ ಹಾಗೆ, ಹೈನುಗಾರಿಕೆ ಸಂಬಂಧಪಟ್ಟಹಾಗೆ, ಕುರಿ, ಕೋಳಿ, ಸಾಕಲಿಕ್ಕೆ ಚರ್ಮ ಕೈಗಾರಿಕೆಗೆ, ರೇಷ್ಮೆ ಉದ್ಯಮಕ್ಕೆ ಇನ್ನಿತರ ವ್ಯಾಪಾರಗಳಿಗೆ ಹಣವನ್ನು ಕೊಟ್ಟಿದ್ದೇವೆ. ಜಿಲ್ಲಾವಾರು ಅಂಕಿಅಂಶಗಳು ನಮ್ಮಲ್ಲಿ ಇವೆ. ಸುಮಾರು ೪೦ ಸಾವಿರ ಕುಟುಂಬಗಳಿಗೆ ಈಗಾಗಲೇ ಈ ರೀತಿಯ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗಿದೆ. 75% loan will be sanctioned by the banks and other finacial institutions. ಒಟ್ಟು ಹಣ ಸುಮಾರು ೧೨ಲಕ್ಷ ರೂಪಾಯಿಗಳು ಆಗುತ್ತವೆ. ವಿವರಗಳು ಬೇಕಾದರೆ ತಾವು ತೆಗೆದು ಕೊಂಡು ನೋಡಬಹುದು.

ಇನ್ನು ಮಹಿಳಾ ಮತ್ತು ಮಕ್ಕಳ ಕ್ಷೇಮಾಭಿವೃದ್ಧಿಯ ಬಗ್ಗೆ ಹೇಳುವುದಾದರೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಕಾರ್ಯದ ಬಗ್ಗೆ ಇಲಾಖೆ ಅನೇಕ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಇತ್ತೀಚೆಗೆ ಆ ಇಲಾಖೆಯ ಹೆಸರನ್ನು ಸಹ ಬದಲಾಯಿಸಲಾಗಿದೆ. ಇದನ್ನು ಸಮಾಜ ಕಲ್ಯಾಣ ಇಲಾಖೆ ಯೆಂದು ಹೆಸರನ್ನು ಕೊಟ್ಟಿದ್ದೇವೆ. ಮಕ್ಕಳ ಯೋಗಕ್ಷೇಮ, ಬಾಲವಿಕಾಸ ಯೋಜನೆಯಲ್ಲಿ ಮಕ್ಕಳಿಗೆ ಶಿಕ್ಷಣ ಕೊಡತಕ್ಕದ್ದು, ಅವರ ಆರೋಗ್ಯದ ಕಡೆ ಗಮನಹರಿಸುವುದು ಇನ್ನಿತರ ಸೌಲಭ್ಯಗಳನ್ನು ವಿವಿಧ ಅನುಕೂಲಗಳನ್ನು ಮಾಡಿಕೊಡತಕ್ಕ ಜವಾಬ್ದಾರಿಯನ್ನು ನಮ್ಮ ಇಲಾಖೆ ಹೊತ್ತಿದೆ. ಮುಖ್ಯವಾಗಿ ಹೇಳಬೇಕೆಂದರೆ ಗ್ರಾಮೀಣ ಮಹಿಳಾ ಮತ್ತು ಮಕ್ಕಳ ಯೋಜನೆಗೆ ಐ.ಸಿ.ಡಿ.ಸಿ. ಯೋಜನೆಯ ಪ್ರಕಾರ ಅವರಿಗೆ ಆರೋಗ್ಯವನ್ನು ಕೊಡುವ ದೃಷ್ಟಿಯಿಂದ ಎಲ್ಲಾ ರೀತಿಯ ಸೌಲಭ್ಯಗಳನ್ನು ಕೊಡತಕ್ಕ ಉದ್ದೇಶ ದಿಂದ ಸುಮಾರು ೪೮ ಕೇಂದ್ರಗಳನ್ನು ಕೇಂದ್ರಸರ್ಕಾರದ ಯೋಜನೆಯಿಂದ ನಮ್ಮ ರಾಜ್ಯ ಸರ್ಕಾರದಿಂದ ೭೮ ಅಂಗನವಾಡಿ ಕೇಂದ್ರಗಳನ್ನು ತೆರೆಯಲಾಗಿದೆ. ಒಂದು ತಾಲ್ಲೂಕಿನ ೧೦೦ ಗ್ರಾಮಗಳಿಗೆ ಈ ಒಂದು ಸೌಲಭ್ಯವನ್ನು ಕಲ್ಪಿಸಿಕೊಡಲಿಕ್ಕೆ ಕೇಂದ್ರಸರ್ಕಾರ ಅನುಮತಿ ಕೊಟ್ಟಿದೆ. ನಾವು ಕೂಡ ಹೊಸದಾಗಿ ಅಂಗನವಾಡಿ ಕೇಂದ್ರಗಳನ್ನು ತೆರೆಯಂತಕ್ಕ ಯೋಜನೆಯನ್ನು ಹಾಕಿಕೊಂಡಿದ್ದೇವೆ. ೧೯೮೩-೮೪, ೧೯೮೪-೮೫, ೧೯೮೫-೮೬ರಲ್ಲಿ. ಸಾಲಿನಲ್ಲ ಹೊಸದಾಗಿ ಅಂಗನವಾಡಿ ಕೇಂದ್ರಗಳನ್ನು ಕೊಟ್ಟಿಲ್ಲ. ಈ ವರ್ಷ ಕೊಡಬೇಕೆನ್ನುವ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಮಕ್ಕಳಿಗೆ ಎಲ್ಲಾ ಅನುಕೂಲಗಳನ್ನು ಕಲ್ಪಿಸಿಕೊಡತಕ್ಕ ಶಾಲೆ ಈಗ ಗದಗನಲ್ಲಿ ಒಂದು ಶಾಲೆಯಿದೆ, ಅದಕ್ಕೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಕೊಡಲಾಗುತ್ತದೆ. ಸಮಗ್ರ ಬಾಲ ವಿಕಾಸ ಕೇಂದ್ರದ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಭಾರತಸರ್ಕಾರದಿಂದ ಸಮಗ್ರ ಬಾಲ ವಿಕಾಸ ಕೇಂದ್ರ ಯೋಜನೆಗಾಗಿ ೧ ಲಕ್ಷದ ೪೨ ಸಾವಿರದ ೩೮೭ ರೂಪಾಯಿಗಳ ನೆರವನ್ನು ಕೊಟ್ಟಿದ್ದಾರೆ. ೧೯೮೩ರಲ್ಲಿ ೨೫ ಅಂಗನವಾಡಿಗಳನ್ನು ತೆರೆಯಲಾಗಿದೆ. ಅಂಗನವಾಡಿಯಲ್ಲಿ ಕೆಲಸಮಾಡತಕ್ಕ ೨೪೯ ಜನರಿಗೆ ಈಗಾಗಲೇ ತರಬೇತಿಯನ್ನು ಕೊಟ್ಟಿದ್ದೇವೆ. ಇನ್ನುಮುಂದೆ ಅದನ್ನು ವಿಸ್ತಾರ ಮಾಡುತ್ತೇವೆ.

ಶ್ರೀ ವೈ. ರಾಮಕೃಷ್ಣ.—ಅಂಗನವಾಡಿಯಲ್ಲಿ ಕೆಲಸಮಾಡತಕ್ಕವರು ಡಾಕ್ಟರ್ ಕೆಲಸ ಮಾಡಬೇಕು, ಮೇಸ್ಟರ್ ಕೆಲಸಮಾಡಬೇಕು, ಸೇವಕರ ಕೆಲಸಮಾಡಬೇಕು ನೀವು ಕೊಡುವ ಸಂಬಳ ೧೫೦ ರೂಪಾಯಿ ಗಳು, ಕೇಂದ್ರಸರ್ಕಾರದಿಂದ ಬರತಕ್ಕ ಗೌರವಧನ ಎಲ್ಲಾ ಸೇರಿ ೧೭೫ ರೂಪಾಯಿಗಳು, ಅವರು ಒಟ್ಟು ೧೭೫ ರೂಪಾಯಿಗಳ ಸಂಬಳ ತೆಗೆದುಕೊಂಡು ಏನು ಮಾಡಬೇಕು ? to meet conveyance as well as housing ಅವರು ಯಾವರೀತಿ ಜೀವನ ಮಾಡಬೇಕು ಎನ್ನುವುದನ್ನು ತಾವು ಯೋಚನೆ ಮಾಡಬೇಕು ?

ಶ್ರೀಮತಿ ಚಂದ್ರಪ್ರಭಾಅರಸ್.—ಕೇಂದ್ರಸರ್ಕಾರದವರು ಕೊಡುವ ಗೌರವಧನದ ಜೊತೆಗೆ ರಾಜ್ಯಸರ್ಕಾರದವರು ಕೊಡಬೇಕೆಂದು ಅವರು ಹೇಳಿದ್ದಾರೆ. ಅವರ ಸಂಬಳವನ್ನು ಹೆಚ್ಚಿಸಬೇಕು ಎನ್ನುವ ಮನಸ್ಸು ಸರ್ಕಾರಕ್ಕೆ ಇದೆ. ವಿಶೇಷವಾಗಿ ಪೌಷ್ಟಿಕ ಆಹಾರವನ್ನು ಗರ್ಭಿಣಿ ಸ್ತ್ರೀಯರಿಗೆ ಮತ್ತು ಮಕ್ಕಳಿಗೆ ಕೊಡಲಾಗುತ್ತಿದೆ. ಹಾಲು ಬ್ರೆಡ್ ಕೊಡತಕ್ಕ ಒಂದು ಕಾರ್ಯಕ್ರಮವಿದೆ. ಆ ಒಂದು ಕಾರ್ಯಕ್ರಮವನ್ನು ಕೂಡ ಬೇರೆ ಪಟ್ಟಣ ಪ್ರದೇಶಗಳಿಗೂ ವಿಸ್ತಾರ ಮಾಡಿದ್ದೇವೆ. ಈ

ಯೋಜನೆಯು ಡಿಸೆಂಬರ್ ೧೯೮೩ರ ಕೊನೆಯುವರೆಗೆ ೨ಕೋಟಿ ೪೧ಲಕ್ಷದ ೫೦ ಸಾವಿರ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ. ಈ ಒಂದು ಯೋಜನೆಯನ್ನು ಬೇರೆ ಕಡೆಗೂ ವಿಸ್ತಾರ ಮಾಡಬೇಕೆಂದು ಮಾಡಿದ್ದೇವೆ. ಅಂಗನವಾಡಿ ತೆರೆಯುವಾಗ ಕಟ್ಟಡದ ಕೊರತೆ ಬರುತ್ತದೆ. ಕೆಲವು ಕಡೆಗಳಲ್ಲಿ ಪಂಚಾಯಿತಿ ಕಟ್ಟಡ, ಸಮಾಜ ಮಂದಿರ ಮತ್ತು ಸ್ವಂತ ಕಟ್ಟಡಗಳನ್ನು ಕೊಡುತ್ತಿದ್ದಾರೆ. ಕಟ್ಟಡದ ಅವಶ್ಯಕತೆ ಎಲ್ಲಿ ಇದೆಯೋ ಅಲ್ಲಿ ಎನ್.ಆರ್.ಇ.ಪಿ. ಕಾರ್ಯಕ್ರಮದ ಪ್ರಕಾರ ಸಬ್‌ಪ್ಲಾನ್ ನೆರವನ್ನು ತೆಗೆದುಕೊಂಡು ಕಟ್ಟಡದ ಕೆಲಸ ಮಾಡಬೇಕಾಗುತ್ತದೆ. ಸಮಾಜ ಕಲ್ಯಾಣ ಇಲಾಖೆ, ಗ್ರಾಮಾಭಿವೃದ್ಧಿ ಇಲಾಖೆ, ಲೋಕೋಪಯೋಗಿ ಇಲಾಖೆ ವಿದ್ಯಾ ಇಲಾಖೆ ಆರೋಗ್ಯ ಇಲಾಖೆ ಎಲ್ಲಾ ಸೇರಿಕೊಂಡು, ಯೂನಿಸೆಫ್ ಸಂಸ್ಥೆಯವರು ಬೀದರ್ ಜಿಲ್ಲೆಯನ್ನು ದತ್ತು ತೆಗೆದುಕೊಂಡು ಒಳ್ಳೆಯ ಉತ್ತಮವಾದ ಕೆಲಸಗಳನ್ನು ಮಾಡಿದ್ದಾರೆ, ಇದಕ್ಕೆ ಜನಗಳು ಮತ್ತು ಇಲಾಖೆಯವರು ಸಹಕಾರ ಕೊಟ್ಟಿದ್ದಾರೆ, ಅವರು ಚೆನ್ನಾಗಿ ಕೆಲಸ ಮಾಡಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಮಕ್ಕಳಿಗೆ ಒಳ್ಳೆಯ ಆರೋಗ್ಯವನ್ನು ಒದಗಿಸುವ ದೃಷ್ಟಿಯಿಂದ, ಮಕ್ಕಳಿಗೆ ಬರತಕ್ಕ ಕಾಯಿಲೆಗೆ ಮುನ್ನೆಚ್ಚರಿಕೆಯಾಗಿ ಮತ್ತು ಇತರತಕ್ಕ ರೋಗಗಳಿಗೆ ವೈದ್ಯ ಒದಗಿಸಲಾಗುತ್ತಿದೆ. ಯೂನಿಸೆಫ್ ಸಂಸ್ಥೆಯವರು ಬೀದರ್ ಜಿಲ್ಲೆಯನ್ನು ದತ್ತು ತೆಗೆದುಕೊಂಡು ಆರೋಗ್ಯ, ಶಿಕ್ಷಣ, ಮತ್ತಿತರ ಸೌಲಭ್ಯಗಳನ್ನು ಒದಗಿಸಿಕೊಡತಕ್ಕ ಕೆಲಸವನ್ನು ಅವರು ಮಾಡುತ್ತಿದ್ದಾರೆ. ಸಮಗ್ರ ಅಭಿವೃದ್ಧಿ ಯೋಜನೆಯಲ್ಲಿ ಸಮಾಜ ಕಲ್ಯಾಣ ಇಲಾಖೆ ಆರೋಗ್ಯ ಇಲಾಖೆ ಮತ್ತಿತರ ಇಲಾಖೆಗಳು ಒಟ್ಟುಗೂಡಿ ಪರಸ್ಪರ ಹೊಂದಾಣಿಕೆಯಿಂದ ಹೇಗೆಕೆಲಸ ಮಾಡಬಹುದು ಆ ಒಂದು ಯೋಜನೆಯನ್ನು ಯಾವರೀತಿ ಜಾರಿಗೆ ತರುವುದಕ್ಕೆ ಸಾಧ್ಯವಿದೆ ಎನ್ನುವುದನ್ನು ನಾನು ಈಗಾಗಲೇ ಹೇಳಿದ್ದೇನೆ ಕಟ್ಟಡ ಕಟ್ಟತಕ್ಕ ವ್ಯವಸ್ಥೆಯ ಬಗ್ಗೆ ಹೇಳಿದ್ದೇನೆ. ಸ್ವಂತ ಹಾಸ್ಟಲ್‌ಗಳಿಗೆ, ಶಿಶುವಿಹಾರ, ಅಂಗನವಾಡಿ, ಮಹಿಳಾ ಮಂದಿರ, ಸಮಾಜ ವಿಕಾಸಕೇಂದ್ರ ಕಟ್ಟಡಗಳನ್ನು ಕಟ್ಟಲಿಕ್ಕೆ ಹಣ ಇರುವುದಿಲ್ಲ ಅಂತಹ ಸಂದರ್ಭಗಳಲ್ಲಿ ಸಾರ್ವಜನಿಕರಿಂದ ಹಣವನ್ನು ವಂತಿಗೆ ರೂಪದಲ್ಲಿ ನಿರೀಕ್ಷೆ ಮಾಡಬಹುದು. ಪಂಚಾಯಿತಿಗಳಲ್ಲಿ ಕಟ್ಟಡ ಕಟ್ಟಲಿಕ್ಕೆ ಹಣ ಕೇಳಿದರೆ, ಅವರು ನಮ್ಮಲ್ಲಿ ಹಣವಿಲ್ಲ ವೆಂದು ಹೇಳುತ್ತಾರೆ ಹೀಗಾಗಿ ಯಾವುದೇ ಕೆಲಸಕಾರ್ಯಗಳು ಆಗುತ್ತಿರಲಿಲ್ಲ. ಸಮಗ್ರ ಅಭಿವೃದ್ಧಿ ಯೋಜನೆಯಿಂದ ಮೂರು ಇಲಾಖೆಗಳು ಒಟ್ಟುಗೂಡಿ ಈ ಒಂದು ಕೆಲಸವನ್ನು ಮಾಡಿದರೆ ಅದು ಆಗುತ್ತದೆ. ಲೋಕೋಪಯೋಗಿ ಇಲಾಖೆಗೆ ದೊಡ್ಡ ದೊಡ್ಡ ಕಾಮಗಾರಿ ಕೆಲಸಗಳು ಇರುತ್ತವೆ. ಲೋಕೋಪಯೋಗಿ ಇಲಾಖೆಗೆ ರಸ್ತೆಮಾಡುವುದು, ಸೇತುವೆ ಕಟ್ಟುವುದು, ಈ ತರಹ ಅವರವ ಕೆಲಸ ಅವರಿಗೆ ಇರುತ್ತದೆ. ಶಿಕ್ಷಣ ಇಲಾಖೆ ಒಂದು ಶಾಲಾ ಕಟ್ಟಡವನ್ನು ಕಟ್ಟಿದರೆ. ಅದರ ದುರಸ್ತಿ ಕೆಲಸ ವನ್ನು ಅವರು ಮಾಡುವುದಿಲ್ಲ. ಲೋಕೋಪಯೋಗಿ ಇಲಾಖೆಯವರು ಕೂಡ ಮಾಡುವುದಿಲ್ಲ. ಆ ಕೆಲಸ ಮಾಡಲಿಕ್ಕೆ ಕೆಲವೊಂದು ಎಡರುತೊಡರುಗಳಿವೆ. ಇದಕ್ಕಾಗಿ ಒಂದು ಪ್ರತ್ಯೇಕ ವ್ಯವಸ್ಥೆಯನ್ನು ಮಾಡಬೇಕೆಂದು ಅದನ್ನು ಪರಿಶೀಲನೆ ಮಾಡಲಿಕ್ಕೆ ಸರ್ಕಾರದ ಮುಂದೆ ಇಟ್ಟಿದ್ದೇವೆ ಆ ಕೆಲಸ ಆಗಲಿಕೆ ಎಲ್ಲರೂ ಕೂಡ ಸಹಕಾರ ಕೊಡುತ್ತಾರೆ ಎಂದು ನಾವು ನಿರೀಕ್ಷೆ ಮಾಡುತ್ತಿದ್ದೇವೆ. ಸ್ವಯಂ ಉದ್ಯೋಗ ತರಬೇತಿ ಯೋಜನೆಯಲ್ಲಿ ನಿರ್ಗತಿಕರಿಗಾಗಿ ಗೃಹವಸತಿ ಯೋಜನೆಯನ್ನು ೧೯೮೩ರಲ್ಲಿ ಪ್ರಾರಂಭ ಮಾಡಿದ್ದೇವೆ. ಅದು ಜಾರಿಗೆ ಬಂದಿದೆ ಅದು ಇನ್ನೂ ಹೆಚ್ಚಾಗಿ ಪ್ರಚಾರವಾಗಿಲ್ಲ. ಈ ಒಂದು ಯೋಜನೆಯನ್ನು ಕೈಗೆ ತೆಗೆದುಕೊಂಡ ಮೇಲೆ ಬ್ಯಾಂಕ್‌ನ ಗ್ಯಾರಂಟಿ ಇಲ್ಲದೆ ಮಂಜೂರಾತಿ ಕೊಡುತ್ತಿಲ್ಲ. ಇದರ ಬಗ್ಗೆ ಹೆಚ್ಚಿನ ರೀತಿಯಲ್ಲಿ ವ್ಯಾಪಕವಾದ ಪ್ರಚಾರವನ್ನು ತೆಗೆದುಕೊಳ್ಳಬೇಕೆಂದು ಸರ್ಕಾರ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ೧೯೮೩ರಲ್ಲಿ ೨೨ಲಕ್ಷ ರೂಪಾಯಿಗಳನ್ನು ಕೊಡಲಾಗಿದ್ದು ಕೊಟ್ಟಂತಹ ಹಣ ಹೆಚ್ಚಾಗಿ ಖರ್ಚಾಗಿಲ್ಲ ಕೇವಲ ಐವತ್ತೈದು ಲಕ್ಷ ರೂಪಾಯಿಗಳೂ ಕೂಡ ಖರ್ಚಾಗಿಲ್ಲ. ಇದಕ್ಕೆ ವ್ಯಾಪಕವಾದ ಪ್ರಚಾರವನ್ನು ಮಾಡಬೇಕಾಗಿದೆ. ಮುಖ್ಯವಾಗಿ ನ್ಯೂನ್ಯತೆ ಏನಿದೆ ಎಂದರೆ ತಾಲ್ಲೂಕು ಮಟ್ಟದಲ್ಲಿರತಕ್ಕ ಸೋಷಿಯಲ್ ವೆಲ್‌ಫೇರ್ ಇನ್‌ಸ್ಪೆಕ್ಟರ್ ಪ್ರತಿಯೊಂದು ಯೋಜನೆಗಳನ್ನು ಚೈತನ್ಯ, ಮುನ್ನಡೆ, ಯಾವ್ಯಾವ ಯೋಜನೆಗಳಿವೆ ಆ ಯೋಜನೆ ಕೆಳಗೆ ಬರತಕ್ಕ ಕೆಲಸಗಳನ್ನೆಲ್ಲಾ ಇವರು ನೋಡಿ ಕೊಳ್ಳಬೇಕಾಗಿದೆ.

ಸೋಷಿಯಲ್ ವರ್ಕ್ ಇನ್‌ಸ್ಪೆಕ್ಟರ್ ಹುದ್ದೆಯನ್ನು ಅಪ್‌ಗ್ರೇಡ್ ಮಾಡುವ ಮೂಲಕ ನಮ್ಮ ಇಲಾಖೆಯ ಕೆಲಸವನ್ನು ವಿಸ್ತರಿಸಬೇಕೆಂದು ಮಾಡಿದ್ದೇವೆ. ಡಿವಿಜನಲ್ ಲೆವಲ್‌ನಲ್ಲಿ ಕೂಡ ಅಧಿಕಾರಿಗಳ ಹುದ್ದೆ ಜಾಸ್ತಿ ಇದ್ದರೆ ಇಲಾಖೆಯ ಕೆಲಸಗಳ ಬಗ್ಗೆ ಹೆಚ್ಚು ಗಮನ ಕೊಡಲಿಕ್ಕೆ ಬರುತ್ತದೆ, ೪೭ ಹುದ್ದೆಗಳನ್ನು ಮಾಡಬೇಕೆಂದು ಈಗಾಗಲೇ ಪ್ರಪೋಸಲ್ ಇದೆ. ಇದರಿಂದಾಗಿ ಹೆಚ್ಚಿನ ಜವಾಬ್ದಾರಿ

ಕ್ಷೇತ್ರಾಭಿವೃದ್ಧಿಗಳ ಅಧಿಕಾರಿಗಳ ಮೇಲೆ ತಾಲ್ಲೂಕು ಅಧಿಕಾರಿಗಳ ಮೇಲೆ ಬೀಳುತ್ತದೆ. ಇದನ್ನು ಆದಷ್ಟು ಬೇಗ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮಹಿಳಾ ಕಲ್ಯಾಣದ ಬಗ್ಗೆ ಮಾತನಾಡುವುದಾದರೆ, ವಿಧವೆಯರಿಗೆ ಮಾಶಾಸನ ಪ್ರತಿ ತಿಂಗಳು ೫೦ ರೂಪಾಯಿಗಳನ್ನು ಕೊಡಲಾಗುವುದು ಎಂದು ವರ್ಷಕ್ಕೆ ೧೫೦೦ ರೂಪಾಯಿಗಳಿಗಿಂತ ಕಡಿಮೆ ವಾರ್ಷಿಕ ಆದಾಯ ಇರುವವರಿಗೆ ವೃದ್ಧಾಪ್ಯ ವೇತನ ಮುಂದುವರೆಯುತ್ತದೆ. ವಿಧವೆಯರಿಗೆ ಮಾಶಾಸನ ಪಡೆಯುವ ಬಗ್ಗೆ ಆಯಾಯ ಗ್ರಾಮಾಂತರ ಪ್ರದೇಶಗಳಲ್ಲಿ ಆಯಾಯ ತಹಸೀಲ್ದಾರರ ಮೂಲಕ ಈ ಸರ್ಟಿಫಿಕೇಟನ್ನು ತೆಗೆದುಕೊಳ್ಳಬೇಕಾಗುತ್ತದೆ. ಕೆಲವು ಫಾರ್ಮುಗಳನ್ನು ಭರ್ತಿ ಮಾಡಿಕೊಟ್ಟರೆ ಪ್ರತಿ ತಿಂಗಳೂ ೫೦ ರೂಪಾಯಿಗಳ ಮಾಶಾಸನ ಕೊಡತಕ್ಕ ವ್ಯವಸ್ಥೆಯನ್ನು ಏಪ್ರಿಲ್ ಮೊದಲನೆಯ ವಾರದಿಂದ ಜಾರಿಗೆ ತರಲಿದ್ದೇವೆ. ಎಲ್ಲರೂ ಇದು ಒಳ್ಳೆಯ ಯೋಚನೆಯೆಂದು ಸ್ವಾಗತ ಮಾಡಿದ್ದಾರೆ. ಇದರಿಂದ ಹಳ್ಳಿಯ ಬಡ ಹೆಣ್ಣು ಮಕ್ಕಳಿಗೆ ಕೃಷಿ ಕಾರ್ಮಿಕರಿಗೆ ಹೆಚ್ಚಿನ ಅನುಕೂಲ ಮಾಡಿ ಕೊಟ್ಟ ಹಾಗೆ ಆಗುತ್ತದೆ. ಮತ್ತು ಸ್ವಲ್ಪ ಹಣಕಾಸಿನ ನೆರವು ದೊರೆತಂತೆ ಆಗುತ್ತದೆ. ಗರ್ಭಿಣಿ ಹೆಂಗಸರಿಗೆ ನಮ್ಮ ಇಲಾಖೆಯಿಂದ ಹೆರಿಗೆ ಪೂರ್ವದಲ್ಲಿ ಮೂರು ತಿಂಗಳ ಕಾಲ ಮಾಶಾಸನ ಕೊಡಬೇಕೆಂದು ಹಿಂದಿನ ಸರ್ಕಾರದ ಆಯವ್ಯಯ ಪಟ್ಟಿಯಲ್ಲಿ ತಿಳಿಸಿದ್ದೇವೆ. ಪ್ರತಿ ತಿಂಗಳೂ ೫೦ ರೂಪಾಯಿಗಳ ಮಾಶಾಸನ ಕೊಡುವುದನ್ನು ೧೦೦ ರೂಪಾಯಿಗಳಿಗೆ ಏರಿಸಬೇಕೆಂದು ನಾನು ಯೋಚನೆ ಮಾಡುತ್ತಿದ್ದೇನೆ. ಈ ಮೂರು ತಿಂಗಳು ಕಾಲ ಕೊಡುವ ಸಹಾಯ ಧನವನ್ನು ಒಟ್ಟಿಗೆ ಕೊಟ್ಟರೆ ಒಳ್ಳೆಯದೆಂದು, ತಿಳಿದು ಒಂದು ಸರ್ಕಾರಿ ಆಜ್ಞೆಯನ್ನು ಸದ್ಯದಲ್ಲೇ ಹೊರಡಿಸಲಾಗುವುದು. ಮತ್ತು ಬಾಲಭವನ ನಮ್ಮ ರಾಜಧಾನಿಯಲ್ಲಿ ಇದೆ. ಇದನ್ನು ಇನ್ನಷ್ಟು ವಿಸ್ತಾರ ಮಾಡುವ ಬಗ್ಗೆ ಮತ್ತು ಬೇರೆ ನಾಲ್ಕಾರು ಕಡೆಗೂ ಬೇರೆ ಬೇರೆ ಜಿಲ್ಲೆಗಳಿಗೂ ವಿಸ್ತಾರ ಮಾಡಬೇಕೆಂದು ಉದ್ದೇಶ ಇದೆ. ಈಗ ಬೆಂಗಳೂರಿನ ಕಬ್ಬನ್ ಪಾರ್ಕಿನಲ್ಲಿ ದೊಡ್ಡದು ಇದೆ. ರಾಜಾಜಿನಗರ ಹೊಸಹಳ್ಳಿ ಪಾರ್ಕ್, ಜೀವನ ಭೀಮಾನಗರದಲ್ಲಿ ಸಣ್ಣ ಸಣ್ಣ ಬಾಲಭವನ ಇದೆ. ಮುಖ್ಯವಾಗಿ ಮಕ್ಕಳ ಆಟಪಾಠಗಳಿಗೆ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಕಾರ್ಯಚಟುವಟಿಕೆಗಳಿಗೆ ಈ ಬಾಲಭವನಗಳು ಮಹತ್ವಕೊಟ್ಟು ಕೆಲಸ ಮಾಡುತ್ತಿವೆ. ಮೈಸೂರು, ದಾವಣಗೆರೆ, ಉಡುಪಿ, ಮಂಗಳೂರು, ಹಾಸನ ಕೋಲಾರ ಈ ಊರುಗಳಿಗೆ ಇದರ ಕಾರ್ಯವ್ಯಾಪ್ತಿಯನ್ನು ವಿಸ್ತಾರ ಮಾಡಿದ್ದೇವೆ. ಮೈಸೂರಿನಲ್ಲಿ ಸುಸಜ್ಜಿತವಾದ ಬಾಲಭವನ ನಿರ್ಮಾಣ ಮಾಡುವ ಬಗ್ಗೆ ಈಗಿನ ಡಿ.ಸಿ.ಯವರು ಹೆಚ್ಚಿನ ಪ್ರೋತ್ಸಾಹ ಕೊಡುತ್ತಿದ್ದಾರೆ. ಇದುವರೆಗೆ ಸುಮಾರು ೩.೩೫ ಲಕ್ಷ ರೂಪಾಯಿಗಳ ವೆಚ್ಚವನ್ನು ಇದಕ್ಕಾಗಿ ಮಾಡಿದ್ದೇವೆ. ಬಾಲಸೇವಾ ವಿಭಾಗದಲ್ಲಿ ಹೊಲಿಗೆ ತರಬೇತಿ ಇತ್ಯಾದಿ ಸೌಲಭ್ಯಗಳನ್ನು ಇನ್ನೂರು ಮಂದಿ ಬಡ ಸ್ತ್ರೀಯರಿಗೆ ಕೊಟ್ಟಿದ್ದೇವೆ. ಇದಕ್ಕಾಗಿ ೪೦ ಸಾವಿರದ ಮುನ್ನೂರು ರೂಪಾಯಿಗಳ ವೆಚ್ಚ ಮಾಡಿದ್ದೇವೆ. ಮಹಿಳಾ ಮಂಡಳಿಗಳ ಬಗ್ಗೆ ಕೆಲವು ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಅವರ ಹಣಕಾಸಿನ ಪರಿಸ್ಥಿತಿ ಕಷ್ಟವಾಗಿದೆಯೆಂದು ಯಾರ್ಯಾರು ರಿಜಿಸ್ಟ್ರೇಷನ್ ಮಾಡಿಕೊಂಡಿದ್ದಾರೆ ಅವರಿಗೆ ಒಂದು ಸಾವಿರ ರೂಪಾಯಿಗಳನ್ನು ವರ್ಷಕ್ಕೆ ಕೊಡುತ್ತಿದ್ದೇವೆ. ಇದು ಕೇಂದ್ರದಿಂದ ಬರತಕ್ಕಂಥ ನೆರವು ಕೆಲವು ಸಂಸ್ಥೆಗಳು ಸ್ವಂತ ಉತ್ಪತ್ತಿಯನ್ನು ಹೊಂದಿವೆ. ಈ ಮಹಿಳಾ ಮಂಡಳಿಗಳಿಗೆ ಹೆಚ್ಚಿನ ನೆರವು ಕೊಡಬೇಕೆಂದು ಮತ್ತು ಅವುಗಳನ್ನು ಸದೃಢ ಮಾಡತಕ್ಕ ವಿಚಾರ ಅವುಗಳು ಹೆಚ್ಚು ಸಮಾಜಸೇವಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ರೀತಿಯಲ್ಲಿ ಸಂಪರ್ಕ ಸಭೆ ವ್ಯವಸ್ಥೆ ಮಾಡಬೇಕು ಎನ್ನುವ ಉದ್ದೇಶ ಸರ್ಕಾರಕ್ಕೆ ಇದೆ. ಅದಕ್ಕೋಸ್ಕರವಾಗಿ ಒಂದು ಸೆಮಿನಾರ್ ಕರೆಯಬೇಕೆಂದು ಇಟ್ಟುಕೊಂಡಿದ್ದೇವೆ. ಇದಕ್ಕೆ ಲಯನ್ಸ್, ರೋಟರಿ, ಮೊದಲಾದ ಸಂಘಸಂಸ್ಥೆಗಳ ಶೈಕ್ಷಣಿಕ ಸಂಸ್ಥೆಗಳ ನೆರವನ್ನು ನಾವು ತೆಗೆದುಕೊಳ್ಳಬೇಕಾಗುತ್ತದೆ. ಅವರು ಕೊಡತಕ್ಕಂಥ ಹಣಕಾಸಿನ ನೆರವನ್ನು ಸಾಕಷ್ಟು ಕೊಟ್ಟಿದ್ದಾರೆ. ಈ ಮಹಿಳಾ ಮಂಡಲಿಗಳ ಹೊಲಿಗೆ ತರಬೇತಿ ಕೇಂದ್ರಗಳಲ್ಲಿ ಹಣ ದುರ್ವ್ಯವಹಾರ ನಡೆಯುತ್ತಿದೆ, ರಾಜ್ಯಸರ್ಕಾರದಿಂದ ಮತ್ತು ಕೇಂದ್ರ ಸರ್ಕಾರದಿಂದ ಬರತಕ್ಕಂಥ ಅನುದಾನ ಎರಡನ್ನೂ ದುರುಪಯೋಗ ಮಾಡಿಕೊಳ್ಳಲಾಗಿದೆ ಎಂದು ದೂರುಗಳು ಬಂದಿವೆ. ಇಂತಹ ಮಂಡಲಿಗಳನ್ನು ಆದಷ್ಟು ಬೇಗನೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ. ನೇರವಾದ ಕ್ರಮ ಎಂದರೆ ಅವರಿಗೆ ಕೊಡತಕ್ಕ ಗ್ರ್ಯಾಂಟನ್ನು ನಿಲ್ಲಿಸುವುದು. ಎಲ್ಲಾ ಸಂಸ್ಥೆಗಳಲ್ಲಿ ಈ ಅವ್ಯವಹಾರ ನಡೆದಿಲ್ಲ. ಕೆಲವು ಸಂಸ್ಥೆಗಳಲ್ಲಿ ಮಾತ್ರ ಇದು ನಡೆದಿರಬಹುದು. ನಮ್ಮಲ್ಲಿ ೩೫೦೦ ನೋಂದಾಯಿಸಲ್ಪಟ್ಟಿರುವ ಮಹಿಳಾ ಮಂಡಳಿಗಳು ಇವೆ. ಪ್ರತಿಯೊಂದಕ್ಕೂ ಒಂದು ಸಾವಿರ ರೂಪಾಯಿಗಳನ್ನು ಕೇಂದ್ರದಿಂದ ಕೊಡುತ್ತಿದ್ದಾರೆ. ಅವುಗಳಿಗೆ ಇನ್ನೂ ಸ್ವಲ್ಪ ಹೆಚ್ಚಿನ ಸಹಕಾರ ಕೊಡಬೇಕೆಂದು, ಅವುಗಳನ್ನು ಸದೃಢಗೊಳಿಸಲು ಅವರು ತಯಾರಿಸ ತಕ್ಕಂಥ

ಬಟ್ಟೆಗಳನ್ನು, ಆಹಾರಪದಾರ್ಥಗಳಾಗಲೀ, ನಮ್ಮ ಹಾಸ್ಟೇಲ್‌ಗಳಲ್ಲಿ ಇರತಕ್ಕಂಥ ಮಕ್ಕಳಿಗೆ ಮತ್ತು ಅಂಗನವಾಡಿ ಮಕ್ಕಳಿಗೆ ಒದಗಿಸಿಕೊಡುವುದರಿಂದ ಪರಸ್ಪರ ಸಹಕಾರದಿಂದ ಈ ಕೆಲಸ ಮಾಡಬೇಕೆಂದು ಆಲೋಚನೆ ಇಟ್ಟುಕೊಂಡಿದ್ದೇವೆ ಈ ಅಂಗವಿಕಲ ಸಂಸ್ಥೆ ಬಗ್ಗೆ ಹೇಳಬೇಕಾದರೆ, ಇವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಸರ್ಕಾರದ ಉದ್ಯೋಗಗಳಲ್ಲಿ ಶೇಕಡಾ ನಾಲ್ಕರ ಮೀಸಲಾತಿಯನ್ನು ಇಟ್ಟಿದ್ದಾರೆ. ಬೆಂಗಳೂರು ನಗರದಲ್ಲಿ ಒಂದು ಮಾರ್ವಾಡಿ ಯುವಜನ ಸಂಸ್ಥೆಯವರು ಕಾಲು ಇಲ್ಲದವರಿಗೆ ಕಾಲು ದೊರಕಿಸಿಕೊಡುವ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ನಾವು ಕೂಡ ಸರ್ಕಾರದ ಇಲಾಖೆ ವತಿಯಿಂದ ಮೂರು ಚಕ್ರದ ವಾಹನ ಒದಗಿಸಿಕೊಡುವುದಕ್ಕೆ, ಅವರಿಗೆ ತರಬೇತಿ ಕೊಡುವುದಕ್ಕೆ ಹಣವನ್ನು ಒದಗಿಸಿಕೊಡುತ್ತಿದ್ದೇವೆ. ಅವರಿಗೂ ಕೂಡ ಮಾಸಾಶನ ತಿಂಗಳಿಗೆ ೫೦ ರೂಪಾಯಿಗಳನ್ನು ಕೊಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಕಿವುಡರ ಮತ್ತು ಕುರುಡರ ಶಾಲೆ ಮೈಸೂರಿನಲ್ಲಿ ಇದೆ. ಇದು ಬಹಳ ಒಳ್ಳೆಯ ಕೆಲಸ ಮಾಡುತ್ತಿದೆ. ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ನೆರವು ಅದಕ್ಕೆ ಸಾಕಷ್ಟು ದೊರೆಯುತ್ತಿದೆ ಇನ್ನೊಂದು ಮುಖ್ಯವಾಗಿ ನಮ್ಮ ಇಲಾಖೆಯಲ್ಲಿ ಬರತಕ್ಕದ್ದು ಎಂದರೆ ಬೆಗ್ಗರ್ ರಿಲೀಫ್. ಈ ಭಿಕ್ಷುಕರ ನಿಯಂತ್ರಣಕ್ಕೆ ಸಾಕಷ್ಟು ಹಣವನ್ನು ಕೇಂದ್ರ ಸರ್ಕಾರ ಒದಗಿಸುತ್ತದೆ. ಇದರ ಕಾರ್ಯ ವ್ಯಾಪ್ತಿಯನ್ನು ಬೇರೆ ಕಡೆಗೂ ಹಮ್ಮಿಕೊಳ್ಳುತ್ತಿದ್ದೇವೆ. ಈ ಭಿಕ್ಷುಕರ ನಿಯಂತ್ರಣ ಮಂಡಲಿಗೆ ಶ್ರೀಮಾನ್ ಟಿ. ಆರ್. ಶಾಮಣ್ಣನವರು ಅಧ್ಯಕ್ಷರಾಗಿದ್ದಾರೆ ಇದು ಬೆಂಗಳೂರಿನಲ್ಲಿ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಿದೆ ಎಂದು ಹೇಳುವುದಕ್ಕೆ ನಾನು ಹೆಮ್ಮೆಪಡುತ್ತೇವೆ ಸಮಾಜದ ಒಂದು ಅಂಗವಾದ ಮಕ್ಕಳು, ಮಹಿಳೆಯರು, ಅಂಗವಿಕಲರು, ವಿಧವೆಯರು ದೈಹಿಕವಾಗಿ ಮತ್ತು ಮಾನಸಿಕವಾಗಿ ಅಂಗವಿಕಲರಾಗಿದ್ದರೆ. ಅವರ ಸಮಸ್ಯೆ ಬಗೆಹರಿಯಬೇಕಾದರೆ ಸಮಾಜ ಕೂಡ ಎಚ್ಚೆತ್ತುಕೊಳ್ಳಬೇಕು. ಅವರನ್ನು ಮಾನವೀಯ ದೃಷ್ಟಿಯಿಂದ ನೋಡಬೇಕಾಗುತ್ತದೆ. ಇದಕ್ಕೆ ಎಲ್ಲಾ ವ್ಯಕ್ತಿಗಳ ಸಹಕಾರ ಕೊಡಬೇಕಾಗುತ್ತದೆ. ದೇವದಾಸಿಯರ ಬಗ್ಗೆ ಮಾನ್ಯ ಸದಸ್ಯರಾದ ಪಾಟೀಲರು ಹೇಳಿದರು. ಈ ದೇವದಾಸಿ ಪದ್ಧತಿ ಬಹಳ ವರ್ಷಗಳಿಂದ ಇದ್ದು ಅವರಿಗೆ ಸಾಮಾಜಿಕವಾಗಿ ಹೊಸ ಬದುಕನ್ನು ಕಲ್ಪಿಸಿಕೊಡಬೇಕಾದದ್ದು ಮುಖ್ಯವಾಗಿದೆ. ಸವದತ್ತಿಯಲ್ಲಿ ಸಬ್ ಇನ್ಸ್‌ಪೆಕ್ಟರ್ ಒಬ್ಬರು ಕೆಲವು ಸೇವಾ ಸಂಸ್ಥೆಗಳ ಮುಖಾಂತರ ೫೧ ಜೋಡಿ ದೇವದಾಸಿಯರ ಮದುವೆಯನ್ನು ಮಾಡಲು ಸಹಕಾರ ಕೊಟ್ಟಿದ್ದಾರೆ. ಅವರು ನಮ್ಮೆಲ್ಲರ ಅಭಿನಂದನೆಗೆ ಅರ್ಹರು ಒಳ್ಳೆಯ ಕೆಲಸ ಮಾಡಿದ್ದಾರೆ. ಈ ಸಭೆಯ ಮುಖಾಂತರ ಮತ್ತು ತಮ್ಮ ಮುಖಾಂತರ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

೬-೦೦ ಪಿ. ಎಂ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—೫೦-೬೦ ವರ್ಷ ಆದವರಿಗೆಲ್ಲಾ ಮದುವೆ ಮಾಡಿದರೆ ನಾವು ಸಂತೋಷ ಪಡಬೇಕೇ ?

ಶ್ರೀಮತಿ ಚಂದ್ರಪ್ರಭಾ ಅರಸ್.— ಅನೇಕ ವರ್ಷಗಳಿಂದ ಈ ಪದ್ಧತಿ ಇದೆ. ಒಂದೇ ವರ್ಷದಲ್ಲಿ ಈ ಪದ್ಧತಿಯನ್ನು ತೆಗೆದುಹಾಕುವುದಕ್ಕೆ ಆಗುವುದಿಲ್ಲ. ಸ್ವಯಂ ಉದ್ಯೋಗದ ಮೂಲಕ ಇವರು ವ್ಯಾಪಾರ ಮಾಡುವುದಾದರೆ, ತರಕಾರಿ ವ್ಯಾಪಾರ ಮಾಡುವುದಾದರೆ ಮೂರು ಸಾವಿರ ರೂಪಾಯಿಗಳ ಪ್ರೋತ್ಸಾಹ ಧನ ಕೊಡುತ್ತೇವೆ. ವಯಸ್ಸಾದವರು ಇವನ್ನು ಸದುಪಯೋಗ ಮಾಡಿಕೊಳ್ಳಬಹುದು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಇನ್ನು ಮುಂದೆ ಹೀಗೆ ಆಗದ ಹಾಗೆ ನೋಡಿಕೊಳ್ಳಬೇಕಾಗುತ್ತದೆ. ಇಲ್ಲಿಯವರೆಗೂ ಈ ನಾಟಕವನ್ನು ನೋಡಿ ಸಮಾಜ ಬೇಸತ್ತಿದೆ.

ಶ್ರೀಮತಿ ಚಂದ್ರಪ್ರಭಾ ಅರಸ್.—ಬಹಳ ದಿವಸಗಳಿಂದ ದೇವರ ಹೆಸರಿನಲ್ಲಿ ನೀವು ನಾಟಕ ಮಾಡುವುದನ್ನು ಬಿಟ್ಟಿದ್ದರೆ, ಅವರು ಸರಿ ಹೋಗುತ್ತಿದ್ದರು. ವಯಸ್ಸಾದವರು, ಸ್ವಯಂ ಉದ್ಯೋಗ ಮಾಡುವುದಾದರೆ ಸಣ್ಣಪುಟ್ಟ ಗುಡಿ ಕೈಗಾರಿಕೆ ಮಾಡುವುದಾದರೆ ಪ್ರೋತ್ಸಾಹ ಕೊಡುತ್ತೇವೆ. ಇವರ ಪುನರ್‌ವಸತಿಗಾಗಿ ಸಣ್ಣ ಸಣ್ಣ ಉದ್ಯಮ ಮಾಡುವುದಕ್ಕಾಗಿ ಇವರಿಗೆ ಸಹಾಯ ಧನ ಒದಗಿಸುವ ಬಗ್ಗೆ ಇಲಾಖೆ ವಿಚಾರ ಮಾಡುವ ಬಗ್ಗೆ ಚಲನಚಿತ್ರಗಳ ಮೂಲಕ ವಾರ ಪತ್ರಿಕೆಗಳ ಮುಖಾಂತರ, ಪ್ರಚಾರ ಮಾಡುತ್ತಿದ್ದೇವೆ. ಇವೊತ್ತು ಬಳ್ಳಾರಿಯಲ್ಲೂ ಈ ಪದ್ಧತಿ ಇದೆಯೆಂದು ಮಾನ್ಯ ಸದಸ್ಯರು ಹೇಳಿದರು. ಅಲ್ಲೂ ಕೂಡಾ ಈ ಬಗ್ಗೆ ಪ್ರಯತ್ನ ಮಾಡುತ್ತಿದ್ದೇವೆ. ದೇವರ ಹೆಸರಿನಲ್ಲಿ ಸಮಾಜದಲ್ಲಿ ಈ ರೀತಿ ಅವರು ಶೋಷಣೆಗೆ ಒಳಗಾಗಿದ್ದು, ಇದನ್ನು ಜನ ದುರುಪಯೋಗ

ಪಡಿಸಿಕೊಳ್ಳುತ್ತಿದ್ದಾರೆ. ಇದರಲ್ಲಿ ೧೮, ೨೦, ೫೦ ವಯಸ್ಸಿನವರೂ ಸಹ ಇದ್ದಾರೆ. ಇವರ ಸಾಂಸಾರಿಕ ಜೀವನ ಸುಗಮವಾಗುವುದಕ್ಕೆ ಶಾಶ್ವತ ಪುನರ್‌ವಸತಿಯನ್ನು ಏಕೆ ಮಾಡಬಾರದು ? ಮದುವೆಯಾದವರಿಗೆ ಸ್ವಂತ ಉದ್ಯಮ ಮಾಡಿ ಸ್ವಾವಲಂಬಿಗಳಾಗುವುದಕ್ಕೆ ಧನ ಸಹಾಯ ಮಾಡುತ್ತಿದ್ದೇವೆ. ಇದರಲ್ಲಿ ಯಾರು ವಯೋವೃದ್ಧರಿದ್ದಾರೆ ಅವರಿಗೆ ವೃದ್ಧಾಪ್ಯವೇತನ ಕೊಡಬೇಕಾಗುತ್ತದೆ. ಸ್ವಂತ ಉದ್ಯೋಗ ಮಾಡುವುದಕ್ಕೆ ಪ್ರೋತ್ಸಾಹ ಕೊಡಬೇಕಾಗುತ್ತದೆ ನಾವು ನೀವು ಎಲ್ಲಾ ಸೇರಿ ಕೆಲಸ ಮಾಡಿದರೆ, ಇವರನ್ನು ಮೇಲಕ್ಕೆ ತರಬಹುದು. ದೇವದಾಸಿ ಪದ್ಧತಿಗೆ ಚಾರಿತ್ರಿಕ ಹಿನ್ನೆಲೆ ಇದೆ. ದೇವರ ಹೆಸರಿನಲ್ಲಿ ಬಹಳ ವರ್ಷಗಳಿಂದ ಇದನ್ನು ನಡೆಸಿಕೊಂಡು ಬಂದಿದ್ದಾರೆ. ಇದು ಸಮಾಜದ ಪಿಡುಗಾಗಿದೆ. ಈ ಜನರಿಗೆ ವಿದ್ಯೆ ಕಲಿಸಿ, ಅವರು ಹೆಚ್ಚು ತಿಳುವಳಿಕೆ ಪಡೆಯುವುದರಿಂದ ಇವರನ್ನು ಮೇಲೆತ್ತಬಹುದಾಗಿದೆ. ಈ ಬಗ್ಗೆ ಗೃಹ ಇಲಾಖೆಯ ಅಧಿಕಾರಿಗಳು ಏನು ಪಾತ್ರ ವಹಿಸಿದ್ದಾರೆ, ಆ ಬಗ್ಗೆ ನಾವು ಅಭಿನಂದನೆ ಸಲ್ಲಿಸಬೇಕಾಗಿದೆ. ಸಮಾಜದಲ್ಲಿ ಇತರೆ ಬೇರೆ ಅಂಗ ಸಂಸ್ಥೆಗಳು, ಗಣ್ಯ ವ್ಯಕ್ತಿಗಳು, ರಾಜಕಾರಣಿ ಮುಖಂಡರು, ಹೆಚ್ಚಿನ ಪಾತ್ರ ವಹಿಸಿದರೆ ಇವರಿಗೆ ಪುನರ್ ವಸತಿ ಮಾಡುವುದಕ್ಕೆ ಅವಕಾಶವಾಗುತ್ತದೆ. ಈ ರೀತಿಯಾಗಿ ಸಾಕಷ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಕಾಲಕ್ರಮೇಣ, ಇವರು ಹೆಚ್ಚಿನ ಪ್ರಗತಿ ಹೊಂದುವ ದಿಸೆಯಲ್ಲಿ ಸರ್ವ ಪ್ರಯತ್ನ ಮಾಡುತ್ತಿದ್ದೇವೆ. ಇದಕ್ಕೆ ಬೇಕಾಗಿರತಕ್ಕದ್ದು, ಅವಿಶ್ವಾಸ, ಅಸಹಕಾರ, ಅಮಾನುಷ ವರ್ತನೆ ಅಲ್ಲ. ಪರಸ್ಪರ ಸಹಕಾರ ವಿಶ್ವಾಸ ಅಭಿಮಾನ, ಪ್ರೋತ್ಸಾಹ ತೋರಿಸಿ ಪಕ್ಷಾತೀತವಾಗಿ ಕೆಲಸ ಮಾಡಿದರೆ ಸರ್ವತೋಮುಖ ಅಭಿವೃದ್ಧಿಯಾಗುತ್ತದೆ. ಈ ಬಗ್ಗೆ ಎಲ್ಲರೂ ಪ್ರೋತ್ಸಾಹ ನೀಡಬೇಕೆಂದು ಇಷ್ಟು ಮಾತನ್ನು ಆಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಹೆಸರಿನಲ್ಲಿರುವ ಬೇಡಿಕೆಗಳಿಗೆ ಮಾನ್ಯ ಸಭೆ ತನ್ನ ಒಪ್ಪಿಗೆಯನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಹಿಂದುಳಿದ ವರ್ಗದವರು ಹಾಗೂ ದುರ್ಬಲವರ್ಗದವರ ಬಗ್ಗೆ ಹೆಚ್ಚು ಆಸಕ್ತಿ ಹೊಂದಿದ್ದ ಶ್ರೀ ದೇವರಾಜ ಅರಸ್ ಅವರು ತೀರಿಕೊಂಡ ಸಮಯದಲ್ಲಿ ಅವರ ಹೆಸರಿನಲ್ಲಿ ಒಂದು ಅಧ್ಯಯನ ಸಂಸ್ಥೆ ಸ್ಥಾಪನೆ ಮಾಡುವ ಬಗ್ಗೆ ಈ ಮನೆಯಲ್ಲಿ ಹೇಳಿಕೆ ಕೊಟ್ಟದ್ದು ಇದೆ. ಕೊಟ್ಟ ಮಾತನ್ನು ಈ ಸರ್ಕಾರ ಕೂಡಾ ನಿರ್ವಹಿಸಬೇಕೆಂದು ನಮ್ಮ ಇಚ್ಛೆ. ಈ ಬಗ್ಗೆ ಏನು ಪ್ರಯತ್ನ ಮಾಡಿದ್ದೀರಿ ? ಈ ಬಗ್ಗೆ ಅವರ ಹೆಸರಿನಲ್ಲಿ ಅವಾರ್ಡ್ ಕೊಟ್ಟರೆ ಸಾಲದು.

(ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಇವರ ಹಿರಿಯ ಮಗಳಾದ ತಾವು ಅವರ ಕನಸನ್ನು ನನಸು ಮಾಡತಕ್ಕ ದೃಷ್ಟಿಯಲ್ಲಿ ಏನು ಪ್ರಯತ್ನ ಮಾಡುತ್ತೀರಿ? ಎರಡನೆಯದಾಗಿ, ಹಿಂದುಳಿದ ವರ್ಗದವರಿಗೆ ವಾರ್ಷಿಕ ಆದಾಯದ ಮಿತಿಯನ್ನು ಹತ್ತು ಸಾವಿರ ರೂಪಾಯಿಗಳೆಂದು ೧೯೭೭ರಲ್ಲಿ ಮಾಡಲಾಗಿತ್ತು. ಕಡೇ ಪಕ್ಷ ಇದನ್ನು ಇಪ್ಪತ್ತು ಸಾವಿರ ರೂಪಾಯಿಗಳಿಗೆ ನಿಗಧಿ ಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಜಿ. ನಾಯಕ್.—ಮಾನ್ಯ ಅಧ್ಯಕ್ಷರೇ ನಮ್ಮ ಗಂಡುಗಲಿ, ಹಿಂದಿನ ಮುಖ್ಯಮಂತ್ರಿ ದೇವರಾಜ ಅರಸು ಅವರ ಪುತ್ರಿ ಶ್ರೀಮತಿ ಚಂದ್ರಪ್ರಭಾ ಅರಸ್ ಅವರ ಮೇಲೆ ನನಗೆ ನಂಬಿಕೆ ಇದೆ. ಅವರು ಒಳ್ಳೆಯ ದಯಾಳುಗಳು. ಆದರೆ ಅವರಲ್ಲಿ ನಾನು ಕೇಳಿಕೊಳ್ಳುವುದು ಇಷ್ಟೆ. ಯಾವುದೇ ವಿದ್ಯಾರ್ಥಿಯ ಶಾಲಾ ನೇಮಕಾತಿ ರಿಜಿಸ್ಟರ್‌ನಲ್ಲಿ ಹಾಗೂ ಟ್ರಾನ್ಸ್‌ಫರ್ ಸರ್ಟಿಫಿಕೇಟಿನಲ್ಲಿ ನಾಯಕ, ಬೇಡ, ವಾಲ್ಮೀಕಿ, ತಳವಾರ, ಪಾಳೇಗಾರ ಎಂಬ ಜಾತಿ ನಮೂದಾಗಿದ್ದರೆ, ಅವರನ್ನು ನಾಯಕ ಜನಾಂಗಕ್ಕೆ ಸೇರಿದವರು ಎಂದು ಸರ್ಟಿಫಿಕೇಟ್ ಕೊಡುವ ರೀತಿ ಒಂದು ಸರ್ಕಾರಿ ಆಜ್ಞೆಯನ್ನು ತಕ್ಷಣ ಹೊರಡಿಸಬೇಕು. ಇಂಥವರ ಮೇಲೆ ಯಾವುದಾದರೂ ಸಿ.ಆರ್.ಇ. ಕೇಸುಗಳಿದ್ದರೆ ಅಂಥವುಗಳನ್ನು ತಕ್ಷಣ ವಾಪಸ್ಸು ತೆಗೆದುಕೊಳ್ಳುವ ಬಗ್ಗೆ ಆಜ್ಞೆ ಮಾಡಬೇಕು. ಈ ಬಗ್ಗೆ ಮಾನ್ಯ ಮಂತ್ರಿಗಳು ತಮ್ಮ ಬಾಯಿಂದ ಆಶ್ವಾಸನೆ ಕೊಡುವವರೆಗೂ ನಾನು ಧರಣಿ ಕುಳಿತುಕೊಳ್ಳುತ್ತೇನೆ.

(ಶ್ರೀ ಎನ್. ಜಿ. ನಾಯಕ್ ಅವರು ಸಭಾಧ್ಯಕ್ಷರ ಪೀಠದ ಮುಂದೆ ಬಂದು ಧರಣಿ ಕುಳಿತರು)

ಶ್ರೀಮತಿ ಚಂದ್ರಪ್ರಭಾ ಅರಸ್.—ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗಿದೆ. ಈ ಬಗ್ಗೆ ನನ್ನ ಹತ್ತಿರ ಅನೇಕಸಾರಿ ಬಂದು ಚರ್ಚೆ ಮಾಡಿದ್ದಾರೆ. ಈ ಒಂದು ಉಪ ನಾಮಗಳು ಏನು ಇವೆ ಇವು ಎಸ್.ಟಿ ಅಥವಾ ನಾಯಕ ಎನ್ನುವುದರ ಕೆಳಗೆ ತರಬೇಕೆಂದು ಹೇಳುತ್ತಿದ್ದಾರೆ. ಸರ್ಕಾರ ಈ ಬಗ್ಗೆ ಆದಷ್ಟು ಬೇಗ ಪರಿಶೀಲನೆ ಮಾಡಿ, ಈ ಹೆಸರುಗಳ ಬಗ್ಗೆ ಶಿಫಾರಸ್ಸನ್ನು ಮಾಡಿ, ಕೇಂದ್ರಸರ್ಕಾರಕ್ಕೆ

ಕಳುಹಿಸುವುದನ್ನು ಆದಷ್ಟು ಬೇಗನೆ ಮಾಡುತ್ತೇವೆಂದು ಹೇಳುತ್ತೇವೆ. ಈ ಜಾತಿಗಳನ್ನು ಎಸ್.ಸಿ. ಅಥವಾ ಎಸ್.ಟಿ.ಗೆ ಸೇರಿಸುವುದಾಗಲೀ ಅಥವಾ ಅದರಿಂದ ತೆಗೆದುಹಾಕದ್ದಂಥದೇ ಆಗಲೀ,--ಈ ಬಗ್ಗೆ ನಮಗೆ ಅಧಿಕಾರ ಇಲ್ಲದೇ ಇರುವುದರಿಂದ, ಈ ಬಗ್ಗೆ ಕೇಂದ್ರಕ್ಕೆ ಶಿಫಾರಸ್ಸು ಮಾಡಬಹುದೇ ಹೊರತು, ಇನ್ನೇನನ್ನೂ ನಾನು ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಮದನಗೋಪಾಲ ನಾಯಕ್.--ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಪ್ರತೀ ಸಲ ಇದೇ ರೀತಿಯ ಆಶ್ವಾಸನೆ ಕೊಡುತ್ತಿದ್ದಾರೆ. ಇದು ಬಹಳ ಪ್ರಾಮುಖ್ಯವಾದಂಥ ವಿಚಾರ ನಮ್ಮ ಜನಾಂಗದವರ ಮೇಲೆ ಸುಳ್ಳು ಸರ್ಟಿಫಿಕೇಟು ಕೊಡುತ್ತಿದ್ದಾರೆಂದು ಹೇಳಿ, ಕೇಸುಗಳನ್ನು ಹಾಕುತ್ತಿದ್ದಾರೆ. ಇದು ಆದಷ್ಟು ಬೇಗ . ತಪ್ಪಬೇಕು. ಈ ಬಗ್ಗೆ ಮಾನ್ಯ ಮಂತ್ರಿಗಳು ನಿರ್ಧಾರ ತೆಗೆದುಕೊಳ್ಳುವವರೆಗೆ ನಾನೂ ಕೂಡಾ ಧರಣಿ ಕೂಡುತ್ತೇನೆ.

(ಶ್ರೀ ಮದನಗೋಪಾಲ ನಾಯಕ್ ಅವರು ಸಭಾಧ್ಯಕ್ಷರ ಪೀಠದ ಮುಂದೆ ಬಂದು ಧರಣಿ ಕುಳಿತರು)

ಶ್ರೀ ಎಂ. ಸಿ. ನಾಣಯ್ಯ.--ಮಾನ್ಯ ಎನ್.ಜಿ. ನಾಯಕ್ ಅವರ ಕಳಕಳಿ ನನಗೆ ಗೊತ್ತಿದೆ. ಆದ್ದರಿಂದ ತಕ್ಷಣ ಸರ್ಕಾರ ಈ ಬಗ್ಗೆ ಆಜ್ಞೆ ಹೊರಡಿಸಲಿ.

ಶ್ರೀ ಎನ್. ಜಿ. ನಾಯಕ್.--ನಮಗೆ ನ್ಯಾಯ ದೊರಕಬೇಕು ಬಹಳ ಅನ್ಯಾಯವಾಗಿದೆ. ನಮ್ಮ ಮಕ್ಕಳೆಲ್ಲಾ ಸಾಯುತ್ತಿದ್ದಾರೆ ಅಲ್ಲಿ ಕೇಸುಗಳು ನಡೆಯುತ್ತಿದೆ.

ಅಧ್ಯಕ್ಷರು.--ರಾಜ್ಯ ಸರ್ಕಾರಕ್ಕೆ ಇಲ್ಲದೇ ಇರುವ ಅಧಿಕಾರಕ್ಕೆ ಆಶ್ವಾಸನೆ ಕೊಡಿ ಎಂದು ಕೇಳು ವುದು ಸರಿಯಲ್ಲ.

ಶ್ರೀಮತಿ ಚಂದ್ರಪ್ರಭಾ ಅರಸ್.--ಹಿಂದಿನ ಸರ್ಕಾರ ಇದನ್ನು ತೆಗೆದಿದ್ದಾರೆ. ಅದನ್ನು ಸೇರಿಸ ತಕ್ಕದ್ದು ಅಥವಾ ತೆಗೆಯತಕ್ಕ ಅಧಿಕಾರ ನಮಗೆ ಇಲ್ಲ. ಆದಷ್ಟು ಬೇಗ ಶಿಫಾರಸ್ಸು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡುತ್ತೇನೆ.

ಶ್ರೀ ಎನ್. ಜಿ. ನಾಯಕ್.-- ದಿನಬೆಳಗಾದರೆ ನಮ್ಮ ಮನೆಬಾಗಿಲಿಗೆ ಎಷ್ಟು ಜನರು ಬರುತ್ತಾರೆ ಎಂಬುದು ನಿಮಗೆ ಗೊತ್ತಿಲ್ಲ, ಆ ಕಷ್ಟ ನಮಗೆ ಗೊತ್ತು.

ಶ್ರೀ ಎಂ ವೀರಪ್ಪ ಮೊಯ್ಲಿ.--ಇದು ಜೀವನ ಮರಣದ ಪ್ರಶ್ನೆಯಾಗಿದೆ, ಹಿಂದೆ ದಿವಂಗತ ಶ್ರೀ ದೇವರಾಜ ಅರಸ್ ಅವರು ಕೊಟ್ಟಂತ ಕೆಲವು ಸೌಲಭ್ಯಗಳನ್ನು ಇವರು ಪಡೆದುಕೊಳ್ಳುತ್ತಿದ್ದರು. ಹಿಂದೆ ಅವರು ಕೊಟ್ಟಿರತಕ್ಕದ್ದು ತಪ್ಪೋ ಸರಿಯೋ ಎಂಬ ಪ್ರಶ್ನೆಯಲ್ಲ, ಅದನ್ನು ನಮ್ಮ ರಾಜ್ಯ ಸರ್ಕಾರ ಮಾಡಬಹುದೋ ಅಥವಾ ಕೇಂದ್ರ ಸರ್ಕಾರ ಶಿಫಾರಸ್ಸು ಮಾಡಬಹುದೋ ಎಂಬುದನ್ನು ವಿಚಾರ ಮಾಡಬೇಕು.

ಅಧ್ಯಕ್ಷರು.--ಈ ವಿಚಾರ ಅನೇಕ ಸಾರಿ ಸದನದಲ್ಲಿ ಚರ್ಚೆಯಾಗಿದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.--ಈ ಬಗ್ಗೆ ಅನೇಕ ವರ್ಷಗಳಿಂದ ಸಾಕಷ್ಟು ಜನರು ಮೆಡಿಕಲ್ ಮತ್ತು ಇಂಜನೀಯರಿಂಗ್ ಕಾಲೇಜುಗಳಲ್ಲಿ ಸೀಟುಗಳನ್ನು ಪಡೆದು ಕೊಂಡಿದ್ದಾರೆ. ಇವೊತ್ತು ಅವರ ಮೇಲೆ ಪ್ರಾಸಿಕ್ಯೂಷನ್ ಆಗುತ್ತಿದೆ ಆದಕ್ಕೋಸ್ಕರ ತಾವು ಸಭೆಯನ್ನು ಕರೆಯುವುದು ಒಳ್ಳೆಯದು. ಅದರಲ್ಲಿ ಎಲ್ಲಾ ಸದಸ್ಯರನ್ನು ಮತ್ತು ಪಕ್ಷದ ಮುಖಂಡರನ್ನು ಕರೆದು ಚರ್ಚೆಮಾಡುವುದು ಒಳ್ಳೆಯದು ಇದರ ಬಗ್ಗೆ ಮಾನ್ಯ ಮಂತ್ರಿಗಳು ಆಶ್ವಾಸನೆ ಕೊಟ್ಟರೆ ಸದಸ್ಯರನ್ನು ಅವರ ಸ್ಥಳಗಳಿಗೆ ಹೋಗುವಂತೆ ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.--ಅಧ್ಯಕ್ಷರೇ, ನಾಯಕ ಜನಾಂಗದ ಬಗ್ಗೆ ಅನೇಕ ಸಾರಿ ಚರ್ಚೆ ಯಾಗಿದೆ ಶ್ರೀ ದೇವರಾಜ್ ಅರಸ್ ಅವರ ಸರ್ಕಾರ ಇದ್ದಾಗ ಕೆಲವೊಂದು ಸೌಲಭ್ಯಗಳನ್ನು ಒದಗಿಸಿ ಕೊಟ್ಟಿದ್ದರು, ಕಾನೂನು ದೃಷ್ಟಿಯಿಂದ ಅದು ಸರಿಯೋ ತಪ್ಪೋ ನಡೆದುಕೊಂಡು ಹೋಗುತ್ತಿತ್ತು. ಅನೇಕ ಮಕ್ಕಳು ಇಂಜಿನಿಯರಿಂಗ್ ಮೆಡಿಕಲ್ ಕಾಲೇಜಿಗೆ ಹೋಗಿದ್ದಾರೆ. ಪುನ: ೧೯೮೦ರ ನಂತರ ಯಾವ ಕಾರಣಕ್ಕಾಗಿ ಅದನ್ನು ತೆಗೆದರೋ ನನಗೆ ಗೊತ್ತಿಲ್ಲ ಬಹುಶ: ಶ್ರೀ ವೀರಪ್ಪ ಮೊಯಿಲಿಯವರಿಗೆ ಗೊತ್ತಿರಬೇಕು, ಯಾವ ಕಾರಣಕ್ಕಾಗಿ ಇದನ್ನು ಡಿಲೀಟ್ ಮಾಡಿದರೋ, ಬಹುಶ: ಇದರ ಬಗ್ಗೆ

ಸರ್ಕಾರ ಆಲೋಚಿತೆ ಮಾಡಿ ಮಾಡಿರಬೇಕು. ಈ ಬಗ್ಗೆ ಅನೇಕ ಮನವಿಗಳು ಬಂದಿವೆ. ಮಾನ್ಯ ವಿರೋಧಪಕ್ಷದ ನಾಯಕರು ಸಲಹೆ ಕೊಟ್ಟಹಾಗೆ ನಾಯಕ ಜನಾಂಗದ ಮುಖಂಡರನ್ನು ಮತ್ತು ವಿರೋಧಪಕ್ಷದ ನಾಯಕರನ್ನು ಕರೆದು ಇದರ ಬಗ್ಗೆ ವಿವರವಾಗಿ ಚರ್ಚೆಮಾಡಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತೇವೆ. ದಯವಿಟ್ಟು ಸದಸ್ಯರು ತಮ್ಮ ಸ್ಥಾನಗಳಿಗೆ ಹೋಗಬೇಕೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾತುಕತೆಗೆ ಮಾನ್ಯ ಮಂತ್ರಿಗಳು ಸಭೆಯನ್ನು ಕರೆಯುತ್ತೇವೆಂದು ಹೇಳುತ್ತಿರುವುದರಿಂದ ಸದಸ್ಯರು ತಮ್ಮ ಸ್ಥಾನಗಳಿಗೆ ತೆರಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಜಿ. ನಾಯಕ್ ಮತ್ತು ಶ್ರೀ ಮದನಗೋಪಾಲ್ ನಾಯಕ್‌ರವರು ಧರಣಿಯಿಂದ ಎದ್ದು ತಮ್ಮ ಸ್ಥಾನಕ್ಕೆ ಹೊಂದರು.

ಶ್ರೀಮತಿ ಚಂದ್ರಪ್ರಭಾ ಅರಸ್.—ಎರಡನೆಯದಾಗಿ ಹಿಂದುಳಿದ ವರ್ಗದ ವರದಿ ಶೀಘ್ರವಾಗಿ ಬರಲಿ ಎಂದು ಆಶಿಸುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಎಲ್ಲಾ ವಿವಿಧ ಪಕ್ಷದ ಮುಖಂಡರನ್ನು ಸೇರಿಸಿ ಕೂಲಂಕಷವಾಗಿ ವಿಮರ್ಶೆಮಾಡಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ ಮಾಡೋಣ, ನಾವೇ ಅದನ್ನು ಮಾಡುವುದಕ್ಕೆ ನಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಬರುವುದಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಇನ್‌ಸ್ಟಿಟ್ಯೂಟ್ ಬಗ್ಗೆ ಕೇಳಿದರು. ಇದರ ಬಗ್ಗೆ ರಾಜ್ಯ ಸರ್ಕಾರ ತೀವ್ರವಾಗಿ ಪರಿಶೀಲನೆ ಮಾಡುತ್ತಿದೆ. ಇದರ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳುತ್ತೇನೆಂದು ಭರವಸೆ ಕೊಡುತ್ತೇನೆ. ಈ ನನ್ನ ಎರಡು ಬೇಡಿಕೆಗಳನ್ನು ಮಂಜೂರು ಮಾಡಿಕೊಡಬೇಕೆಂದು ಅಧ್ಯಕ್ಷರ ಮೂಲಕ ಈ ಸದನದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

MR. SPEAKER.—The question is:

"That the respective sums not exceeding the amount shown in the list of Demands be granted to the Government to defray the charges which will come in course of payment during the financial year ending 31st day of March 1985 in respect of Demands No. 30, 31, 8, 60, 61 and 62."

The Motion was adopted and the Demands were granted

As orderd by the Chair the Demands are reproduced below.

DEMAND NO. 30.—URBAN DEVELOPMENT ETC.

"That a sum not exceeding Rs. 11,40,00,000 on Revenue Account and Rs. 7,48,77,000 on Capital Account be granted to the Government to defray the charges which will comein course of payment during the financialy ear ending 31st day of March 1985 in respect of Urban Development etc."

DEMAND NO. 31.—COMPENSATION AND GRANTS TO CORPORATIONS AND MUNICIPALITIES

"That a sum not exceeding Rs. 35,62,00,000 on Revenue Account be granted to the Government to defray the charges which will come in course of payment during the financial year ending 31st day of March 1985 in respect Compensation and Grants to Corporations and Municipalities."

DEMAND NO. 8.—SERICULTYRE

"That a sum not exceeding Rs. 23,92,21,000 on Revenue Account and Rs. 5,16,50 000 on Capital Account be granted to the Government to defray the charges which will come in course of payment during the financial year ending 31st day of March 1985 in respect of Sericulture".

DEMAND NO. 60.—WELFARE OF SC./ST: AND BACKWARD CLASSES (EXCLUDING SOCIAL WELFARE)

"That a sum not exceeding Rs. 38,56,35,000 on Revenue Account and Rs. 94,58,000 on Capital Account be granted to the Government to defray the charges which will come in course of payment during the financial year ending 31st day of March 1985 in respect of Social Security and Welfare (Excluding Women and Children's Welfare)".

DEMAND NO. 61.—TRIBAL SUB-PLAN

"That a sum not exceeding Rs. 4,06,70,000 on Revenue Account and Rs. 1,20,58,000 on Capital Account be granted to the Government to defray the charges which will come in course of payment during the financial year ending 31st day of March 1985 in respect of Tribal Sub-Plan."

DEMAND NO. 62.—SOCIAL WELFARE

"That a sum not exceeding Rs. 56,11,80.000 on Revenue Account be granted to the Government to defray the charges which will come in course of payment during the financial year ending 31st day of March 1985 in respect of Social Welfare".

DEMAND NOS. 5, 6 and 7.—Industries (including Small-Scall Industries and Sericulture) Mines and Geology, and Small Scale Industries

MR. SPEAKER.—Now we will take up discussi on on Industries......

SRI M. VEERAPPA MOILY.—This is an important Department. Please take it up tomorrow.

MR. SPEAKER.—I suggest one thing. Let us conclude discussion and reply on Industries Department today. We can again discuss this subject separetly by fixing a day. On that day members can

discuss the reports and policy matters regarding industries. It is for the consideration of both the Government and the Leader of the Opposition.

ಶ್ರೀ ಹೆಚ್. ಗಂಗಾಧರನ್.—ಸಮರ್ಪಕವಾಗಿ ಚರ್ಚೆ ಮಾಡಲಿಕ್ಕಾಗಿ ಒಂದು ದಿವಸ ತೆಗೆದುಕೊಳ್ಳಬಹುದು.

MR. SPEAKER.—After 16th if you both agree we will take up separately on one day.

ಶ್ರೀ ವೈ. ರಾಮಕೃಷ್ಣ.—ಸದಸ್ಯರಿಗೆ ಇರತಕ್ಕ ಹಕ್ಕನ್ನು ಮೊಟಕು ಮಾಡುವುದು ಬೇಡ. ಇದು ಕೋಟಿಗಟ್ಟಲೆ ಖರ್ಚು ಮಾಡತಕ್ಕಂಥ ಇಲಾಖೆಯಾಗಿದೆ ಇದರ ಬಗ್ಗೆ ಚರ್ಚೆಯಾಗುವುದು ಒಳ್ಳೆಯದು.

SMT. K. S. NAGARATHNAMMA.—Sir, they should have taken vote on account. This is not proper.

MR. SPEAKER.—I think you would agree that passing the entire Budget is always better.

SMT. K.S. NAGARATNAMMA.—But what has been done now ? Nothing prevented the Government in calling the Session earlier.

MR. SPEAKER,—But the Government business has to take precedence over all other business. I leave it to you. I have no option. It is only for the consideration of the House. I will tell you the full budget is advantageous to the State.

ಶ್ರೀ ಎಚ್.ಗಂಗಾಧರನ್.—ಬಹಳ ವರ್ಷಗಳಿಂದ, ಓಟ್‌ಆನ್ ಅಕೌಂಟ್ಸ್ ತೆಗೆದುಕೊಳ್ಳುತ್ತಿದ್ದರು.

MR, SPEAKER.—I will try to find out a day earlier as possible.

ಶ್ರೀ ಹೆಚ್. ಗಂಗಾಧರನ್.—ಬೆಳಿಗ್ಗೆ ೯ ಗಂಟೆಯಿಂದ ರಾತ್ರಿ ೯ ಗಂಟೆಯವರೆಗೆ ಕುಳಿತು ಕೆಲಸ ಮಾಡಿದರೂ ಸಾಕಷ್ಟು ಸಮಯ ಸಿಕ್ಕುವುದಿಲ್ಲ. ಆದ್ದರಿಂದ, ಇವೊತ್ತು ಇದನ್ನು ಪಾಸ್ ಮಾಡಿ ಇದರ ಬಗ್ಗೆ ಒಂದು ದಿವಸ ಡಿಬೆಟ್ ಇಟ್ಟುಕೊಳ್ಳುವುದು ಒಳ್ಳೆಯದು.

MR. SPEAKER.—The Hon'ble Minister for Industries may move the motions for demands for Grants.

DEMAND No. 5, 6, and 7

SRI S.R. BOMMAI (Minister for Industries).—Sir, On the recommendation of the Governor, I beg to move :

> "That a sum not exceeding Rs. 11,01,08,000 on Revenue Account and Rs. 10,18,00,000 on Capital account be granted to the Government to defray the charges which will come in course of payment during the financial year ending 31st day of March 1985 in respect of Industries, (Excluding Small Scale Industries and Sericulture)

> "That a sum not exceeding Rs.5,16,43,000 on Revenue Account be granted to the Government to defray the charges which will come in course of payment during the

financial year ending 31st day of March 1985 in respect of Mines and Geology."

"That a sum not exceeding Rs. 21,61.72,000 on Revenue Account and Rs. 10,35.35,000 on Capital Account be granted to the Government to defray the charges which will come in course of payment during the financial year ending 31st day of March 1985 in respect of Small Scale Industries."

The question was proposed

MR. SPEAKER.—All the demands are before the House for discussion. Sri A. Nagaraju to initiate discussion.

SMT. K.S. NAGARATHNAMMA.—We cannot sit any longer. Somebody should have sympathy towards us. What is this. ಇಷ್ಟು ಅರ್ಜೆಂಟಾಗಿದ್ದರೆ ಅಧಿವೇಶನವನ್ನು ಇನ್ನೂ ಮುಂಚೆಯೇ ಕರೆಯಬೇಕಾಗಿತ್ತು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ ಹಿರಿಯ ಸದಸ್ಯರಾದ ಶ್ರೀಮತಿ ನಾಗರತ್ನಮ್ಮನವರು ಮಾತನಾಡುತ್ತಾ ಈ ಅಧಿವೇಶನವನ್ನು ಮುಂಚೆಯೇ ಏತಕ್ಕೆ ಕರೆಯಬಾರದಾಗಿತ್ತು ಎಂದು ಹೇಳಿದರು. ಅದು ಸರಿ. ಆದರೆ ನಾವು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಒಪ್ಪಿಕೊಂಡಿದ್ದೇವೆ.

SMT. K.S. NAGARATHNAMMA.—You are forcing us to sit here. We have to come here at 9 O'Clock and we go home at 10 P.M. What is this ? You have got Deputy Speaker and Panel members and you have got a little bit rest but what about us ?

MR. SPEAKER.—It is not only me ; you too had it.

ಶ್ರೀ ಎಂ. ಎಸ್. ಕೃಷ್ಣನ್.—ಈಗ ಅವರು ಮೂವ್ ಮಾಡಿದ್ದಾಯಿತು. ಬಿಸಿನೆಸ್ ಅಡ್ವೈಸರಿ ಕಮಿಟಿ ನಿರ್ಣಯದ ಪ್ರಕಾರ ಮುಖ್ಯ ಮಂತ್ರಿಗಳ ಖಾತೆಯ ಚರ್ಚೆಯನ್ನು ನಾಳೆ ಬೆಳಿಗ್ಗೆ ಮುಗಿಸೋಣ. ನಾಳೆ ಮಧ್ಯಾಹ್ನದ ಮೇಲೆ ಮುಖ್ಯ ಮಂತ್ರಿಗಳು ಉತ್ತರವನ್ನು ಕೊಡಲಿ. ನಾಡಿದ್ದು ಅಪ್ರೋಪ್ರಿಯೇಷನ್ ಬಿಲ್‌ನ್ನು ತೆಗೆದುಕೊಳ್ಳೋಣ. ಇದರಿಂದ ಯಾವುದೇ ತೊಂದರೆಯೂ ಆಗುವುದಿಲ್ಲ.

MR. SPEAKER.—That is why I suggested that the discussion on this department could be taken up on a separate day. That is all I can do. Appropriation Bill is to be passed in the other House also.

SRI M. VEERAPPA MOILY.—Heaven is not going to fall if it is not passed on Friday itself. ಮಂತ್ರಿಗಳೂ ಕೂಡ ಅವರ ಟೈಂನ್ನು ಕಡಿಮೆ ಮಾಡಿಕೊಳ್ಳುವುದಕ್ಕೆ ಒಪ್ಪುವುದಿಲ್ಲ.

ಶ್ರೀ ಹೆಚ್. ಗಂಗಾಧರನ್.—ಮುಖ್ಯ ಮಂತ್ರಿಗಳ ಖಾತೆಗೆ......

ಶ್ರೀ ಎಂ.ಎಸ್. ಕೃಷ್ಣನ್.—ನಾಳೆ ಬೆಳಿಗ್ಗೆ ಮುಖ್ಯ ಮಂತ್ರಿಗಳ ಖಾತೆಗಳ ಬಗ್ಗೆ ಚರ್ಚೆ ಮಾಡೋಣ. ಮಧ್ಯಾಹ್ನ ಮಂತ್ರಿಗಳು ಉತ್ತರ ಕೊಡಲಿ. ನಾಡಿದ್ದು ಅಪ್ರೋಪ್ರಿಯೇಷನ್ ಬಿಲ್ಲನ್ನು ತೆಗೆದುಕೊಳ್ಳೋಣ.

ಶ್ರೀ ಹೆಚ್. ಗಂಗಾಧರನ್.—ಮುಖ್ಯ ಮಂತ್ರಿಗಳ ಖಾತೆಗೆ ಅರ್ಧ ದಿವಸ ಸಾಕಾಗುತ್ತದೆಯೇ ? ಅವರ ಖಾತೆಗಳು ಇವೆ.

ಅಧ್ಯಕ್ಷರು.—ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಇದರಲ್ಲಿ ಆಕಾಶ ತಲೆಯ ಮೇಲೆ ಬೀಳುವಂಥಾದ್ದು ಏನೂ ಇಲ್ಲ. ಹಿಂದೆಲ್ಲಾ ನಾವುಗಳು ತಮಗೆ ಸಹಕಾರವನ್ನು ನೀಡಿ ಸಭೆಯ ಕಾರ್ಯಕಲಾಪಗಳನ್ನು ನಡೆಸಿ ಕೊಡಲಿಲ್ಲವೆ ? ಬಿಲ್‌ಗಳನ್ನು ಪಾಸ್ ಮಾಡಿಕೊಡಲಿಲ್ಲವೆ ? ಇವೊತ್ತು ಇಷ್ಟೊಂದು ಪಟ್ಟು ಹಿಡಿಯ ಬೇಕಾದರೆ ನಿಮಗೆ ಮೆಜಾರಿಟಿ ಇಲ್ಲವೆಂದು ಏನಾದರೂ ಅನುಮಾನ ಇದೆಯೆ ? ಆದರೆ ಈ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ನಲ್ಲಿ ಏನೇನು ನಡೆದಿದೆ ಅದನ್ನೆಲ್ಲಾ ಸುಲಭವಾಗಿ ಪಾಸ್ ಮಾಡಿಸಿಕೊಂಡು ಹೋಗ ಬೇಕೆಂದು ನೀವು ಏನಾದರೂ ಯೋಚನೆ ಮಾಡಿದ್ದರೆ ಅಷ್ಟೊಂದು ಸುಲಭವಾಗಿ ನಾವು ಬಿಡುವುದಿಲ್ಲ. ಎರಡೂವರೆ ಗಂಟೆಯ ಹೊತ್ತಿಗೆ ಇದನ್ನು ನಾವು ಮುಗಿಸಬಹುದಿತ್ತು. ಆದರೆ ನಮಗೆ ಟ್ರೆಜರಿ ಬೆಂಚ್ ನವರ ಸಹಕಾರ ಇಲ್ಲ. You want us to co-operate but treasury bench is not going to co-operate and Ministers are not going to co-operate but you only require the Leader of the Opposition and other members of this side to co-operate. ನಾವು ಸಹಕಾರವನ್ನು ಕೊಡುತ್ತೇವೆ. ಆದರೆ ಇವೊತ್ತು ಬೆಳಿಗ್ಗೆ ೯ ಗಂಟೆಯಿಂದ ಈಗ ೬-೩೦ ಗಂಟೆಯವರೆಗೂ ಇಲ್ಲಿ ಒಂದೇ ಸಮನೆ ಕುಳಿತಿದ್ದೇವೆ. ಈಗ ಸಭೆಯನ್ನು ಮುಂದುವರಿಸುವುದು ಬೇಡ. ನಾಳೆ ಮಧ್ಯಾಹ್ನ ಮುಗಿಸಿಕೊಡುತ್ತೇವೆ. ನಮ್ಮ ಕಡೆಯ ಸದಸ್ಯರು ಹೆಚ್ಚು ಮಾತನಾಡುವುದಿಲ್ಲ. We will limit our speakers. If the treasury benches wants to speak, we can keep the discussion for a day, We have co-operated Infact there were very less speakers. We are ready to co-operate.

ಶ್ರೀ ಗೋವಿಂದ ಪಿ. ಒಡೆಯರಾಜ್.—ಇವೊತ್ತು ಎರಡೂವರೆ ಗಂಟೆಯೊಳಗೆ ಮುಗಿಸ ಬಹುದಿತ್ತು. ಆದರೆ ಮಾನ್ಯ ಚಂದ್ರಶೇಖರ್‌ರವರು ಜಾಸ್ತಿ ಟೈಂನ್ನು ತೆಗೆದು ಕೊಂಡರು. ಅವರಿಗೆ ಉತ್ತರವನ್ನು ಕೊಡುವ ಮೆಥೆಡ್ ಗೊತ್ತಿಲ್ಲ. ಸುಮ್ಮನೆ ಫೈಲನ್ನು ಓದಿಕೊಂಡು ಹೋಗುತ್ತಾರೆ. ನಾಳೆ ನಮ್ಮ ವಿರೋಧ ಪಕ್ಷದವರು ಮಾತನಾಡಲಿ. ಆಡಳಿತ ಪಕ್ಷದವರು ಏನೂ ಮಾತನಾಡಬೇಕಾಗಿಲ್ಲ. ಕಾರಣ ಆಡಳಿತ ಪಕ್ಷದವರು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅಲ್ಲಿ ಆರೀತಿ ಆಗಿದೆ, ಇಲ್ಲಿ ಈರೀತಿ ಆಗಿದೆ ಎಂದು ಟೀಕೆ ಮಾಡುವವರು ನಾವು ಆದ್ದರಿಂದ ನಾವು ಮಾತನಾಡುತ್ತೇವೆ. ಅದಕ್ಕೆ ಮಂತ್ರಿಗಳು ಉತ್ತರ ಕೊಡಲಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅನೇಕ ಸಂದರ್ಭಗಳಲ್ಲಿ ನಾವು ಇಲ್ಲಿ ರಾತ್ರಿ ೧೦-೧೧ ಗಂಟೆ ಯವರೆಗೂ ಕುಳಿತು ಕಾರ್ಯಕಲಾಪಗಳನ್ನು ಹಿಂದೆ ನಡೆಸಿಕೊಟ್ಟಿದ್ದೇವೆ.........

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಇಲಾಖೆಯ ಮೇಲೆ ಚರ್ಚೆ ಆಗಬಾರದು, ಇದರಲ್ಲಿರತಕ್ಕ ಕುಂದುಕೊರತೆ, ಲೋಪದೋಷಗಳನ್ನು ಹೇಳಬಾರದು, ಎಂದು ಏನೂ ಇಲ್ಲ. ನಾವು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಒಪ್ಪಿಕೊಂಡಿದ್ದೇವೆ. ಈಗ ಮಾನ್ಯ ಸದಸ್ಯರು ಭಾಷಣವನ್ನು ಪ್ರಾರಂಭ ಮಾಡಲಿ. ನಾಳೆ ಮಧ್ಯಾಹ್ನ ಚರ್ಚೆಯನ್ನು ಮುಗಿಸಿದ ಮೇಲೆ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಅನೇಕ ಮಾನ್ಯ ಸದಸ್ಯರು ಹೊಸದಾಗಿ ಆರಿಸಿಬಂದಿದ್ದಾರೆ. ಈ ವಾಣಿಜ್ಯ ಹಾಗೂ ಕೈಗಾರಿಕಾ ಖಾತೆಯ ಮೇಲೆ ಚೈತನ್ಯಪೂರ್ಣ ವಾಗಿ ಮಾತನಾಡುವ ಸಲುವಾಗಿ ಅವರಿಗೆ ಅವಕಾಶವನ್ನು ಮಾಡಿ ಕೊಡೋಣ ಎಂದು ನನ್ನ ಉದ್ದೇಶ.

MR. SPEAKER.—The whole day is slated for Chief Minister's demands.

ಶ್ರೀ ಎಂ. ಎಸ್. ಕೃಷ್ಣನ್.—ಅಪ್ರೋಪ್ರಿಯೇಷನ್ ಬಿಲ್ ೧೬ನೆಯ ತಾರೀಖು ಪಾಸ್ ಆಗ ದಿದ್ದರೆ ತೊಂದರೆಯಾಗುತ್ತದೆಂದು ತಮಗೆ ಏನಾದರೂ ಅಭಿಪ್ರಾಯ ಇರಬಹುದು. ಆರೀತಿ ತಿಳಿದು ಕೊಳ್ಳುವ ಅವಶ್ಯಕತೆ ಇಲ್ಲ. ಅಷ್ಟರೊಳಗೆ ನಾವು ಇದನ್ನು ಪಾಸ್ ಮಾಡಿಕೊಡುತ್ತೇವೆ. ನಾಳೆ ಬೆಳಿಗ್ಗೆ ಚರ್ಚೆ ಮಾಡಿ ಮುಗಿಸಿದ ಮೇಲೆ ಮಧ್ಯಾಹ್ನ ೧ ಗಂಟೆಯೊಳಗೆ ಅವರು ಉತ್ತರ ಕೊಡಲಿ. ನಂತರ ಅಪ್ರೋಪ್ರಿಯೇಷನ್ ಬಿಲ್ಲನ್ನು ತೆಗೆದುಕೊಳ್ಳೋಣ.

SRI M. VEERAPPA MOILY.—Now we are not in a mood to continue and my request is,

we would have co operated and we would have prepared to sit even late.

MR. SPEAKER.—Mr. Nagaraj is ready to speak.

SRI M. VEERAPPA MOILY.—None of our members are in a mood to sit. I humbly submit the Hon'ble Speaker to adjourn the House now and let us sit from 9 A. M. tomorrow. If more members want to speak, we can have it on a separate day also.

SMT. K. S. NAGARATHNAMMA.—We are not in a mood to sit. Why do you compel us ?

೬-೩೦ ಪಿ. ಎಂ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ವಿರೋಧ ಪಕ್ಷದ ನಾಯಕರಲ್ಲಿ ಮನವಿ ಮಾಡಿ ಕೊಳ್ಳುತ್ತಿದ್ದೇನೆ, ಇವೊತ್ತು ಮಾತನಾಡುವವರು ಮಾತನಾಡಲಿ, ಹೆಚ್ಚು ಸಮಯ ಸಿಗುತ್ತದೆ.

SRI G. P. VODAYARAJ.—Why do you force ?

SMT. K. S. NAGARATHNAMMA.—Why do you compel us.

ಶ್ರೀ ಎಸ್. ಆರ್. ಬೊಮ್ಮಾಯಿ.—ಕಂಪೆಲ್ ಮಾಡುತ್ತಿಲ್ಲ, ಮನವಿ ಮಾಡಿ ಕೊಳ್ಳುತ್ತಿದ್ದೇನೆ. ಕೆಲವರು ಇವತ್ತು ಮಾತನಾಡಲಿ, ನಾಳೆ ಬೆಳಿಗ್ಗೆ ರಿಪ್ಲೆ ಕೊಡೋಣ.

ಶ್ರೀ ಜೆ. ಡಿ. ಸೋಮಪ್ಪ.—ಅಧ್ಯಕ್ಷರೇ, ನಾಳೆ ರಾತ್ರಿ ೯ ಗಂಟೆವರೆಗೆ ಕುಳಿತುಕೊಳ್ಳೋಣ ನಾಳೆ ನೈಟ್ ಸೆಷನ್ಸ್ ಹಾಕಿ, ಇದುಒಳ್ಳೆಯ ಸಬ್ಜೆಕ್ಟ್. ಈ ಹೊತ್ತಿನಲ್ಲಿ ವಿತರ್ಕ. ?

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧ್ಯಕ್ಷರೇ, ಇವತ್ತಿನವರೆಗೂ ನಾವು ಕೋ-ಆಪರೇಟ್ ಮಾಡಿದ್ದೇವೆ. ಬೇಕಾದರೆ ರಿಕಾರ್ಡ್ ತೆಗೆದು ನೋಡಿ. ಡಿಮ್ಯಾಂಡ್ಸ್ ಸಂದರ್ಭದಲ್ಲಿ ನಾವು ಯಾವಾಗಲೂ ಸಹಕಾರ ನೀಡಿದ್ದೇವೆ. ಎರಡು ದಿವಸ ಇಂಟರಪ್ಟ್ ಮಾಡಿದ್ದು ಬಿಟ್ಟರೆ, ಮಾನ್ಯ ಮಂಚೇಗೌಡರಿಗೆ ಸಂತಾಪವನ್ನು ಅರ್ಪಿಸಿದ ದಿವಸ ಹಾಗೂ ಕನ್ನಡ ಚಳುವಳಿ ವಿಚಾರದಲ್ಲಿ ಈ ಎರಡು ಬಿಟ್ಟರೆ, ಬಾಕಿ ಎಲ್ಲಾ ಶೆಡ್ಯೂಲ್ ಪ್ರಕಾರ ಬಿಸಿನೆಸ್ ಆಗಿದೆ. ಬೇಕಾದರೆ ರೆಕಾರ್ಡ್ಸ್ ತೆಗೆಸಿ ನೋಡಿ If we watned to have confrontation, nothing would have gone on record. We are prepared to co-operate. It has reached a saturation limit as far as today it concerned. ಇಷ್ಟು ಸಹಕಾರ ಕೊಟ್ಟಿದ್ದೇವೆ. ಆದುದರಿಂದ ಇವೊತ್ತು ನಮ್ಮ ಸಹಕಾರವನ್ನು ತಾವು ಸಹೃದಯದಿಂದ ನೋಡಬೇಕಾಗುತ್ತದೆ. ಆದುದರಿಂದ ಇವೊತ್ತು ಬೇಡ, ನಾಳೆ ಬೆಳಿಗ್ಗೆ ಪ್ರಾರಂಭ ಮಾಡೋಣ. ಇವೊತ್ತು ನೀವು ಎರಡೂವರೆ ಗಂಟೆಗೆ ಪ್ರಾರಂಭ ಮಾಡಿದ್ದರೆ, ನಾವು ಆಕ್ಷೇಪಣೆ ಎತ್ತುತ್ತಿರಲಿಲ್ಲ ಇವತ್ತು ದಯವಿಟ್ಟು ಅಡ್‌ಜರ್ನ್ ಮಾಡಿ. ನಾಳೆ ಬೆಳಿಗ್ಗೆ ೯ ಗಂಟೆಗೆ ಸೇರೋಣ. ಕೊನೆಗಾಲದಲ್ಲಿ ನಾವು ನಾನ್ ಕೋ-ಆಪರೇಟ್ ಮಾಡಿದ್ದೇವೆ ಎಂದು ಆಗಬಾರದು. ಕೊನೆಗಾಲದಲ್ಲಿ ತಾವು ಅಪೊಸಿಷನ್ ಹೊರಗಿದ್ದು ಎರಡುಸಾವಿರ, ಮೂರುಸಾವಿರ ಕೋಟಿ ರೂಪಾಯಿಗಳನ್ನು ಹೊಡೆದುಕೊಂಡು ಹೋದರು ಎಂದು ಅಭಿಪ್ರಾಯ ಜನಗಳಿಗೆ ಬರಬಾರದು. ಇದರಿಂದ ತಾವು ತಪ್ಪಿಸಿಕೊಳ್ಳಲಿಕ್ಕೆ, ಇಲ್ಲಿ ಸರಿಯಾದ ರೀತಿಯಲ್ಲಿ ಬಿಸಿನೆಸ್ ನಡೆಯಬೇಕು. ಕರ್ನಾಟಕ ರಾಜ್ಯದ ಜನತೆ ಇಂಡಸ್ಟ್ರೀಸ್ ಮಿನಿಸ್ಟರ್ ಬೊಮ್ಮಾಯಿಯವರು ಏನು ಮಾಡುತ್ತಿದ್ದಾರೆ ಎಂದು ಪ್ರಶ್ನಾರ್ಥಕವಾಗಿ ಉಳಿಯಬಾರದು, ಬೊಮ್ಮಾಯಿಯವರು ಏನೋ ಮಾಡಿಕೊಂಡು ಹೋಗಿದ್ದಾರೆ ಎಂದು ಅಭಿಪ್ರಾಯ ಆಗಬಾರದು. ಜನತೆಯಲ್ಲಿ ಸ್ಪಷ್ಟವಾದ ಅಭಿಪ್ರಾಯ ಬರಬೇಕು. ಈ ದೃಷ್ಟಿಯಿಂದ We are preprared to co-operate.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಎಲ್ಲಾ ಸದಸ್ಯರಿಗೂ ಹೆಚ್ಚಿನ ಅವಕಾಶ ಸಿಗುವ ದೃಷ್ಟಿಯಿಂದ ಇವತ್ತು ಡಿಬೇಟ್ ಪ್ರಾರಂಭ ಮಾಡೋಣ ಎಂದು ಹೇಳುತ್ತಿದ್ದೇನೆ. ಇವತ್ತು ಪ್ರಾರಂಭ ಮಾಡೋಣ. ಹೊಸಬರಿಗೆ ಅವಕಾಶ ಸಿಗುತ್ತದೆ. ಎಲ್ಲರಿಗೂ ಅವಕಾಶ ಸಿಗುತ್ತದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾವು ಒಂದೇ ಒಂದು ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದೇವೆ. ಇವತ್ತು ಬೇಡ.

ಶ್ರೀ ಎಂ. ರಘುಪತಿ.—ನಾಗರತ್ನಮ್ಮನವರೇ. ಈ ರೀತಿ ಒಂದೇ ಹಠ ಹಿಡಿದರೆ ಹೇಗೆ ? ಸ್ವಲ್ಪ ತಾಳ್ಮೆ ಇರಲಿ. ಪ್ರತಿಯೊಂದೂ ಹಠ ಹಿಡಿದಹಾಗೆ ನಡೆದಿದ್ದೀರಾ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಹಠ ಹಿಡಿದಿರುವವರು ನೀವು. We are not in mood to sit for long time. Why do you compel us ?

ಶ್ರೀ ಎಂ. ರಘುಪತಿ.—ನೀವು ರೆಡಿಯಾಗಿಲ್ಲ ಗೊತ್ತಿದೆ, ಆದರೆ ಮಾನ್ಯ ಸದಸ್ಯರು ರೆಡಿಯಾಗಿದ್ದಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇಲ್ಲ. ಅವರೂ ತಯಾರಾಗಿಲ್ಲ, ನಾವೂ ಕುಳಿತುಕೊಳ್ಳುವುದಕ್ಕೆ ತಯಾರಾಗಿಲ್ಲ, ಅವರು ಮಾತನಾಡುವುದಕ್ಕೆ ತಯಾರಾಗಿದ್ದರೆ, ನೀವು ಅವರೊಬ್ಬರನ್ನೇ ಇಟ್ಟುಕೊಳ್ಳುತ್ತೀರಾ ?

ಶ್ರೀ ಎಂ. ರಘುಪತಿ.—ಏತಕ್ಕಮ್ಮಾ ತಾವು ಈ ರೀತಿ ಮಾಡುತ್ತಿದ್ದೀರಿ. ತಾವು ಎಲ್ಲಾ ಸದಸ್ಯರಿಗೂ ಮಾರ್ಗದರ್ಶನ ಕೊಡಬೇಕು, ಹಠ ಹಿಡಿಯುವುದಲ್ಲ.

ಸಭಾಧ್ಯಕ್ಷರು.—ಇನಿಷಿಯೇಟ್ ಮಾಡಿ ಬಿಡಲಿ. Both of you are not agreeing, I am helpless. The only alternative is to put the demand for vote. What else I can do ?

ಶ್ರೀ ಎಂ. ವೀರಪ್ಪಮೊಯಿಲಿ.—ಆ ರೀತಿ ಮಾಡಬಹುದು. ಎರಡುಸಾವಿರ ಕೋಟಿ ರೂಪಾಯಿಗಳನ್ನು ಹೊಡೆದುಕೊಂಡು ಹೋಗುವುದು ಇದ್ದರೆ ನಮ್ಮದೇನೂ ಅಭ್ಯಂತರ ಇಲ್ಲ.

ಶ್ರೀ ಎಂ. ರಘುಪತಿ.—ಹೊಡೆದುಕೊಂಡು ಅವರ ಅಪ್ಪನ ಮನೆಗೆ ಏನೂ ತೆಗೆದುಕೊಂಡು ಹೋಗುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರು ಪದೇ ಪದೆ ಹೊಡೆದುಕೊಂಡು ಹೋಗುತ್ತಾರೆ, ಹೊಡೆದುಕೊಂಡು ಹೋಗುತ್ತಾರೆ ಎಂಬ ಪದ ಬಳಸುತ್ತಿದ್ದಾರೆ ಇದು ಸರಿಯೇ ?

ಶ್ರೀ ಎಂ. ವೀರಪ್ಪಮೊಯಿಲಿ.—ವಿಚಾರ, ಚರ್ಚೆ ಮಾಡದೆ, ಅವಸರ ಮಾಡಿಕೊಂಡು ಹೊರಟು ಹೋಗುತ್ತಿರುವುದರ ಬಗ್ಗೆ ಹೇಳಿದೆ. ಚರ್ಚೆ ಮಾಡದೆ ಓಟಿಗೆ ಹಾಕತಕ್ಕ ಪ್ರಯತ್ನ ನೀವು ಮಾಡುತ್ತಿದ್ದೀರಿ. ಓಟಿಗೆ ಹಾಕತಕ್ಕ ಪ್ರಯತ್ನ ಮಾಡಬೇಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾವು ಡಿಬೇಟ್‌ಗೆ ತಯಾರಾಗಿದ್ದೇವೆ. ಪಾರ್ಲಿಮೆಂಟ್‌ನಲ್ಲಿ ರಾತ್ರಿ ಎರಡುಗಂಟೆಯವರೆಗೂ ಕುಳಿತುಕೊಳ್ಳುತ್ತಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ನಿಮಗಿರುವ ಆಲ್ಟರ್‌ನೇಟಿವ್ ಎಂದರೆ ಈಗಾಗಲೇ ಪಾಸ್ ಮಾಡಿಬಿಡುವುದು, ಆದರೆ ಅದು ಸರಿಯಾಗಿರುವುದಿಲ್ಲ. ಎರಡು ಸಾವಿರ ಕೋಟಿ ರೂಪಾಯಿಗಳನ್ನು ಒಂದೇ ಸಲ ಕೊಟ್ಟುಬಿಡಿ ಎಂದರೆ ಅದು ಚೆನ್ನಾಗಿರುವುದಿಲ್ಲ. ಬೇಕಾದರೆ ಒಂದು ಕೆಲಸ ಮಾಡೋಣ ನಾನು ಮಾನ್ಯ ಮೊಯಿಲಿಯವರನ್ನು ಕೇಳಿಕೊಳ್ಳುವುದು ಎಂದರೆ, ನಾಳೆ ಬೆಳಿಗ್ಗೆ ಇನ್ನೂ ಸ್ವಲ್ಪ ಮುಂಚೆ ಕುಳಿತುಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟರೆ ಒಳ್ಳೆಯದು. ನಾಳೆ ಬೆಳಗ್ಗೆ ೮ ಗಂಟೆಗೆ ಕುಳಿತುಕೊಳ್ಳೋಣ ಮಾನ್ಯ ನಾಗರಾಜ್ ಅವರು ೮ ಗಂಟೆಗೆ ಬಂದು ಚರ್ಚೆ ಪ್ರಾರಂಭ ಮಾಡಿಕೊಳ್ಳಲಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇವತ್ತು ಎಂಟು ಗಂಟೆಯವರೆಗೆ ಕುಳಿತುಕೊಳ್ಳೋಣ. ನಾಳೆ ಬೆಳಿಗ್ಗೆ ಬೇಗ ಕುಳಿತುಕೊಳ್ಳೋಣ. ಅವರು ಹೇಳಿದ ಹಾಗೆ, ಇದರಿಂದ ಹೆಚ್ಚು ಜನ ಸದಸ್ಯರಿಗೆ ಚರ್ಚೆಗೆ ಅವಕಾಶ ಸಿಗುತ್ತದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾಳೆ ನಾವು ತಮ್ಮ ಬೇಡಿಕೆಯನ್ನು ಪಾಸ್ ಮಾಡಿಕೊಡುತ್ತೇವೆ. ಆದರೆ ಈ ತರಹ ಟ್ರೆಜರಿ ಬೆಂಚ್‌ನವರು ಒಪ್ಪಂದ ಮಾಡಿಕೊಂಡು, ಅದನ್ನು ಹೊರಗಿಟ್ಟು ವ್ಯವಹಾರ ಮಾಡುವುದು ಇದ್ದರೆ ನಮ್ಮದೇನೂ ಅಭ್ಯಂತರ ಇಲ್ಲ. ಆಕ್ಷೇಪಣೆ ಇಲ್ಲ. ಓಟಿಗೆ ಹಾಕುವುದಕ್ಕೆ ತಮಗೆ ಅಧಿಕಾರ ಇದೆ, ಕಾನೂನು ಇದೆ. ತಾವು ಅದನ್ನು ಮಾಡಬಹುದು. ತಮ್ಮ ಅಧಿಕಾರಕ್ಕೆ ನಾವು ಶಿರಸಾ ವಹಿಸುತ್ತೇವೆ. ಆಕ್ಷೇಪಣೆ ಮಾಡುವುದಿಲ್ಲ. ಇದನ್ನು [illegible] ಶೆಡ್ಯೂಲ್ ಪ್ರಕಾರ ಆಗಿ, ಕೊನೆಗೆ ಈ ರೀತಿ ಮಾಡಿದರೆ, ಇನ್ನು ಮುಂದೆ ನಾವು ಕೋ-ಆಪರೇಷನ್ ಕೊಟ್ಟರೂ ಒಂದೇ, ಕೊಡದೇ ಇದ್ದರೂ ಒಂದೇ. We must have our say in respect of these demands. But, the treasury bench is not prepared to co-operate with us. If you want to put all the demands to vote and pass, we have no objection.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ವಿರೋಧ ಪಕ್ಷದ ನಾಯಕರು ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಬೇಕು. ಇವತ್ತು ೮ ಗಂಟೆಯವರೆಗೆ ಕುಳಿತುಕೊಳ್ಳೋಣ. ನಾಳೆ ಬೆಳಿಗ್ಗೆ ಕೂಡೋಣ. ಇವತ್ತು ೮ ಗಂಟೆಯವರೆಗೆ ಚರ್ಚೆ ಮಾಡೋಣ. ಇವತ್ತು ಮಾತನಾಡುವವರು ಮಾತನಾಡಲಿ. ನಾಳೆ ಮಾತನಾಡುವವರು ನಾಳೆ ಮಾತನಾಡಲಿ. ನಿಮಗೆ ಹೆಚ್ಚು ಅವಕಾಶ ಸಿಗಬೇಕೆಂಬ ದೃಷ್ಟಿಯಿಂದ ಹೇಳುತ್ತಿದ್ದೇನೆಯೇ ಹೊರತು ಚರ್ಚೆ ಮಾಡಬಾರದು ಎಂದು ಅಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾತನಾಡುವವರು ನಾವು, ನೀವು ಮಾತನಾಡಿ ಎಂದರೆ ನಮ್ಮ ತಲೆಯಲ್ಲಿ ಬರುವುದಿಲ್ಲ. ನಮ್ಮ ತಲೆಯೊಳಗೆ ವರ್ಕ್ ಆಗಬೇಕು. ನೀವು ಮಾತನಾಡಿ ಎಂದರೆ, ಏನು ಪುಸ್ತಕ ಹಿಡಿದುಕೊಂಡು ಓದುವುದಕ್ಕೆ ಆಗುತ್ತದೆಯೋ? ಬೆಳಿಗ್ಗೆ ೮ ಗಂಟೆಯಿಂದ ಇಲ್ಲಿ ಕುಳಿತುಕೊಂಡು ತಲೆ ದಿಮ್ಮೆನ್ನುತ್ತಿದೆ. ನೀವು ಹೊರಗಡೆ ಹೋಗಿಬರುತ್ತಿದ್ದೀರಿ. ಆದರೆ ನಾವು ಹೋಗಿಲ್ಲ.

ಸಭಾಧ್ಯಕ್ಷರು.—ನೀವು ಮಾತನಾಡುವವರ ಪಟ್ಟಿಯಲ್ಲಿ ಇಲ್ಲ. ಬೇರೆಯವರ ಹೆಸರುಗಳು ಇವೆ. ಅವರು ತಯಾರಾಗಿದ್ದಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಯಾರೂ ತಯಾರಾಗಿಲ್ಲ. ಏನು ಮಾತನಾಡುವುದಕ್ಕೆ ತಯಾರಾಗಿದ್ದರೂ, ನಾವೆಲ್ಲಾ ಇಲ್ಲಿ ಇರಬೇಕು. ಅವರು ಏನು ಮಾತನಾಡುತ್ತಾರೆ ಎಂಬುದನ್ನು ಕೇಳಬೇಕು. ಅದು ಈಗ ತಲೆಯೊಳಗೆ ಹೋಗುವುದಿಲ್ಲ. ವಿ ಮಸ್ಟ್ ಬಿ ಹಿಯರ್ ಇನ್ ಗ್ರೂಪ್. ನೀವೆಲ್ಲಾ ರೆಸ್ಟ್ ತೆಗೆದುಕೊಂಡು ಬಂದಿದ್ದೀರಿ. ನಿಮ್ಮ ಕಡೆ ಕುರ್ಚಿಗಳು ಖಾಲಿ ಇದ್ದವು.

ಸಭಾಧ್ಯಕ್ಷರು.—ಎಲ್ಲಾ ರೆಸ್ಟ್ ತೆಗೆದುಕೊಂಡು ಬಂದಿದ್ದೀರಿ. ಇವತ್ತು [illegible] ಇರುವುದನ್ನು ನೋಡಿ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್ ಮೇಲೆ ಎಲ್ಲರೂ ಆಸಕ್ತಿವಹಿಸಿದ್ದಾರೆ, ಡಿಬೇಟ್ ಚೆನ್ನಾಗಿ ಆಗುತ್ತದೆ ಎಂದು ನಾನು ಅಂದುಕೊಂಡಿದ್ದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅದಕ್ಕೆ [illegible] ನಾವು [illegible].

ಶ್ರೀ ಎಂ. ರಘುಪತಿ.—ದಯವಿಟ್ಟು ಕೋ-ಆಪರೇಟ್ ಮಾಡಿ. [illegible] ಹಿಡಿಯುವುದು ಬೇಡ, ನೀವು ಕುಳಿತಿದ್ದೀರಿ. ಈ ರೀತಿ ಹಠ ಹಿಡಿದರೆ ಹೇಗೆ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಆಗುವುದಿಲ್ಲ, [illegible]

(INTERRUPTION)

ಶ್ರೀ ಎಂ. ರಘುಪತಿ.—ನೀವು ಹೋಗಬಾರದು ಎಂದು ನಮ್ಮ [illegible].

ಶ್ರೀ ಜೆ. ಡಿ. [illegible]ಪ್ಪ.—ಬೊಮ್ಮಾಯಿಯವರು ಇಲ್ಲ [illegible] ಹೇಳಿದ್ದಾರೆ. ಬೊಮ್ಮಾಯಿಯವರಿಗೆ ಉತ್ತರ ಕೊಡುವುದಕ್ಕೆ ಆಗ[illegible] [illegible] ಬೊಮ್ಮಾಯಿಯವರು ಉತ್ತರ ಕೊಡಲಿ.

ಬೊಮ್ಮಾಯಿಯವರು ಉತ್ತರ ಕೊಡುತ್ತಾರೆ, ನನಗೆ ಗೊತ್ತಿದೆ. ಗಂಟೆಗಟ್ಟಲೆ ಉತ್ತರ ಕೊಡು ತ್ತಾರೆ. ಆದರೆ ರಘುಪತಿಯವರು ಏತಕ್ಕೆ ಹೇಳುತ್ತಿದ್ದಾರೆ ?

ಶ್ರೀ ಎ. ನಾಗರಾಜ್.—ಇಂಡಸ್ಟ್ರೀಸ್ ಡಿಮ್ಯಾಂಡ್ ಇದೆ. ನೀವು ಇನಿಷಿಯೇಟ್ ಮಾಡಬೇಕು ಎಂದು ನನ್ನ ಮಿತ್ರರು, ವಿರೋಧಪಕ್ಷದ ನಾಯಕರು ನನಗೆ ಹೇಳಿದರು. ಇವತ್ತು ೬ ಗಂಟೆಗೆ ಹೇಳಿದರು. ನಾನು ೬ ಗಂಟೆಯಿಂದ ಅರ್ಧಂಬರ್ಧ ಪ್ರಿಪೇರ್ ಆಗಿ ಬಂದಿದ್ದೇನೆ. ಆದರೆ ಈ ಗಲಾಟೆಯಲ್ಲಿ ಅದು ಕೂಡಾ ಮರೆತು ಹೋಯಿತು. ಆದುದರಿಂದ ನಾನು ಇವತ್ತು ಇನಿಷಿಯೇಟ್ ಮಾಡಲು ಆಗುವುದಿಲ್ಲ.

SRI M VEERAPPA MOILY.—Sir, we never said that we would not co-operate. So, when we submit and plead our inability to sit here, I think there should be some consideration.

SRI S. R. BOMMAI.—Let the debate take place so that the reply can be given tomorrow.

(INTERRUPTION)

MR. SPEAKER.—Now, the House stands adjourned to meet tomorrow at 9-00 A.M.

The House adjourned at thirty five minutes past six of the clock to meet at Nine of the Clock on Thursday, the 15th March 1984.